ಶನಿವಾರ, ಫೆಬ್ರುವರಿ 3, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಾಟ್ಯದ ಸೊಬಗು

ಅಮೃತಸರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮೆಕ್ಸಿಕೊ ದೇಶದ ಕಲಾವಿದೆಯೊಬ್ಬರ ಆಕರ್ಷಕ ನೃತ್ಯ ಭಂಗಿ



RERA No.: PRM/KA/RERA/1251/310/PR/041023/006307
For more details, visit: rera.karnataka.gov.in

ಉದ್ಘಾಟನೆಗೊಳ್ಳುತ್ತಿದೆ

CASAGRAND FLAMINGO

ಹಂತ II

ಅತ್ಯದ್ಭುತ

ಸ್ಥಳ
ನೆರೆಹೊರೆ
ವಿನ್ಯಾಸ

ವಿಶ್ವ ದರ್ಜೆಯ ಸೌಕರ್ಯಗಳು

- ಮೇಲ್ಛಾವಣಿ ಈಜುಕೊಳ
- ಮೇಲ್ಛಾವಣಿ ಬಾರ್ಬೆಕ್ಯೂ ಕೌಂಟರ್
- ಸಂವಾದಾತ್ಮಕ ಜಿಮ್
- ವ್ಯಾಪಾರ ಕೇಂದ್ರ
- ಆಂಫಿಥಿಯೇಟರ್
- ಬ್ಯಾಡ್ಮಿಂಟನ್ ಕೋರ್ಟ್
- ಶಿಲ್ಪಕಲಾ ಚೌಕ
- ವ್ಯಾಯಾಮ ಮಾರ್ಗ
- ಎಲೆಕ್ಟ್ರಿಕ್ ಕಾರ್ ಚಾರ್ಜಿಂಗ್ ಬೇ



ಹಂತ I ಯಶಸ್ವಿಯಾಗಿ ಮಾರಾಟವಾಗಿದೆ

ಅಲ್ಟ್ರಾ ಐಷಾರಾಮಿ

HSR ಲೇಔಟ್ನಲ್ಲಿ 3 ಮತ್ತು 4 BHK ಅಪಾರ್ಟ್ಮೆಂಟ್ಗಳು ₹1.90 ಕೋಟಿಯಿಂದ* ಪ್ರಾರಂಭ

HSR ಲೇಔಟ್ನಲ್ಲಿ ಮಾರುಕಟ್ಟೆ ಬೆಲೆ	ಕಾಸಾಗ್ರಾಂಡ್ ಲಾಂಚ್ ಬೆಲೆ ಹಂತ II	ಅರ್ಲಿ ಬರ್ಡ್ ಬೆಲೆ
~~₹14,999/SFT.~~	~~₹11,499/SFT.~~	₹10,999/SFT. (ಮೊದಲ 10 ಬುಕಿಂಗ್ಗಳಿಗೆ ಮಾತ್ರ)

*T&C apply

ಮಾದರಿ	ಗಾತ್ರ (SFT.)	ಕಾಸಾಗ್ರಾಂಡ್ ಲಾಂಚ್ ಬೆಲೆ (₹)	ಅರ್ಲಿ ಬರ್ಡ್ ಬೆಲೆ (₹)
2 BHK+2T	1333 - 1335	~~1.66 CR - 1.71 CR~~	1.52 CR - 1.57 CR
3 BHK+3T	1690 - 2043	~~2.05 CR - 2.50 CR~~	1.90 CR - 2.36 CR
4 BHK+4T	2402 - 2443	~~2.89 CR - 2.94 CR~~	2.75 CR - 2.80 CR

ಒಟ್ಟು ಯೂನಿಟ್ಗಳು : 218 I ಮಾರಾಟವಾದ ಯೂನಿಟ್ಗಳು : 91 I ಲಭ್ಯವಿರುವ ಯೂನಿಟ್ಗಳು : 127

ವರ್ಚುವಲ್ ದರ್ಶನಕ್ಕಾಗಿ ಸ್ಕ್ಯಾನ್ ಮಾಡಿ

ಸ್ಥಳಕ್ಕಾಗಿ ಸ್ಕ್ಯಾನ್ ಮಾಡಿ

- ಕೋರಮಂಗಲದ IT ಹಬ್, ಬೆಳ್ಳಂದೂರು IT ಹಬ್, ಇನ್ಫೋಸಿಸ್, ಟೆಕ್ ಮಹೀಂದ್ರಾ, ಮೈಕ್ರೋಸಾಫ್ಟ್, ಇತ್ಯಾದಿಗಳಿಗೆ ಹತ್ತಿರದಲ್ಲಿದೆ
- 77% ತೆರೆದ ಸ್ಥಳ ಪ್ರದೇಶ 2.7 ಎಕರೆ ವ್ಯಾಪ್ತಿಯ ಹಸಿರು ಪ್ರದೇಶ
- 60+ ವಿಶ್ವ ದರ್ಜೆಯ ಸೌಕರ್ಯಗಳು
- 20,000 sft. 5 ಸ್ಟಾರ್ ಕ್ಲಬ್ಹೌಸ್
- ಹತ್ತಿರದ ಮುಂಬರುವ ಮೆಟ್ರೋ ನಿಲ್ದಾಣದಿಂದ 3 ನಿಮಿಷಗಳು
- 24 ತಿಂಗಳುಗಳಲ್ಲಿ ಹಸ್ತಾಂತರ

SUPERIOR VALUE ASSURED*

- World-class homes with maximum ventilation
- Exclusive community lifestyle with on call service
- Crafted to German Standards
- 10-Years Maintenance Warranty
- 3-Months Rental & 6-Months Resale Guarantee

CREDAI

ವಿಶೇಷ ಸೈಟ್ ಭೇಟಿ ಲಭ್ಯವಿದೆ | ಸೈಟ್ನಲ್ಲಿರುವ ಮಾದರಿ ಮನೆಯನ್ನು ಭೇಟಿ ಮಾಡಿ

93840 54982 | www.casagrand.co.in

PRODUCT SUPERIORITY
- Superior brands
- 221 quality checks
- More amenities
- Better utility of space and ventilation
- Kids and senior citizens friendly

CASAGRAND
building aspirations

ಶನಿವಾರ, ಫೆಬ್ರುವರಿ 3, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ ಪ್ರದರ್ಶನ
ಹರಿಯಾಣದ ಫರೀದಾಬಾದ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಕಲಾವಿದೆಯೊಬ್ಬರು ನೃತ್ಯ ಪ್ರದರ್ಶಿಸಿದರು



ಗೊಂದಲ ಮೂಡಿಸಿದ ತಾಲ್ಲೂಕು ಪಂಚಾಯಿತಿ ಇಒ ಸೂಚನೆ; ಸ್ಪಷ್ಟನೆ ನೀಡಿದ ಜಿಲ್ಲಾ ಪಂಚಾಯಿತಿ ಸಿಇಒ

ಧ್ವಜಸ್ತಂಭ ತೆರವು: ಆತಂಕ ಸೃಷ್ಟಿಸಿದ ಆದೇಶ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವು ವಿವಾದ ಮುಂದುವರಿದಿರುವಾಗಲೇ, 108 ಅಡಿ ಎತ್ತರದ ಧ್ವಜಸ್ತಂಭವನ್ನೂ ತೆರವುಗೊಳಿಸಲು ಜಿಲ್ಲಾಡಳಿತ ಆದೇಶಿಸಿದೆ ಎನ್ನಲಾದ ಸುದ್ದಿ ಶುಕ್ರವಾರ ಆತಂಕ ಸೃಷ್ಟಿಸಿತು.

'ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಧ್ವಜಸ್ತಂಭ ತೆರವುಗೊಳಿಸಿ ಜಾಗವನ್ನು ಸುಪರ್ದಿಗೆ ಪಡೆಯಬೇಕು, ಸ್ಥಳದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಬೇಕು' ಎಂದು ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಜ.25ರಂದು ಹೊರಡಿಸಿದ್ದ ಆದೇಶದ ಪ್ರತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

ನಂತರ ಜ.29ರಂದು ಹೊರಡಿಸಲಾಗಿರುವ 'ರಂಗಮಂದಿರದ ಮುಂಭಾಗದಲ್ಲಿರುವ ಧ್ವಜಸ್ತಂಭವನ್ನು ಸುಪರ್ದಿಗೆ ಪಡೆದು ಕ್ರಮ ವಹಿಸಬೇಕು' ಎಂಬ ಸೂಚನೆ ನೀಡಿರುವ ತಿದ್ದುಪಡಿ ಆದೇಶ ಪ್ರತಿಯೂ ಹರಿದಾಡಿತು. 'ತೆರವು' ಪದ ತೆಗೆದು ಮಾಡಲಾದ ತಿದ್ದುಪಡಿ ಆದೇಶದಲ್ಲೂ ಸ್ಪಷ್ಟತೆ ಇಲ್ಲದ ಕಾರಣಕ್ಕೆ ಸಾರ್ವಜನಿಕರಲ್ಲಿ ಗೊಂದಲ ಮೂಡಿತ್ತು.

'ಅಧಿಕಾರಿಗಳು ಶುಕ್ರವಾರವೇ ಧ್ವಜಸ್ತಂಭ ತೆರವುಗೊಳಿಸುತ್ತಾರೆ' ಎಂಬ ಮಾಹಿತಿ ಹರಿದಾಡಿದ ಪರಿಣಾಮ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಜಿಲ್ಲಾಡಳಿತದ ಕ್ರಮವನ್ನು ಸಾರ್ವಜನಿಕರು ಖಂಡಿಸಿದರು, ಶಾಸಕ ಗಣಿಗ ರವಿಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿರುವುದನ್ನು ಅರಿತ ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್, 'ಧ್ವಜಸ್ತಂಭ ತೆರವುಗೊಳಿಸುವ ಯಾವುದೇ ಆದೇಶ ಇಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಮಾಹಿತಿ ಸತ್ಯವಲ್ಲ' ಎಂದು ಸ್ಪಷ್ಟನೆ ನೀಡಿದರು.

ನಂತರ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು. ಆದರೂ ಗ್ರಾಮದಲ್ಲಿ ಪೊಲೀಸರು ಭದ್ರತೆಯನ್ನು ಬಿಗಿಗೊಳಿಸಿದ್ದಾರೆ, ನಿಷೇಧಾಜ್ಞೆ ಮುಂದುವರಿದಿದೆ.

ಡಿಸಿ, ಎಸ್ಪಿ ಎಚ್ಚರಿಕೆ: 'ಧ್ವಜಸ್ತಂಭ ವಿಚಾರ ಅತ್ಯಂತ ಸೂಕ್ಷ್ಮವಾಗಿದ್ದು, ಜಾಲತಾಣಗಳ ಸಂದೇಶದ ಮೇಲೆ ಜಿಲ್ಲಾಡಳಿತ ತೀವ್ರ ನಿಗಾ ವಹಿಸಿದೆ. ಸಮಾಜದ ಸ್ವಾಸ್ಥ್ಯಕ್ಕೆ ಭಂಗ ತರುವ ವಿಡಿಯೊ, ಚಿತ್ರ, ಪ್ರಚೋದನಕಾರಿ ಹೇಳಿಕೆ ಹಾಕುವವರ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಕುಮಾರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಕಠಿಣ ಕ್ರಮ ಎಚ್ಚರಿಕೆ ನೀಡಿದ್ದಾರೆ.



ಕೆರಗೋಡು ಗ್ರಾಮದಲ್ಲಿ ಸ್ಥಾಪಿಸಲಾಗಿರುವ ಧ್ವಜಸ್ತಂಭದ ಸುತ್ತಲೂ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದಾರೆ

ಮಂಡ್ಯವನ್ನು ಮಂಗಳೂರು ಮಾಡಲು ಬಿಡೆವು: ಚಲುವರಾಯಸ್ವಾಮಿ

ಮೈಸೂರು: 'ಮಂಡ್ಯವನ್ನು ಮತ್ತೊಂದು ಮಂಗಳೂರು ಮಾಡಲು ಜೆಡಿಎಸ್–ಬಿಜೆಪಿಯವರಿಗೆ ಬಿಡುವುದಿಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಗುಡುಗಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್‌ನವರು ಹಾಗೂ ಬಿಜೆಪಿಯವರು ಮಂಡ್ಯದಲ್ಲಿ ಯಾವ ಪುರುಷಾರ್ಥಕ್ಕೆ ಹೋರಾಟ ಅಥವಾ ಬಂದ್ ಮಾಡುತ್ತಿದ್ದಾರೆ? ಧ್ವಜದ ವಿಚಾರದಲ್ಲಿ ಕರೆ ಕೊಟ್ಟಿರುವ ಮಂಡ್ಯ ಬಂದ್‌ಗೆ ಜನರೇ ತಿರುಗಿ ಬಿದ್ದಿದ್ದಾರೆ' ಎಂದರು.

'ವಿನಯದ ಬಗ್ಗೆ ನಾನು ಕುಮಾರಸ್ವಾಮಿಯವರಿಂದ ಕಲಿಯಬೇಕಿಲ್ಲ. ನಾನು ಅವರಿಂದ ನಾಯಕನಾದವನಲ್ಲ. ಎಚ್.ಡಿ. ದೇವೇಗೌಡರ ಮೇಲಿನ ಗೌರವದಿಂದಾಗಿ ಸುಮ್ಮನಿದ್ದೇನೆ. ಇಲ್ಲದಿದ್ದರೆ ದೊಡ್ಡ ಪ್ರಮಾಣದಲ್ಲೇ ಉತ್ತರ ಕೊಡುತ್ತಿದ್ದೆ. ಗೌರವ ಬೇಡವೆಂದಾದರೆ, ಬೇರೆ ರೀತಿಯಲ್ಲೇ ಮಾತನಾಡುತ್ತೇನೆ' ಎಂದರು.

'ನಾನೇನು ಕುಮಾರಸ್ವಾಮಿ ಮನೆಯ ಋಣದಲ್ಲಿ ಇದ್ದೇನೆಯೇ, ಅವರ ಆಸ್ತಿ ತಿಂದಿದ್ದೇನೆಯೇ? ಅವರಿಗೆ ನನ್ನ ಹಣೆಬರಹ ಬರೆಯಲು ಸಾಧ್ಯವೇ? ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ಭೈರೇಗೌಡ ಅವರನ್ನು ಜೆಡಿಎಸ್‌ನಿಂದ ಯಾರು ಹೊರಕ್ಕೆ ಕಳಿಸಿದರೆಂದು ಅವರು ಹೇಳಲಿ' ಎಂದು ಸವಾಲೆಸೆದರು.

'ಮಂಡ್ಯದ ಜನ ಇವರಿಗೆ ಕೊಟ್ಟ ಗೌರವಕ್ಕೆ ಪ್ರತಿಯಾಗಿ ಅಶಾಂತಿ, ಗಲಭೆಯನ್ನು ವಾಪಸ್ ಕೊಡುತ್ತಿದ್ದಾರಾ?' ಎಂದರು.

ಮಂಡ್ಯದ ಅಭಿವೃದ್ಧಿ ಬಗ್ಗೆ ಚರ್ಚೆಗೆ ಬರಲಿ ಎಂಬ ಜೆಡಿಎಸ್ ಆಹ್ವಾನದ ಬಗ್ಗೆ ಪ್ರತಿಕ್ರಿಯಿಸಿ, 'ನಾಚಿಕೆ ಆಗಬೇಕು ಅವರಿಗೆ. ಒಂದು ಅಂಗನವಾಡಿ ಕಟ್ಟಡ ಕಟ್ಟಲೂ ಆಗದವರು ಏನು ಚರ್ಚಿಸುತ್ತಾರೆ? ಅವರದ್ದು ಕೇವಲ ಹಿಟ್ ಅಂಡ್ ರನ್ ಕೇಸ್. ಚರ್ಚಿಸುವುದಿದ್ದರೆ ಮಂಡ್ಯಕ್ಕೆ ಬರಲಿ ಅಥವಾ ವಿಧಾನಮಂಡಲ ಅಧಿವೇಶನದಲ್ಲೇ ನಡೆಸಲು ಸಿದ್ಧವಿದ್ದೇನೆ. ಮಂಡ್ಯಕ್ಕೆ ಅವರ ಕೊಡುಗೆ ಶೂನ್ಯ. ಅಭಿವೃದ್ಧಿ ಮಾಡಿದ್ದರೆ ಆ ಪಕ್ಷದವರು ಯಾಕೆ ಸೋಲುತ್ತಿದ್ದರು' ಎಂದು ಕೇಳಿದರು.

'ರೈತರಿಗಾಗಿ, ಕಾವೇರಿ ನೀರಿಗಾಗಿ ಹೋರಾಟ ಅಥವಾ ಬಂದ್ ಮಾಡಿದರೆ ನಾವೂ ಬೆಂಬಲಿಸುತ್ತೇವೆ. ಆದರೆ, ಧ್ವಜದ ವಿಚಾರದಲ್ಲಿ ಬಂದ್‌ಗೆ ಕರೆ ನೀಡಿರುವುದಕ್ಕೆ ಬಿಜೆಪಿ - ಜೆಡಿಎಸ್‌ನವರಿಗೆ ನಾಚಿಕೆಯಾಗಬೇಕು. ರಾಷ್ಟ್ರಧ್ವಜ ತೆಗೆಯಿರಿ ಎನ್ನುವುದು ಅವರ ಹೋರಾಟವೇ?' ಎಂದು ಕೇಳಿದರು.

'ಹಿಂದುತ್ವ ಎಂಬುದು ಅವರಿಗಿಂತ ನಮ್ಮಲ್ಲೇ ಜಾಸ್ತಿ ಇದೆ. ಯಾರೋ ಪುಟ್ಟರಾಜನೋ ಬೊಮ್ಮಪ್ಪನಿಂದಲೋ ಪತ್ರಿಕಾಗೋಷ್ಠಿ ಮಾಡಿಸುತ್ತಾ ಹೋದರೆ ಜನ ಪಾಠ ಕಲಿಸುತ್ತಾರೆ' ಎಂದು ಕುಮಾರಸ್ವಾಮಿ ವಿರುದ್ಧ ಗುಡುಗಿದರು.

ಗ್ರಾಮದಲ್ಲಿ ಶಾಂತಿ ಸಭೆ

ಕೆರಗೋಡು ಗ್ರಾಮದಲ್ಲಿ ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಜಿ.ಪಂ ಸಿಇಒ ಶೇಖ್ ತನ್ವೀರ್ ಆಸೀಫ್ ನೇತೃತ್ವದಲ್ಲಿ ನಡೆದ ಶಾಂತಿ ಸಭೆಗೆ 50ಕ್ಕೂಹೆಚ್ಚು ಗ್ರಾಮಸ್ಥರು ಬಂದಿದ್ದರು. '2–3 ದಿನದೊಳಗೆ ಮಾತುಕತೆ ಮೂಲಕ ಒಮ್ಮತಕ್ಕೆ ಬರುವಂತೆ ತಿಳಿಸಲಾಗಿದೆ. ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿದೆ' ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು.

ಧ್ವಜ ಆಂದೋಲನ ಮುಂದೂಡಿಕೆ: 'ಕೆರಗೋಡು ಗ್ರಾಮದ ಮನೆಗಳಿಗೆ ಹನುಮ ಧ್ವಜ ಅಳವಡಿಸುವ ಆಂದೋಲನವನ್ನು ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಶನಿವಾರ ನಡೆಸಲಿದ್ದಾರೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಕುಮಾರ್ ತಿಳಿಸಿದರು.

ರಾಷ್ಟ್ರಧ್ವಜ ಅಸ್ಮಿತೆಯ ಪ್ರತೀಕ: ಸಿ.ಎಂ

ವಿಜಯಪುರ: 'ಮಂಡ್ಯ ಜಿಲ್ಲೆಯ ಕೆರಗೋಡು ಹನುಮಧ್ವಜ ಪ್ರಕರಣವನ್ನು ಸಿಬಿಐಗೆ ವಹಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳುತ್ತಾರೆ. ಆದರೆ, ಅವರಿಗೆ ಆ ಪ್ರಕರಣದ ವಾಸ್ತವಾಂಶವೇ ಗೊತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಕೇವಲ ರಾಷ್ಟ್ರಧ್ವಜ ಹಾಗೂ ಕನ್ನಡ ಧ್ವಜ ಹಾರಿಸುವುದಾಗಿ ಕೆರಗೋಡು ಗ್ರಾಮ ಪಂಚಾಯಿತಿಯಲ್ಲಿ ಅನುಮತಿ ಪಡೆದು ಕೇಸರಿ ಧ್ವಜ ಹಾರಿಸಲು ಮುಂದಾಗಿದ್ದರು. ಅವರಿಗೆ ರಾಷ್ಟ್ರಧ್ವಜದ ಬಗ್ಗೆ ಯಾವ ಗೌರವವೂ ಇಲ್ಲ. ರಾಷ್ಟ್ರಧ್ವಜ, ಭಾರತ ದೇಶದ 140 ಕೋಟಿ ಜನರ ಅಸ್ಮಿತೆಯ ಪ್ರತೀಕ. ಇಂತಹ ರಾಷ್ಟ್ರಧ್ವಜವನ್ನು ಹಾಕಲು ಒಪ್ಪದಿರುವವರು ದೇಶಭಕ್ತರೆಂದು ಹೇಳಿಕೊಳ್ಳುತ್ತಾರೆ' ಎಂದು ಅವರು ಮುದ್ದೇಬಿಹಾಳದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

9ರ ವರೆಗೆ ಹನುಮಧ್ವಜ ಅಭಿಯಾನ

ಮಂಗಳೂರು: ಮಂಡ್ಯ ಜಿಲ್ಲೆ ಕರೆಗೋಡು ಗ್ರಾಮದಲ್ಲಿ ಹನುಮಧ್ವಜ ತೆಗೆದುಹಾಕಿದ ರಾಜ್ಯ ಸರ್ಕಾರದ ಕ್ರಮ ಖಂಡಿಸಿ, ಹಿಂದೂಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಲು ರಾಜ್ಯದಾದ್ಯಂತ ಇದೇ 9ರ ವರೆಗೆ ಹನುಮಧ್ವಜ ಅಭಿಯಾನ ನಡೆಸುತ್ತಿರುವುದಾಗಿ ಬಜರಂಗದಳ ಪ್ರಾಂತ ಸಂಯೋಜಕ ಸುನೀಲ್ ಕೆ.ಆರ್. ತಿಳಿಸಿದರು.

ಶುಕ್ರವಾರ ಇಲ್ಲಿಯ ವಿಶ್ವ ಹಿಂದೂ ಪರಿಷತ್ ಕಚೇರಿಯಲ್ಲಿ ಹನುಮಧ್ವಜಾರೋಹಣ ಮಾಡಿ, ಆಂದೋಲನಕ್ಕೆ ಅವರು ಚಾಲನೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿ, ರಾಜ್ಯದ ಎಲ್ಲ ಹಿಂದೂಗಳ ಮನೆ ಮನೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ ಹನುಮಧ್ವಜ ಹಾರಿಸಲಾಗುವುದು. ಕರೆಗೋಡಿನಲ್ಲಿ ಹನುಮಧ್ವಜ ಹಾರಿಸಲು ಅವಕಾಶ ನೀಡುವಂತೆ ಕೋರಿ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಮೂಲಕ ಇದೇ 9ರಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಫೆ.10ರಂದು ಎಲ್ಲೆಡೆ ಹನುಮಾನ್ ಚಾಲೀಸಾ ಪಠಣ ನಡೆಸಲಾಗುವುದು ಎಂದರು.

ಮಳಲಿ ಮಸೀದಿ ಜಾಗದಲ್ಲಿ ಮಂದಿರ– ವಿಶ್ವಾಸ: 'ದಕ್ಷಿಣ ಕನ್ನಡ ಜಿಲ್ಲೆಯ ಮಳಲಿ ಮಸೀದಿ ಇರುವ ಸ್ಥಳ ವಕ್ಫ್ ಮಂಡಳಿಯ ಆಸ್ತಿ ಅಲ್ಲ ಎಂದು ನ್ಯಾಯಾಲಯದ ತೀರ್ಪು ಬಂದಿದೆ. ಜ್ಞಾನವಾಪಿ, ಮಳಲಿ ಹಿಂದೆ ಮಂದಿರಗಳೇ ಆಗಿದ್ದವು. ಮುಸ್ಲಿಂ ಆಕ್ರಮಣದ ನಂತರ ಅವುಗಳನ್ನು ಮಸೀದಿಗಳನ್ನಾಗಿ ಪರಿವರ್ತಿಸಲಾಯಿತು. ಮಳಲಿಯಲ್ಲಿ ಮಂದಿರ ನಿರ್ಮಾಣ ಆಗಿಯೇ ಆಗುತ್ತದೆ' ಎಂದು ಸುನೀಲ್ ಅವರು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ವಂದೇ ಭಾರತ್ ವಿಶೇಷ ರೈಲು ಸಂಚಾರ ಮುಂದುವರಿಕೆ

ಬೆಂಗಳೂರು: ಎಂಜಿಆರ್ ಚೆನ್ನೈ ಸೆಂಟ್ರಲ್ ಮತ್ತು ಮೈಸೂರು ನಿಲ್ದಾಣಗಳ ನಡುವೆ ಸಂಚರಿಸುವ ಸಾಪ್ತಾಹಿಕ 'ವಂದೇ ಭಾರತ್' ವಿಶೇಷ ರೈಲುಗಳ ಸೇವೆಯನ್ನು ಮಾರ್ಚ್ 27ರವರೆಗೆ ವಿಸ್ತರಿಸಲಾಗಿದೆ.

ಈಗಿರುವ ಟಿಕೆಟ್ ದರ, ಬೋಗಿಗಳ ಸಂಯೋಜನೆ, ನಿಲುಗಡೆಗಳು, ವೇಳಾಪಟ್ಟಿ ಮುಂದುವರಿಯಲಿದೆ. ಫೆ.7ರಿಂದ ಮಾರ್ಚ್ 27ರ ವರೆಗೆ ಪ್ರತಿ ಬುಧವಾರ ಮೈಸೂರಿನಿಂದ ಒಂದು. ಚೆನ್ನೈಯಿಂದ ಒಂದು ರೈಲು ಸಂಚರಿಸಲಿದೆ.



ರದ್ದು: ಕೊಪ್ಪಳ ಯಾರ್ಡ್‌ನಲ್ಲಿ ಲೆವೆಲ್ ಕ್ರಾಸಿಂಗ್ ಗೇಟ್ ಸಂಖ್ಯೆ 63ರಲ್ಲಿ ರಸ್ತೆ ಕೆಳ ಸೇತುವೆಗೆ ಸಂಬಂಧಿಸಿದ ಸುರಕ್ಷತಾ ಕಾಮಗಾರಿಯನ್ನು ಫೆ.4ರಂದು ಹಮ್ಮಿಕೊಳ್ಳಲಾಗಿದೆ. ಎಸ್.ಎಸ್.ಎಸ್ ಹುಬ್ಬಳ್ಳಿ-ಗುಂತಕಲ್ ಡೈಲಿ ಪ್ಯಾಸೆಂಜರ್ ವಿಶೇಷ ರೈಲು, ಗುಂತಕಲ್-ಎಸ್.ಎಸ್.ಎಸ್ ಹುಬ್ಬಳ್ಳಿ ಡೈಲಿ ಪ್ಯಾಸೆಂಜರ್ ವಿಶೇಷ ರೈಲುಗಳ ಸಂಚಾರವನ್ನು ಅಂದು ರದ್ದುಗೊಳಿಸಲಾಗಿದೆ.

ಎಸ್.ಎಸ್.ಎಸ್ ಹುಬ್ಬಳ್ಳಿ- ಕಾರಟಗಿ ಡೈಲಿ ಪ್ಯಾಸೆಂಜರ್ ವಿಶೇಷ ರೈಲು ಮತ್ತು ಕಾರಟಗಿ-ಎಸ್.ಎಸ್.ಎಸ್ ಹುಬ್ಬಳ್ಳಿ ಡೈಲಿ ಪ್ಯಾಸೆಂಜರ್ ವಿಶೇಷ ರೈಲು ಅಂದು ಒಂದು ಗಂಟೆ ತಡವಾಗಿ ಸಂಚರಿಸಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕುಮಾರಸ್ವಾಮಿ ಕೇಸರಿ ಶಾಲು ಹಾಕಬಾರದಿತ್ತು: ದೇವೇಗೌಡ

ನವದೆಹಲಿ: 'ಮಂಡ್ಯದ ಕೆರಗೋಡು ಗ್ರಾಮದಲ್ಲಿ ಹನುಮಧ್ವಜ ತೆರವು ತೆರವು ವಿರೋಧಿಸಿ ಪ್ರತಿಭಟನೆ ಸಂದರ್ಭದಲ್ಲಿ ಎಚ್.ಡಿ.ಕುಮಾರಸ್ವಾಮಿ ಕೇಸರಿ ಶಾಲು ಹಾಕಬಾರದಿತ್ತು. ಅವರು ನಮ್ಮ ಪಕ್ಷದ ಶಾಲು ಹಾಕಬಹುದಿತ್ತು' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಖಂಡಿತವಾಗಿಯೂ ಕೇಸರಿ ಶಾಲು ಹಾಕುವುದಿಲ್ಲ. ನಾಳೆ ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೆ ವೇದಿಕೆ ಹಂಚಿಕೊಂಡರೂ ನನ್ನ ಪಕ್ಷದ ಶಾಲು ಹಾಕಿಕೊಳ್ಳುತ್ತೇನೆ' ಎಂದು ದೇವೇಗೌಡ ಅವರು ಸ್ಪಷ್ಟಪಡಿಸಿದರು.

'ಸೀಟು ಹಂಚಿಕೆ ಏನೇ ಇರಲಿ, ಇಬ್ಬರೂ ಸೇರಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಪ್ರತಿಭಟನೆ ವೇಳೆ ಯಾರೋ ಬಂದು ಕೇಸರಿ ಶಾಲು ಹಾಕಿದ್ದಾರೆ. ಆಯಾ ಸಂದರ್ಭಕ್ಕೆ ತಕ್ಕಂತೆ ಹಾಕಿದ್ದಾರೆ. ಅದಕ್ಕೆ ದೊಡ್ಡ ವ್ಯಾಖ್ಯಾನ ಮಾಡುವ ಅಗತ್ಯ ಇಲ್ಲ' ಎಂದೂ ಅವರು ತಿಳಿಸಿದರು.

'ಬಿಜೆಪಿ ಜತೆಗೆ ಸೀಟು ಹಂಚಿಕೆ ಬಗ್ಗೆ ನಾನು ಮಾತನಾಡುವುದಿಲ್ಲ. ಕುಮಾರಸ್ವಾಮಿ ಮತ್ತು ಅಮಿತ್ ಶಾ ಚರ್ಚೆ ಮಾಡಲಿದ್ದಾರೆ' ಎಂದು ಹೇಳಿದರು.

'ಅದೇನು ಮಾಡ್ತಾರೊ ಮಾಡಲಿ ನೋಡೋಣ'

ಪ್ರಜಾವಾಣಿ ವಾರ್ತೆ

ರಾಮನಗರ: 'ದೇವೇಗೌಡ ಅವರ ಮುಖ ನೋಡಿಕೊಂಡು ಸುಮ್ಮನಿದ್ದೇನೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಹೇಳಿದ್ದಾರೆ. ಇಲ್ಲಾಂದ್ರೆ ಏನು ಮಾಡುತ್ತಿದ್ದರು? ಅವರ ಮಾತಿನ ಅರ್ಥವೇನು? ನಾನೂ ಅವರನ್ನು ತುಂಬಾ ಹತ್ತಿರದಿಂದ ನೋಡಿದ್ದೀನಿ. ಅದೇನು ಮಾಡುತ್ತಾರೊ ಮಾಡಲಿ ನೋಡೋಣ' ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ಸಚಿವ ಚಲುವರಾಯಸ್ವಾಮಿ ಅವರು ತಮ್ಮ ವಿರುದ್ಧ ನೀಡಿರುವ ಹೇಳಿಕೆ ಕುರಿತು ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಅವರನ್ನು ನಾನೂ ನೋಡಿದ್ದೇನೆ. ಹೇಗೆ ಬಂದರು, ಏನು ಮಾಡಿದರು ಎಂಬುದು ಗೊತ್ತಿದೆ. ಇನ್ನೂ ಅದೇನು ಮಾತನಾಡುತ್ತಾರೊ ಮಾತನಾಡಲಿ. ಇನ್ನೂ ಚನ್ನಾಗಿ ಮಾತನಾಡಲಿ' ಎಂದು ವಂಗ್ಯವಾಡಿದರು.

'ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಬೈರೇಗೌಡ ಅವರನ್ನು ಪಕ್ಷದಿಂದ ಹೊರಗೆ ಕಳಿಸಿದ್ದು ಯಾರೆಂದು ಕುಮಾರಸ್ವಾಮಿ ಹೇಳಲಿ ಎಂದು ಕೇಳಿದ್ದಾರೆ. ಹೆಗಡೆ ಅವರೆಲ್ಲರೂ ರಾಜಕಾರಣದಲ್ಲಿದ್ದಾಗ ನಾನಿನ್ನೂ ಚಿಕ್ಕ ಹುಡುಗ. ಅವರ ರಾಜಕಾರಣಕ್ಕೂ ನನಗೂ ಸಂಬಂಧವಿಲ್ಲ. ಮಂಡ್ಯದಲ್ಲಿ ಪಕ್ಷದ ಸೋಲಿನ ಕುರಿತು ಮಾತನಾಡುವ ಇವರು 2008 ಮತ್ತು 2018ರಲ್ಲಿ ಯಾಕೆ ಸೋತರು? ಅಭಿವೃದ್ಧಿ ಮಾಡಲಿಲ್ಲವೆಂದು ಸೋತರೇ' ಎಂದು ಪ್ರಶ್ನಿಸಿದರು.

'ಭ್ರಷ್ಟತೆ: ಸಿ.ಎಂರಿಂದ ಇತಿಹಾಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದಲ್ಲಿ ಶೇ 40ಕ್ಕೂ ಹೆಚ್ಚು ಲಂಚ ಪಡೆಯಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಬಿ.ಶಿವರಾಂ ಅವರೇ ಆರೋಪ ಮಾಡಿದ್ದಾರೆ. ಸರ್ಕಾರದ ವಿರುದ್ಧ ಅವರ ಪಕ್ಷದ ನಾಯಕರೇ ರೋಸಿಹೋಗಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಕಾಂಗ್ರೆಸ್ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಅವರದೇ ಪಕ್ಷದ ನಾಯಕರೇ ಸುದ್ದಿಗೋಷ್ಠಿ ಮೂಲಕ ಬಯಲು ಮಾಡಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಕಡು ಭ್ರಷ್ಟತೆಗೆ ಹೊಸ ಇತಿಹಾಸ ಬರೆಯಲು ಹೊರಟಿದೆ' ಎಂದು 'ಎಕ್ಸ್' ಮೂಲಕ ಹರಿಹಾಯ್ದಿದ್ದಾರೆ.

ಅಭಿವೃದ್ಧಿ ಶೂನ್ಯ, ದಂಧೆ ಜೋರು: 'ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಮಾಡಿದ್ದ 40ರಷ್ಟು ಕಮಿಷನ್ ಆರೋಪ ಕೇವಲ ಅಪಪ್ರಚಾರ ಎನ್ನುವುದನ್ನು ಕಾಂಗ್ರೆಸ್ ನಾಯಕ ಬಿ.ಶಿವರಾಂ ಒಪ್ಪಿಕೊಂಡಿದ್ದಾರೆ. ಅಲ್ಲದೇ, ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ಪ್ರಮಾಣ ಶೇ 40 ದಾಟಿದೆ ಎಂದಿದ್ದಾರೆ. ಅಭಿವೃದ್ಧಿ ಶೂನ್ಯವಾದರೂ ವರ್ಗಾವಣೆ ದಂಧೆ ಮಾತ್ರ ಜೋರು ಅಂತಲೂ ಪ್ರಾಮಾಣಿಕವಾಗಿ ಅವರು ಒಪ್ಪಿಕೊಂಡಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸುಳ್ಳು, ಅಪಪ್ರಚಾರ, ಪೊಳ್ಳು ಭರವಸೆಗಳ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವನ್ನು ಅವರ ಸುಳ್ಳು, ಅಪಪ್ರಚಾರಗಳೇ ಆಪೋಶನ ತೆಗೆದುಕೊಳ್ಳುವುದು ನಿಶ್ಚಿತ' ಎಂದಿದ್ದಾರೆ.

'ಬಿಜೆಪಿಗೆ ಆಪರೇಷನ್ ಮಾತ್ರ ಗೊತ್ತು'

ವಿಜಯಪುರ: 'ರಾಜ್ಯದ ಜನರ ವಿಶ್ವಾಸ, ನಂಬಿಕೆ ಗಳಿಸುವಲ್ಲಿ ವಿಫಲವಾದ ಬಿಜೆಪಿಯವರಿಗೆ ಆಪರೇಷನ್ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಹಣಕೊಟ್ಟು ಶಾಸಕರನ್ನು ಕೊಂಡು ಬಹುಮತ ಮಾಡಿಕೊಳ್ಳುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಕಾಂಗ್ರೆಸ್‌ನಿಂದ ಬಿಜೆಪಿಗೆ ಬರಲು ಕೆಲ ನಾಯಕರು ದುಂಬಾಲು ಬಿದ್ದಿರುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಮುಖಂಡ ಜಗದೀಶ ಶೆಟ್ಟರ್ ಹೇಳಿಕೆಗೆ ಮುದ್ದೇಬಿಹಾಳದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಜನರು ಬಿಜೆಪಿಗೆ ಎಂದಿಗೂ ಪೂರ್ಣ ಅಧಿಕಾರ ಕೊಟ್ಟೇ ಇಲ್ಲ. 2008, 2013, 2018ರಲ್ಲಿ ಅವರು ಬಹುಮತದಿಂದ ಗೆದ್ದೇ ಇಲ್ಲ. ಕಾಂಗ್ರೆಸ್ ಪಕ್ಷ 2013ರಲ್ಲಿ ಗೆದ್ದಿದೆ. 2023ರಲ್ಲಿ 136 ಸ್ಥಾನಗಳನ್ನು ಪಡೆದು ಗೆದ್ದಿದ್ದೇವೆ' ಎಂದರು.

ತಿಲಕ ನಿರಾಕರಣೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಸರೂರು ರೇವಣಸಿದ್ಧೇಶ್ವರ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಈ ವೇಳೆ ಮಹಿಳೆಯರು ಸಂಪ್ರದಾಯದಂತೆ ಆರತಿ ಬೆಳಗಿದರು. ಮಹಿಳೆಯೊಬ್ಬರು ತಿಲಕವನ್ನು ಇಡಲು ಮುಂದಾದಾಗ ಆರತಿ ತಟ್ಟೆಗೆ ಹಣ ಹಾಕಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಲಕವನ್ನು ಹಚ್ಚಿಸಿಕೊಳ್ಳಲಿಲ್ಲ. ಅಲ್ಲದೇ, ಪಕ್ಕದಲ್ಲಿದ್ದ ಅಹಿಂದ ನಾಯಕ ಸೋಮನಾಥ ಕಳ್ಳಿಮನಿ ಮುಖ್ಯಮಂತ್ರಿಗೆ ತಿಲಕ ಹಚ್ಚದಂತೆ ತಡೆದರು.

ಬಿಜೆಪಿಯಲ್ಲಿ ಮತ್ತೆ ಯಡಿಯೂರಪ್ಪ ಪರ್ವ

ಬಿಎಸ್‌ವೈ ಮತ್ತು ಪುತ್ರ ಬಿ.ವೈ. ವಿಜಯೇಂದ್ರ ಅವರಿಗೆ ಮುನ್ನಡೆ; ಸಂತೋಷ್– ಜೋಶಿಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಿಂದ 20ಕ್ಕೂ ಹೆಚ್ಚು ಸ್ಥಾನ ಗೆಲ್ಲಲೇಬೇಕೆಂಬ ಬಿಜೆಪಿ ವರಿಷ್ಠರ ಅಪೇಕ್ಷೆ, ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಮಗ ಬಿ.ವೈ.ವಿಜಯೇಂದ್ರ ಅವರಿಗೆ 'ಭೀಮಬಲ' ತಂದುಕೊಟ್ಟಿದೆ.

ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವ ಹೊತ್ತಿನಲ್ಲಿ, ವರಿಷ್ಠರ ಒಲವು ಗಳಿಸಿ ಬಿಜೆಪಿ ರಾಜ್ಯ ಘಟಕದ ಮೇಲೆ ಪ್ರಬಲ ಹಿಡಿತ ಸಾಧಿಸಿದ್ದ ಆ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹಾಗೂ ಕೇಂದ್ರದ ಸಚಿವ ಪ್ರಲ್ಹಾದ ಜೋಶಿ ಅವರ ಬಲ ಕುಸಿದಿದೆ. ವಿಧಾನಸಭೆಯ ಮುಖ್ಯ ಸಚೇತಕ ಹುದ್ದೆಯಾದರೂ ಸಿಗಲಿ ಎಂಬ ಕೊನೆಯಾಸೆಯಲ್ಲಿದ್ದ ವಿಜಯೇಂದ್ರ ಅವರಿಗೆ, ಲೋಕಸಭೆ ಚುನಾವಣೆ ಕಾರಣಕ್ಕೆ ಅಧ್ಯಕ್ಷ ಹುದ್ದೆಯನ್ನು ದಯಪಾಲಿಸಲಾಯಿತು. ಈ ಅವಕಾಶವನ್ನೇ ಚಿಮ್ಮುಹಲಗೆಯಾಗಿ ಮಾಡಿಕೊಂಡ ವಿಜಯೇಂದ್ರ, ತಮಗಿರುವ ಶಕ್ತಿ ಹಾಗೂ ಅಪ್ಪನ ಪ್ರಭಾವಳಿ ಬಳಸಿ ಪಕ್ಷ ಸಂಘಟನೆಯನ್ನು ತಮ್ಮ ಬಿಗಿಮುಷ್ಟಿಗೆ ತೆಗೆದುಕೊಂಡರು. ಅಲ್ಪಾವಧಿಯಲ್ಲಿ ಎಲ್ಲವೂ ಅಪ್ಪ–ಮಗನ ಮೂಗಿನ ನೇರಕ್ಕೆ ನಡೆಯತೊಡಗಿತು. ಹಿಂದೆ, ಹಿಡಿತ ಹೊಂದಿದ್ದವರು ದಿನೇ ದಿನೇ ತೆರೆಯ ಹಿಂದೆ ಸರಿಯತೊಡಗಿದ್ದು, ಸದ್ಯದ ವಿದ್ಯಮಾನ.

'ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದ್ದ ಸಂತೋಷ, ಜೋಶಿ ಜೋಡಿ ಫಲ ನೀಡಲಿಲ್ಲ. ಇದರಿಂದ ಬೇಸತ್ತಿರುವ ಪ್ರಧಾನಿ ನರೇಂದ್ರ ಮೋದಿ– ಗೃಹ ಸಚಿವ ಅಮಿತ್ ಶಾ ಅವರು, ಕರ್ನಾಟಕಕ್ಕೆ ಸಂಬಂಧಿಸಿದಂತೆ ಸಲಹೆ, ಸೂಚನೆ ಮತ್ತು ನಿರ್ಣಯ ತೆಗೆದುಕೊಳ್ಳುವ ಜವಾಬ್ದಾರಿಗಳಿಂದಲೂ ಇವರಿಬ್ಬರನ್ನು ಮುಕ್ತಗೊಳಿಸಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

2019ರ ಲೋಕಸಭೆ ಚುನಾವಣೆ ವೇಳೆ, ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದ ಯಡಿಯೂರಪ್ಪ ಅವರಿಗೆ ರಾಜ್ಯದ ಹೊಣೆ ನೀಡಲಾಗಿತ್ತು. 28 ಲೋಕಸಭಾ ಕ್ಷೇತ್ರಗಳ ಪೈಕಿ 25 ಅನ್ನು ಬಿಜೆಪಿ ಗೆದ್ದಿತ್ತು. ಯಡಿಯೂರಪ್ಪ ಅವರನ್ನು ಕುರ್ಚಿಯಿಂದ ಇಳಿಸಿದ ಬಳಿಕ ಅವರನ್ನು, ಅಕ್ಷರಶಃ ಮೂಲೆಗುಂಪು ಮಾಡಲಾಗಿತ್ತು. ಪಕ್ಷದ ಸಂಘಟನೆಗಾಗಿ ರಾಜ್ಯ ಪ್ರವಾಸ ಮಾಡಲು ಅನೇಕ ಬಾರಿ ಮುಂದಾದರೂ ಅವಕಾಶವನ್ನೇ ಕೊಟ್ಟಿರಲಿಲ್ಲ. ಹೀಗಾಗಿ, ಯಡಿಯೂರಪ್ಪ ಕೂಡ ಮೌನಕ್ಕೆ ಶರಣಾಗಿದ್ದರು. ವಿಧಾನಸಭೆ ಚುನಾವಣೆಗೆ ದಿನಗಣನೆಗೆ ಆರಂಭವಾದಾಗ, ಮತ್ತೆ ಯಡಿಯೂರಪ್ಪ ಅವರಿಗೆ ಸ್ವಲ್ಪ ಮಟ್ಟಿನ ಪ್ರಾಶಸ್ತ್ಯ ನೀಡಲಾಯಿತು. ಆದರೆ, ಅದೇನೂ ಫಲ ಕೊಡಲಿಲ್ಲ. ಅವರನ್ನು ದೂರ ಇಟ್ಟರೆ, ಲೋಕಸಭೆ ಚುನಾವಣೆಯಲ್ಲಿ ಗೆಲುವು ಕಷ್ಟ ಎಂದರಿತ ಆ ಪಕ್ಷದ ವರಿಷ್ಠರು, ಮತ್ತೆ ಅವರ ಮೊರೆ ಹೋಗಿದ್ದಾರೆ.

ಯಡಿಯೂರಪ್ಪ– ವಿಜಯೇಂದ್ರ ಅವರಿಗೆ ಮುಕ್ತ ಅವಕಾಶ ನೀಡಿದ್ದಾರೆ. ಇವರಿಬ್ಬರ ಮೊದಲ 'ಬೇಟೆ'ಯೇ ಜಗದೀಶ್ ಶೆಟ್ಟರ್ ಅವರನ್ನು ಬಿಜೆಪಿಗೆ ಮರಳಿ ಸೇರಿಸಿದ ಕಾರ್ಯಾಚರಣೆ. ಶೆಟ್ಟರ್ ವಾಪಸ್ ಬರುವುದನ್ನು ತಡೆಯಲು ಜೋಶಿ ಅವರು ಕೊನೆಯ ಹಂತದವರೆಗೂ ತಮ್ಮದೇ ಆದ ರೀತಿಯಲ್ಲಿ ಪ್ರಯತ್ನ ನಡೆಸಿದರು. ಆದರೆ, ಅದು ಫಲ ನೀಡಲಿಲ್ಲ. ಶೆಟ್ಟರ್ ಹೊರಹೋಗಿದ್ದರಿಂದ ಆದ ನಷ್ಟ ಮತ್ತು ಈಗ ಕರೆತರುವುದರಿಂದ ಆಗುವ ಪ್ರಯೋಜನಗಳನ್ನು ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು ಮನವರಿಕೆ ಮಾಡಿದಾಗ ವರಿಷ್ಠರು ಒಪ್ಪಿಗೆ ಸೂಚಿಸಿದರು' ಎಂದು ಮೂಲಗಳು ತಿಳಿಸಿವೆ.

ಇದೇ ಹಾದಿಯಲ್ಲಿ ನಡೆದಿರುವ ವಿಜಯೇಂದ್ರ, ಸಂತೋಷ್–ಜೋಶಿ ಕಾರಣಕ್ಕೆ ಪಕ್ಷದಿಂದ ಹೊರಹೋದವರನ್ನು ಮರಳಿ ಕರೆತರುವ ಯತ್ನವನ್ನು ಬಿರುಸಿನಿಂದ ನಡೆಸಿದ್ದಾರೆ. ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಪಕ್ಷದಿಂದ ಹೊರನಡೆದಾಗ, ಬಿಜೆಪಿ ಲಿಂಗಾಯತ ವಿರೋಧಿ ಎಂದು ಬಿಂಬಿಸುವ ಯತ್ನ ಬಲವಾಗಿ ನಡೆದಿತ್ತು. ಅದನ್ನು ಹೋಗಲಾಡಿಸಿ, ಬಿಜೆಪಿ ಬೆನ್ನಿಗೆ ನಿಂತಿದ್ದ ಲಿಂಗಾಯತ ಮತಗಳನ್ನು ಮತ್ತೆ ಸೆಳೆಯುವ ಪ್ರಯತ್ನವನ್ನು ವಿಜಯೇಂದ್ರ ಮಾಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಯಡಿಯೂರಪ್ಪ ಅವರನ್ನು ಹಿಂದೆ ಸರಿಸಿದ ಬಳಿಕ ಸಂತೋಷ್–ಜೋಶಿ ಬಣ ಮೇಲುಗೈ ಸಾಧಿಸಿತ್ತು. ಹಿಂದೆ ಯಡಿಯೂರಪ್ಪ ಜತೆ ಗುರುತಿಸಿಕೊಂಡಿದ್ದ ಅನೇಕರು, ಏಕಾಏಕಿ ಗುಂಪು ಬದಲಾಯಿಸಿದ್ದರು. 'ಆಪರೇಷನ್ ಕಮಲ'ದಡಿ ಕಾಂಗ್ರೆಸ್, ಜೆಡಿಎಸ್‌ನಿಂದ ಬಂದವರು, ಸಂತೋಷ್ ಸುತ್ತಲೇ ಗಿರಕಿ ಹೊಡೆಯುತ್ತಿದ್ದರು. ಈ ಪೈಕಿ ಕೆಲವರು ಲೋಕಸಭೆ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಅವರೆಲ್ಲರಿಗೂ ಟಿಕೆಟ್ ಸಿಗದೇ ಇರುವ ಸಾಧ್ಯತೆ ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ.

ಜಗದೀಶ ಶೆಟ್ಟರ್‌ಗೆ ಧಾರವಾಡ ಟಿಕೆಟ್

ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ್ದಕ್ಕೆ ಪ್ರತೀಕಾರ ತೀರಿಸಲು ಮುಂದಾಗಿರುವ ಜಗದೀಶ ಶೆಟ್ಟರ್, ಪ್ರಲ್ಹಾದ ಜೋಶಿ ಪ್ರತಿನಿಧಿಸುತ್ತಿರುವ ಧಾರವಾಡ ಲೋಕಸಭಾ ಕ್ಷೇತ್ರದಿಂದಲೇ ಕಣಕ್ಕೆ ಇಳಿಯುವ ಹಟ ತೊಟ್ಟಿದ್ದಾರೆ.

ಪಕ್ಷದ ಅಧ್ಯಕ್ಷ, ಸಭಾಧ್ಯಕ್ಷ, ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದ ಶೆಟ್ಟರ್ ಅವರಿಗೆ ವಿಧಾನಸಭೆ ಟಿಕೆಟ್ ತಪ್ಪಿಸಲಾಗಿತ್ತು. ಈಗ ಶಾಸಕರಾಗಿರುವ ಮಹೇಶ್ ಟೆಂಗಿನಕಾಯಿ ಅವರಿಗೆ ಟಿಕೆಟ್ ಕೊಡಿಸಲು, ಸಂತೋಷ್ ಈ ಕೆಲಸ ಮಾಡಿದ್ದಾರೆ ಎಂದು ಶೆಟ್ಟರ್ ಆಪಾದಿಸಿದ್ದರು. ಅಲ್ಲದೇ, ಪಕ್ಷದಿಂದ ಹೊರನಡೆದಿದ್ದರು.

ಶೆಟ್ಟರ್ ವಾಪಸ್ ಕರೆತರುವ ಮಾತುಕತೆ ಶಾಂಗ್ರಿಲಾ ಹೋಟೆಲ್‌ನಲ್ಲಿ ನಡೆದಾಗ, 'ಲೋಕಸಭೆ ಟಿಕೆಟ್ ಕೊಟ್ಟರಷ್ಟೇ ಯೋಚನೆ ಮಾಡುವೆ' ಎಂದು ಅವರು ಖಚಿತವಾಗಿ ತಿಳಿಸಿದ್ದರು. ಹಿಂದೆ ಅವಮಾನ ಮಾಡಿದವರಿಗೆ ಟಿಕೆಟ್ ತಪ್ಪಿಸುವುದು, ತಾವು ಲೋಕಸಭೆಗೆ ಹೋಗುವುದು ಇದರ ಹಿಂದಿನ ಲೆಕ್ಕಾಚಾರವಾಗಿತ್ತು. ವರಿಷ್ಠರ ಜತೆ ನಡೆದ ಮಾತುಕತೆ ವೇಳೆ, ಇದಕ್ಕೆ ಸಮ್ಮತಿ ಸಿಕ್ಕಿದೆ ಎಂದು ಮೂಲಗಳು ಹೇಳಿವೆ.

ಕೆಎಸ್‌ಒಯು: ಪ್ರಮಾಣಪತ್ರಕ್ಕೆ ಅರ್ಜಿ

ಮೈಸೂರು: ರಾಜ್ಯ ಮುಕ್ತ ವಿಶ್ವವಿದ್ಯಾಲಯದ 19ನೇ ವಾರ್ಷಿಕ ಘಟಿಕೋತ್ಸವ ಮಾರ್ಚ್ 2ನೇ ವಾರ ನಡೆಯಲಿದ್ದು, ಪದವಿ ಪ್ರಮಾಣಪತ್ರಗಳನ್ನು ಪಡೆಯಲು ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ (www.ksoumysuru.ac.in) ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಆ ಮೂಲಕವೇ ಸಲ್ಲಿಸಬಹುದು. ಶುಲ್ಕವನ್ನೂ ಆನ್‌ಲೈನ್‌ನಲ್ಲೇ ಪಾವತಿಸಬೇಕು. ಶುಲ್ಕ ಪಾವತಿಸಲು ಫೆ.20 ಕೊನೆಯ ದಿನ. ₹ 100 ಶುಲ್ಕದೊಡನೆ ಸಲ್ಲಿಸಲು ಫೆ.25 ಕೊನೆಯ ದಿನ. 'ಅನುಪಸ್ಥಿತಿ'ಯಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮತ್ತು ಘಟಿಕೋತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗದವರಿಗೆ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕಾಂತರಾಜ ವರದಿ: ಸಿ.ಎಂಗೆ ಎಚ್‌ಡಿಕೆ ತಿರುಗೇಟು

ರಾಮನಗರ: 'ಸೋರಿಕೆಯಾಗಿರುವ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ ಎಚ್.ಕಾಂತರಾಜ ನೇತೃತ್ವದಲ್ಲಿ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ) ವರದಿ ಅಂಶಗಳನ್ನು ನೋಡಿಯೇ ಅದು ಅವೈಜ್ಞಾನಿಕ ಎಂದು ಹೇಳುತ್ತಿದ್ದೇವೆ. ಇಷ್ಟಕ್ಕೂ ವರದಿ ಸ್ವೀಕರಿಸಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಿಡಿದುಕೊಂಡಿರುವವರು ಯಾರು' ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಈ ಕುರಿತು ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ ವರದಿ ಸ್ವೀಕರಿಸಲಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಸ್ವೀಕರಿಸುವುದಕ್ಕೆ ಆ ವರದಿಯಲ್ಲಿ ಸದಸ್ಯ ಕಾರ್ಯದರ್ಶಿ ಸಹಿ ಇತ್ತಾ? ಸಹಿ ಹಾಕದ ವರದಿಯನ್ನು ನಾನು ಹೇಗೆ ಸ್ವೀಕರಿಸಲಿ. ಸುಮ್ಮನೆ ನನ್ನ ಮೇಲೆ ಆರೋಪ ಮಾಡುತ್ತಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಸದುರ್ಗ ಕನಕಧಾಮದ ಈಶ್ವರಾನಂದಪುರಿ ಸ್ವಾಮೀಜಿ ವಿಷಾದ

'ನಾನು ಹೋಗಿದ್ದಕ್ಕೆ ದೇವಾಲಯ ತೊಳೆದರು'

ಪ್ರಜಾವಾಣಿ ವಾರ್ತೆ



ಹೊಸದುರ್ಗ: 'ಹಲವು ವರ್ಷಗಳ ಹಿಂದೆ ತಾಲ್ಲೂಕಿನ ಬಾಗೂರಿನಲ್ಲಿರುವ ಚನ್ನಕೇಶವ ದೇವಾಲಯ ಪ್ರವೇಶಿಸಿದ್ದಕ್ಕೆ ದೇವಸ್ಥಾನವನ್ನೇ ತೊಳೆದಿದ್ದರು. ಮಠಾಧೀಶರಿಗೂ ಅಸಮಾನತೆಯ ಸೋಂಕು ತಗಲುತ್ತಿರುವುದು ಬೇಸರದ ಸಂಗತಿ' ಎಂದು ಹೊಸದುರ್ಗ ಕನಕಧಾಮದ ಈಶ್ವರಾನಂದಪುರಿ ಸ್ವಾಮೀಜಿ ವಿಷಾದಿಸಿದರು.

ಸಮೀಪದ ಸಾಣೇಹಳ್ಳಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿರುವ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಅಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಶುಕ್ರವಾರ ನಡೆದ 'ಮಠಗಳ ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ ಕೊಡುಗೆ' ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಆ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು ಎಂದು ಮೊದಲೇ ತಿಳಿದಿದ್ದರೆ ಕನಕದಾಸನಂತೆ ಪ್ರತಿಭಟನೆ ಮಾಡಿ ದೇವಾಲಯ ಪ್ರವೇಶಿಸುತ್ತಿದ್ದೆ. ಆದರೆ, ಆ ವಿಷಯ ನಂತರ ತಿಳಿಯಿತು' ಎಂದ ಅವರು, 'ದೇವಾಲಯ ತೊಳೆಯುವ ಬದಲು ನಿಮ್ಮ ಮನಸ್ಸಿನ ಕೊಳೆಯನ್ನು ತೊಳೆದುಕೊಳ್ಳಿ' ಎಂದು ಸಲಹೆ ನೀಡಿದರು.

'ಇತ್ತೀಚೆಗಷ್ಟೇ ವೈಕುಂಠ ಏಕಾದಶಿಯಂದು ದೇವಾಲಯದ ಆಹ್ವಾನದ ಮೇರೆಗೆ ನಾವು ಮತ್ತು ಶಾಂತವೀರ ಸ್ವಾಮೀಜಿ ಹೋಗಿ, ದೇವಾಲಯದ ಗರ್ಭಗುಡಿಯ ಮುಂದಿನ ಪ್ರಾಂಗಣದಲ್ಲಿ ನಿಂತಿದ್ದೆವು. ಗರ್ಭಗುಡಿಗೆ ನಮ್ಮ ಪ್ರವೇಶವನ್ನು ತಡೆದರು. ಆದರೆ, ಪೂಜಾರಿಗಳ ಕುಟುಂಬದ ಹೆಣ್ಣುಮಕ್ಕಳಿಗೆ ಅವಕಾಶ ಕಲ್ಪಿಸಿದರು. ಮಠಾಧೀಶರಿಗೇ ಹೀಗಾದರೆ ಹೇಗೆ? ಮುಂದೆಂದೂ ಬಾಗೂರಿನ ಚೆನ್ನಕೇಶವ ಸ್ವಾಮಿ ದೇವಾಲಯಕ್ಕೆ ಹೋಗುವುದಿಲ್ಲ. ಬಸವಣ್ಣನವರು ಕೊಟ್ಟ ಇಷ್ಟಲಿಂಗ ಪೂಜೆ ಇಂದು ಜಾತಿಯಾಗಿ ಪರಿವರ್ತನೆಯಾಗಿದೆ. ಕೆಲವು ಮಠಗಳಲ್ಲಿ ಇನ್ನೂ ಅಸಮಾನತೆ ಎದ್ದು ಕಾಣುತ್ತಿದೆ. ಬಸವಣ್ಣನವರ ತತ್ವ ಆದರ್ಶ ಮತ್ತು ವಚನಗಳನ್ನು ನಾವು ಪಾಲಿಸಿದಾಗ ಮಾತ್ರ ಸಮಸಮಾಜ ನಿರ್ಮಾಣ ಮಾಡಲು ಸಾಧ್ಯ' ಎಂದರು.

'ಕರ್ನಾಟಕದ ಪರಂಪರೆಯಲ್ಲಿ ಮಠಗಳ ಪಾತ್ರ ಬಹಳ ದೊಡ್ಡದಾಗಿದೆ. ಹಿಂದಿನಿಂದಲೂ ವೀರಶೈವ ಲಿಂಗಾಯತ ಮಠಗಳು ತಳ ಸಮುದಾಯಗಳ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿ ಬೆಳೆಸಿವೆ' ಎಂದು ಹೇಳಿದರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, 'ಮೀಸಲಾತಿ ಕೇಳಬೇಕಾದವರು ಸುಮ್ಮನಿದ್ದಾರೆ. ಆದರೆ, ಇಂದು ಉಳ್ಳವರೇ ಮೀಸಲಾತಿ ಕೇಳುತ್ತಿದ್ದಾರೆ. ಮೀಸಲಾತಿಗಾಗಿ ಉಳ್ಳವರು ಮತ್ತು ಬಡವರ ನಡುವೆ ದೊಡ್ಡ ಕಂದಕ ಸೃಷ್ಟಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಕುಂಚಿಟಿಗ ಮಠದ ಶಾಂತವೀರ ಸ್ವಾಮೀಜಿ, ಸಾಹಿತಿ ಚಟ್ನಳ್ಳಿ ಮಹೇಶ್ ಇದ್ದರು.

> **ತರಳಬಾಳು, ಮುರುಘಾಮಠ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪಾರ. ಮಠಾಧೀಶರು ಅಂಕಣಗಳ ಮೂಲಕ ಸರಳ ಭಾಷೆಯಲ್ಲಿ ಜನರಿಗೆ ತಿಳಿವಳಿಕೆ ನೀಡಿದ್ದಾರೆ**
> **ಬಸವ ಮರುಳಸಿದ್ಧ ಸ್ವಾಮೀಜಿ,** ಬಸವತತ್ವ ಪೀಠ, ಚಿಕ್ಕಮಗಳೂರು

> **ಬಸವಾದಿ ಶರಣರ ತತ್ವಗಳು ನುಡಿಯಲ್ಲಲ್ಲದೆ ಆಚರಣೆಯಲ್ಲಿರಬೇಕು. ಶೋಷಿತರ ಬಗ್ಗೆ ಅನುಕಂಪದ ಮಾತು ಬೇಕಿಲ್ಲ. ಜಾತಿ ತಾರತಮ್ಯದಿಂದ ಹೊರಬರಬೇಕು**
> **ಶಾಂತವೀರ ಸ್ವಾಮೀಜಿ,** ಕುಂಚಿಟಿಗ ಮಠ, ಹೊಸದುರ್ಗ

ರಾಜ್ಯಸಭಾ ಚುನಾವಣೆ: ಮೈತ್ರಿ ಕೂಟದಿಂದ ಐದನೇ ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯುವ ಚುನಾವಣೆಯಲ್ಲಿ ಐದನೇ ಅಭ್ಯರ್ಥಿಯಾಗಿ ಜೆಡಿಎಸ್‌ನ ಕುಪೇಂದ್ರ ರೆಡ್ಡಿಯವರನ್ನು ಕಣಕ್ಕೆ ಇಳಿಸಲು ಬಿಜೆಪಿ– ಜೆಡಿಎಸ್ ಚಿಂತನೆ ನಡೆಸಿವೆ. ಇದರಿಂದ ಚುನಾವಣೆ ರಂಗೇರುವ ಸಾಧ್ಯತೆ ಇದೆ.

ಈಗಿರುವ ವಿವಿಧ ಪಕ್ಷಗಳ ಬಲಾಬಲದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮೂರು ಸ್ಥಾನಗಳು ಮತ್ತು ಬಿಜೆಪಿ ಒಂದು ಸ್ಥಾನವನ್ನು ಅನಾಯಾಸವಾಗಿ ಗೆದ್ದುಕೊಳ್ಳಲು ಸಾಧ್ಯವಿದೆ. ಆಡಳಿತಾರೂಢ ಕಾಂಗ್ರೆಸ್‌ಗೆ ಸಡ್ಡು ಹೊಡೆಯಲು ತೀರ್ಮಾನಿಸಿರುವ ಮಿತ್ರಪಕ್ಷಗಳು ಐದನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ತಯಾರಿ ನಡೆಸಿವೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಜೆಡಿಎಸ್ ರಾಜ್ಯಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಜತೆ ಮಾತುಕತೆ ನಡೆಸಿದ್ದು, ಒಮ್ಮತದ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿಯವರನ್ನು ಕಣಕ್ಕೆ ಇಳಿಸಲು ಎರಡೂ ಪಕ್ಷಗಳ ನಾಯಕರು ಒಪ್ಪಿಗೆ ಸೂಚಿಸಿದ್ದಾರೆ. ಇದಕ್ಕೂ ಮೊದಲು ವಿ.ಸೋಮಣ್ಣ ಅವರನ್ನು ಕಣಕ್ಕೆ ಇಳಿಸುವ ಚಿಂತನೆ ನಡೆದಿತ್ತು. ಕಾಂಗ್ರೆಸ್‌ನ ಕೆಲವು ಲಿಂಗಾಯತ ಶಾಸಕರು ಅಡ್ಡಮತದಾನ ಮಾಡಬಹುದು ಎಂಬ ಲೆಕ್ಕಾಚಾರವಿತ್ತು. ಆದರೆ, ಸೋಮಣ್ಣ ಅವರು ಆಸಕ್ತಿ ತೋರಿಸಲಿಲ್ಲ ಎಂದು ಹೇಳಿವೆ.

ಕಾಂಗ್ರೆಸ್ 135 ಶಾಸಕರ ಬಲವನ್ನು ಹೊಂದಿದೆ. ಬಿಜೆಪಿ 66, ಜೆಡಿಎಸ್ 19, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜನಾರ್ದನ ರೆಡ್ಡಿ, ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಮತ್ತು ಪಕ್ಷೇತರರಾದ ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್ ಮತ್ತು ಗೌರಿಬಿದನೂರು ಶಾಸಕ ಕೆ.ಪಿ.ಪುಟ್ಟಸ್ವಾಮಿ ಇದ್ದಾರೆ. ದರ್ಶನ್, ಲತಾ, ಪುಟ್ಟಸ್ವಾಮಿ ಕಾಂಗ್ರೆಸ್ ಜತೆ ಗುರುತಿಸಿಕೊಂಡವರು. ಜನಾರ್ದನ ರೆಡ್ಡಿ ಸಹ ಆರಂಭದಲ್ಲಿ ಕಾಂಗ್ರೆಸ್ ಜತೆಗಿರುವುದಾಗಿ ಹೇಳಿದ್ದರು. ಇತ್ತೀಚೆಗೆ, ಬಿಜೆಪಿ ಕಡೆ ಒಲವು ತೋರಿದ್ದಾರೆ.

ಒಬ್ಬ ಅಭ್ಯರ್ಥಿಯ ಗೆಲುವಿಗೆ 45 ಮತಗಳು ಬೇಕಾಗುತ್ತವೆ. ಮೈತ್ರಿಕೂಟದ ಅಭ್ಯರ್ಥಿ ಬಿಜೆಪಿಯ 21 ಹೆಚ್ಚುವರಿ ಮತಗಳು, ಜೆಡಿಎಸ್‌ನ 19, ಪಕ್ಷೇತರ 2 ಮತ್ತು ಕೆಆರ್‌ಪಿಪಿ, ಸರ್ವೋದಯ ಕರ್ನಾಟಕದ ತಲಾ ಒಂದು ಮತಗಳನ್ನು ಪಡೆಯಲು ಸಾಧ್ಯವಾದರೆ 44 ಮತಗಳನ್ನು ಪಡೆಯಬಹುದು. ಅಲ್ಲದೇ, ಕಾಂಗ್ರೆಸ್‌ನಲ್ಲಿರುವ ಅಸಮಾಧಾನಿತರಿಗೆ ಗಾಳ ಹಾಕಿ ಇನ್ನೂ ಎರಡು ಅಥವಾ ಮೂರು ಶಾಸಕರಿಂದ ಅಡ್ಡ ಮತದಾನ ಮಾಡಿಸಿದರೆ ಗೆಲುವು ಸಾಧ್ಯ ಎಂಬ ಲೆಕ್ಕಾಚಾರ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ: ನ್ಯಾಯಾಲಯದ ತೀರ್ಪಿನಲ್ಲಿ ಧಾರ್ಮಿಕ ಗ್ರಂಥಗಳ ಉಲ್ಲೇಖ ಸರಿಯೇ?

ಪೇಟಿಎಂ ಷೇರು ಶೇ 20ರಷ್ಟು ಕುಸಿತ 10

ಸಿ.ಎಂ ಆಗಿ ಚಂಪೈ ಪ್ರಮಾಣ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,085	21,853	₹65,060 (ಬೆಂಗಳೂರು)	₹73,800 (ಬೆಂಗಳೂರು)	82.95

ಸುರೇಶ್ ವಿರುದ್ಧ ಹಕ್ಕುಬಾಧ್ಯತಾ ಸಮಿತಿಯಿಂದ ತನಿಖೆ ನಡೆಸುವಂತೆ ಬಿಜೆಪಿ ಒತ್ತಾಯ

‘ಪ್ರತ್ಯೇಕ ರಾಷ್ಟ್ರ’: ಸಂಸತ್‌ನಲ್ಲಿ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ



ಡಿ.ಕೆ. ಸುರೇಶ್

ನವದೆಹಲಿ: ‘ಅನುದಾನ ತಾರತಮ್ಯ ನಿಲ್ಲಿಸದಿದ್ದರೆ ದಕ್ಷಿಣ ಭಾರತದ ರಾಜ್ಯಗಳು ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಡಬೇಕಾಗುತ್ತದೆ’ ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ನೀಡಿರುವ ಹೇಳಿಕೆ, ಸಂಸತ್‌ನ ಉಭಯ ಸದನಗಳಲ್ಲಿ ಶುಕ್ರವಾರ ಪ್ರತಿಧ್ವನಿಸಿತು.

ದೇಶ ವಿಭಜನೆಯ ಕೂಗೆಬ್ಬಿಸಿರುವ ಸುರೇಶ್ ವಿರುದ್ಧ ಹಕ್ಕುಬಾಧ್ಯತಾ ಸಮಿತಿಯಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿರುವ ಆಡಳಿತಾರೂಢ ಬಿಜೆಪಿ, ‘ಈ ಬಗ್ಗೆ ಕಾಂಗ್ರೆಸ್ ಪಕ್ಷವು ದೇಶದ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿತು. ಆದರೆ, ತನ್ನ ಸಂಸದನ ಹೇಳಿಕೆಯಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ.

ಸುರೇಶ್ ಹೇಳಿಕೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಖಂಡಿಸಬೇಕು ಮತ್ತು ದೇಶದ ಜನರ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಆಗ್ರಹಿಸಿತು. ಕಾಂಗ್ರೆಸ್ ಪಕ್ಷ, ತನ್ನ ಸಂಸದನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿತು.

ಲೋಕಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ‘ದೇಶ ವಿಭಜನೆ ಹೇಳಿಕೆ ನೀಡುವ ಮೂಲಕ ಸುರೇಶ್ ಅವರು ಭಾರತೀಯ ಸಂವಿಧಾನಕ್ಕೆ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ್ದಾರೆ’ ಎಂದು ಹೇಳಿದರು.

8ನೇ ಪುಟ ನೋಡಿ



ಶುಕ್ರವಾರ ನಡೆದ ರಾಜ್ಯಸಭೆಯ ಕಲಾಪದಲ್ಲಿ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಮಾತಿನ ವೈಖರಿ –ಪಿಟಿಐ ಚಿತ್ರ

ನನ್ನ ಪಕ್ಷ ಅಥವಾ ಅವರ ಪಕ್ಷ ಅಥವಾ ಯಾವುದೇ ಪಕ್ಷದ ಯಾವುದೇ ನಾಯಕರು ದೇಶ ವಿಭಜನೆಯ ಹೇಳಿಕೆ ನೀಡಿದರೆ ಒಪ್ಪಲು ಸಾಧ್ಯವಿಲ್ಲ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ ಒಂದೇ. ನಾವು ಒಂದೇ ದೇಶವಾಗಿ ಉಳಿಯುತ್ತೇವೆ

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧಪಕ್ಷದ ನಾಯಕ

ಸಂವಿಧಾನಕ್ಕೂ ಅಂಬೇಡ್ಕರ್ ಅವರಿಗೂ ಘೋರ ಅವಮಾನ ಮಾಡಿರುವ ಸುರೇಶ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಕ್ರಮ ಕೈಗೊಳ್ಳದೇ ಹೋದಲ್ಲಿ ದೇಶವನ್ನು ಛಿದ್ರಗೊಳಿಸುವ ಹೇಳಿಕೆಗೆ ಕಾಂಗ್ರೆಸ್ ಬೆಂಬಲವೂ ಇದೆ ಎಂದು ಭಾವಿಸಬೇಕಾಗುತ್ತದೆ

ಪ್ರಲ್ಹಾದ ಜೋಶಿ, ಸಂಸದೀಯ ವ್ಯವಹಾರಗಳ ಸಚಿವ

ತಾರತಮ್ಯಕ್ಕೆ ವಿರೋಧ: 7ರಂದು ದೆಹಲಿಯಲ್ಲಿ ಪ್ರತಿಭಟನೆ–ಸಿ.ಎಂ



ಬೆಂಗಳೂರು/ಹೊಸಪೇಟೆ: ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ವಿರೋಧಿಸಿ ಇದೇ 7ರಂದು ನವದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹಂಪಿ ವಿಶ್ವವಿದ್ಯಾಲಯ ಆವರಣದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಏನನ್ನೂ ನೀಡದೇ ಅನ್ಯಾಯ ಮಾಡಲಾಗಿದೆ ಎಂದು ಹೇಳಿದರು. ‘ರಾಜ್ಯಕ್ಕೆ ಬರಗಾಲದ ಪರಿಹಾರವಾಗಿ ಎನ್‌ಡಿಆರ್‌ಎಫ್‌ನಿಂದ ₹4,663 ಕೋಟಿ ನೀಡುವಂತೆ ಮನವಿ ಮಾಡಿ ನಾಲ್ಕು ತಿಂಗಳು ಕಳೆದಿದ್ದರೂ ಕೇಂದ್ರದಿಂದ ಯಾವ ಸ್ಪಂದನವೂ ಸಿಕ್ಕಿಲ್ಲ. ಹೀಗಾಗಿ ಕೇಂದ್ರದ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ನಾನೂ ಪ್ರತಿಭಟನೆಯಲ್ಲಿ ಭಾಗವಹಿಸುತ್ತೇನೆ’ ಎಂದು ತಿಳಿಸಿದರು.

8ನೇ ಪುಟ ನೋಡಿ

ಹೇಳಿಕೆಗೆ ದೇವೇಗೌಡ ಆಕ್ಷೇಪ



ಡಿ.ಕೆ. ಸುರೇಶ್ ಹೇಳಿಕೆಗೆ ಜೆಡಿಎಸ್‌ನ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಸುರೇಶ್ ಅವರು ಯಾವ ಉದ್ದೇಶದಿಂದ ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲ. ಅವರು ವ್ಯಕ್ತಿಗತವಾಗಿ ಹೇಳಿರಬಹುದು, ಅದು ಪಕ್ಷದ ನಿರ್ಣಯ ಅಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷ ಕಾಂಗ್ರೆಸ್. ಕೇಂದ್ರದಲ್ಲಿ ದಶಕಗಳ ಕಾಲ ಆಡಳಿತ ನಡೆಸಿದ ಪಕ್ಷವದು. ಅನುದಾನ ಹಂಚಿಕೆಯಲ್ಲಿ ಅನ್ಯಾಯವಾಗಿದ್ದರೆ ಬಜೆಟ್ ಮೇಲಿನ ಚರ್ಚೆ ವೇಳೆ ಮಾತನಾಡಬೇಕು’ ಎಂದು ಸಲಹೆ ನೀಡಿದರು.

ನೂರು ರಾಮ ಮಂದಿರಗಳ ಅಭಿವೃದ್ಧಿಗೆ ₹100 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ’ ಎಂಬ ಬಿಜೆಪಿ ಮತ್ತು ಪರಿವಾರದ ಸಂಘಟನೆಗಳ ಆಪಾದನೆಗೆ ತಿರುಗೇಟು ಕೊಡಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದೇ 16ರಂದು ಮಂಡಿಸಲಿರುವ ಬಜೆಟ್‌ನಲ್ಲಿ ರಾಮ ಮತ್ತು ಹನುಮ ಕ್ಷೇತ್ರಗಳ ಅಭಿವೃದ್ಧಿಗೆ ಭಾರಿ ಅನುದಾನ ಕೊಡುವ ತಯಾರಿ ನಡೆಸಿದ್ದಾರೆ.

ನೂರು ರಾಮಮಂದಿರಗಳ ಅಭಿವೃದ್ಧಿಗೆ ತಲಾ ₹1 ಕೋಟಿಯಂತೆ ಅನುದಾನ ನೀಡಬೇಕು ಎಂಬ ಆಲೋಚನೆ ಇದೆ. ಬಜೆಟ್‌ನಲ್ಲಿ ಅನುದಾನ ನಿಗದಿಗೆ ಕೋರಲಾಗಿದೆ

ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆಯ ವಿಷಯವನ್ನು ಮುಂದಿಟ್ಟು ಬಿಜೆಪಿ ಇಡೀ ದೇಶದಲ್ಲಿ ಸಂಚಲನ ಸೃಷ್ಟಿಸಿತು. ‘ನಾವೂ ರಾಮಭಕ್ತರೇ. ಅಯೋಧ್ಯೆಗೂ ಹೋಗುತ್ತೇವೆ. ಬಿಜೆಪಿ ರಾಜಕೀಯಗೊಳಿಸಿರುವ ರಾಮ ನಮ್ಮ ರಾಮನಲ್ಲ; ಗಾಂಧೀಜಿಯ ನಮ್ಮ ರಾಮ’ ಎಂದು ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಪ್ರತಿಪಾದಿಸಿದ್ದರು. ಈ ವಾದವನ್ನು ಬಿಜೆಪಿ ನಾಯಕರು ಕಟುವಾಗಿ ಟೀಕಿಸಿದ್ದರು.

7ನೇ ಪುಟ ನೋಡಿ

ಕಾರ್ಯದರ್ಶಿ ಅಮಾನತಿಗೆ ಅಧ್ಯಕ್ಷರ ಆಗ್ರಹ

ಪ್ರಜಾವಾಣಿ ವಾರ್ತೆ



ಶಿವಶಂಕರಪ್ಪ ಸಾಹುಕಾರ



ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರಾಗಿ ತಾವು ನೇಮಕಗೊಂಡ ದಿನದಿಂದ ಈವರೆಗಿನ ಆಯೋಗದ ಕಾರ್ಯನಿರ್ವಹಣೆ ಕುರಿತು ವಿಚಾರಣೆಗೆ ಆದೇಶಿಸುವಂತೆ ಹಾಗೂ ವಿಚಾರಣೆ ಪೂರ್ಣಗೊಳ್ಳುವವರೆಗೆ ಆಯೋಗದ ಕಾರ್ಯದರ್ಶಿಯನ್ನು ಅಮಾನತಿನಲ್ಲಿ ಇರಿಸುವಂತೆ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ ಅವರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶುಕ್ರವಾರ ಪತ್ರ ಬರೆದಿರುವ ಆಯೋಗದ ಅಧ್ಯಕ್ಷರು, ‘ಆಯೋಗದ ಕಾರ್ಯದರ್ಶಿಯಾಗಿರುವ ಕೆ.ಎಸ್. ಲತಾಕುಮಾರಿ ಅವರು ಸರ್ಕಾರದ ನಿಯಮಗಳು ಮತ್ತು ಆಯೋಗದ ಸಭೆಗಳ ನಿರ್ಣಯಗಳನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿದ್ದಾರೆ. ತಮ್ಮ ತಪ್ಪು ಮುಚ್ಚಿಕೊಳ್ಳಲು ಆಯೋಗ ತಪ್ಪು ಮಾಡಿದೆ ಎಂದು ಬಿಂಬಿಸಿ ಪತ್ರಿಕಾ ಪ್ರಕಟಣೆಗಳನ್ನು ನೀಡುತ್ತಿದ್ದಾರೆ’ ಎಂದು ದೂರಿದ್ದಾರೆ.

‘ಕಾರ್ಯದರ್ಶಿಯವರು ಆಯೋಗದ ನಿರ್ಣಯ ಮತ್ತು ಕಾನೂನು ಉಲ್ಲಂಘಿಸುತ್ತಿರುವ ಕುರಿತು ಜನವರಿ 10ರಂದು ನಿಮ್ಮ ಗಮನಕ್ಕೆ ತರಲಾಗಿತ್ತು. ಆ ಬಳಿಕವೂ ಆಯೋಗದ ಅನುಮೋದನೆ ಇಲ್ಲದೆ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆಪಟ್ಟಿಗಳನ್ನು ಪ್ರಕಟಿಸಿದ್ದಾರೆ. ಆಯೋಗದ ಟಿಪ್ಪಣಿಗಳನ್ನು ಮಾಧ್ಯಮಗಳಿಗೆ ಬಹಿರಂಗಪಡಿಸಿ ಗೋಪ್ಯತೆಯನ್ನು ಉಲ್ಲಂಘಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

7ನೇ ಪುಟ ನೋಡಿ

₹29ಕ್ಕೆ ಕೆ.ಜಿ ‘ಭಾರತ್ ಬ್ರ್ಯಾಂಡ್’ ಅಕ್ಕಿ

ನವದೆಹಲಿ (ಪಿಟಿಐ): ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸಲು ಮುಂದಿನ ವಾರದಿಂದ ದೇಶೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ‘ಭಾರತ್ ಬ್ರ್ಯಾಂಡ್’ ಅಕ್ಕಿ ಮಾರಾಟ ಆರಂಭಿಸಲಾಗುವುದು ಎಂದು ಕೇಂದ್ರ ಸರ್ಕಾರವು ಶುಕ್ರವಾರ ತಿಳಿಸಿದೆ.

ಈಗಾಗಲೇ, ‘ಭಾರತ್ ಬ್ರ್ಯಾಂಡ್’ ಗೋಧಿ ಹಿಟ್ಟು ಮತ್ತು ಕಡಲೆ ಬೇಳೆ ಮಾರಾಟವಾಗುತ್ತಿವೆ. ಪ್ರತಿ ಕೆ.ಜಿ ಅಕ್ಕಿಗೆ ₹29 ದರ ನಿಗದಿಪಡಿಸಲಾಗಿದ್ದು, 5 ಕೆ.ಜಿ ಮತ್ತು 10 ಕೆ.ಜಿ ಪ್ಯಾಕೆಟ್‌ಗಳಲ್ಲಿ ದೊರೆಯಲಿದೆ ಎಂದು ಮಾಹಿತಿ ನೀಡಿದೆ.

ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್), ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಮತ್ತು ಕೇಂದ್ರೀಯ ಭಂಡಾರದ ಮಳಿಗೆಗಳಲ್ಲಿ ಅಕ್ಕಿ ಮಾರಾಟಕ್ಕೆ ನಿರ್ಧರಿಸಲಾಗಿದೆ. ಇ-ಕಾಮರ್ಸ್ ವೇದಿಕೆಗಳಲ್ಲೂ ಖರೀದಿಗೆ ಲಭ್ಯವಿದೆ ಎಂದು ತಿಳಿಸಿದೆ.

10ನೇ ಪುಟ ನೋಡಿ

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

384 ಗೆಜೆಟೆಡ್ ಪ್ರೊಬೇಷನರ್ ಹುದ್ದೆ ಭರ್ತಿಗೆ ಪ್ರಸ್ತಾವ

ಬೆಂಗಳೂರು: 2023–24ನೇ ಸಾಲಿಗೆ ಗೆಜೆಟೆಡ್ ಪ್ರೊಬೇಷನರ್‌ಗಳ ಗ್ರೂಪ್-ಎ ವೃಂದದ 159 ಮತ್ತು ಗ್ರೂಪ್-ಬಿ ವೃಂದದ 225 ಸೇರಿ 384 ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ಆರಂಭಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಿದೆ. 2

ಚಿನಕುರಳಿ

ಪ್ರಕಾಶ್ ಶೆಟ್ಟಿ



ಯುಎಸ್‌ಐಇಎಫ್ ಸಾಂಸ್ಕೃತಿಕ ರಾಯಭಾರಿ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನೈಟೆಡ್ ಸ್ಟೇಟ್ಸ್ ಇಂಡಿಯಾ ಎಜ್ಯುಕೇಷನಲ್ ಫೌಂಡೇಷನ್ (ಯುಎಸ್‌ಐಇಎಫ್) ವತಿಯಿಂದ 2025- 2026ನೇ ಶೈಕ್ಷಣಿಕ ವರ್ಷದ ಅವಧಿಗೆ 'ಯುಎಸ್ ಸಾಂಸ್ಕೃತಿಕ ರಾಯಭಾರಿ' ಆಗಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಯುಎಸ್‌ಐಇಎಫ್, ಫುಲ್‌ಬ್ರೈಟ್ ನೆಹರೂ ಸೇರಿದಂತೆ ಹಲವು ಸಂಸ್ಥೆಗಳ ಫೆಲೋಶಿಪ್ ಇದಾಗಿದೆ. ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಆರ್ಥಿಕ ಸಹಾಯವೂ ಲಭ್ಯವಿದೆ.

ದೇಶಗಳ ಶೈಕ್ಷಣಿಕ ಸಂಶೋಧನೆ, ಬೋಧನೆ ಮತ್ತು ವೃತ್ತಿಪರ ಸಾಮರ್ಥ್ಯಗಳನ್ನು ಶ್ರೀಮಂತಗೊಳಿಸುವುದು ಇದರ ಉದ್ದೇಶ. ಭಾರತೀಯ ವಿದ್ಯಾರ್ಥಿಗಳು, ವಿದ್ವಾಂಸರು, ಶಿಕ್ಷಕರು, ಕಲಾವಿದರು ಮತ್ತು ವಿವಿಧ ಕ್ಷೇತ್ರಗಳ ಪರಿಣಿತರು ಅರ್ಜಿ ಸಲ್ಲಿಸಬಹುದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ನವದೆಹಲಿ, ಚೆನ್ನೈ, ಹೈದರಾಬಾದ್, ಕೋಲ್ಕತ್ತ ಹಾಗೂ ಮುಂಬೈನಲ್ಲಿ ಯುಎಸ್‌ಐಇಎಫ್ ಕಚೇರಿಗಳು ಇವೆ.

ಹೆಚ್ಚಿನ ಮಾಹಿತಿಗೆ https://www.usief.org.in ಜಾಲತಾಣ. ಇ–ಮೇಲ್: ip@usief.org.in.

'ಅತಂತ್ರ ಸ್ಥಿತಿ'ಯಲ್ಲಿ 700ಕ್ಕೂ ಹೆಚ್ಚು ನಿವೇಶನದಾರರು: ದೊರೆಯದ ಬದಲಿ ನಿವೇಶನ

ಮನೆ ನಿರ್ಮಾಣಕ್ಕೆ 'ಜೌಗು' ಅಡ್ಡಿ

• ಆದಿತ್ಯ ಕೆ.ಎ.

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ಬ್ಲಾಕ್ 1 ಎಲ್ ಹಾಗೂ ಬ್ಲಾಕ್ 2 ಎ, ಬಿ ಹಾಗೂ ಎಚ್ ಸೆಕ್ಟರ್‌ನಲ್ಲಿ ನಿವೇಶನ ಖರೀದಿಸಿದ್ದ 700ಕ್ಕೂ ಹೆಚ್ಚು ಮಂದಿಗೆ ಮನೆ ನಿರ್ಮಿಸಲು 'ಜೌಗು ಪ್ರದೇಶ' ಅಡ್ಡಿಯಾಗಿದೆ.

ಏಳು ವರ್ಷಗಳ ಹಿಂದೆ ನಿವೇಶನ ಖರೀದಿಸಿದ್ದರೂ, ಆ ಬ್ಲಾಕ್‌ಗಳಲ್ಲಿ ಮನೆ ನಿರ್ಮಿಸಲು ಸಾಧ್ಯವಾಗದೇ ನಿವೇಶನದಾರರು 'ಅತಂತ್ರ ಸ್ಥಿತಿ'ಗೆ ತಲುಪಿದ್ದಾರೆ. ಇತ್ತ ಬದಲಿ ನಿವೇಶನ ದೊರೆಯುತ್ತಿಲ್ಲ; ಅತ್ತ ಖರೀದಿಸಿದ ನಿವೇಶನಗಳ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ.

2016ರಲ್ಲಿ ಕೆಂಪೇಗೌಡ ಬಡಾವಣೆಯ ಕನ್ನಳ್ಳಿ, ಬಳಿ, ಎರಡು ಕೆರೆಗಳ ನಡುವೆ 40 ಪ್ರದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವಿವಿಧ ಸೆಕ್ಟರ್ ವಿಂಗಡಿಸಿ ವಸತಿ ಪ್ರದೇಶ ನಿರ್ಮಿಸಿತ್ತು. ಅದೇ ವರ್ಷದಲ್ಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ನಿವೇಶನ ಹಂಚಿಕೆಯಾದ ವರ್ಷ ಮಳೆ ಕಡಿಮೆಯಿತ್ತು. ನಿವೇಶನ ಖರೀದಿಗೂ ಪೈಪೋಟಿ ಏರ್ಪಟಿತ್ತು.

ಅದಾದ ಮರು ವರ್ಷವೇ ಹೆಚ್ಚು ಮಳೆ ಸುರಿದು ಸಮಸ್ಯೆ ಗೋಚರಿಸಿತು. ಈ ಬ್ಲಾಕ್‌ಗಳ 700 ನಿವೇಶನಗಳ ಬಹುತೇಕ ಸ್ಥಳಗಳಲ್ಲಿ ನೀರಿನ ಪಸೆ ಉಕ್ಕುತ್ತಿದ್ದು, ಈ ಭಾಗದಲ್ಲಿ ನಿವೇಶನ ದೊರೆತವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಕ್ಕಪಕ್ಕದ ಬ್ಲಾಕ್‌ಗಳಲ್ಲಿ ಕಟ್ಟಡಗಳು ತಲೆಯೆತ್ತಿದ್ದರೂ ಇವರಿಗೆ ಮಾತ್ರ ಮನೆ ನಿರ್ಮಾಣದ ಕನಸು ಮರೀಚಿಕೆಯಾಗಿದೆ.



ಕೆಂಪೇಗೌಡ ಬಡಾವಣೆಯ ನಿವೇಶನವೊಂದರಲ್ಲಿ ಕಾಣಿಸಿಕೊಂಡ ತೇವಾಂಶ

ನಿವೇಶನದಾರರ ಅಳಲು ಏನು?

- 2017ರಲ್ಲೇ ಬಡಾವಣೆ ಸಮಸ್ಯೆ ಬಗ್ಗೆ ಬಿಡಿಎ ಗಮನಕ್ಕೆ ಬಂದಿದ್ದರೂ ಇತ್ಯರ್ಥವಾಗಿಲ್ಲ.
- ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ಮಾರ್ಗದರ್ಶನ ಪಡೆದು ಹಲವು ತಿಂಗಳು ಕಳೆದರೂ ಪರಿಹಾರ ಕಾಮಗಾರಿ ಆರಂಭಿಸಿಲ್ಲ.
- ಬಡಾವಣೆಯ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಇಲ್ಲಿ ತೀರಾ ಸಡಿಲವಾದ ಮಣ್ಣಿದೆ.
- ನಿವೇಶನಗಳಲ್ಲಿ 4 ಅಡಿ ಮಣ್ಣು ತೆಗೆದರೂ ನೀರು ಬರುತ್ತಿದ್ದು ರಸ್ತೆ, ವಿದ್ಯುತ್ ಸಂಪರ್ಕ, ಮೂಲಸೌಕರ್ಯ ಕಲ್ಪಿಸಲು ತೊಡಕಾಗಿದೆ.

'ಕಳೆದ ವರ್ಷದ ಮುಂಗಾರು ಅವಧಿಯಲ್ಲಿ ಮಳೆ ಕಡಿಮೆ ಆಗಿತ್ತು. ತೇವಾಂಶ ಕಡಿಮೆ ಆಗಬಹುದು ಎಂದೇ ಭಾವಿಸಿದ್ದೆವು. ಆದರೆ, ಗುಂಡಿ ತೆಗೆದರೆ ತೇವಾಂಶ ಇರುವುದು ಕಂಡುಬರುತ್ತಿದೆ. ಅಲ್ಲಲ್ಲಿ ನೀರು ಉಕ್ಕಿ ಹರಿಯುತ್ತಿದೆ' ಎಂದು ನಿವೇಶನದಾರರು ಅಳಲು ತೋಡಿಕೊಳ್ಳುತ್ತಾರೆ.

ಮೆಟಲಿಂಗ್ ತಂತ್ರಜ್ಞಾನವೂ ಆಗಿಲ್ಲ: 'ಬಿಡಿಎ ಎಂಜಿನಿಯರಿಂಗ್ ತಂಡ, ಆಸ್ಟ್ರೇಲಿಯಾದ ಕಂಪನಿಯನ್ನು ಸಂಪರ್ಕಿಸಿ ಜೌಗು ತಡೆಗೆ ಶೀಟ್ ಮೆಟಲಿಂಗ್ ತಂತ್ರಜ್ಞಾನ ಮಾದರಿ ಮಾಹಿತಿ ಪಡೆದುಕೊಂಡಿತ್ತು. ತಂತ್ರಜ್ಞಾನದ ಮೂಲಕ ಎರಡು ಕೆರೆಯ ಏರಿಗೆ ಸಮಾನವಾಗಿ 30 ಅಡಿ ಆಳಕ್ಕೆ ಗುಂಡಿ ತೆಗೆದು ಗೋಡೆ ನಿರ್ಮಿಸಲು ಚಿಂತಿಸಲಾಗಿತ್ತು. ಅದು ಸಹ ನನೆಗುದಿಗೆ ಬಿದ್ದಿದೆ' ಎಂದು ಮೂಲಗಳು ಹೇಳುತ್ತವೆ.

ಬದಲಿ ನಿವೇಶನವೂ ಮರೀಚಿಕೆ: 'ಎಸ್.ಆರ್.ವಿಶ್ವನಾಥ್ ಅವರು ಬಿಡಿಎ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆದ ಸಭೆಯಲ್ಲಿ ಈ ಬ್ಲಾಕ್‌ಗಳಲ್ಲಿ ಮನೆ ನಿರ್ಮಿಸುವುದು ಕಷ್ಟ ಎಂಬ ನಿರ್ಧಾರಕ್ಕೆ ಬರಲಾಗಿತ್ತು.

ಆ ಪ್ರದೇಶವನ್ನು ಉದ್ಯಾನ ಅಥವಾ ಆಟದ ಮೈದಾನಕ್ಕೆ ಬಳಸಿಕೊಳ್ಳುವ ನಿರ್ಧಾರಕ್ಕೆ ಬರಲಾಗಿತ್ತು. ಜೊತೆಗೆ ಬದಲಿ ನಿವೇಶನ ನೀಡುವ ಭರವಸೆ ನೀಡಲಾಗಿತ್ತು. ಬಡಾವಣೆ ನಿರ್ಮಾಣಕ್ಕೆ ಬಿಡಿಎ ₹60 ಕೋಟಿಗೂ ಅಧಿಕ ಹಣ ವ್ಯಯಿಸಿದ್ದರಿಂದ 2020–21ರಲ್ಲೇ ಬದಲಿ ನಿವೇಶನ ನೀಡುವ ಪ್ರಕ್ರಿಯೆ ಕೈಬಿಡಲಾಗಿದೆ' ಎಂದು ಮೂಲಗಳ ಹೇಳಿವೆ.

'ತಜ್ಞರ ವರದಿ ಆಧರಿಸಿ ಕ್ರಮ'

ಮೇಲ್ಭಾಗದಲ್ಲೇ ಕಲ್ಲು ಸಿಗುತ್ತಿದ್ದು ನೀರು ಕೆಳಕ್ಕೆ ಇಳಿಯುತ್ತಿಲ್ಲ. ಕೆರೆಗಳ ಬಳಿ ತಡೆಗೋಡೆ ನಿರ್ಮಾಣ ಸಹ ಅಷ್ಟು ಪರಿಣಾಮಕಾರಿ ಆಗುವುದಿಲ್ಲ. ಆಳವಾದ ಚರಂಡಿ ತೆಗೆದು ನೀರು ಹರಿಯುವಂತೆ ಮಾಡಿದರೆ ತೇವಾಂಶ ಕಡಿಮೆ ಆಗಬಹುದು. ಐಐಎಸ್‌ಸಿ ತಜ್ಞರು ನೀಡುವ ವರದಿ ಆಧರಿಸಿ, ಕ್ರಮ ಕೈಗೊಳ್ಳಲಾಗುವುದು. ಮುಂದಿನ ತಿಂಗಳು ತಜ್ಞರ ವರದಿ ಸಲ್ಲಿಕೆಯಾಗುವ ಸಾಧ್ಯತೆಯಿದೆ ಎಂದು ಬಿಡಿಎ ಎಂಜಿನಿಯರ್ ಸದಸ್ಯ ಶಾಂತರಾಜನ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಅವೈಜ್ಞಾನಿಕ ಯೋಜನೆ'

'ಎರಡು ಕೆರೆಯ ನಡುವೆ ಖಾಲಿಯಿದ್ದ ಪ್ರದೇಶದಲ್ಲಿ ಅವೈಜ್ಞಾನಿಕವಾಗಿ ಬಡಾವಣೆ ನಿರ್ಮಿಸಲಾಗಿದೆ. ರೈತರಿಂದ ಭತ್ತದ ಗದ್ದೆ ಖರೀದಿಸಿ ನಿವೇಶನ ಹಂಚಿಕೆ ಮಾಡಿದ್ದೇ ಸಮಸ್ಯೆಗೆ ಕಾರಣವಾಗಿದೆ. ಬಿಡಿಎ ಕಡೆಯಿಂದ ಸಮರ್ಪಕ ಉತ್ತರ ಲಭಿಸುತ್ತಿಲ್ಲ' ಎಂದು ಬ್ಲಾಕ್ 2 'ಎ' ಸೆಕ್ಟರ್‌ನಲ್ಲಿ ನಿವೇಶನ ಖರೀದಿಸಿರುವ ಅನಿತಾ ದೂರುತ್ತಾರೆ.

'2017ರಲ್ಲಿ ನಿವೇಶನದ ಮೇಲೆ ಸಾಲ ಪಡೆದಿದ್ದೇವೆ. ಮನೆ ಕಟ್ಟಲು ಸಾಧ್ಯವಾಗದ್ದರಿಂದ 'ಗೃಹ ಸಾಲ' ವೈಯಕ್ತಿಕ ಸಾಲವಾಗಿ ಬದಲಾಗಿದೆ. ಬಡ್ಡಿ ದರ ಹೆಚ್ಚುತ್ತಿದೆ' ಎಂದು ಹೇಳಿದರು.

₹54 ಲಕ್ಷ ನೀಡಿ ನಿವೇಶನ ಖರೀದಿಸಿದ್ದೆ. ಬ್ಯಾಂಕ್‌ನಿಂದ ಸಾಲ ಮಾಡಿ, ಖರೀದಿಸಿದ್ದ ನಿವೇಶನದಲ್ಲಿ ಇದುವರೆಗೂ ಮನೆ ನಿರ್ಮಿಸಲು ಸಾಧ್ಯವಾಗಿಲ್ಲ. ಬ್ಯಾಂಕ್‌ನಲ್ಲಿ ಬಡ್ಡಿ ಬೆಳೆಯುತ್ತಿದೆ.

ಅಭಿಷೇಕ್, ಬ್ಲಾಕ್ 'ಎ' ಸೆಕ್ಟರ್

ಸುದ್ದಿ 2 ನಿಮಿಷ


'ಪಕ್ಷಕ್ಕೆ ಅಲ್ಲ,ವ್ಯಕ್ತಿಗೆ ಬೆಂಬಲ'

ಕೆಂಗೇರಿ: 'ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದ ಬೆಳವಣಿಗೆಗೆ ಸಹಕಾರ ನೀಡುವ ಅಭ್ಯರ್ಥಿಯನ್ನು ಬೆಂಬಲಿಸುತ್ತೇನೆ. ಯಾವುದೇ ಪಕ್ಷ ಬೆಂಬಲಿಸುವುದಿಲ್ಲ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಕೆಂಗೇರಿ ಉಪನಗರದಲ್ಲಿ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕಳೆದ ಚುನಾವಣೆ ವೇಳೆ ಪಕ್ಷದಿಂದ ಅಮಾನತುಗೊಂಡಿದ್ದ ಯಶವಂತಪುರ ಕ್ಷೇತ್ರದ ಸ್ಥಳೀಯ ನಾಯಕ ಮಾರೇಗೌಡರ ಪಕ್ಷ ಸೇರ್ಪಡೆಯಿಂದ ಯಾವುದೇ ಮುಜುಗರವಾಗಿಲ್ಲ. 2028ರವರೆಗೆ ಕೇವಲ ಅಭಿವೃದ್ಧಿಗಷ್ಟೇ ಗಮನಹರಿಸಲಾಗುವುದು. ರಾಜಕಾರಣದ ಬಗ್ಗೆ ಮಾತನಾಡುವುದಿಲ್ಲ' ಎಂದರು.

ಆಡಳಿತ ಪಕ್ಷದ ಸದಸ್ಯರು ಬಜೆಟ್ ಅನ್ನು ವಿಶೇಷ ಎಂದು ಬಣ್ಣಿಸುತ್ತಾರೆ. ವಿರೋಧ ಪಕ್ಷಗಳು ನೀರಸವೆಂದು ಟೀಕಿಸುತ್ತಾರೆ. ಇದೊಂದು ಸಾಮಾನ್ಯ ಪ್ರಕ್ರಿಯೆಯಾಗಿದೆ ಎಂದರು.



ಮುಖಂಡರಾದ ಜಿ.ವಿ. ಸುರೇಶ್, ಕೆ.ಆರ್.ಮೂರ್ತಿ, ಕೆ.ವೈ.ಕೃಷ್ಣ, ಹರೀಶ್, ಕದಿರಪ್ಪ, ಮಹೇಂದ್ರ ಕಿರಣ್, ಟಿ.ಪ್ರಭಾಕರ್, ಹನುಮಂತರಾಜು, ಅಮಾನುಲ್ಲಾ, ಕೆ.ಸಿ.ಸತೀಶ್ ಪಾಲ್ಗೊಂಡಿದ್ದರು.

8ಕ್ಕೆ 'ಬೆಂಗಳೂರು ಚಲೊ'

ಬೆಂಗಳೂರು: ಗ್ರಾಮ ಪಂಚಾಯಿತಿಗಳು ಸ್ಥಳೀಯ ಸ್ವಯಂ ಸರ್ಕಾರ ಆಗಿದ್ದರೂ ಆಡಳಿತದಲ್ಲಿ, ನಿರ್ಣಯಗಳಲ್ಲಿ ಮೇಲಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದನ್ನು ವಿರೋಧಿಸಿ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟವು ಫೆ.8ರಂದು 'ಬೆಂಗಳೂರು ಚಲೊ' ಹಮ್ಮಿಕೊಂಡಿದೆ.

'ಸ್ವತಂತ್ರ ಸರ್ಕಾರಗಳಾಗಿ ಕಾರ್ಯನಿರ್ವಹಿಸಬೇಕಾಗಿದ್ದ ಗ್ರಾಮ ಪಂಚಾಯಿತಿಗಳು ಸ್ವಾತಂತ್ರ್ಯ ಕಳೆದುಕೊಂಡಿವೆ. ಗಾಂಧೀಜಿಯ ಗ್ರಾಮ ಸ್ವರಾಜ್ಯ ಮತ್ತು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಉಳಿವಿಗಾಗಿ 'ಬೆಂಗಳೂರು ಚಲೊ' ಹಮ್ಮಿಕೊಳ್ಳಲಾಗಿದೆ. ಫೆ.8ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ನೇತೃತ್ವದಲ್ಲಿ ಹೋರಾಟ ನಡೆಯಲಿದೆ' ಎಂದು ಒಕ್ಕೂಟದ ಪದಾಧಿಕಾರಿಗಳು ತಿಳಿಸಿದ್ದಾರೆ. 'ಗ್ರಾಮ ಪಂಚಾಯಿತಿಗಳಿಗೆ ಜವಾಬ್ದಾರಿ ನಿಗದಿ ಮಾಡಬೇಕು ಎಂಬುದು ಸೇರಿ 28 ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗುವುದು' ಎಂದು ಮಾಹಿತಿ ನೀಡಿದ್ದಾರೆ.

ಇಂದಿನಿಂದ ಆನೆಗಳ ಪ್ರತಿಕೃತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆ ಗಿಡಗಳ ಕಾಂಡದಿಂದ ತಯಾರಿಸಲಾದ ಆನೆಗಳ ಕಲಾಕೃತಿಗಳ ಪ್ರದರ್ಶನವನ್ನು ಲಾಲ್‌ಬಾಗ್‌ನಲ್ಲಿ ಆಯೋಜಿಸಲಾಗಿದ್ದು, ಪ್ರದರ್ಶನಕ್ಕೆ ಫೆ.3ರಂದು ಚಾಲನೆ ದೊರೆಯಲಿದೆ.

ಫೆ.3ರಿಂದ ಮಾರ್ಚ್ 3ರವರೆಗೆ ದೊಡ್ಡ ಆನೆ ಹಾಗೂ ಮರಿಯಾನೆಯ 60 ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗುವುದು. ಗಾಜಿನಮನೆ ಸಮೀಪದ ಹುಲ್ಲುಹಾಸು ಪ್ರದೇಶ, ಗಾಜಿನ ಮನೆ ಹಿಂಭಾಗದ ಪ್ರದೇಶಗಳಲ್ಲಿ ಪ್ರದರ್ಶನಗೊಳ್ಳಲಿವೆ. ಸೋಲಿಗ, ಜೇನು ಕುರುಬ, ಬೆಟ್ಟ ಕುರುಬ ಸೇರಿದಂತೆ ಇತರೆ ಬುಡಕಟ್ಟು ಸಮುದಾಯದ ಕಲಾವಿದರು ಕಳೆ ಗಿಡಗಳ ಕಾಂಡ ಬಳಸಿಕೊಂಡು ಆನೆಗಳ ಕಲಾಕೃತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದ್ದಾರೆ.



ಕಳೆ ಗಿಡಗಳ ಕಾಂಡದಿಂದ ತಯಾರಿಸಲಾದ ಆನೆಗಳ ಪ್ರತಿರೂಪಗಳನ್ನು ಲಾಲ್‌ಬಾಗ್‌ನಲ್ಲಿ ಪ್ರದರ್ಶನಕ್ಕಿಡಲು ಲಾರಿಯಲ್ಲಿ ಕೊಂಡೊಯ್ಯಲಾಯಿತು – ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

25ಕ್ಕೆ ಕೋಲಿ ಸಮಾಜದ ಸಮಾವೇಶ

ಬೆಂಗಳೂರು: 'ಕೋಲಿ ಸಮಾಜವು ರಾಜಕೀಯವಾಗಿ, ಸಾಮಾಜಿಕವಾಗಿ ಸಂಘಟಿತವಾಗಲು ಕಲಬುರಗಿಯಲ್ಲಿ ಇದೇ 25ರಂದು ರಾಜ್ಯಮಟ್ಟದ ಬೃಹತ್ ಜನಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ವಿಧಾನಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸರ್ಕಾರದ ವಿವಿಧ ಸಚಿವರು ಭಾಗವಹಿಸುತ್ತಾರೆ. ಈ ಸಮಾವೇಶಕ್ಕೂ ಮುನ್ನ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಲಾಗುತ್ತಿದ್ದು, ಸಮಾಜವನ್ನು ಪರಿಣಾಮಕಾರಿಯಾಗಿ ಸಂಘಟನೆ ಮಾಡಲಾಗುತ್ತದೆ. ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಗುವುದು' ಎಂದರು.

'ವಿಧಾನಸೌಧದ ಮುಂಭಾಗ ಅಂಬಿಗರ ಚೌಡಯ್ಯ ಪ್ರತಿಮೆ ಸ್ಥಾಪಿಸಬೇಕು. ಸಮುದಾಯದ ಶ್ರೇಯೋಭಿವೃದ್ಧಿಗೆ ಬಜೆಟ್‌ನಲ್ಲಿ ₹200 ಕೋಟಿ ಮೀಸಲಿಡಬೇಕು. ನಮ್ಮ ನಿಗಮಕ್ಕೆ ₹ 500 ಕೋಟಿ ಅನುದಾನವನ್ನು ಬಿಡುಗಡೆ ಮಾಡಬೇಕು. ಕೋಲಿ ಸಮಾಜಕ್ಕೆ ಮೀನುಗಾರಿಕೆ ಉದ್ಯಮದಲ್ಲಿ ಶೇ 90ರಷ್ಟು ಮೀಸಲಾತಿ ನೀಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

384 ಗೆಜೆಟೆಡ್ ಪ್ರೊಬೇಷನರ್ ಹುದ್ದೆ ಭರ್ತಿಗೆ ಪ್ರಸ್ತಾವ

ಬೆಂಗಳೂರು: 2023–24ನೇ ಸಾಲಿಗೆ ಗೆಜೆಟೆಡ್ ಪ್ರೊಬೇಷನರ್‌ಗಳ ಗ್ರೂಪ್–ಎ ವೃಂದದ 159 ಮತ್ತು ಗ್ರೂಪ್–ಬಿ ವೃಂದದ 225 ಸೇರಿ 384 ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ಆರಂಭಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಿದೆ.

ಇದರಲ್ಲಿ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಕಿರಿಯ ಶ್ರೇಣಿಯ ಸಹಾಯಕ ಆಯುಕ್ತ (ಎ.ಸಿ) 40, ಡಿವೈಎಸ್‌ಪಿ 7, ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ 41 ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ /ಸಹಾಯಕ ಕಾರ್ಯದರ್ಶಿ 40 ಹುದ್ದೆಗಳೂ ಸೇರಿವೆ. ವಿವಿಧ ಇಲಾಖೆಗಳ ಮೂಲ ವೃಂದದ ಹುದ್ದೆಗಳು 307, ಕಲ್ಯಾಣ ಕರ್ನಾಟಕ ವೃಂದದ 77 ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ನಡೆಸುವಂತೆ ಪ್ರಸ್ತಾವ ಉಲ್ಲೇಖಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಮತ

'ಆಂಬುಲೆನ್ಸ್ ಮಾಫಿಯಾ ತಪ್ಪಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ 108-ಆರೋಗ್ಯ ಕವಚ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಆಂಬುಲೆನ್ಸ್‌ಗಳು ಖಾಸಗಿ ಆಸ್ಪತ್ರೆ ಹಾಗೂ ಮಾಫಿಯಾಗಳ ಜತೆಗೆ ಕೈಜೋಡಿಸುವುದನ್ನು ತಪ್ಪಿಸಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಆರೋಗ್ಯ ಇಲಾಖೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬೆಂಗಳೂರು ಹಾಗೂ ಬಳ್ಳಾರಿ ಟೆಲಿ ಐಸಿಯು ಕ್ಲಸ್ಟರ್ ಉದ್ಘಾಟಿಸಿ ಅವರು ಮಾತನಾಡಿದರು.

'ಆಂಬುಲೆನ್ಸ್ ಚಾಲಕರು ಖಾಸಗಿ ವ್ಯವಸ್ಥೆ ಜತೆಗೆ ಕೈಜೋಡಿಸಿ, ತುರ್ತು ಪರಿಸ್ಥಿತಿಯಲ್ಲಿ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುತ್ತಿರುವ ಬಗ್ಗೆ ಅನೇಕ ದೂರುಗಳು ಬಂದಿವೆ. ಈ ಮಾಫಿಯಾಕ್ಕೆ ಕಡಿವಾಣ ಹಾಕಬೇಕು. ಇತ್ತೀಚೆಗಷ್ಟೇ ಅತ್ಯಾಧುನಿಕ ಸೌಲಭ್ಯ ಹೊಂದಿರುವ ನೂರಾರು ಆಂಬುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಲಾಗಿದೆ. ವೈದ್ಯಕೀಯ ಕ್ಷೇತ್ರದ ಪ್ರಗತಿಗೆ ಇವು ಸಹಕಾರಿಯಾಗಿವೆ' ಎಂದು ಹೇಳಿದರು.

'ಗ್ರಾಮೀಣ ಪ್ರದೇಶದ ರೋಗಿಗಳನ್ನು ಬೆಂಗಳೂರಿಗೆ ತರುವಷ್ಟರಲ್ಲಿ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ತಾಲ್ಲೂಕು ಮಟ್ಟದಲ್ಲಿ ಐಸಿಯು ಕೇಂದ್ರಗಳನ್ನು ಸ್ಥಾಪಿಸಿ, ತಂತ್ರಜ್ಞಾನದ ನೆರವಿನಿಂದ ಇಲ್ಲಿಂದಲೇ ಅವುಗಳನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಜಾರಿ ಮಾಡಲಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಇದು ಕ್ರಾಂತಿಕಾರಕ ಹೆಜ್ಜೆ. ತಾಲ್ಲೂಕು ಮಟ್ಟದಲ್ಲಿ 5-10 ಐಸಿಯು ಬೆಡ್‌ಗಳ ಘಟಕ ಸ್ಥಾಪಿಸಿ, ತುರ್ತು ಪರಿಸ್ಥಿತಿಯಲ್ಲಿ ರೋಗಿಗಳು ಹಾಗೂ ಗಾಯಾಳುಗಳನ್ನು ದಾಖಲಿಸಿಕೊಂಡು ಚಿಕಿತ್ಸೆ ಒದಗಿಸಲಾಗುತ್ತದೆ. ಅಗತ್ಯ ಮಾರ್ಗದರ್ಶನವನ್ನು ಟೆಲಿ ಐಸಿಯು ಕ್ಲಸ್ಟರ್ ಮೂಲಕ ಮಾಡಲಾಗುತ್ತದೆ' ಎಂದು ತಿಳಿಸಿದರು.

ಟೆಲಿ ಐಸಿಯು ವ್ಯವಸ್ಥೆ ವಿಸ್ತರಣೆ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ನಮ್ಮ ಗ್ರಾಮೀಣ ಪ್ರದೇಶದ ಜನರಿಗೂ ನುರಿತ ತಜ್ಞ ವೈದ್ಯರಿಂದ ಚಿಕಿತ್ಸೆ ದೊರೆಯುವಂತಾಗಬೇಕು. ಸೂಪರ್ ಸ್ಪೆಷಾಲಿಟಿ ಚಿಕಿತ್ಸೆ ಪಡೆಯಲು ದೂರದ ಜಿಲ್ಲೆಗಳಿಗೆ ತೆರಳುವುದು ಹಳ್ಳಿಗಾಡಿನ ಜನರಿಗೆ ಕಷ್ಟವಾಗುತ್ತಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿಯೇ ಸೂಪರ್ ಸ್ಪೆಷಾಲಿಟಿ ಆರೈಕೆ ಒದಗಿಸಲು ಟೆಲಿ ಐಸಿಯು ವ್ಯವಸ್ಥೆ ಸಹಕಾರಿ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಟೆಲಿ ಐಸಿಯು ಕೇಂದ್ರಗಳನ್ನು ಸ್ಥಾಪಿಸಿ, ಇಲ್ಲಿಂದಲೇ ಅವುಗಳನ್ನು ಪರಿಶೀಲಿಸುವಂತಹ ತಂತ್ರಜ್ಞಾನಗಳ ಬಳಕೆ ಕಾರ್ಯಕ್ಕೆ ನಾವು ಒತ್ತು ನೀಡಿದ್ದೇವೆ. ಹಂತ ಹಂತವಾಗಿ ರಾಜ್ಯದ ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ ಟೆಲಿ ಐಸಿಯು ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ಹೇಳಿದರು.



ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಟೆಲಿ ಐಸಿಯು ವ್ಯವಸ್ಥೆಯನ್ನು ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು. ದಿನೇಶ್ ಗುಂಡೂರಾವ್, ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ.ರಮೇಶ್ ಕೃಷ್ಣ ಕೆ., ಟೆಲಿ ಐಸಿಯು ಮುಖ್ಯಸ್ಥ ಡಾ. ವಿಜಯ್ ಕುಮಾರ್ ಪಾಲ್ಗೊಂಡಿದ್ದರು.

'41 ಆಸ್ಪತ್ರೆಗಳಲ್ಲಿ ಸೇವೆ'

'ಟೆಲಿ ಐಸಿಯು ಸೇವೆಯನ್ನು ಈಗಾಗಲೇ ಹುಬ್ಬಳ್ಳಿ ಹಾಗೂ ಮೈಸೂರಿನಲ್ಲಿ ಜಾರಿಗೆ ತರಲಾಗಿದೆ. ಈಗ ಬೆಂಗಳೂರಿನ ವಿಕ್ಟೋರಿಯಾ ಹಾಗೂ ಬಳ್ಳಾರಿ ವೈದ್ಯಕೀಯ ಕಾಲೇಜಿನಲ್ಲಿ ಅನುಷ್ಠಾನಗೊಳಿಸಿದ್ದೇವೆ. ಒಟ್ಟು ನಾಲ್ಕು ಸರ್ಕಾರಿ ವೈದ್ಯಕೀಯ ಸಂಸ್ಥೆಗಳನ್ನು ಹಬ್‌ಗಳಾಗಿ ರಚಿಸಲಾಗಿದ್ದು, ಇವುಗಳಿಗೆ 41 ತಾಲ್ಲೂಕು ಆಸ್ಪತ್ರೆಗಳನ್ನ ಜೋಡಣೆ ಮಾಡಲಾಗಿದೆ. ಈ 41 ತಾಲ್ಲೂಕು ಆಸ್ಪತ್ರೆಗಳಲ್ಲಿ 10 ಟೆಲಿ ಐಸಿಯು ಬೆಡ್‌ಗಳ ವ್ಯವಸ್ಥೆ ಕಲ್ಪಿಸಲಾಗಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವಿನಿಂದ ತಜ್ಞ ವೈದ್ಯರ ಸಲಹೆಗಳು ರೋಗಿಗಳಿಗೆ ದೊರೆಯಲಿವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ಟೆಲಿ ಐಸಿಯು ಸೇವೆಗೆ ಸಂಬಂಧಿಸಿದಂತೆ ಬೆಂಗಳೂರು ಹಾಗೂ ಬಳ್ಳಾರಿ ಕ್ಲಸ್ಟರ್‌ಗೆ ತಲಾ 9 ತಾಲ್ಲೂಕು ಆಸ್ಪತ್ರೆಗಳನ್ನ ಜೋಡಿಸಲಾಗಿದ್ದು, ಹುಬ್ಬಳ್ಳಿಯ ಕಿಮ್ಸ್‌ಗೆ 10 ಹಾಗೂ ಮೈಸೂರು ವೈದ್ಯಕೀಯ ಸಂಸ್ಥೆಗೆ 13 ತಾಲ್ಲೂಕು ಆಸ್ಪತ್ರೆಗಳನ್ನು ಜೋಡಣೆ ಮಾಡಲಾಗಿದೆ. ಮುಂದಿನ ವರ್ಷ 60 ತಾಲ್ಲೂಕು ಆಸ್ಪತ್ರೆಗಳಲ್ಲಿ ಟೆಲಿ ಐಸಿಯು ವ್ಯವಸ್ಥೆ ಕಲ್ಪಿಸಲು ಯೋಜನೆ ರೂಪಿಸಲಾಗಿದೆ' ಎಂದು ತಿಳಿಸಿದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಅಖಿಲ ಭಾರತ ಕಲಾ ಸಾಧಕ ಸಂಗಮ: ಪ್ರಶಸ್ತಿ ಪ್ರದಾನ: ಮೋಹನ್ ಭಾಗವತ್, ಆಯೋಜನೆ: ಸಂಸ್ಕಾರ ಭಾರತಿ, ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆ 10

ಎಚ್.ಎನ್. ಗೀತಾ ಅವರ 'ದಾರಿ ದೀಪಗಳು', 'ಹಾದಿಯ ಹಣತೆಗಳು ಹಾಗೂ ಸಂತೋಷ್ ಅನಂತಪುರ ಅವರ 'ಆಳ ನೀಳ' ಪುಸ್ತಕ ಬಿಡುಗಡೆ: ನಾಗತಿಹಳ್ಳಿ ಚಂದ್ರಶೇಖರ್, ಮುಖ್ಯ ಅತಿಥಿಗಳು: ನೇಮಿಚಂದ್ರ, ಜಿ.ಎನ್. ಮೋಹನ್, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10.30



ನಾಗತಿಹಳ್ಳಿ ಚಂದ್ರಶೇಖರ್

ಪರೀಕ್ಷೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆ ಬಗ್ಗೆ ಕಾರ್ಯಾಗಾರ: ಉದ್ಘಾಟನೆ: ಎಸ್.ಆರ್. ನಿರಂಜನ, ಅಧ್ಯಕ್ಷತೆ: ಎಸ್.ಎಂ. ಜಯಕರ, ಮುಖ್ಯ ಅತಿಥಿ: ಲಿಂಗರಾಜ ಗಾಂಧಿ, ಆಯೋಜನೆ ಹಾಗೂ ಸ್ಥಳ: ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಮುಖ್ಯ ಅತಿಥಿ: ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷತೆ: ಎನ್. ರಾಮರಾಜು, ಬಹುಮಾನ ವಿತರಣೆ: ವಿಜಯ್ ಶಂಕರ್, ಆಯೋಜನೆ ಹಾಗೂ ಸ್ಥಳ: ಶಾರದಾ ವಿದ್ಯಾಪೀಠ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಳಿಗ್ಗೆ 11

'ವಿಜಯೋತ್ಸವ' ವಾರ್ಷಿಕ ಸಾಂಸ್ಕೃತಿಕ ಉತ್ಸವ: ಮುಖ್ಯ ಅತಿಥಿ: ಎಚ್.ಎಸ್. ಹಿರೇಮಠ, ಗೌರವ ಅತಿಥಿ: ಕೃಷ್ಣ ನಾಯ್ಕ್, ಅಧ್ಯಕ್ಷತೆ: ಸ್ವಾಮಿ ಎಂ.ಎಂ., ಆಯೋಜನೆ ಹಾಗೂ ಸ್ಥಳ: ರಾಜಧಾನಿ ಪಿ.ಯು. ಆ್ಯಂಡ್ ಡಿಗ್ರಿ ಕಾಲೇಜ್, ದೇವಸಂದ್ರ, ಬೆಳಿಗ್ಗೆ 11

'ಕಥೆ ಕೇಳೋಣ ಬನ್ನಿ–3': ಕಥೆ ಹೇಳುವವರು: ತಮ್ಮಣ್ಣ ಬೀಗಾರ್, ಅಧ್ಯಕ್ಷತೆ: ವತ್ಸಲಾ ಶಾಸ್ತ್ರಿ, ಮೊದಲ ಮಾತು: ನ. ರವಿಕುಮಾರ, ಆಯೋಜನೆ: ಅಭಿನವ, ಸ್ಥಳ: ಭವನ್– ಬಿಬಿಎಂಪಿ ಶಾಲೆ, ಶ್ರೀರಾಮಪುರ, ಬೆಳಿಗ್ಗೆ 11.30

'ಪೊರಕೆಯ ಹಾಡು' ನಾಟಕ ಪ್ರದರ್ಶನ: ರಚನೆ: ದು. ಸರಸ್ವತಿ, ನಿರ್ದೇಶನ: ಲಕ್ಷ್ಮಣ ಕೆ.ಪಿ., ಆಯೋಜನೆ: ಬಿಬಿಎಂಪಿ ಪೌರಕಾರ್ಮಿಕ ಸಂಘ, ನೀರದಾರಿ ಕಲೆಕ್ಟಿವ್, ಜಂಗಮ ಕಲೆಕ್ಟಿವ್, ತಮಟೆ ಮೀಡಿಯಾ, ಸ್ಥಳ: ಇನ್ಸ್ಟಿಟ್ಯೂಷನ್ ಫಾರ್ ಅಗ್ರಿಕಲ್ಚರ್ ಟೆಕ್ನಾಲಜಿಸ್ಟ್, ಕ್ವೀನ್ಸ್ ರಸ್ತೆ, ಮಧ್ಯಾಹ್ನ 3

'ಸುರಭಿ ಸಿರಿ' ಚಿತ್ರಗೀತೆಗಳ ಗಾಯನ: ಗಾಯಕರು: ಮೇಘನ ವೆಂಕಟೇಶ್, ಶ್ವೇತ ಪ್ರಭು, ರಶ್ಮಿ, ಶ್ರೀನಿವಾಸಮೂರ್ತಿ, ಬೆಂಗಳೂರು ಹ್ಯಾರಿಸ್, ವಿಕ್ರಂ ದೀಕ್ಷಿತ್, ಮೋಹನ್ ಕನ್ನೂರು, ಆಯೋಜನೆ: ವೈದೇಹಿ ಮಹಿಳಾ ಮತ್ತು ಮಕ್ಕಳ ಪ್ರತಿಷ್ಠಾನ, ಸ್ಥಳ: ಶುಕ್ರ ಆಡಿಟೋರಿಯಮ್, 15ನೇ ಕ್ರಾಸ್, ಮಲ್ಲೇಶ್ವರ, ಮಧ್ಯಾಹ್ನ 3

8ನೇ ವಾರ್ಷಿಕೋತ್ಸವ, 'ಅವಿಲಾನ' ಮಹೋತ್ಸವ: ಮುಖ್ಯ ಅತಿಥಿಗಳು: ವೈ.ಗ. ಜಗದೀಶ್, ಉಮಾದೇವಿ ನಾಗರಾಜ್, ಹನುಮಂತ ರಾಜು, ವೆಂಕಟನಾರಾಯಣ, ಎನ್. ನಾಗರಾಜು, ವಿಶೇಷ ಅತಿಥಿಗಳು: ದೀಪಿಕಾ ಆರಾಧ್ಯ, ಜಯರಾಮಯ್ಯ ಸಿ., ನೀಲಮ್ಮ, ನಾರಾಯಣಪ್ಪ ಟಿ.ಪಿ., ರಜಿನಿ ಪಿ., ಆಯೋಜನೆ: ಅವಿಲಾನ ಪಬ್ಲಿಕ್ ಸ್ಕೂಲ್, ಸ್ಥಳ: ನೆಲೆ ಮಹೇಶ್ವರಮ್ಮ ದೇವಾಲಯ ಮೈದಾನ, ಟಿ. ದಾಸರಹಳ್ಳಿ, ಮಧ್ಯಾಹ್ನ 3

'ದಿ ಓಪನ್ ಕನೆಕ್ಷನ್' ಡಾಕ್ಯುಮೆಂಟರಿ ಬಿಡುಗಡೆ ಹಾಗೂ ಪ್ರದರ್ಶನ: ಅತಿಥಿ: ರಾಜ್ ಬಿ. ಶೆಟ್ಟಿ, ಸ್ಥಳ: ಸುಚಿತ್ರ ಫಿಲ್ಮ್ ಸೊಸೈಟಿ, ಬನಶಂಕರಿ, ಸಂಜೆ 4.30

ಶಾಲಾ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ ಹಾಗೂ ಸ್ಥಳ: ನಾಗಸೇನ ವಿದ್ಯಾಲಯ, 9ನೇ ಕ್ರಾಸ್, ರಾಜಮಹಲ್ ವಿಲಾಸ್ ಎಕ್ಸ್‌ಟೆನ್ಷನ್, ಸಂಜೆ 5

ಕಲಾ ಸಂಗಮ, ಹಿಂದೂಸ್ತಾನಿ ಸಂಗೀತ: ಪೂರ್ಣಿಮಾ ಭಟ್, ಗುರುಮೂರ್ತಿ ವೈದ್ಯ, ವಿಘ್ನೇಶ್ ಭಾಗವತ್, ರೂಪಕ್ ವೈದ್ಯ, ಸಂಜನಾ ಭಟ್, ಪೂರ್ಣಿಮಾ ಶಮಂತ್, ನಾಗರಾಜ್ ಹೆಬ್ಬಾರ, ತಬಲಾ ಸಂಗಮ: ಕೌಶಿಕ್ ಭಟ್, ಪೃಥ್ವಿ ಬಡೆಕ್ಕಿಲ, ಶ್ರೀರಾಜ್ ಹಳೆಮನೆ, ಅಂಕುರಾ ಶೇಟ್, ಹಾರ್ಮೋನಿಯಂ ಲೆಹರಾ: ಸಾತ್ವಿಕ್ ಚಕ್ರವರ್ತಿ, ತಾಳ ಸಹಕಾರ: ವಿರೇಂದ್ರ ಜಿ.ಎಲ್., ರಚಿತ್ ಹೆಗಡೆ, ವಿಶೇಷ ಅತಿಥಿ: ಗಣೇಶ್ ಭಟ್, ಆಯೋಜನೆ: ಸಂವಾಹಿನಿ ಕಲಾಕೇಂದ್ರ, ಸ್ಥಳ: ಕಲಾಗ್ರಾಮ, ಎನ್‌ಜಿಇಎಫ್ ಲೇಔಟ್, ಚಂದ್ರ ಲೇಔಟ್ 2ನೇ ಹಂತ, ಸಂಜೆ 5

'ಅಂಕುರಮ್' ಕಾರ್ಯಕ್ರಮ: ಮುಖ್ಯ ಅತಿಥಿ: ರವೀಂದ್ರ ಭಟ್ಟ, ವಿಶೇಷ ಅತಿಥಿ: ಭವ್ಯಶ್ರೀ ಎಸ್. ರೈ, ಉಪಸ್ಥಿತಿ: ಆರ್. ಉಪೇಂದ್ರ ಶೆಟ್ಟಿ, ಪ್ರಗತಿ ಯು. ಶೆಟ್ಟಿ, ಆಯೋಜನೆ: ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಯುನಿವರ್ಸಲ್ ಗ್ರೀನ್ ಸ್ಕೂಲ್, ಗುರುರಾಯನಪುರ, ತಾವರೆಕೆರೆ, ಸಂಜೆ 5

16ನೇ ವರ್ಷದ ಸಂಗೀತಾರಾಧನಾ ಮಹೋತ್ಸವ: ಕಲಾವಿದರಿಂದ ಸಂಗೀತ ಕಛೇರಿ, ಆಯೋಜನೆ: ಗುರು ಸ್ಮೃತಿ ಕಲಾಕೇಂದ್ರ, ಸ್ಥಳ: ದೇವಗಿರಿ ವರಪ್ರದ ಶ್ರೀ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ, ಸಂಜೆ 5

ಪ್ರೊ.ಎಂ.ಕೆ.ಎಲ್.ಎನ್. ಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ: 'ಸತ್ಯಾನ್ವೇಷಣೆ– ಭಾರತೀಯ ಇತಿಹಾಸಕಾರರ ಮುಗಿಯದ ಬವಣೆ', ಉಪನ್ಯಾಸಕ: ವಿಕ್ರಮ್ ಸಂಪತ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 5.30

ಹರೀಶ್ ಗಂಗಾಧರ್ ಅವರ 'ಗುರುತಿನ ಬಾಣಗಳು' ಪುಸ್ತಕ ಬಿಡುಗಡೆ: ಎನ್. ಚಲುವರಾಯಸ್ವಾಮಿ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಪುಸ್ತಕದ ಬಗ್ಗೆ ಮಾತು: ವೆಂಕಟೇಶ್ ನೆಲ್ಲುಕುಂಟೆ, ಮುಖ್ಯ ಅತಿಥಿ: ಅಶ್ವಿನಿ ಕೆ.ಪಿ., ಆಯೋಜನೆ: ಸಂಕಥನ, ಸ್ಥಳ: ಎಚ್.ಎನ್. ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5.30

ಗೀತ ಗಾಯನ ತರಬೇತಿ ಶಿಬಿರ ಹಾಗೂ ಸಮೂಹ ಗಾಯನ: ಉದ್ಘಾಟನೆ: ಕಾ.ವೆಂ. ಶ್ರೀನಿವಾಸಮೂರ್ತಿ, ಮುಖ್ಯ ಅತಿಥಿಗಳು: ಮಂಜುನಾಥಸ್ವಾಮಿ ಎಲ್., ಅಮೃತೇಶ್ ಕುಲಕರ್ಣಿ, ವೆಂಕಟೇಶಮೂರ್ತಿ ಶಿರೂರ್, ಅಧ್ಯಕ್ಷತೆ: ಬಂಡ್ಲಹಳ್ಳಿ ವಿಜಯಕುಮಾರ್, ಆಯೋಜನೆ: ಕಲಾ ಸಂಸ್ಥಾನ, ಸ್ಥಳ: ಗಾಂಧಿ ಸಾಹಿತ್ಯ ಸಂಘ, 8ನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

ಪುರಂದರ ದಾಸರ ಪುಣ್ಯದಿನ ಮಹೋತ್ಸವ: ದಾಸರ ಪದಗಳ ಅಂತ್ಯಾಕ್ಷರಿ: ಅನಂತ ಕುಲಕರ್ಣಿ, ರಾಯಚೂರ್ ಶೇಷಗಿರಿದಾಸ್, ದಿವ್ಯಾ ಗಿರಿಧರ್, ಭಾರ್ಗವಿ ಗುಡಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸೇವಾ ಸಮಿತಿ, 6ನೇ ಕ್ರಾಸ್ ಸುಧೀಂದ್ರ ನಗರ, ಮಲ್ಲೇಶ್ವರ, ಸಂಜೆ 6.30

20ನೇ ಟೊಟೊ ಪ್ರಶಸ್ತಿ ಪ್ರದಾನ: ಆಕಾರ್ ಪಟೇಲ್, ಆಯೋಜನೆ: ದಿ ಆರ್ಟ್ ಆ್ಯಂಡ್ ಫೋಟೋಗ್ರಫಿ ಫೌಂಡೇಶನ್, ಭೂಮಿಜಾ, ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ), ದೊಮ್ಮಲೂರು, ಸಂಜೆ 6.30

ಪ್ರವಚನ ವಾಹಿನಿ: ಭರತನಾಟ್ಯ: ಶಾಲೋರ್ವಿ ಜಿ. ಆತ್ರೇಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ತೆರಿಗೆ ಸಂಗ್ರಹ: ಪಿಡಿಒಗಳ ವಿರುದ್ಧ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಅತ್ಯಂತ ಕಡಿಮೆ ತೆರಿಗೆ ವಸೂಲಿ ಮಾಡಿರುವ ತಲಾ ಹತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ನೋಟಿಸ್ ಜಾರಿಗೊಳಿಸಿ, ಕ್ರಮ ಜರುಗಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ (ಸಿಇಒ) ಜತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಅವರು, ಈ ಸೂಚನೆ ನೀಡಿದರು. ಸಚಿವರ ಸೂಚನೆ ಆಧರಿಸಿ ಸಿಇಒಗಳಿಗೆ ಸುತ್ತೋಲೆ ಹೊರಡಿಸಿರುವ ಇಲಾಖೆಯ ನಿರ್ದೇಶಕರು, ಪಿಡಿಒಗಳ ವಿರುದ್ಧ ಕ್ರಮ ಜರುಗಿಸಿ ಸೋಮವಾರದ ಒಳಗೆ ಮಾಹಿತಿ ಸಲ್ಲಿಸುವಂತೆ ಗಡುವು ನೀಡಿದ್ದಾರೆ.

ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಪ್ರಗತಿ ಕುಂಠಿತವಾಗಿರುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ತೆರಿಗೆ ಸಂಗ್ರಹದಲ್ಲಿ ಗುರಿ ತಲುಪಲು ನಿರಾಸಕ್ತಿ ತಳೆದಿರುವುದಕ್ಕೆ ಸಚಿವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕಡತ ಒಪ್ಪಿಸಲು ನಿರ್ದೇಶನ: ಅನುದಾನದ ಬಳಕೆ ಕುರಿತು ಸಾಮಾಜಿಕ ಲೆಕ್ಕಪರಿಶೋಧನೆಗೆ ಕಡ್ಡಾಯವಾಗಿ ಕಡತ ಒಪ್ಪಿಸಬೇಕೆಂಬ ಆದೇಶವನ್ನು ಹಲವು ಗ್ರಾಮ ಪಂಚಾಯಿತಿಗಳಲ್ಲಿ ಪಾಲಿಸುತ್ತಿಲ್ಲ. ಎಲ್ಲ ಪಂಚಾಯಿತಿಗಳಲ್ಲೂ ತಕ್ಷಣ ಕಡತ ಒಪ್ಪಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಬೇಸಿಗೆ ಆರಂಭವಾಗುತ್ತಿದ್ದು, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ತೀವ್ರವಾಗುವ ಸಾಧ್ಯತೆ ಇದೆ. ಆದ್ದರಿಂದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಕುಡಿಯುವ ನೀರಿನ ಕೊರತೆ ಪರಿಹರಿಸಲು ತಕ್ಷಣದಿಂದಲೇ ಕಾರ್ಯ-ಪ್ರವೃತ್ತರಾಗಬೇಕು ಎಂದು ಸೂಚಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಆಯುಕ್ತಾಲಯದ ಆಯುಕ್ತ ಪವನ್ ಕುಮಾರ್ ಮಾಲಪಾಟಿ, ಗ್ರಾಮೀಣ ನೀರು ಸರಬರಾಜು ಇಲಾಖೆ ಆಯುಕ್ತ ಕೆ. ನಾಗೇಂದ್ರ ಪ್ರಸಾದ್ ಸಭೆಯಲ್ಲಿದ್ದರು.

'ಕ್ಷೇತ್ರ ಪ್ರವಾಸ ಕಡ್ಡಾಯ'

'ಎಲ್ಲ ಸಿಇಒಗಳಿಗೂ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವಂತೆ ಸೂಚಿಸಲಾಗಿತ್ತು. ಹಲವು ಅಧಿಕಾರಿಗಳು ಅದನ್ನು ಪಾಲಿಸಿಲ್ಲ. ಕ್ಷೇತ್ರ ಪ್ರವಾಸ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

5ರಂದು 'ಅಶ್ವಮೇಧ'ಕ್ಕೆ ಚಾಲನೆ



ಅಶ್ವಮೇಧ ಕ್ಲಾಸಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸವಿನ್ಯಾಸ ಹಾಗೂ ಹೊಸಬ್ರಾಂಡ್‌ನ 'ಪಾಯಿಂಟ್ ಟು ಪಾಯಿಂಟ್ ಎಕ್ಸ್‌ಪ್ರೆಸ್'– 'ಅಶ್ವಮೇಧ' ಕರ್ನಾಟಕ ಸಾರಿಗೆ ಬಸ್ ಸಂಚಾರಕ್ಕೆ ಸಿದ್ಧಗೊಂಡಿದೆ.

3.42 ಮೀಟರ್ ಎತ್ತರ ಇರುವ ಅಶ್ವಮೇಧ (ಕ್ಲಾಸಿಕ್) ಬಸ್ ಅನ್ನು 'ಪ್ರಯಾಣದ ಮರು ಕಲ್ಪನೆ' ಎಂಬ ಘೋಷವಾಕ್ಯದೊಂದಿಗೆ ಪರಿಚಯಿಸಲಾಗುತ್ತಿದೆ.

ಈ ಬಸ್‌ನಲ್ಲಿ 52 ಆಸನಗಳಿದ್ದು, 'ಬಕೆಟ್ ಟೈಪ್' ವಿನ್ಯಾಸವನ್ನು ಹೊಂದಿವೆ. ವಾಹನದ ಮುಂದಿನ ಮತ್ತು ಹಿಂದಿನ ಗಾಜು ವಿಶಾಲವಾಗಿವೆ. ಕಿಟಕಿ ಫ್ರೇಮ್ ಹಾಗೂ ಮೇಲಿನ ಗಾಜು ದೊಡ್ಡದಾಗಿದ್ದು, ಟಿಂಟೆಡ್ ಗಾಜುಗಳನ್ನು ಹೊಂದಿವೆ.

ವಾಹನದ ಒಳಾಂಗಣದ ಲಗೇಜ್ ಕ್ಯಾರಿಯರ್ ಅನ್ನು ವಿನೂತನವಾಗಿ ವಿನ್ಯಾಸ ಮಾಡಲಾಗಿದೆ. ಒಳಾಂಗಣದಲ್ಲಿ ನಿರಂತರ ಉರಿಯುವ ಎಲ್‌ಇಡಿ ದೀಪಗಳಿವೆ. ಎಲ್‌ಇಡಿ ಮಾರ್ಗಫಲಕ ಇದೆ. ಸ್ವಯಂಚಾಲಿತ ಬಾಗಿಲುಗಳು ಮತ್ತು ತುರ್ತು ಬಟನ್ ವ್ಯವಸ್ಥೆ ಇದೆ.

ಈ ಬಸ್‌ಗಳು ಎಲ್ಲ ಜಿಲ್ಲಾ ಕೇಂದ್ರಗಳಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧ ಪೂರ್ವದ್ವಾರದ ಮುಂಭಾಗ ಫೆ.5ರಂದು 100 'ಅಶ್ವಮೇಧ' ಬಸ್‌ಗಳಿಗೆ ಚಾಲನೆ ನೀಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ ಭಾಗವಹಿಸಲಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಶಿಲ್ಪಕಲಾ ಕೋರ್ಸ್ ಆರಂಭಿಸಿ: ಅರುಣ್

ಮೈಸೂರು: 'ರಾಜ್ಯದ ಕಲಾ ಕಾಲೇಜುಗಳಲ್ಲಿ ಸಾಂಪ್ರದಾಯಿಕ ಶಿಲ್ಪಕಲೆಯನ್ನು ಅಧ್ಯಯನ ವಿಷಯವಾಗಿ ಪರಿಗಣಿಸಬೇಕು. ಶಿಲ್ಪಕಲಾ ಕೋರ್ಸ್ ಆರಂಭಿಸಬೇಕು' ಎಂದು ಅಯೋಧ್ಯೆಯ ಬಾಲರಾಮ ಮೂರ್ತಿ ಕೆತ್ತಿದ ಶಿಲ್ಪಿ ಅರುಣ್ ಯೋಗಿರಾಜ್ ಶುಕ್ರವಾರ ಮೈಸೂರಿನಲ್ಲಿ ಒತ್ತಾಯಿಸಿದರು.

ಬರ: ಸರ್ಕಾರದ ವಿರುದ್ಧ 7ರಂದು ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸದ ಮತ್ತು ರೈತರಿಗೆ ಪರಿಹಾರ ಮೊತ್ತ ಬಿಡುಗಡೆ ಮಾಡದಿರುವ ಸರ್ಕಾರದ ಧೋರಣೆಯನ್ನು ವಿರೋಧಿಸಿ ಇದೇ 7 ರಂದು ಪ್ರತಿಭಟನೆ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಅದೇ ದಿನ ರಾಜ್ಯ ಕಾಂಗ್ರೆಸ್ ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲು ಉದ್ದೇಶಿಸಿದೆ. ಅದಕ್ಕೆ ಪ್ರತಿಯಾಗಿ ಪ್ರತಿಭಟನೆ ನಡೆಸಲು ಬಿಜೆಪಿಯ ಪ್ರಮುಖರ ಸಮಿತಿ ಸಭೆ ನಿರ್ಧರಿಸಿದೆ.

ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಲಿದ್ದು, ಪಕ್ಷದ ಎಲ್ಲ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿಯ ಪ್ರಮುಖರ ಸಮಿತಿ ಸದಸ್ಯ ಸಿ.ಟಿ.ರವಿ ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯದಲ್ಲಿ 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಕುಡಿಯುವ ನೀರಿನ ಅಭಾವ ಇರುವ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ರೈತರಿಗೆ ಪರಿಹಾರ ನೀಡಿಲ್ಲ, ಇಂತಹ ರೈತ ವಿರೋಧಿ ನೀತಿಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ಅವರು ಹೇಳಿದರು.

ಮುಂಬರುವ ರಾಜ್ಯಸಭೆ, ವಿಧಾನಪರಿಷತ್ ಹಾಗೂ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ವರಿಷ್ಠರ ಜತೆ ಚರ್ಚಿಸಲು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು ಎಂದು ರವಿ ತಿಳಿಸಿದರು.

ರಾಜ್ಯಸಭಾ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿಯನ್ನು ಮೈತ್ರಿಕೂಟದಿಂದ ಕಣಕ್ಕಿಳಿಸುವ ಬಗ್ಗೆ ವರಿಷ್ಠರ ಜತೆ ಚರ್ಚೆ ನಡೆಸುವ ಅಧಿಕಾರವನ್ನೂ ವಿಜಯೇಂದ್ರ ಅವರಿಗೆ ನೀಡಲಾಗಿದೆ ಎಂದು ಅವರು ಹೇಳಿದರು.

ಬಂಡವಾಳಶಾಹಿ ಪರ ಕೇಂದ್ರ ಬಜೆಟ್: ಟೀಕೆ

ಬೆಂಗಳೂರು: 'ಕೇಂದ್ರದ ಬಜೆಟ್ ಬಂಡವಾಳಶಾಹಿ ಪರವಾಗಿದೆ' ಎಂದು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಟೀಕಿಸಿದೆ.

'ಬಜೆಟ್‌ನಲ್ಲಿ ಬಡವರು, ಯುವ ಜನರು, ಮಹಿಳೆಯರು ಮತ್ತು ರೈತರಿಗೆ ಒತ್ತು ನೀಡಿಲ್ಲ' ಎಂದು ರಾಜ್ಯ ಕಾರ್ಯ ದರ್ಶಿ ಕೆ. ಉಮಾ ದೂರಿದ್ದಾರೆ. 'ಕನಿಷ್ಠ ಬೆಂಬಲ ಬೆಲೆಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ, ಕೃಷಿ ಕ್ಷೇತ್ರಕ್ಕೆ ನೀಡಿದ ಮೊತ್ತದಲ್ಲಿ ಯಾವುದೇ ಹೆಚ್ಚಳ ಮಾಡಿಲ್ಲ. ಒಂದು ಕೋಟಿ ಮನೆಗಳಿಗೆ 300 ಯೂನಿಟ್ ಉಚಿತ ವಿದ್ಯುತ್ ಗ್ಯಾರಂಟಿ ಎಂದು ಘೋಷಣೆ ಮಾಡಲಾಗಿದೆ. ಆದರೆ, ಅದಕ್ಕೆ ಪ್ರತಿ ಮನೆಯಲ್ಲಿ ಸೋಲಾರ್ ಫಲಕ ಅಳವಡಿಸಿ-ಕೊಳ್ಳಬೇಕು. ಆ ವೆಚ್ಚವನ್ನು ಯಾರು ಭರಿಸುತ್ತಾರೆ ಎಂಬುದನ್ನು ಬಜೆಟ್‌ನಲ್ಲಿ ಸ್ಪಷ್ಟಪಡಿಸಿಲ್ಲ' ಎಂದು ಹೇಳಿದ್ದಾರೆ.

'ರಸಗೊಬ್ಬರದ ಸಬ್ಸಿಡಿ ಕಡಿತ ಮಾಡಲಾಗಿದೆ. ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಹಣ ನೀಡಲಾಗಿದೆ ಎಂದು ತೋರಿಸಲಾಗಿದೆ. ಆದರೆ ಈ ಅತ್ಯವಶ್ಯಕ ರಂಗಗಳಿಗೆ ಮೀಸಲಾದ ಹಣವನ್ನು ಖರ್ಚು ಮಾಡಲಾಗಿಲ್ಲ' ಎಂದು ಆಪಾದಿಸಿದ್ದಾರೆ.

ಮುಂಬೈ ರೇಸ್

ಅಹೆಡ್ ಆಫ್ ಮೈ ಟೈಮ್ ಗೆಲ್ಲುವ ನಿರೀಕ್ಷೆ


ಡಾ.ಎಸ್.ಸಿ. ಜೈನ್ ಸ್ಪ್ರಿಂಟರ್ಸ್ ಚಾಂಪಿಯನ್‌ಷಿಪ್ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಹೆಡ್ ಆಫ್ ಮೈ ಟೈಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1 ಗಂಟೆಗೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:


1ನೇ ರೇಸ್: ಆರ್ಬ್ರಿಟ್ರೇಜ್ 2, ಮಿರೆ 1, ಅನ್ನೂಷ್ಕ 6
2ನೇ ರೇಸ್: ಅನ್‌ಟೈಟಲ್ಡ್ 1, ಡೊಸಾಬೆಲ್ 7, ಮೊಜೊ 10
3ನೇ ರೇಸ್: ಕ್ಯಾಸ್ಕೇಡ್ 1, ಲ್ಯೂಮಿನಾಸಿಟಿ 2, ಮಾರ್ಲ್‌ಬೊರೊ ಮ್ಯಾನ್ 4
4ನೇ ರೇಸ್: ಡೆಸ್ ಮಾರ್ಕ್ವೀಸ್ 1, ಮಲ್ಟಿವರ್ಸ್ 5, ಚಾಟ್ 2
5ನೇ ರೇಸ್: ರಿಕೊಚೆಟ್ 2, ಮಿದಾಸ್ ಟಚ್ 1, ಮೈಟಿ ವಿಂಗ್ಸ್ 5
6ನೇ ರೇಸ್: ಡಿಕಾಕಾರ್ನ್ 1, ರೆಮಿನಿಸೆನ್ಸ್ 5, ಆರ್ಟ್ ಕಲೆಕ್ಟರ್ 3
7ನೇ ರೇಸ್: ಅಹೆಡ್ ಆಫ್ ಮೈ ಟೈಮ್ 1, ಮಾರ್ಕೆಟ್ ಕಿಂಗ್ 5, ಜೊಕ್ವಿನ್ 3
8ನೇ ರೇಸ್: ಲಜಾರಸ್ 12, ಬಿಲೀವ್ 1, ಅಲ್ಟಿಮೊ 9
9ನೇ ರೇಸ್: ಡ್ರೀಮ್ ಸೆಲ್ಲರ್ 4, ನ್ಯೂಡೈಮನ್ಷನ್ 1, ಡಿವೈನ್ ಥಾಟ್ಸ್ 2
10ನೇ ರೇಸ್: ಮಜಾಲ್ 8, ದೌಲತ್ ಮಾಯ್ 1, ಹಗಿಬಿಸ್ 2

ಉತ್ತಮ ಬೆಟ್: ಲಜಾರಸ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್
4, 5, 6, 7,8	6, 7, 8, 9, 10

1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
2, 3, 4	3, 4, 5	7, 8, 9





ಚಿನ್ನ ಕಳ್ಳಸಾಗಣೆ

ದೇವನಹಳ್ಳಿ: ಕಾಲಿನ ಮಂಡಿಗೆ ಧರಿಸುವ ನೀ ಕ್ಯಾಪ್‌ನಲ್ಲಿ 777 ಗ್ರಾಂ ಚಿನ್ನವನ್ನು ಅಡಗಿಸಿಕೊಂಡು ಕಳ್ಳಸಾಗಣೆ ಮಾಡಲು ಯತ್ನಿಸಿದ ಪ್ರಯಾಣಿಕನೊಬ್ಬನನ್ನು ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಸರಣಿ ಅಪಘಾತ: ಬಸ್ ಚಕ್ರ ಹರಿದು ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವರಂಗ್ ವೃತ್ತ ಬಳಿಯ ಮಹಾಕವಿ ಕುವೆಂಪು ರಸ್ತೆಯಲ್ಲಿ ಸರಣಿ ಅಪಘಾತ ಸಂಭವಿಸಿದ್ದು, ಬಿಎಂಟಿಸಿ ಬಸ್‌ನ ಹಿಂಬದಿ ಚಕ್ರ ಮೈ ಮೇಲೆ ಹರಿದು ಕುಸುಮಿತಾ (21) ಮೃತಪಟ್ಟಿದ್ದಾರೆ.

ಎಂಜಿನಿಯರಿಂಗ್ ವಿದ್ಯಾರ್ಥಿ ಕುಸುಮಿತಾ, ದ್ವಿಚಕ್ರ ವಾಹನ ಚಲಾಯಿಸಿಕೊಂಡು ಶುಕ್ರವಾರ ಬೆಳಿಗ್ಗೆ ಕಾಲೇಜಿಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಮಲ್ಲೇಶ್ವರ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಮಹಾಕವಿ ಕುವೆಂಪು ರಸ್ತೆಯ ಬದಿಯಲ್ಲಿ ಆಟೊ ಹಾಗೂ ಬೈಕ್‌ಗಳನ್ನು ನಿಲ್ಲಿಸಲಾಗಿತ್ತು. ಕುಸುಮಿತಾ ಅವರು ಚಲಿಸುತ್ತಿದ್ದ ಬಿಎಂಟಿಸಿ ಬಸ್‌ನ ಪಕ್ಕದಲ್ಲಿ ಬೈಕ್ ಚಲಾಯಿಸಿದ್ದರು. ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಬೈಕ್‌ವೊಂದು ಸಂಚಾರ ನಿಯಮ ಉಲ್ಲಂಘಿಸಿ ಎದುರಿಗೆ ಬಂದಿತ್ತು. ಅದೇ ವಾಹನಕ್ಕೆ, ಕುಸುಮಿತಾ ಬೈಕ್ ಡಿಕ್ಕಿ ಹೊಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇದರಿಂದಾಗಿ ಕುಸುಮಿತಾ ಬೈಕ್ ಉರುಳಿ ಬಿದ್ದಿತ್ತು. ವಾಹನ ಸಮೇತ ರಸ್ತೆಗೆ ಬಿದ್ದಿದ್ದ ಕುಸುಮಿತಾ ಮೈ ಮೇಲೆಯೇ ಬಸ್‌ನ ಹಿಂಬದಿ ಚಕ್ರ ಹರಿದಿತ್ತು’ ಎಂದು ಪೊಲೀಸರು ಹೇಳಿದರು.

‘ಇದೊಂದು ಸರಣಿ ಅಪಘಾತವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಪಘಾತಕ್ಕೆ ಯಾರು ಹೊಣೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಬಿಎಂಟಿಸಿ ಚಾಲಕ ಹಾಗೂ ಇತರರ ವಿರುದ್ಧ ದೂರು ಸ್ವೀಕರಿಸಿ ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಹಿಂದಿಕ್ಕಲು ಹೋಗಿ ಅವಘಡ: ಅಪಘಾತದ ಬಗ್ಗೆ ವಿಡಿಯೊ ಬಿಡುಗಡೆ ಮಾಡಿರುವ ಬಿಎಂಟಿಸಿ ಅಧಿಕಾರಿಗಳು, ‘ಶಿವಾಜಿನಗರದಿಂದ ಕಮಲಾನಗರಕ್ಕೆ ಬಸ್ (ಕೆಎ 57 ಎಫ್ 3350) ಹೊರಟಿತ್ತು. ದ್ವಿಚಕ್ರ ವಾಹನದಲ್ಲಿದ್ದ ಯುವತಿ, ಬಸ್‌ನ ಎಡಭಾಗದಲ್ಲಿ ಸಾಗಿ ಹಿಂದಿಕ್ಕಲು ಯತ್ನಿಸಿದ್ದರು. ಆಟೊಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು, ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ಯುವತಿ ಬಸ್‌ನ ಹಿಂಬದಿ ಚಕ್ರಕ್ಕೆ ಸಿಲುಕಿದ್ದರು’ ಎಂದಿದ್ದಾರೆ.

ಬೈಕ್ ಹಿಂಬದಿ ಸವಾರ ಸಾವು

ಬೆಂಗಳೂರು: ನಾಯಂಡಹಳ್ಳಿ ಜಂಕ್ಷನ್ ಬಳಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್‌ನ ಹಿಂಬದಿ ಸವಾರ ಮಧು (22) ಮೃತಪಟ್ಟಿದ್ದಾರೆ.

‘ಮಧು ಹಾಗೂ ಸ್ನೇಹಿತ ಪ್ರಜ್ವಲ್, ಸ್ನೇಹಿತರ ಮನೆಗೆ ಬೈಕ್‌ನಲ್ಲಿ ಹೋಗಿದ್ದರು. ಸ್ನೇಹಿತರನ್ನು ಮಾತನಾಡಿಸಿಕೊಂಡು ರಾತ್ರಿ 9.45 ಗಂಟೆ ಸುಮಾರಿಗೆ ತಮ್ಮ ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

‘ನಾಗರಬಾವಿ ಕಡೆಯಿಂದ ನಾಯಂಡಹಳ್ಳಿ ಜಂಕ್ಷನ್ ಕಡೆ ಬೈಕ್‌ನಲ್ಲಿ ತೆರಳುತ್ತಿದ್ದರು. ಪ್ರಜ್ವಲ್ ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಮಧು ಕುಳಿತಿದ್ದರು. ಜಂಕ್ಷನ್‌ನಲ್ಲಿ ಬೈಕ್ ಉರುಳಿಬಿದ್ದಿತ್ತು. ಪ್ರಜ್ವಲ್ ಹಾಗೂ ಮಧು, ರಸ್ತೆಯ ಅಕ್ಕ–ಪಕ್ಕದಲ್ಲಿ ಪ್ರತ್ಯೇಕವಾಗಿ ಬಿದ್ದಿದ್ದರು. ಇದೇ ಮಾರ್ಗವಾಗಿ ವೇಗದಲ್ಲಿ ಹೊರಟಿದ್ದ ಕ್ಯಾಂಟರ್ ಚಕ್ರ ಮಧು ಮೈ ಮೇಲೆ ಹರಿದಿತ್ತು ಎನ್ನಲಾಗಿದೆ. ಗಾಯಗೊಂಡಿದ್ದ ಪ್ರಜ್ವಲ್ ಹಾಗೂ ಮಧು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದೇ ಆಸ್ಪತ್ರೆಯಲ್ಲಿ ಮಧು ಮೃತಪಟ್ಟಿದ್ದಾರೆ. ಪ್ರಜ್ವಲ್ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ’ ಎಂದು ತಿಳಿಸಿದರು.

ತಿಂಡಿ ಮಾಡಲಿಲ್ಲವೆಂಬ ಕೋಪಕ್ಕೆ ಕೃತ್ಯ ಎಸಗಿದ ಆರೋಪ: ಬಾಲಕ ವಶಕ್ಕೆ

ತಾಯಿ ಕೊಂದು ಠಾಣೆಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನೇತ್ರಾವತಿ (40) ಅವರನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಅವರ 17 ವರ್ಷದ ಮಗನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಶುಕ್ರವಾರ ಬೆಳಿಗ್ಗೆ 7 ಗಂಟೆಯಿಂದ 8 ಗಂಟೆ ಅವಧಿಯಲ್ಲಿ ಕೊಲೆ ನಡೆದಿರುವ ಮಾಹಿತಿ ಇದೆ. ಕೃತ್ಯ ಎಸಗಿದ್ದ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ, ತಾಯಿಯನ್ನು ಕೊಂದಿರುವುದಾಗಿ ಹೇಳಿ ಠಾಣೆಗೆ ಕರೆ ಮಾಡಿದ್ದ. ಸಿಬ್ಬಂದಿ ಮನೆಗೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ತಿಂಡಿ ವಿಚಾರವಾಗಿ ತಾಯಿ–ಮಗನ ನಡುವೆ ಗಲಾಟೆ ನಡೆದು ಕೊಲೆಯಲ್ಲಿ ಅಂತ್ಯವಾಗಿರುವುದಾಗಿ ಗೊತ್ತಾಗಿದೆ. ಮಗನನ್ನು ಬಾಲ ನ್ಯಾಯ ಮಂಡಳಿಗೆ ಹಾಜರುಪಡಿಸಿ, ಅವರ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಅಪರಾಧ ಸುದ್ದಿ

‘ನೇತ್ರಾವತಿ ಹಾಗೂ ಅವರ ಮಗ, ಮುಳಬಾಗಿಲಿನವರು. 30 ವರ್ಷಗಳ ಹಿಂದೆಯೇ ನೇತ್ರಾವತಿ ಕುಟುಂಬ ಬೆಂಗಳೂರಿಗೆ ಬಂದಿತ್ತು. ಸ್ಥಳೀಯ ಜಸ್ಟಿಸ್ ಭೀಮಯ್ಯ ಬಡಾವಣೆಯ ಮನೆಯಲ್ಲಿ ವಾಸವಿತ್ತು. ನೇತ್ರಾವತಿ ಅವರೇ ಕೆಲಸ ಮಾಡಿ ಮಗನನ್ನು ಸಾಕುತ್ತಿದ್ದರು’ ಎಂದು ಹೇಳಿದರು.

ರಾತ್ರಿಯೂ ಗಲಾಟೆ: ‘ಮಗ ಪದೇ ಪದೇ ತಾಯಿ ಮೇಲೆ ಸಿಟ್ಟು ಮಾಡಿಕೊಳ್ಳುತ್ತಿದ್ದ. ಇದೇ ಕಾರಣಕ್ಕೆ ನಿತ್ಯವೂ ಕ್ಷುಲ್ಲಕ ಕಾರಣಕ್ಕಾಗಿ ಜಗಳ ನಡೆಯುತ್ತಿತ್ತು. ಗುರುವಾರ ರಾತ್ರಿಯೂ ಜಗಳ ಮಾಡಿದ್ದ ಮಗ, ಊಟ ಮಾಡದೇ ಮಲಗಿದ್ದ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಶುಕ್ರವಾರ ಬೆಳಿಗ್ಗೆ ಎದ್ದಿದ್ದ ಮಗ, ‘ಹೊಟ್ಟೆ ಹಸಿದಿದ್ದು, ತಿಂಡಿ ಕೊಡು’ ಎಂದು ತಾಯಿಗೆ ತಾಕೀತು ಮಾಡಿದ್ದ. ‘ತಿಂಡಿ ಮಾಡಿಲ್ಲ. ಮನೆ ಕೆಲಸ ಹೆಚ್ಚಿದ್ದು, ಅದನ್ನು ಮುಗಿಸಿ ತಿಂಡಿ ತಯಾರಿಸುತ್ತೇನೆ’ ಎಂದು ತಾಯಿ ಹೇಳಿದ್ದರು. ಅಷ್ಟಕ್ಕೆ ಮಗ, ‘ತಿಂಡಿ ಏಕೆ ಮಾಡಿಲ್ಲ’ ಎಂದು ಜಗಳಕ್ಕೆ ಇಳಿದಿದ್ದ.’

‘ತಾಯಿ–ಮಗನ ನಡುವೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಮಗ, ರಾಡ್ ನಿಂದ ತಾಯಿ ತಲೆಗೆ ಹೊಡೆದಿದ್ದ. ಗಾಯ ಗೊಂಡು ರಕ್ತದ ಮಡುವಿನಲ್ಲಿ ನರಳಾಡಿ ತಾಯಿ ಮೃತಪಟ್ಟಿದ್ದರು. ಗಾಬರಿಗೊಂಡಿದ್ದ ಮಗ, ಠಾಣೆಗೆ ಕರೆ ಮಾಡಿ ಕೊಲೆ ಸಂಗತಿ ತಿಳಿಸಿದ್ದ. ಅಕ್ಕ–ಪಕ್ಕದ ನಿವಾಸಿಗಳು ಹಾಗೂ ಸಂಬಂಧಿಕರಿಂದಲೂ ಕೊಲೆ ಬಗ್ಗೆ ಹೇಳಿಕೆ ಪಡೆಯಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಸಿಗರೇಟ್ ವಿತರಕನ ಹಿಂಬಾಲಿಸಿ ಸುಲಿಗೆ

ಬೆಂಗಳೂರು: ನಗರದ ಮಳಿಗೆಗಳಿಗೆ ಸಿಗರೇಟ್ ಸರಬರಾಜು ಮಾಡುವ ವಿತರಕನನ್ನು ಹಿಂಬಾಲಿಸಿದ್ದ ದುಷ್ಕರ್ಮಿಗಳ ತಂಡ, ಪಿಸ್ತೂಲ್ ತೋರಿಸಿ ಕಣ್ಣಿಗೆ ಖಾರದ ಪುಡಿ ಎರಚಿ ₹15 ಲಕ್ಷ ಸುಲಿಗೆ ಮಾಡಿದೆ.

ನಾಗರಬಾವಿ ಬಳಿಯ ಪಾಪರೆಡ್ಡಿ ಪಾಳ್ಯದಲ್ಲಿ ನಡೆದಿರುವ ಸುಲಿಗೆ ಸಂಬಂಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿತರಕ ಗೋಪಾಲ್, ಟಾಟಾ ಏಸ್ ವಾಹನದಲ್ಲಿ ಸಿಗರೇಟ್ ಬಾಕ್ಸ್‌ಗಳನ್ನು ಇಟ್ಟುಕೊಂಡು ಮಳಿಗೆಗಳಿಗೆ ಕೊಡಲು ಹೊರಟಿದ್ದರು. ಸಿಗರೇಟ್ ಕೊಟ್ಟ ನಂತರ ಹಣವನ್ನೂ ಸಂಗ್ರಹಿಸಿಟ್ಟುಕೊಂಡಿದ್ದರು. ಕೆಂಗೇರಿಯಿಂದ ಪಾಪರೆಡ್ಡಿ ಪಾಳ್ಯದತ್ತ ಬಂದಿದ್ದರು. ಅವರನ್ನು ಆರೋಪಿಗಳು ಹಿಂಬಾಲಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ವಾಹನ ಅಡ್ಡಗಟ್ಟಿದ್ದ ಆರೋಪಿಗಳು, ಪಿಸ್ತೂಲ್ ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ನಂತರ, ಕಣ್ಣಿಗೆ ಖಾರದ ಪುಡಿ ಎರಚಿದ್ದರು. ಗೋಪಾಲ್ ಅವರನ್ನು ಅಟ್ಟಾಡಿಸಿದ್ದ ಆರೋಪಿಗಳು, ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಮಕ್ಕಳಿಂದ ವಾಹನ ಚಾಲನೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆ ಹಾಗೂ ಕಾಲೇಜು ಬಳಿ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು, ನಿಯಮ ಉಲ್ಲಂಘಿಸಿದ್ದ 639 ವಾಹನ ಸವಾರರಿಗೆ ದಂಡ ವಿಧಿಸಿದ್ದಾರೆ.

ಪೂರ್ವ ವಿಭಾಗದ ಕಬ್ಬನ್ ಪಾರ್ಕ್, ಹಲಸೂರು ಗೇಟ್, ಹೈಗ್ರೌಂಡ್ಸ್, ಅಶೋಕನಗರ, ವಿಲ್ಸನ್ ಗಾರ್ಡನ್, ಸದಾಶಿವನಗರ ಹಾಗೂ ಸುತ್ತಮುತ್ತಲಿನ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಯಿತು.

‘ಮಕ್ಕಳು ದ್ವಿಚಕ್ರ ವಾಹನ ಹಾಗೂ ಕಾರು ತೆಗೆದುಕೊಂಡು ರಸ್ತೆಗೆ ಬರುತ್ತಿದ್ದಾರೆ. ನಿರ್ಲಕ್ಷ್ಯ ಹಾಗೂ ಅತೀ ವೇಗದಲ್ಲಿ ವಾಹನ ಚಲಾಯಿಸಿ, ಅಪಘಾತಕ್ಕೂ ಕಾರಣವಾಗುತ್ತಿದ್ದಾರೆ. ಇಂಥವರನ್ನು ಪತ್ತೆ ಮಾಡಿ ದಂಡ ವಿಧಿಸುವಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಸಾರ್ವಜನಿಕರು ದೂರು ನೀಡಿದ್ದರು’ ಎಂದು ಸಂಚಾರ ಪೊಲೀಸ್ ಅಧಿಕಾರಿ ತಿಳಿಸಿದರು.

‘ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಸಂಚಾರ, ಹೆಲ್ಮೆಟ್ ರಹಿತ ಚಾಲನೆ, ದ್ವಿಚಕ್ರ ವಾಹನದಲ್ಲಿ ಮೂರು ಮಂದಿ ಸವಾರಿ ಹಾಗೂ ಪಾದಚಾರಿ ಮಾರ್ಗದಲ್ಲಿ ವಾಹನ ಓಡಾಟ ಸಂಬಂಧ 639 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇದರಲ್ಲಿ ಕೆಲವರು, ಮಕ್ಕಳಿದ್ದಾರೆ. ಅವರಿಗೆ ವಾಹನ ನೀಡಿದ್ದಕ್ಕಾಗಿ ಪೋಷಕರಿಗೆ ನೋಟಿಸ್ ನೀಡಲಾಗಿದೆ. ಕೃತ್ಯ ಮರುಕಳಿಸಿದರೆ ಪ್ರಕರಣ ದಾಖಲಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ’ ಎಂದು ಹೇಳಿದರು.

ಗಾಂಜಾ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶಕ್ಕೆ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ಬೆಂಗಳೂರಿನ ಮೂವರು ಆರೋಪಿಗಳನ್ನು ಗುಂಟೂರು ಠಾಣೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ.

‘ಸುದ್ದಗುಂಟೆಪಾಳ್ಯದ ಎಸ್.ವಿ. ಅಭಿನಯ್, ಕಿಶೋರ್ ಪಿ. ರೆಡ್ಡಿ ಹಾಗೂ ಸುಮಂತ್ ಕುಮಾರ್ ಬಂಧಿತರು. ಇವರಿಂದ 60 ಕೆ.ಜಿ ಗಾಂಜಾ, ಎರಡು ಕಾರುಗಳು ಹಾಗೂ 7 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹44.28 ಲಕ್ಷ’ ಎಂದು ಗುಂಟೂರು ಜಿಲ್ಲಾ ಎಸ್ಪಿ ಆರಿಫ್ ಹಫೀಜ್ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಗುಂಟೂರು ಪೊಲೀಸರು, ‘ಒಡಿಶಾದಿಂದ ಗಾಂಜಾವನ್ನು ತಂದಿದ್ದ ಆರೋಪಿಗಳು, ಆಂಧ್ರಪ್ರದೇಶಕ್ಕೆ ಸಾಗಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಪಡೆದು, ಆರೋಪಿಗಳನ್ನು ಬಂಧಿಸಲಾಗಿದೆ. ₹2.28 ಲಕ್ಷ ನಗದು ಸಹ ಆರೋಪಿಗಳ ಬಳಿ ಸಿಕ್ಕಿದೆ’ ಎಂದಿದ್ದಾರೆ.

ಮಾಜಿ ಕಾರ್ಪೊರೇಟರ್ ಮಗ?: ಬಂಧಿತ ಆರೋಪಿ ಎಸ್.ವಿ. ಅಭಿನಯ್, ಬೆಂಗಳೂರಿನ ಮಾಜಿ ಕಾರ್ಪೊರೇಟರ್‌ರೊಬ್ಬರ ಮಗನೆಂದು ಹೇಳಲಾಗುತ್ತಿದೆ. ಆದರೆ, ಈ ಬಗ್ಗೆ ಗುಂಟೂರು ಪೊಲೀಸರು ಯಾವುದೇ ಮಾಹಿತಿ ನೀಡಿಲ್ಲ.



ಬಂಧಿತ ಆರೋಪಿಗಳು ಹಾಗೂ ಜಪ್ತಿ ಮಾಡಲಾದ ಗಾಂಜಾ ಪೊಟ್ಟಣಗಳ ಜೊತೆ ಗುಂಟೂರು ಪೊಲೀಸರ ತಂಡ

‘ಸೋಮಣ್ಣ ಸ್ಪರ್ಧೆಗೆ ವಿರೋಧವಿಲ್ಲ’

ಪ್ರಜಾವಾಣಿ ವಾರ್ತೆ

ತುಮಕೂರು: ‘ತುಮಕೂರು ಲೋಕಸಭಾ ಕ್ಷೇತ್ರದಿಂದ ವಿ.ಸೋಮಣ್ಣ ಸ್ಪರ್ಧಿಸಲು ಯಾರ ವಿರೋಧವೂ ಇಲ್ಲ. ವರಿಷ್ಠರು ಸೂಚಿಸಿದರೆ ನಮ್ಮದೇನೂ ಅಭ್ಯಂತರವಿಲ್ಲ’ ಎಂದು ಬಿ.ವೈ. ವಿಜಯೇಂದ್ರ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸೋಮಣ್ಣ ಸ್ಪರ್ಧೆಗೆ ಯಾರು ಅಡ್ಡಿಯಾಗಿದ್ದಾರೆ? ಅವರು ಹಿರಿಯರಿದ್ದಾರೆ. ವರಿಷ್ಠರು ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ಮಾರ್ಮಿಕವಾಗಿ ನುಡಿದರು.

ರಾಜ್ಯದ ಎಲ್ಲ 28 ಲೋಕಸಭಾ ಚುನಾವಣೆಯಲ್ಲಿ ಯಾರು ಸ್ಪರ್ಧೆ ಮಾಡಬೇಕು ಎಂಬ ಬಗ್ಗೆ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಕೇಂದ್ರದ ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ ಎಂದು ಹೇಳಿದರು.

ಸಿಬ್ಬಂದಿ ಆತ್ಮಹತ್ಯೆ

ಕನಕಪುರ: ತಾಲ್ಲೂಕು ಕಚೇರಿಯ ಚುನಾವಣೆ ಶಾಖೆ ಸಿಬ್ಬಂದಿ ಸುರೇಶ್ (50) ಮತಯಂತ್ರಗಳನ್ನಿಡುವ ಕೊಠಡಿಯಲ್ಲಿ ಶುಕ್ರವಾರ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಘಟನಾ ಸ್ಥಳದಲ್ಲಿ ಮರಣಪತ್ರ ಸಿಕ್ಕಿದೆ. ಆತ್ಮಹತ್ಯೆಗೆ ಚುನಾವಣಾ ಶಾಖೆ ಶಿರಸ್ತೇದಾರ್ ಪೂರ್ಣಿಮಾ ಕಿರುಕುಳ ಕಾರಣ ಎಂದು ಆರೋಪಿಸಲಾಗಿದೆ.

ಅಂಬೇಡ್ಕರ್ ಪ್ರತಿಮೆ ಸ್ಥಾಪನೆಯ ಭರವಸೆ

ಬಿಎಂಆರ್‌ಸಿಎಲ್ ಎಸ್‌ಸಿ–ಎಸ್‌ಟಿ ನೌಕರರು ನಡೆಸುತ್ತಿದ್ದ ಪ್ರತಿಭಟನೆ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಮೆಟ್ರೊ ಡಿಪೊದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ನಿರ್ಮಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದರಿಂದ, ಬಿಎಂಆರ್‌ಸಿಎಲ್ ನೌಕರರು ಐದು ದಿನಗಳಿಂದ ನಡೆಸುತ್ತಿದ್ದ ಪ್ರತಿಭಟನೆಯನ್ನು ಕೈಬಿಟ್ಟಿದ್ದಾರೆ.

‘ಗಣರಾಜ್ಯೋತ್ಸವದ ಸಂದರ್ಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಇಡಲು ಒಪ್ಪಿಗೆ ನೀಡದೇ ಅಪಮಾನ ಮಾಡಲಾಗಿದೆ. ಭಾವಚಿತ್ರ ನಿರಾಕರಿಸಿದ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಎಸ್‌ಸಿ–ಎಸ್‌ಟಿ ನೌಕರರು ಸೋಮವಾರದಿಂದ ಪ್ರತಿಭಟನೆ ನಡೆಸುತ್ತಿದ್ದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಹೈಕೋರ್ಟ್ ವಕೀಲ ಎನ್. ಅನಂತ ನಾಯಕ್ ಅವರು ಪ್ರತಿಭಟನಕಾರರು ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳ ನಡುವೆ ಶುಕ್ರವಾರ ಸಂಧಾನ ನಡೆಸಿದರು.

‘ತಪ್ಪಿತಸ್ಥ ಅಧಿಕಾರಿಯ ವಿರುದ್ಧ ತನಿಖೆ ನಡೆಸಲು ಏಳು ಸದಸ್ಯರಿರುವ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ನೀಡುವ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು. ಬೈಯಪ್ಪನಹಳ್ಳಿ ಡಿಪೊದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಿಸಲಾಗುವುದು. ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಸಹಿತ ರಾಷ್ಟ್ರೀಯ ಪ್ರಮುಖ ದಿನಗಳಂದು ಮಾಲಾರ್ಪಣೆ ಮಾಡಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ’ ಎಂದು ಸಂಧಾನಕಾರರು ಮಾಹಿತಿ ನೀಡಿದರು.

ಬಿಎಂಆರ್‌ಸಿಎಲ್ ಎಸ್‌ಸಿ–ಎಸ್‌ಟಿ ನೌಕರರು ಮತ್ತು ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಂತೋಷ್ ಆರ್., ಉಪಾಧ್ಯಕ್ಷ ಗೋಪಾಲ್ ಆರ್., ನವೀನ್ ಟಿ.ಆರ್., ಪ್ರಧಾನ ಕಾರ್ಯದರ್ಶಿ ಮೂರ್ತಿ ಆರ್.ವಿ., ಸಂಘಟನಾ ಕಾರ್ಯದರ್ಶಿ ವೀರಪ್ಪ, ಸದಸ್ಯರಾದ ಈರಣ್ಣ ವಿ.ಎಂ., ಅಜ್ಜಪ್ಪ, ರಘುನಂದನ್, ಮಂಜುನಾಥ್, ಹಿಂದುಳಿದ ವರ್ಗಗಳ ನಾಯಕರಾದ ಮಂಡ್ಯರವಿ, ರಾಕೇಶ್, ಜೋಸೆಫ್, ಮಂಜುನಾಥ್, ಮನೀಶ್, ಅರುಣ್ ಜೆ.ಟಿ., ಅಕ್ಷಯ ಭಾಗವಹಿಸಿದ್ದರು.



ಬೈಯಪ್ಪನಹಳ್ಳಿ ಮೆಟ್ರೊ ಡಿಪೊದಲ್ಲಿ ನೌಕರರು 5 ದಿನದಿಂದ ನಡೆಸುತ್ತಿದ್ದ ಪ್ರತಿಭಟನೆ ಶುಕ್ರವಾರ ಕೊನೆಗೊಂಡಿತು

ಬಿಜೆಪಿ ಸಂಸದೆ ರೀಟಾಗೆ 6 ತಿಂಗಳು ಜೈಲು ಶಿಕ್ಷೆ



ಲಖನೌ(ಪಿಟಿಐ): ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಗಾಗಿ ಬಿಜೆಪಿಯ ಪ್ರಯಾಗ್‌ರಾಜ್ ಕ್ಷೇತ್ರದ ಸಂಸದೆ ರೀಟಾ ಬಹುಗುಣ ಜೋಶಿಗೆ ಇಲ್ಲಿನ ನ್ಯಾಯಾಲಯ 6 ತಿಂಗಳು ಜೈಲು ಶಿಕ್ಷೆ ಹಾಗೂ ₹1,100 ದಂಡ ವಿಧಿಸಿ ಶುಕ್ರವಾರ ಆದೇಶಿಸಿದೆ.

2012ರಲ್ಲಿ ನಡೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ರೀಟಾ, ಕಾಂಗ್ರೆಸ್‌ನಲ್ಲಿದ್ದರು. ಪಕ್ಷದ ಅಭ್ಯರ್ಥಿ ಪರ ಮತಯಾಚನೆ ನಡೆಸುತ್ತಿದ್ದಾಗ, ಪ್ರಚಾರದ ಅವಧಿ ಮುಗಿದಿದ್ದರೂ ಸಾರ್ವಜನಿಕ ಸಭೆ ನಡೆಸುವ ಮೂಲಕ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದರು ಎಂಬ ಆರೋಪವನ್ನು ಅವರು ಎದುರಿಸುತ್ತಿದ್ದರು. ಸಂಸದರ, ಶಾಸಕರ ನ್ಯಾಯಾಲಯದ ವಿಶೇಷ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಂಬರೀಷ್‌ಕುಮಾರ್ ಶ್ರೀವಾಸ್ತವ ಶಿಕ್ಷೆ ಪ್ರಕಟಿಸಿದ್ದಾರೆ.

ನಿಧನ ವಾರ್ತೆ

ಹರ್ಷವರ್ಧನ

ಬೆಂಗಳೂರು: ಮಾಜಿ ಸಚಿವ ದಿವಂಗತ ಕೆ.ಎಚ್.ರಂಗನಾಥ್ ಅವರ ಮೊಮ್ಮಗ ಹರ್ಷವರ್ಧನ (33) ಅವರು ಶುಕ್ರವಾರ ನಗರದ ತಮ್ಮ ನಿವಾಸದಲ್ಲಿ ನಿಧನರಾದರು. ಹರ್ಷವರ್ಧನ ಅವರು ಕೆಪಿಸಿಸಿ ಸದಸ್ಯ ವಿಜಯಕುಮಾರ್ ಹಾಗೂ ಗೋದಾವರಿ ಅವರ ಪುತ್ರ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹೊಸಹೊಳನಾಡು ಸಮೀಪದ ಕಸವನಹಳ್ಳಿ ಗ್ರಾಮದಲ್ಲಿರುವ ಕೆ.ಎಚ್. ರಂಗನಾಥ್ ಅವರ ಸಮಾಧಿ ಬಳಿ ಶನಿವಾರ ಮಧ್ಯಾಹ್ನ 3ಕ್ಕೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹರ್ಷವರ್ಧನ

ನಿಖಿಲ್ ಕುಮಾರಸ್ವಾಮಿ ಮತ್ತಿತರರು ಸಲ್ಲಿಸಿರುವ ಅರ್ಜಿ ಮಾನ್ಯ ಮಾಡಿದ ಹೈಕೋರ್ಟ್

ಗ್ಯಾರಂಟಿ ಆಮಿಷ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ವೇಳೆ ಮತದಾರರಿಗೆ ಗ್ಯಾರಂಟಿ ಭಾಗ್ಯಗಳ ಆಮಿಷವೊಡ್ಡಿ ಮತ ಪಡೆಯುವ ರಾಜಕೀಯ ಪಕ್ಷಗಳ ಮಾದರಿಗೆ ಕರ್ನಾಟಕ ರಾಜ್ಯ ಅವಕಾಶ ಮಾಡಿ ಕೊಟ್ಟಿದ್ದು, ಇಂತಹ ನಡೆ ಮರುಕಳಿಸದಂತೆ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂಬ ಮನವಿಗೆ ಹೈಕೋರ್ಟ್ ಸ್ಪಂದಿಸಿದೆ.

ಈ ಸಂಬಂಧ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಎಂ.ಗೌತಮ ಗೌಡ, ಕೆ.ಆರ್.ಪ್ರಸಾದ್ ಮತ್ತು ಎ. ಮಂಜುನಾಥ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, 'ರಾಜ್ಯದಲ್ಲಿ ಕಳೆದ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಮತದಾರರಿಗೆ ಗ್ಯಾರಂಟಿ ಕಾರ್ಡುಗಳ ಆಮಿಷ-ವೊಡ್ಡಲಾಗಿದೆ. ಇದು ಚುನಾವಣಾ ಅಕ್ರಮ. ಇದೀಗ ಎಲ್ಲಾ ರಾಜ್ಯಗಳೂ ಇದೇ ಮಾದರಿಯನ್ನು ಅನುಕರಿಸಲು ಆರಂಭಿಸಿವೆ. ಹಾಗಾಗಿ, ಈ ಮಾದರಿ ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರತಿವಾದಿಗಳಾದ ಮುಖ್ಯ ಚುನಾವಣಾ ಆಯುಕ್ತರು ಮತ್ತು ಕೇಂದ್ರ ಕಾನೂನು ಸಚಿವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಪ್ರತಿವಾದಿಗಳಿಗೆ ಸೂಚಿಸಿ ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿತು.

ಮನವಿ ಏನಿದೆ?: 'ಚಾಲ್ತಿಯಲ್ಲಿರುವ ಕಾನೂನುಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕು. ಮಾದರಿ ಚುನಾವಣಾ ನೀತಿ ಸಂಹಿತೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು. ಯಾರು ಆಧುನಿಕ ತಂತ್ರಜ್ಞಾನ ಬಳಸಿ ಇಂತಹ ಗ್ಯಾರಂಟಿ ಆಮಿಷಗಳನ್ನು ಒಡ್ಡುತ್ತಾರೆಯೊ ಅವರನ್ನು ಜನಪ್ರತಿನಿಧಿಗಳ ಕಾಯ್ದೆ ಅನುಸಾರ ಮತ್ತು ಭಾರತೀಯ ದಂಡ ಸಂಹಿತೆಯ ಕಲಂಗಳಡಿ ಶಿಕ್ಷಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಎಚ್.ಸಿ. ಬಾಲಕೃಷ್ಣ ವಿರುದ್ಧ ಜೆಡಿಎಸ್ ದೂರು

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಮತ ಹಾಕದಿದ್ದರೆ ಗ್ಯಾರಂಟಿ ಯೋಜನೆ ರದ್ದುಗೊಳಿಸುವುದಾಗಿ ಹೇಳಿಕೆ ನೀಡಿರುವ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆಯಡಿ ಕ್ರಮ ಜರುಗಿಸುವಂತೆ ಆಗ್ರಹಿಸಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಜೆಡಿಎಸ್ ದೂರು ಸಲ್ಲಿಸಿದೆ.

ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದ ನಿಯೋಗವು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರನ್ನು ಶುಕ್ರವಾರ ಭೇಟಿಮಾಡಿ ದೂರು ಸಲ್ಲಿಸಿತು.

ಪಕ್ಷದ ಶಾಸಕರಾದ ಸುರೇಶ್ ಬಾಬು, ಕರೆಮ್ಮ ನಾಯಕ್, ಎಚ್.ಟಿ.ಮಂಜುನಾಥ, ಹರೀಶ್ ಗೌಡ, ಸ್ವರೂಪ್ ಪ್ರಕಾಶ್, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷರಾದ ಎಚ್.ಎಂ.ರಮೇಶ್ ಗೌಡ, ಬೆಂಗಳೂರು ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಎ.ಪಿ.ರಂಗನಾಥ್ ನಿಯೋಗದಲ್ಲಿ ಇದ್ದರು. 'ಬಾಲಕೃಷ್ಣ ಅವರು ಮತದಾರರಿಗೆ ಬೆದರಿಕೆ ಒಡ್ಡುವ ಮತ್ತು ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಆಮಿಷ ಒಡ್ಡುವ ಕೆಲಸ ಮಾಡಿದ್ದಾರೆ. ಅವರ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆಯಡಿ ಕ್ರಮ ಜರುಗಿಸಬೇಕು' ಎಂದು ಮನವಿಯಲ್ಲಿ ಆಗ್ರಹಿಸಿದೆ.



ಹಂಪಿಯಲ್ಲಿ ಶುಕ್ರವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಹಂಪಿ ಉತ್ಸವಕ್ಕೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಎಂ.ಎಸ್‌ದಿವಾಕರ್, ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಚಿವರಾದ ಜಮೀರ್ ಅಹ್ಮದ್ ಖಾನ್, ಶಿವರಾಜ ತಂಗಡಗಿ ಇತರರು ಇತರ ವಾದ್ಯಗಳನ್ನು ನುಡಿಸಿದರು – ಪ್ರಜಾವಾಣಿ ಚಿತ್ರ/ ಲವ ಕೆ.

ವಿಜಯನಗರ ವೈಭವ ಮರುಸೃಷ್ಟಿಗಾಗಿ 'ಗ್ಯಾರಂಟಿ' ಜಾರಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ವಿಜಯನಗರದ ಕಾಲದಲ್ಲಿ ವಜ್ರ, ವೈಢೂರ್ಯವನ್ನು ರಸ್ತೆಯಲ್ಲಿ ಅಳೆದು ಕೊಡುತ್ತಿದ್ದರು. ಜನ ಸುಖ, ಸಮೃದ್ಧಿಯಲ್ಲಿ ಇದ್ದರು. ಅದೇ ಸ್ಥಿತಿ ರಾಜ್ಯದಲ್ಲಿ ಮತ್ತೆ ತರಬೇಕು ಎಂಬ ಕಾರಣಕ್ಕೆ 'ಗ್ಯಾರಂಟಿ' ಯೋಜನೆ ಜಾರಿಗೊಳಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹಂಪಿಯಲ್ಲಿ ಶುಕ್ರವಾರ ರಾತ್ರಿ ಹಂಪಿ ಉತ್ಸವವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದ ಅವರು, 'ಯಾವ ಟೀಕೆಗೂ ಜಗ್ಗದೆ ಗ್ಯಾರಂಟಿ ಜಾರಿಗೆ ಬಂದಿದೆ. ಇದು ಮುಂದುವರಿಯಲಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ತೆರಿಗೆಯಲ್ಲಿ ವಂಚಿಸಿದೆ. ಆದರೆ, ರಾಜ್ಯ ಸರ್ಕಾರ ಮಾತ್ರ ಜನರಿಗೆ ಕೊಟ್ಟ ಮಾತು ಈಡೇರಿಸಿದೆ' ಎಂದರು.

'ರಾಜ್ಯದಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಇದೆ. ನಾಲ್ಕು ತಿಂಗಳಿಂದ ಬರ ಪರಿಹಾರಕ್ಕೆ ಕೇಂದ್ರವನ್ನು ಕೇಳುತ್ತಲೇ ಇದ್ದೇವೆ. ನಯಾ ಪೈಸೆ ಕೊಟ್ಟಿಲ್ಲ. ಆದರೆ ನಮ್ಮ ಕಲಾವಿದರು, ಜನರಿಗೆ ಹಂಪಿಯ ವೈಭವವನ್ನು ಮತ್ತೆ ನೆನಪಿಸಲು ಬರಗಾಲ ಇದ್ದರೂ ಉತ್ಸವ ನಡೆಸಲು ತೀರ್ಮಾನಿಸಲಾಗಿದೆ' ಎಂದರು.

ದೇವಳ ಸೇವೆ ಕಾಯ್ದಿರಿಸಲು ಆ್ಯಪ್

ಬನಶಂಕರಿ ಅಮ್ಮನವರ ದೇವಾಲಯಕ್ಕೆ ಸಂಬಂಧಿಸಿದ ಆ್ಯಪ್ ಬಿಡುಗಡೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಸೇವೆಯನ್ನು ಕಾಯ್ದಿರಿಸಲು ಪ್ರತ್ಯೇಕ ಆ್ಯಪ್ ತಯಾರಿಸ-ಲಾಗುತ್ತಿದ್ದು, ಆರಂಭಿಕವಾಗಿ ಬನಶಂಕರಿಯಲ್ಲಿರುವ ಬನಶಂಕರಿ ಅಮ್ಮನವರ ದೇವಾಲಯಕ್ಕೆ ಸಂಬಂಧಿಸಿದ ಆ್ಯಪ್ ಶುಕ್ರವಾರ ಬಿಡುಗಡೆಗೊಂಡಿತು.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಆ್ಯಪ್‌ಗೆ ಚಾಲನೆ ನೀಡಿ ಮಾತನಾಡಿ, 'ಭಕ್ತರ ಅನುಕೂಲಕ್ಕಾಗಿ ರಾಜ್ಯದ ಪ್ರಮುಖ ದೇವಾಲಯಗಳಲ್ಲಿನ ಸೇವೆಗಳನ್ನು ಆನ್‌ಲೈನ್ ಮೂಲಕ ಹಾಗೂ ಮೊಬೈಲ್ ಮೂಲಕ ಕಾಯ್ದಿರಿಸಲು ಪೋರ್ಟಲ್ ಹಾಗೂ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಪ್ರತಿ ದೇವಸ್ಥಾನಕ್ಕೆ ಪ್ರತ್ಯೇಕ ಆ್ಯಪ್ ಇರಲಿದೆ. ಬನಶಂಕರಿ ದೇವಸ್ಥಾನ-ದಲ್ಲಿ ಇದೀಗ ಆರಂಭವಾಗಿದ್ದು, ವಿವಿಧ ದೇವಸ್ಥಾನಗಳಿಗೆ ವಿಸ್ತರಿಸಲಾಗುವುದು' ಎಂದು ತಿಳಿಸಿದರು.

banashankaritemple.com ವೆಬ್‌ಸೈಟ್ ಅಥವಾ sri banashankari temple ಆ್ಯಪ್ ಮೂಲಕ ಈ ದೇವಸ್ಥಾನದ ಸೇವೆಗಳನ್ನು ಕಾಯ್ದಿರಿಸಬಹುದು. ದೇಣಿಗೆ ನೀಡುವುದಕ್ಕೂ ಆ್ಯಪ್‌ನಲ್ಲಿ ಅವಕಾಶ ಇದೆ ಎಂದು ವಿವರಿಸಿದರು.

ರಾಜ್ಯದಲ್ಲಿರುವ 34,563 ಅಧಿಸೂಚಿತ 'ಸಿ' ವರ್ಗದ ದೇವಾಲಯಗಳ ಅರ್ಚಕರಿಗೆ ತಸ್ತೀಕ್ ಮತ್ತು ಅರ್ಚಕರ ಕುಟುಂಬದವರಿಗೆ ನೀಡಲಾಗುವ ಮರಣ ಪರಿಹಾರ ಹಾಗೂ ಅರ್ಚಕರ ಮಕ್ಕಳಿಗೆ ನೀಡಲಾಗುವ ವಿದ್ಯಾರ್ಥಿ ಪ್ರೋತ್ಸಾಹ ಧನವನ್ನು ನೇರವಾಗಿ ಖಾತೆಗೆ ಪಾವತಿಸಲು ಪೋರ್ಟಲ್ ಹಾಗೂ ಮೊಬೈಲ್ ಆ್ಯಪ್ ಅನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.



ದೇವಾಲಯಗಳಲ್ಲಿರುವ ಸೇವೆಗಳನ್ನು ಆನ್‌ಲೈನ್ ಮೂಲಕ ಹಾಗೂ ಮೊಬೈಲ್ ಮೂಲಕ ಕಾಯ್ದಿರಿಸಲು ಶುಕ್ರವಾರ ಪೋರ್ಟಲ್ ಹಾಗೂ ಮೊಬೈಲ್ ಆ್ಯಪ್‌ಗೆ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಶ್ರೀ ಬನಶಂಕರಿ ಅಮ್ಮನವರ ದೇವಸ್ಥಾನದಲ್ಲಿ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಕಾಳೇಗೌಡ ಮತ್ತು ರಮಾನಾಥ್ ನಾಯ್ಡು ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಗಾಣಿಗ ಮಹಾಸಭಾ ಪ್ರತಿಭಟನೆ 5ಕ್ಕೆ

ಬೆಂಗಳೂರು: ಗಾಣಿಗ ಅಭಿವೃದ್ಧಿ ನಿಗಮಕ್ಕೆ ಕಚೇರಿ ಹಾಗೂ ಅನುದಾನ ಒದಗಿಸುವಂತೆ ಆಗ್ರಹಿಸಿ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ಇದೇ 5ರಂದು ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಆನಂದ್ ಕೆ. ಮಂಡ್ಯ, 'ರಾಜ್ಯದಲ್ಲಿ ಸಮಾರು 60 ಲಕ್ಷ ಮಂದಿ ಗಾಣಿಗ ಸಮುದಾಯದವರಿದ್ದು, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ. ನಿಗಮ ಸ್ಥಾಪನೆಗೆ ಸಂಬಂಧಿಸಿದಂತೆ ನಮ್ಮ ಹೋರಾಟಕ್ಕೆ ಮಣಿದ ಹಿಂದಿನ ಬಿಜೆಪಿ ಸರ್ಕಾರ, 2023ರ ಫೆ.20ರಂದು ನಿಗಮ ಸ್ಥಾಪಿಸಿ ಆದೇಶ ಹೊರಡಿಸಿತ್ತು. ನಿಗಮದ ನೋಂದಣಿ ಸೇರಿ ವಿವಿಧ ಪ್ರಕ್ರಿಯೆಗಳು ನಡೆದಿಲ್ಲ. ಈ ಬಗ್ಗೆ ಕಾಂಗ್ರೆಸ್ ಸರ್ಕಾರ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಶಾಂತಿಯುತ ಪ್ರತಿಭಟನೆ ಕೈಗೊಂಡಿದ್ದೇವೆ' ಎಂದು ಹೇಳಿದರು.

ಪತ್ರಕರ್ತರ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಕೆಯುಡಬ್ಲ್ಯುಜೆ) ಇಲ್ಲಿನ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಪತ್ರಕರ್ತರ 38ನೇ ರಾಜ್ಯಮಟ್ಟದ ಸಮ್ಮೇಳನಕ್ಕೆ ಶನಿವಾರ ಚಾಲನೆ ದೊರೆಯಲಿದೆ.

31 ವರ್ಷಗಳ ಬಳಿಕ ದಾವಣಗೆರೆಯಲ್ಲಿ ನಡೆಯುತ್ತಿರುವ ಈ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ರಾಜ್ಯದ ವಿವಿಧೆಡೆಯಿಂದ ಅಂದಾಜು 4,000 ಪತ್ರಕರ್ತರು ಭಾಗಿಯಾಗುವ ನಿರೀಕ್ಷೆ ಇದೆ.

ಶಾಸಕ ಶಾಮನೂರು ಶಿವಶಂಕರಪ್ಪ ಉಪಸ್ಥಿತಿಯಲ್ಲಿ ಸಚಿವ ಎನ್.ಚಲುವರಾಯ ಸ್ವಾಮಿ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಛಾಯಾಚಿತ್ರ ಪ್ರದರ್ಶನವನ್ನು, ಸಚಿವ ಡಾ.ಎಚ್.ಸಿ. ಮಹದೇವಪ್ಪ ವಸ್ತು ಪ್ರದರ್ಶನವನ್ನು, ಸಚಿವ ಎಂ.ಬಿ.ಪಾಟೀಲ್ ವ್ಯಂಗ್ಯಚಿತ್ರ ಪ್ರದರ್ಶನವನ್ನು ಉದ್ಘಾಟಿ-ಸಲಿದ್ದಾರೆ. ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 2ಕ್ಕೆ 'ಕೃತಕ ಬುದ್ಧಿಮತ್ತೆ ಮತ್ತು ಮಾಧ್ಯಮಗಳ ಭವಿಷ್ಯ' ಕುರಿತ ವಿಚಾರಗೋಷ್ಠಿಯನ್ನು ಕೊಪ್ಪಳ ವಿಶ್ವ ವಿದ್ಯಾಲಯ ಕುಲಪತಿ ಪ್ರೊ.ಬಿ.ಕೆ. ರವಿ, 4ಕ್ಕೆ 'ಸ್ಥಳೀಯ ಪತ್ರಿಕೆಗಳು ಹಿಂದೆ-ಇಂದು-ಮುಂದು' ಕುರಿತ ವಿಚಾರ ಗೋಷ್ಠಿಯನ್ನು ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್ ಉದ್ಘಾಟಿಸುವರು.

ಫೆ.4ರಂದು ಬೆಳಿಗ್ಗೆ ಪ್ರತಿನಿಧಿಗಳ ಸಮಾವೇಶ ನಡೆಯಲಿದೆ. 'ಮಾಧ್ಯಮ ಮತ್ತು ಸರ್ಕಾರ ಕುರಿತ' ಸಂವಾದವನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಹಾಗೂ 'ಸಾಮಾಜಿಕ ಮಾಧ್ಯಮ ಮತ್ತು ವೃತ್ತಿ ವಿಶ್ವಾಸಾರ್ಹತೆ' ಕುರಿತ ಗೋಷ್ಠಿ ಯನ್ನು ಹಿರಿಯ ಪತ್ರಕರ್ತರಾದ ಎಸ್.ಕೆ. ಶೇಷಚಂದ್ರಿಕಾ ಉದ್ಘಾಟಿಸುವರು.

ಮಧ್ಯಾಹ್ನ 2ಕ್ಕೆ ಸಮಾರೋಪ ಸಮಾರಂಭದಲ್ಲಿ ಉಪಮುಖ್ಯ-ಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಭಾಗವಹಿಸಲಿದ್ದಾರೆ. 2022-23ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರದಾನವೂ ನಡೆಯಲಿದೆ.



ಹೂಡಿ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡಗಳಿಗೆ ಅರವಿಂದ ಲಿಂಬಾವಳಿ ನಗದು ಬಹುಮಾನ ವಿತರಿಸಿದರು. ಮನೋಹರ ರೆಡ್ಡಿ, ನಟರಾಜ್, ರಾಜೇಶ್, ಹೂಡಿ ಪಿಳ್ಳಪ್ಪ ಪಾಲ್ಗೊಂಡಿದ್ದರು

ಮಹದೇವಪುರ: ವಿವಿಧ ಸೇವಾ ಕಾರ್ಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಜನ್ಮದಿನದ ಅಂಗವಾಗಿ ಮಹದೇವಪುರ ಕ್ಷೇತ್ರದ ಹಲವು ಪ್ರದೇಶಗಳಲ್ಲಿ ವಿವಿಧ ಸೇವಾ ಕಾರ್ಯಗಳು ನಡೆದವು.

ರಕ್ತದಾನ, ನೇತ್ರ ತಪಾಸಣಾ ಶಿಬಿರ, ಸ್ವಚ್ಛ ಮಹದೇವಪುರ ಅಭಿಯಾನ, ಅನ್ನದಾನ, ವಸ್ತ್ರದಾನ, ಶಾಲಾ ಮಕ್ಕಳಿಗೆ ಅಗತ್ಯ ವಸ್ತುಗಳ ವಿತರಣೆ ಮಾಡಲಾಯಿತು.

ಪೌರ ಕಾರ್ಮಿಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಕೋವಿಡ್ ವಾರಿಯರ್ಸ್, ಸರ್ಕಾರಿ ಶಿಕ್ಷಕರು, ಹಿರಿಯ ನಾಗರಿಕರಿಗೆ ಸನ್ಮಾನ, ಅನಾಥಾಶ್ರಮ, ವೃದ್ಧಾಶ್ರಮ ಮತ್ತು ಗೋಶಾಲೆಯಲ್ಲಿ ಸೇವಾ ಕಾರ್ಯಗಳನ್ನು ಕಾರ್ಯಕರ್ತರು ಹಮ್ಮಿಕೊಂಡಿದ್ದರು.

ಹೂಡಿಯ ಹೂಡಿ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ದಕ್ಷಿಣ ವಲಯ ಹಿರಿಯ ಪುರುಷರ ಮತ್ತು ಮಹಿಳೆಯರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಯಲ್ಲಿ ಜಯಶೀಲರಾದ ತಂಡಗಳಿಗೆ ಬಹುಮಾನ ವಿತರಿಸಿದರು.

ಅರವಿಂದ ಲಿಂಬಾವಳಿ ಮಾತನಾಡಿ, ಕ್ಷೇತ್ರದ 116 ಸ್ಥಳಗಳಲ್ಲಿ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಜನರ ಸೇವೆ ಮಾಡಲಾಗಿದೆ ಎಂದು ಹೇಳಿದರು.

ಮಹದೇವಪುರ ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಗ್ರಾಮಾಂತರ ಅಧ್ಯಕ್ಷ ನಟರಾಜ್, ಹೂಡಿ ಪಿಳ್ಳಪ್ಪ, ಎಲ್.ರಾಜೇಶ್, ಗಿರಿರಾಜ್ ಗೌಡ, ಗಗನ್ ಗೌಡ ಪಾಲ್ಗೊಂಡಿದ್ದರು.

'ಸಾಹಿತ್ಯದ ಓದು ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ನಾತಕೋತ್ತರ ಪದವಿ ಅಧ್ಯಯನ ಸಂದರ್ಭದಲ್ಲಿ ಬೋಧಿಸಲಾಗುತ್ತಿದ್ದ ನಿಗದಿತ ಪಠ್ಯಕ್ರಮವಲ್ಲದೇ, ಸಾಹಿತ್ಯವನ್ನೂ ಓದಿದ್ದರಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಅನುಕೂಲವಾಯಿತು' ಎಂದು ಸಹಾಯಕ ಪ್ರಾಧ್ಯಾಪಕಿ ಫರ್ಹಾನಾಜ್ ಅಭಿಪ್ರಾಯಪಟ್ಟರು.

ಬೆಂಗಳೂರಿನ ಕೆ. ನಾರಾಯಣ ಪುರದಲ್ಲಿರುವ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಕನ್ನಡ ವಿಭಾಗದ 'ಕನ್ನಡ ಸಾಹಿತ್ಯ ವೇದಿಕೆ' ವತಿಯಿಂದ ಆಯೋಜಸಲಾಗಿದ್ದ 'ಕಾಫಿ ವಿಥ್ ಕವಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮಗೆ ಬದುಕಿನಲ್ಲಿ ಹಲವು ಸವಾಲುಗಳು ಎದುರಾಗುತ್ತಲೇ ಇರುತ್ತವೆ. ಅವುಗಳನ್ನು ಸಮರ್ಥ ವಾಗಿ ಎದುರಿಸಿದಾಗ ದಕ್ಕುವ ಅನುಭವಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಪಠ್ಯಗಳನ್ನು, ಪಠ್ಯೇತರ ಪುಸ್ತಕ-ಗಳನ್ನೂ ಓದಬೇಕು. ಆಗ ಮಾತ್ರ ನಮ್ಮಲ್ಲಿ ಹೊಸಭಾವನೆಗಳು, ಹೊಸಚಿಂತನೆಗಳು ಮೂಡುತ್ತವೆ. ಸಾಮಾಜಿಕ ಸಂರಚನೆ, ವಿವಿಧ ತಾರತಮ್ಯಗಳ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ. ಅವುಗಳನ್ನು ವಿಮರ್ಶಿಸುವ ಶಕ್ತಿಯೂ ಬರುತ್ತದೆ. ಇನ್ನೊಬ್ಬರಿಗೆ ಧಕ್ಕೆಯಾಗದಂತೆ ಅಭಿವ್ಯಕ್ತಿಸಲು ಸಾಹಿತ್ಯ ಮಾರ್ಗದ ಮೂಲಕ ಸಾಧ್ಯ' ಎಂದು ತಿಳಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಸರ್ವೇಶ್ ಬಿ.ಎಸ್. ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕರಾದ ಚಂದ್ರಶೇಖರ್ ಎನ್., ಸೈಯದ್ ಮುಯಿನ್, ರವಿಶಂಕರ್ ಎ.ಕೆ., ಪ್ರೇಮ್‌ಕುಮಾರ್ ಕೆ., ಕನ್ನಡ ಸಾಹಿತ್ಯ ವೇದಿಕೆಯ ಅಧ್ಯಾಪಕ ಸಂಚಾಲಕರಾದ ಕುಪ್ಪನಹಳ್ಳಿ ಎಂ.ಭೈರಪ್ಪ, ವಿದ್ಯಾರ್ಥಿ ಸಂಚಾಲಕರಾದ ಮಾನಸ ಹಾಗೂ ಭುವನ್ ಉಪಸ್ಥಿತರಿದ್ದರು.

ನಾಳೆ ಬೆಳಿಗ್ಗೆ 4.30ಕ್ಕೆ ಮೆಟ್ರೊ ಆರಂಭ

ಬೆಂಗಳೂರು: ನಮ್ಮ ಮೆಟ್ರೊ ಸಂಚಾರ ಫೆ.4ರಂದು ಬೆಳಿಗ್ಗೆ 7ರ ಬದಲು ಬೆಳಿಗ್ಗೆ 4.30ಕ್ಕೆ ಆರಂಭಗೊಳ್ಳಲಿ-ದೆ. ವಿಶ್ವ ಕ್ಯಾನ್ಸರ್ ದಿನ –ಕ್ಯಾನ್‌ವಾಕ್ ಮತ್ತು ಎಕ್ಸ್.ಎಲ್ ರುನಾಥಾನ್ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಭಾಗವಹಿಸಲು ಅನುಕೂಲವಾಗಲಿ ಎಂದು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳೆ ಪಿಂಚಣಿ ಜಾರಿಗೆ ಆಗ್ರಹ

ಬೆಂಗಳೂರು: ಕರ್ನಾಟಕ ರಾಜ್ಯ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿದಾರರಿಗೆ ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಬೇಕು ಎಂದು 2006ಕ್ಕೂ ಪೂರ್ವದ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತರ ವೇದಿಕೆ ಆಗ್ರಹಿಸಿದೆ.

'2006ಕ್ಕಿಂತ ಮೊದಲು ನೇಮಕಗೊಂಡಿರುವ ಬೋಧಕ, ಬೋಧಕೇತರ ನೌಕರರನ್ನು ಅವರ ನೇಮಕಕ್ಕೆ ಅನ್ವಯವಾಗಿ ಹಳೆ ಪಿಂಚಣಿಗೆ ಸೇರಿಸಬೇಕು. ನಮ್ಮ ನೇಮಕ ಸರ್ಕಾರದ ನಿಯಮಾನುಸಾರ ಆಗಿರುವುದರಿಂದ ಹೊಸ ಪಿಂಚಣಿ ಯೋಜನೆ ನಮಗೆ ಅನ್ವ-ಯವಾಗುವುದಿಲ್ಲ. ಕಾಲ್ಪನಿಕ ವೇತನದ ಸಮಸ್ಯೆ, ಹೊಸ ಪಿಂಚಣಿ ಯೋಜನೆಯ ಕೊಡುಗೆ ಹಣ ಅನ್ವಯವಾಗುವುದಿಲ್ಲ. 2014ರ ಮಸೂದೆ ಅನ್ವಯವಾಗುವು-ದಿಲ್ಲ' ಎಂದು ವೇದಿಕೆ ತಿಳಿಸಿದೆ.

'ಸರ್ಕಾರಿ ನೌಕರರಿಗೆ ಆದೇಶ ಮಾಡಿದ ರೀತಿಯಲ್ಲಿ ನಮಗೂ ಆದೇಶ ಮಾಡಿ ಹಳೆ ಪಿಂಚಣಿ ಒದಗಿಸಬೇಕು. ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ಶಿಕ್ಷಕ ಕಲ್ಯಾಣ ನಿಧಿ ಸ್ಥಾಪಿಸಬೇಕು. ನಿವೃತ್ತರಾದ ಮೇಲೆ ಸಂಧ್ಯಾಕಾಲದ ಜೀವನ ನಡೆಸಲು ನಿರ್ದಿಷ್ಟ ಧನ ಸಹಾಯ ನೀಡಬೇಕು' ಎಂದು ವೇದಿಕೆಯ ರಾಜ್ಯಾಧ್ಯಕ್ಷ ಜಿ.ಆರ್. ಹೆಬ್ಬೂರು, ಪದಾಧಿಕಾರಿಗಳಾದ ಗ.ಪು. ನಾಗೇಶ, ಜಿ.ಪಿ. ನಾಗರಾಜ, ಸಿ.ಡಿ. ರವಿ ಒತ್ತಾಯಿಸಿದ್ದಾರೆ.



ಸುಭಾಷಿತ

ನಮ್ಮಲ್ಲಿ ಬಹುತೇಕರಿಗೆ ಇರುವ ಸಮಸ್ಯೆಯೆಂದರೆ, ನಾವು ಟೀಕೆಗಳಿಂದ ಸರಿದಾರಿಗೆ ಬರುವುದಕ್ಕಿಂತ ಹೆಚ್ಚಾಗಿ ಹೊಗಳಿಕೆಗೆ ಮರುಳಾಗಿ ಹಾಳಾಗುತ್ತೇವೆ.

–ನಾರ್ಮನ್ ವಿನ್ಸೆಂಟ್ ಪೀಲೆ

ಜಾರ್ಖಂಡ್: ಸರ್ಕಾರ ರಚನೆ ವಿಳಂಬ ರಾಜ್ಯಪಾಲರ ನಡವಳಿಕೆ ಪ್ರಶ್ನಾರ್ಹ

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಹಾಮೈತ್ರಿಕೂಟದಿಂದ ಹೊರಗೆ ಬಂದು ಕಳೆದ ಭಾನುವಾರ ರಾಜೀನಾಮೆ ನೀಡಿದರು. ಬಳಿಕ, ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಸೇರಿದರು. ಬಿಹಾರದ ಮುಖ್ಯಮಂತ್ರಿಯಾಗಿ ಭಾನುವಾರ ಸಂಜೆ ಪ್ರಮಾಣವಚನ ಸ್ವೀಕರಿಸಿದರು. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರು ₹ 600 ಕೋಟಿ ಮೌಲ್ಯದ ಆಸ್ತಿ ಖರೀದಿಗೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆಯಾಗಿದೆ ಎಂಬ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬುಧವಾರ ವಿಚಾರಣೆಗೆ ಒಳಗಾದರು. ಅಂದು ಸಂಜೆ ಅವರನ್ನು ಇ.ಡಿ ಬಂಧಿಸಿತು. ಅದಕ್ಕೂ ಮುಂಚೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ, ಆಡಳಿತಾರೂಢ ಜೆಎಂಎಂ ನೇತೃತ್ವದ ಮೈತ್ರಿಕೂಟದ ಶಾಸಕಾಂಗ ಪಕ್ಷದ ನಾಯಕನಾಗಿ ಚಂಪೈ ಸೋರೇನ್ ಅವರನ್ನು ಆಯ್ಕೆ ಮಾಡಲಾಗಿತ್ತು. ಅವರು ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು. ಆದರೆ, ರಾಜ್ಯಪಾಲರು ಅವರನ್ನು ಸರ್ಕಾರ ರಚನೆಗೆ ತಕ್ಷಣವೇ ಆಹ್ವಾನಿಸಲಿಲ್ಲ. ಪ್ರತಿಜ್ಞಾ ವಿಧಿ ಸ್ವೀಕರಿಸಲು ಚಂಪೈ ಅವರು ಶುಕ್ರವಾರದವರೆಗೆ ಕಾಯಬೇಕಾಯಿತು. ಬುಧವಾರ ರಾತ್ರಿಯಿಂದ ಗುರುವಾರ ರಾತ್ರಿಯತನಕ ಜಾರ್ಖಂಡ್ ರಾಜ್ಯಕ್ಕೆ ಮುಖ್ಯಮಂತ್ರಿ ಇಲ್ಲದಂತಹ ಸಾಂವಿಧಾನಿಕ ಬಿಕ್ಕಟ್ಟು ಕೂಡ ಸೃಷ್ಟಿಯಾಯಿತು. ಬಿಹಾರದಲ್ಲಿ ನಿತೀಶ್ ಅವರು ತಕ್ಷಣವೇ ಪ್ರಮಾಣವಚನ ಸ್ವೀಕರಿಸಲೇಬೇಕಾದ ಅಗತ್ಯ ಇರಲಿಲ್ಲ. ಏಕೆಂದರೆ ಅವರು ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು. ಆದರೆ, ಹೇಮಂತ್ ಸೋರೇನ್ ಅವರು ಬಂಧನಕ್ಕೆ ಒಳಗಾಗಿದ್ದರು. ಹಾಗಿದ್ದರೂ ರಾಜ್ಯಪಾಲರು ಸರ್ಕಾರ ರಚನೆಗೆ ಚಂಪೈ ಅವರಿಗೆ ಅವಕಾಶ ನೀಡಲು ವಿಳಂಬ ಮಾಡಿದ್ದು ಏಕೆ ಎಂಬುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಕೇಂದ್ರ ಸರ್ಕಾರ ಮತ್ತು ಬಿಜೆಪಿಯು ರಾಜ್ಯಪಾಲರನ್ನು ದುರುಪಯೋಗಪಡಿಸಿಕೊಂಡು ಬಿಜೆಪಿಯೇತರ ಪಕ್ಷಗಳ ನೇತೃತ್ವದ ರಾಜ್ಯ ಸರ್ಕಾರಗಳನ್ನು ಉರುಳಿಸಲು ಪ್ರಯತ್ನಿಸುತ್ತಿದೆ ಅಥವಾ ಕಿರುಕುಳ ಕೊಡುತ್ತಿದೆ ಎಂದು ವಿರೋಧ ಪಕ್ಷಗಳು ಮಾಡುತ್ತಿರುವ ಆರೋಪವನ್ನು ಈ ನಡವಳಿಕೆಯು ಪುಷ್ಟೀಕರಿಸಿದೆ. ರಾಜ್ಯಪಾಲರ ನಡವಳಿಕೆಯ ಬಗ್ಗೆ ಸಂಸತ್ತಿನಲ್ಲಿಯೂ ಪ್ರಸ್ತಾಪ ಆಗಿದೆ; ವಿರೋಧ ಪಕ್ಷಗಳ ಸಂಸದರು ಲೋಕಸಭೆ ಮತ್ತು ರಾಜ್ಯಸಭೆಯಿಂದ ಸಭಾತ್ಯಾಗ ಮಾಡಿದ್ದಾರೆ.



ಸರ್ಕಾರ ರಚನೆಗೆ ಚಂಪೈ ಅವರಿಗೆ ಅವಕಾಶ ನೀಡಲು ರಾಜ್ಯಪಾಲರು ವಿಳಂಬ ಮಾಡಿದ್ದು ಏಕೆ ಎಂಬುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ

ಚಂಪೈ ಅವರು ಪ್ರಮಾಣವಚನ ಸ್ವೀಕರಿಸಿದ್ದರೂ ಜೆಎಂಎಂ ನೇತೃತ್ವದ ಮೈತ್ರಿಕೂಟದ ಶಾಸಕರನ್ನು ಹೈದರಾಬಾದ್‌ಗೆ ಕರೆತರಲಾಗಿದೆ. ಐದನೇ ತಾರೀಕಿನಂದು ಅವರು ವಿಶ್ವಾಸಮತ ಸಾಬೀತು ಮಾಡಲಿದ್ದಾರೆ. ಅಲ್ಲಿಯವರೆಗೂ ಶಾಸಕರು ಹೈದರಾಬಾದ್‌ನಲ್ಲಿಯೇ ಇರಲಿದ್ದಾರೆ ಎಂದು ಮೈತ್ರಿಕೂಟದ ಮುಖಂಡರು ಹೇಳಿದ್ದಾರೆ. 'ಶಾಸಕರನ್ನು ಬಿಜೆಪಿ ಖರೀದಿಸಿ ಸರ್ಕಾರ ಉರುಳುವಂತೆ ಮಾಡಬಹುದು' ಎಂಬ ಭೀತಿಯು ಆಡಳಿತಾರೂಢ ಮೈತ್ರಿಕೂಟಕ್ಕೆ ಇದೆ. ಒಂದು ಪಕ್ಷದ ಶಾಸಕರಿಗೆ ಆಮಿಷ ಒಡ್ಡಿ ಅಥವಾ ಅವರನ್ನು ಬೆದರಿಸಿ ಸರ್ಕಾರವನ್ನು ಉರುಳಿಸುವ ಕೆಟ್ಟ ಪ್ರವೃತ್ತಿ ಒಂದೆರಡು ದಶಕಗಳಿಂದ ಇದೆ. ಆಡಳಿತಾರೂಢ ಪಕ್ಷದ ಶಾಸಕರನ್ನೇ ಬಳಸಿಕೊಂಡು ಬೇರೊಂದು ಪಕ್ಷವು ಸರ್ಕಾರವನ್ನು ಉರುಳಿಸಿ, ತನ್ನ ನೇತೃತ್ವದಲ್ಲೇ ಸರ್ಕಾರ ಸ್ಥಾಪಿಸುವುದು ನೈತಿಕ ದಿವಾಳಿತನದ ಪರಾಕಾಷ್ಠೆ. ಇಂತಹ ಪ್ರವೃತ್ತಿಯ ಆರಂಭವು ಕರ್ನಾಟಕದಲ್ಲಿಯೇ ಆಯಿತು ಎಂಬುದು ನಮ್ಮ ರಾಜ್ಯದ ರಾಜಕಾರಣದ ಮೇಲೆ ಇರುವ ಕರಿಚುಕ್ಕೆ. ಯಾವ ಪಕ್ಷದ ಚಿಹ್ನೆಯಡಿ ಆರಿಸಿ ಬಂದಿದ್ದಾರೆಯೋ ಆ ಪಕ್ಷಕ್ಕೆ ನಿಷ್ಠವಾಗಿ ಕೆಲವು ಶಾಸಕರು ಇರುವುದಿಲ್ಲ, ಬೇರೊಂದು ಪಕ್ಷಕ್ಕೆ ಹೋಗಲು ಸದಾ ಸಿದ್ಧರಿರುತ್ತಾರೆ ಎಂಬುದು ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕ. ಜಾರ್ಖಂಡ್‌ನಲ್ಲಿ, ಬಿಹಾರದಲ್ಲಿ ಮತ್ತು ಇತರ ಕೆಲವು ರಾಜ್ಯಗಳಲ್ಲಿ ನಡೆದಿರುವುದು ಪ್ರಜಾಸತ್ತೆಯ ಅಪಹಾಸ್ಯವೇ ಹೌದು. ಸಾರ್ವತ್ರಿಕ ಚುನಾವಣೆ ಸನಿಹವಾಗಿರುವ ಈ ಹೊತ್ತಿನಲ್ಲಿ ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳನ್ನು ಉರುಳಿಸುವ ಪ್ರಯತ್ನವು ನೈತಿಕ ರಾಜಕಾರಣ ಅಲ್ಲ. ಹಾಗೆಯೇ, ಹೇಮಂತ್ ಸೋರೇನ್ ಅವರ ಬಂಧನದ ವಿಚಾರದಲ್ಲಿಯೂ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಹಲವು ಪ್ರಶ್ನೆಗಳನ್ನು ಎತ್ತಿವೆ. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ಮಂಡಿಯೂರಿಸಲು ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿವೆ. ಅಕ್ರಮವನ್ನು ಯಾರೇ ಎಸಗಿದ್ದರೂ ಅವರು ಕಾನೂನು ಕ್ರಮವನ್ನು ಎದುರಿಸಲೇಬೇಕು ಎಂಬುದರಲ್ಲಿ ಎರಡು ಮಾತೇ ಇಲ್ಲ. ಆದರೆ, ರಾಜಕೀಯ ಕಾರಣಗಳಿಗಾಗಿ ಕೆಲವೇ ಕೆಲವರನ್ನು ಆಯ್ದು, ತನಿಖೆಗೆ ಒಳಪಡಿಸಲಾಗಿದೆ ಎಂಬ ಭಾವನೆ ಬರುವಂತೆ ತನಿಖಾ ಸಂಸ್ಥೆಗಳ ನಡವಳಿಕೆ ಇರಬಾರದು. ತನಿಖಾ ಸಂಸ್ಥೆಗಳ ನಡವಳಿಕೆಯು ಸ್ವತಂತ್ರವಾಗಿಯೂ ನಿಷ್ಪಕ್ಷಪಾತವಾಗಿಯೂ ಇರಬೇಕು ಎಂಬುದು ಒಂದು ಆದರ್ಶವಷ್ಟೇ ಅಲ್ಲ, ವ್ಯವಸ್ಥೆಗೆ ಅದು ಅನಿವಾರ್ಯವೂ ಹೌದು. ಜೊತೆಗೆ, ತನಿಖಾ ಸಂಸ್ಥೆಯು ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಇದೆ ಎಂಬುದು ತನಿಖೆಗೆ ಒಳಗಾದವರಿಗೂ ಮನವರಿಕೆ ಆಗಬೇಕು. ಆಗ ಕೇಂದ್ರ ಸರ್ಕಾರದತ್ತ ಯಾರೂ ಬೊಟ್ಟು ತೋರುವುದು ಸಾಧ್ಯವಾಗುವುದಿಲ್ಲ. ಆದರೆ, ಈಗ ಆ ರೀತಿ ಇಲ್ಲ ಎಂಬುದು ದುರದೃಷ್ಟಕರ.

ದೇಸಿ ಹಣ್ಣು– ತರಕಾರಿ ಮಾರುಕಟ್ಟೆ ಸಂರಕ್ಷಣೆಗೆ ಬೇಕಿದೆ ಬದ್ಧತೆ

ಕುಲಾಂತರಿ ಉತ್ಪನ್ನ: ಬೇಕು ನಿಯಂತ್ರಣ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ತರಕಾರಿ, ಹಣ್ಣು ಕೊಳ್ಳಲು ಮಾರುಕಟ್ಟೆಗೆ ಹೋದಾಗ, ದೊಡ್ಡ ಗಾತ್ರದ ಪ್ರಖರ ಬಣ್ಣದ ಕೆಲವು ಹಣ್ಣು, ತರಕಾರಿಗಳು ಮೊದಲು ಕಣ್ಣಿಗೆ ಬೀಳುತ್ತವೆ. ಅದರಲ್ಲೂ ಥಾಯ್ಲೆಂಡ್ ಗ್ವಾವ ಅಥವಾ ಥಾಯ್ಲೆಂಡಿನ ಸೀಬೆಕಾಯಿಯು ಜೋಡಿಸಿಟ್ಟ ಹಣ್ಣುಗಳ ಸಾಲಿನಲ್ಲಿ ಎದ್ದುಕಾಣುತ್ತದೆ. ಸೀತಾಫಲದ ಬಿರಿದ ಹೊರಭಾಗ ಹಣ್ಣಾಗಿಬಿಟ್ಟಿದೆ ಎಂದು ಭ್ರಮೆ ಹುಟ್ಟಿಸಿ ಹತ್ತಿರ ಸೆಳೆಯುತ್ತದೆ. ಹೋದ ವರ್ಷ ನಮ್ಮ ಮಾರುಕಟ್ಟೆಯಲ್ಲಿ ಅಷ್ಟಾಗಿ ಇರದಿದ್ದ ಈ ಬಗೆಯ ಹಣ್ಣುಗಳು ಇದ್ದಕ್ಕಿದ್ದಂತೆ ಹೇಗೆ, ಯಾವಾಗ ದೊಡ್ಡ ಮಟ್ಟದಲ್ಲಿ ಪ್ರತ್ಯಕ್ಷವಾದವು, ಇವು ನಮ್ಮ ರೈತರೇ ಬೆಳೆದ ಹಣ್ಣುಗಳೇ ಅಥವಾ ಹೊರದೇಶದಿಂದ ಬಂದಿವೆಯೇ, ದೇಸಿ ತಳಿಯೇ, ಕುಲಾಂತರಿ ತಳಿಗಳೇ ಎಂಬ ಪ್ರಶ್ನೆಗಳು ಏಳುತ್ತವೆ.

ಅದಕ್ಕೆ ಕಾರಣವೂ ಇದೆ. ಹಿಂದಿನ ಐದಾರು ವರ್ಷಗಳಿಂದ ಭಾರತಕ್ಕೆ ಆಮದಾಗಿರುವ ತರಕಾರಿ, ಹಣ್ಣುಗಳ ಪೈಕಿ ಹಲವು ಕುಲಾಂತರಿ ಉತ್ಪನ್ನಗಳು ನಮ್ಮ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ ಎಂಬ ಮಾಹಿತಿ ಇದೆ. ಹೊರದೇಶಗಳಿಂದ ನಮ್ಮಲ್ಲಿಗೆ ಬರುವ ಹಣ್ಣು, ತರಕಾರಿ, ಧಾನ್ಯ ಮತ್ತು ಆಹಾರೋತ್ಪನ್ನಗಳನ್ನು ಪರೀಕ್ಷಿಸಿ ನಿಯಂತ್ರಿಸಲು ಇರುವ ಫುಡ್ ಸೇಫ್ಟಿ ಆ್ಯಂಡ್ ಸ್ಟ್ಯಾಂಡರ್ಡ್ಸ್ ಅಥಾರಿಟಿ ಆಫ್ ಇಂಡಿಯಾ (ಎಫ್‌ಎಸ್‌ಎಸ್‌ಎಐ–ಫಸಾಯ್) ಬಳಿ ಇದರ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ. ಆಮದಾಗಿರುವ ಉತ್ಪನ್ನಗಳ ಪೈಕಿ ಅವು ಕುಲಾಂತರಿಯೇ ಅಲ್ಲವೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಸೂಪರ್ ಮಾರ್ಕೆಟ್‌ಗಳು ಮತ್ತು ಬೀದಿಬದಿಯಲ್ಲೂ ದೊರಕುತ್ತಿರುವ ಈ ಬಗೆಯ ಕೆಲವು ಹಣ್ಣು, ತರಕಾರಿಗಳು ಕುಲಾಂತರಿ ತಳಿಯ ಉತ್ಪನ್ನಗಳಾಗಿದ್ದರೆ ಅವು ನಮ್ಮ ದೇಸಿ ಮಾರುಕಟ್ಟೆಗೆ ಮಾರಕವಾಗಲಿವೆ ಎಂಬ ಆತಂಕ ಒಂದೆಡೆ ಇದ್ದರೆ, ಅವನ್ನು ತಿನ್ನುವವರ ಆರೋಗ್ಯದಲ್ಲಿ ಮುಂಬರುವ ದಿನ, ವರ್ಷಗಳಲ್ಲಿ ಏರುಪೇರು ಕಂಡುಬಂದರೆ ಅದಕ್ಕೆ ಯಾರು ಜವಾಬ್ದಾರರು ಎಂಬ ಪ್ರಶ್ನೆ ಎದ್ದಿದೆ. ವಿಶ್ವದಾದ್ಯಂತ ಒಂದು ಡಜನ್‌ಗೂ ಹೆಚ್ಚು ಕುಲಾಂತರಿ ತಳಿಯ ಉತ್ಪನ್ನಗಳನ್ನು ಬೆಳೆಯಲಾಗುತ್ತಿದ್ದು, ಅಮೆರಿಕ, ಬ್ರೆಜಿಲ್, ಅರ್ಜೆಂಟೀನಾ ದೇಶಗಳು ಮುಂಚೂಣಿಯಲ್ಲಿವೆ. ಸುಮಾರು 28 ದೇಶಗಳು ಬೃಹತ್ ಪ್ರಮಾಣದ ಕುಲಾಂತರಿ ಬೆಳೆಯ ವ್ಯವಸಾಯ ಮಾಡುತ್ತಿವೆ.

ನಮ್ಮ ಆಹಾರ ಸುರಕ್ಷೆ ಮತ್ತು ಮಾನದಂಡ ಕಾಯ್ದೆ–2006ರ ಪ್ರಕಾರ, ಬಿ.ಟಿ. ಹತ್ತಿಯನ್ನು ಹೊರತುಪಡಿಸಿ ಫಸಾಯ್‌ನ ಪರವಾನಗಿ ಇಲ್ಲದೆ ಯಾವುದೇ ಕುಲಾಂತರಿ ಉತ್ಪನ್ನವನ್ನು ಆಮದು ಮಾಡಿಕೊಳ್ಳುವಂತಿಲ್ಲ, ಬೆಳೆಯುವಂತಿಲ್ಲ, ಮಾರುವಂತಿಲ್ಲ ಮತ್ತು ಬಳಸುವಂತಿಲ್ಲ. 2022ರಲ್ಲಿ ಕುಲಾಂತರಿ ಸಾಸಿವೆ ಬೆಳೆಯಲು ಕೇಂದ್ರ ಸರ್ಕಾರ ನೀಡಿದ್ದ ಅನುಮತಿಯ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿರುವುದರಿಂದ ಸದ್ಯಕ್ಕೆ ನಿಷೇಧ ಮುಂದುವರಿದಿದೆ.

ದೇಶಕ್ಕೆ ಆಮದಾಗುತ್ತಿರುವ ಉತ್ಪನ್ನಗಳನ್ನು ಪರೀಕ್ಷಿಸಲು ಯಾವುದಾದರೂ ವ್ಯವಸ್ಥೆ ಇದೆಯೇ ಮತ್ತು ಇದುವರೆಗೆ ನಡೆದಿರುವ ಪರೀಕ್ಷೆಗಳಿಂದ ಒಟ್ಟು ಮಾಡಲಾಗಿರುವ ಮಾಹಿತಿ ಏನು ಎಂಬುದನ್ನು ತಿಳಿದುಕೊಳ್ಳಲು ದೆಹಲಿ ಮೂಲದ 'ಡೌನ್ ಟು ಅರ್ಥ್' ನಿಯತಕಾಲಿಕ ಪ್ರಯತ್ನಿಸಿದೆ. ಹೊಸದಾಗಿ ಆಮದಾಗುತ್ತಿರುವ ಹಣ್ಣು, ತರಕಾರಿ, ಧಾನ್ಯಗಳಲ್ಲಿ ಕುಲಾಂತರಿ ಮಾದರಿಗಳಿವೆಯೇ, ಹಿಂದಿನ ಐದು ವರ್ಷಗಳಲ್ಲಿ ಆಮದಾಗಿರುವ ಹಣ್ಣು, ತರಕಾರಿಗಳಲ್ಲಿ ಕುಲಾಂತರಿ ಉತ್ಪನ್ನಗಳಿದ್ದವೇ ಎಂಬುದನ್ನು ಪರೀಕ್ಷಿಸಲಾಗಿದೆಯೇ ಎಂಬ ಪ್ರಶ್ನೆಗಳನ್ನು ಅದು ಮಾಹಿತಿ ಹಕ್ಕು ಕಾಯ್ದೆಯಡಿ ಫಸಾಯ್‌ಗೆ ಕೇಳಿತ್ತು. ಭಾರತಕ್ಕೆ ಬರುತ್ತಿರುವ ತಾಜಾ ಹಣ್ಣು, ತರಕಾರಿಗಳಲ್ಲಿ ಕುಲಾಂತರಿ ಉತ್ಪನ್ನ ಇರುವ ಕುರಿತು ನಡೆದ ಪರೀಕ್ಷೆಗಳ ಸಾರಾಂಶ ಮತ್ತು ಹೊರ ದೇಶಗಳಿಂದ ಆಮದಾಗುತ್ತಿರುವ ಹಣ್ಣು, ತರಕಾರಿಗಳ ಪಟ್ಟಿ ಮತ್ತು ಅವು ಯಾವ್ಯಾವ ದೇಶಗಳಿಂದ ಬರುತ್ತಿವೆ ಎಂಬ ಮಾಹಿತಿಗಳನ್ನು ಸಹ ಕೇಳಿತ್ತು.

ಫಸಾಯ್‌ನಿಂದ ದೊರೆತ 'ಅಗತ್ಯ ಮಾಹಿತಿ ಈ ವಿಭಾಗದಲ್ಲಿ ಲಭ್ಯವಿಲ್ಲ' ಎಂಬ ಉತ್ತರ ತುಂಬಾ ನಿರಾಶಾದಾಯಕ ಆಗಿತ್ತು. ಕುಲಾಂತರಿ ತಳಿಯ ಆಹಾರೋತ್ಪನ್ನಗಳ ನಿಯಂತ್ರಣ ಕುರಿತ ಆದೇಶ ಹೊರಡಿಸುವುದು ಇನ್ನೂ ಬಾಕಿ ಇದೆ. ಆದರೆ 2020ರಲ್ಲಿ ಮತ್ತು ತದನಂತರ ಹೊರಡಿಸಿದ ಬಿಡಿ ಆದೇಶಗಳ ಪ್ರಕಾರ, ನಮಗೆ ಆಹಾರೋತ್ಪನ್ನಗಳನ್ನು ರಫ್ತು ಮಾಡುವ ದೇಶಗಳು ತಮ್ಮ ಉತ್ಪನ್ನಗಳ ಜೊತೆಗೆ ಅವು ಕುಲಾಂತರಿಮುಕ್ತ ಉತ್ಪನ್ನಗಳು ಎಂಬ ಪ್ರಮಾಣಪತ್ರ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂಬ ಉತ್ತರ ಬಂತು. ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಗಮನಿಸಿದಾಗ, ಪ್ರತಿಯೊಂದು ಆದೇಶವೂ ಕುಲಾಂತರಿ ಆಹಾರೋತ್ಪನ್ನಗಳ ಆಮದಿನ ಮೇಲಿದ್ದ ಕಠಿಣ ಕ್ರಮಗಳನ್ನು ಸಡಿಲಗೊಳಿಸಿದ ಅಂಶ ಬೆಳಕಿಗೆ ಬಂತು.

2020ರ ಆಗಸ್ಟ್ 21ರಂದು ಹೊರಡಿಸಿದ ಆದೇಶದಲ್ಲಿ, ರಫ್ತು ಮಾಡುವ ಪ್ರತಿಯೊಂದು ದೇಶವೂ ತಾನು ಕಳಿಸುತ್ತಿರುವ ಉತ್ಪನ್ನದ ಜೊತೆಗೆ 'ಕುಲಾಂತರಿಮುಕ್ತ' ಎಂದು ಘೋಷಿಸುವ ರಾಷ್ಟ್ರ ಮಟ್ಟದ ಸಂಸ್ಥೆಯೊಂದರ ಪ್ರಮಾಣಪತ್ರವನ್ನು ಕಳಿಸಲೇಬೇಕು ಎಂಬ ನಿಬಂಧನೆಯಿತ್ತು. ಅದು ಸೇಬು, ಬದನೆಕಾಯಿ, ಚಿಕೋರಿ, ಅನಾನಸ್, ಪಪ್ಪಾಯ, ಮೆಕ್ಕೆಜೋಳ, ಆಲೂಗಡ್ಡೆ, ಅಗಸೆ, ಅಕ್ಕಿ, ಕಬ್ಬು, ಟೊಮ್ಯಾಟೊ, ಸೋಯಾಬೀನ್ ಸೇರಿದಂತೆ ಒಟ್ಟು 24 ವಿವಿಧ ಆಹಾರೋತ್ಪನ್ನಗಳಿಗೆ ಅನ್ವಯಿಸುತ್ತಿತ್ತು. ಹೊರದೇಶಗಳಲ್ಲೆಲ್ಲಾ ಇವುಗಳ ಕುಲಾಂತರಿ ತಳಿಗಳು ಬಹಳಷ್ಟು ಪ್ರಮಾಣದಲ್ಲಿವೆ ಮತ್ತು ಭಾರತಕ್ಕೆ ಆಮದಾಗುವ ಆಹಾರೋತ್ಪನ್ನಗಳಲ್ಲಿ ಇವು ಪ್ರಮುಖವಾಗಿವೆ.



2021ರ ಫೆಬ್ರುವರಿ 8ರ ಆದೇಶದಂತೆ, ಆಮದಾಗುವ ಆಹಾರೋತ್ಪನ್ನಗಳ ಪೈಕಿ ಶೇ 1ರಷ್ಟು ಕುಲಾಂತರಿ ವಿಧಗಳಿಗೆ ಅವಕಾಶ ನೀಡಲಾಗಿದೆ. ಉದ್ದೇಶಪೂರಿತವಲ್ಲದ ಇರುವಿಕೆ ಇದಾಗಿದ್ದು, ಅದರ ಪ್ರಮಾಣ ಅತ್ಯಂತ ಕಡಿಮೆ ಇರುತ್ತದೆ ಮತ್ತು ಅದನ್ನು ಮಿತಿಗೊಳಿಸಲಾಗಿದೆ ಎಂಬ ಅಭಿಪ್ರಾಯ ಫಸಾಯ್‌ನದ್ದು. ಸಾವಿರಾರು ಕೃಷಿ ತಜ್ಞರು, ರೈತರು, ಬಳಕೆದಾರರು ಮತ್ತು ಕಾರ್ಯಕರ್ತರನ್ನು ಒಳಗೊಂಡಿರುವ 'ಜಿಎಂಫ್ರೀ ಇಂಡಿಯಾ' ಸಂಸ್ಥೆಯು ಶೇಕಡ 1 ಕೂಡ ತುಂಬಾ ದೊಡ್ಡ ಪ್ರಮಾಣವೆ ಎಂದಿದ್ದು, ಅದನ್ನು ಶೇ 0.01ಕ್ಕೆ ಇಳಿಸಬೇಕು ಎಂದು ಒತ್ತಾಯಿಸಿದೆ. ಫಸಾಯ್‌ನ 2021, ಫೆಬ್ರುವರಿ 8ರ ಮೂರನೇ ಆದೇಶದಲ್ಲಿ, ರಫ್ತು ಮಾಡುವ ಉತ್ಪನ್ನದ ಬಗ್ಗೆ ರಾಷ್ಟ್ರ ಮಟ್ಟದ ಸಂಸ್ಥೆಯ ಪ್ರಮಾಣಪತ್ರದ ಬದಲಿಗೆ ಸ್ಥಳೀಯ ಅಧಿಕೃತ ಸರ್ಕಾರಿ ಸಂಸ್ಥೆಯೊಂದರ ಪ್ರಮಾಣಪತ್ರ ಸಾಕು ಎಂಬುದು ನಮೂದಾಗಿದೆ.

ಭಾರತದ ಶೇ 2ರಷ್ಟು ಪ್ರಯೋಗಾಲಯಗಳು ಮಾತ್ರ ಆಹಾರೋತ್ಪನ್ನವು ಕುಲಾಂತರಿ ಹೌದೋ ಅಲ್ಲವೋ ಎಂಬುದನ್ನು ಪತ್ತೆ ಮಾಡಬಲ್ಲವು. ಕುಲಾಂತರಿ ವಿಧಗಳನ್ನು ಹೆಚ್ಚಾಗಿ ಬೆಳೆಯುವ ಅಮೆರಿಕ, ಬ್ರೆಜಿಲ್ ಮತ್ತು ಅರ್ಜೆಂಟೀನಾ ನಮಗೆ ಅತಿಹೆಚ್ಚು ಆಹಾರ ಪದಾರ್ಥವನ್ನು ರಫ್ತು ಮಾಡುತ್ತಿವೆ. ಅಮೆರಿಕ 2018-22ರ ಅವಧಿಯಲ್ಲಿ ₹ 1,811 ಕೋಟಿ ಮೌಲ್ಯದ ಸೇಬಿನ ಹಣ್ಣುಗಳನ್ನು ನಮಗೆ ರಫ್ತು ಮಾಡಿತ್ತು. ಇದು ಭಾರತದ ಒಟ್ಟು ಸೇಬು ಆಮದಿನ ಶೇ 17ರಷ್ಟಿತ್ತು. ಹಿಂದಿನ ದಶಕದಲ್ಲಿ ಶೇ 25ರಷ್ಟು ತಾಜಾ ಹಣ್ಣು, ತರಕಾರಿಗಳು ಹೊರದೇಶಗಳಿಂದ ಬರುತ್ತಿದ್ದವು. ಈಗಲೂ ಬರುತ್ತಿವೆ.

ದೆಹಲಿ ಮೂಲದ 'ಜೀನ್ ಕ್ಯಾಂಪೇನ್' ಸಂಸ್ಥೆಯ ಸುಮನ್ ಸಹಾಯ್, 'ಆಮದಾಗುತ್ತಿರುವ ಕುಲಾಂತರಿ ಹಣ್ಣು, ತರಕಾರಿ ಮತ್ತು ಆಹಾರೋತ್ಪನ್ನಗಳನ್ನು ಪತ್ತೆ ಮಾಡುವ ಸದೃಢ ವ್ಯವಸ್ಥೆಯಾಗಲೀ ನಿಗಾವಣೆಯಾಗಲೀ ನಮ್ಮಲ್ಲಿ ಇಲ್ಲ ಮತ್ತು ಪರೀಕ್ಷಿಸಲು ಬೇಕಾದ ಬಹಳಷ್ಟು ಸಂಖ್ಯೆಯ ನುರಿತ ತಜ್ಞರು ಇಲ್ಲ' ಎನ್ನುತ್ತಾರೆ. ಸುಸ್ಥಿರ ಕೃಷಿ ಪದ್ಧತಿಯ ಅನುಷ್ಠಾನಕ್ಕಾಗಿ ದುಡಿಯುತ್ತಿರುವ 'ಅಲಯನ್ಸ್ ಫಾರ್ ಸಸ್ಟೆನಬಲ್ ಆ್ಯಂಡ್ ಹೋಲಿಸ್ಟಿಕ್ ಅಗ್ರಿಕಲ್ಚರ್' ಸಂಸ್ಥೆಯ ಕವಿತಾ ಕುರಗಂಟಿ, 'ಕುಲಾಂತರಿ ಬೆಳೆ ಮುಕ್ತ ದೇಶಗಳಿಂದ ಆಹಾರ ಪದಾರ್ಥ ತರಿಸಿಕೊಂಡಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ದೊರಕಬಲ್ಲದು ಮತ್ತು ಸದ್ಯಕ್ಕೆ ಆಮದಾಗುತ್ತಿರುವ ಉತ್ಪನ್ನಗಳಿಗೆ 'ಕುಲಾಂತರಿಮುಕ್ತ' ಎಂಬ ಹಣೆಪಟ್ಟಿ ಇದ್ದರೂ ಉತ್ಪನ್ನಗಳನ್ನು ಪರೀಕ್ಷಿಸಿಯೇ ಬಳಕೆಗೆ ತೆಗೆದುಕೊಳ್ಳಬೇಕು' ಎನ್ನುತ್ತಾರೆ.

ಈಗಾಗಲೇ ಕುಲಾಂತರಿ ಬಾಳೆಹಣ್ಣನ್ನು ಬೆಳೆಯಲು ಸಿದ್ಧವಾಗಿರುವ ಆಸ್ಟ್ರೇಲಿಯಾ, ಅನುಮತಿಗಾಗಿ ಕಾಯುತ್ತಿದೆ. ಹೊರದೇಶಗಳಿಂದ ಕುಲಾಂತರಿ ವಿಧಗಳು ದಾಂಗುಡಿ ಇಟ್ಟರೆ, ದೇಸಿ ತಳಿಗಳ ಗತಿಯೇನು? ಇಲ್ಲಿನ ರೈತರ ಪಾಡೇನು? ತಿನ್ನುವ ಜನರ ಆರೋಗ್ಯದ ಗತಿಯೇನು?

ಚುರುಮುರಿ



ಫ್ಯಾಮಿಲಿ ಬಜೆಟ್!

• ಗುರು ಪಿ.ಎಸ್.

'ರೀ... ರೀ...' ಕೂಗಿದಳು ಹೆಂಡತಿ.

'ಯಾಕ್ ಅಷ್ಟು ಜೋರಾಗಿ ಕೂಗ್ತಿದೀಯ' ಟೀ ಕುಡೀತಾ ಕೇಳ್ದೆ.

'ನಮ್ ಫ್ಯಾಮಿಲಿ, ನಿಮ್ ಫ್ಯಾಮಿಲಿ ಸೇರಿಸಿ, ಎರಡೂ ಕುಟುಂಬಗಳಿಗೆ ಒಂದ್ ಬಜೆಟ್ ಮಾಡಿದ್ರ ಹೇಗಿರುತ್ತೆ? ಹೇಗಿದ್ರೂ ಎಲ್ಲ ಒಂದೇ ಬಿಲ್ಡಿಂಗ್‌ನಲ್ಲಿದೀವಲ್ಲ' ಬಜೆಟ್ ಕುರಿತ ಸುದ್ದಿ ಓದುತ್ತಾ ಐಡಿಯಾ ಹೊರಹಾಕಿದಳು ಪತ್ನಿ.

'ನಿಮ್ಮವರನ್ನೂ ಸೇರಿಸಿ ಬಜೆಟ್ ಮಾಡೋಕೆ ನಿಮ್ಮ ಫ್ಯಾಮಿಲಿಯವರೇನು ಕೋಟ್ಯಧೀಶರು ನೋಡು' ಅಣಕಿಸಿದೆ.

'ದೇಶಕ್ಕೇ ಆಗಲಿ, ಮನೆಗೇ ಆಗಲಿ ಒಂದು ಆರ್ಥಿಕ ಶಿಸ್ತು ಅನ್ನೋದು ಬೇಕು ರೀ... ಯೋಜನೆ ಇರಬೇಕು, ಭವಿಷ್ಯದ ಬಗ್ಗೆ ಕನಸಿರಬೇಕು'.

'ಕೊರೀಬೇಡ ತಾಯಿ, ಅದೇನ್ ಮಾಡ್ತೀಯೋ ಮಾಡು'.

'ಎಲ್ಲರೂ ಸ್ಯಾಲರಿ ನನ್ನ ಕೈಯಲ್ಲೇ ಕೊಡಬೇಕು. ಅದರಲ್ಲಿ ಯಾರಿಗೆಷ್ಟು ಹಂಚಬೇಕು, ಭವಿಷ್ಯಕ್ಕೆ ಏನು ಮಾಡಬೇಕು ಎಲ್ಲ ನಾನು ಪ್ಲ್ಯಾನ್ ಮಾಡ್ತೀನಿ'.

'ಆಯ್ತು' ಎಂದೆ. ಮೊದಲ ತಿಂಗಳಲ್ಲೇ 'ಫ್ಯಾಮಿಲಿ ಬಜೆಟ್' ಸಿದ್ಧವಾಯಿತು.

'ಇದೇನೇ ಇದು, ನಿಮ್ಮ ಫ್ಯಾಮಿಲಿಯವರಿಗೇ ಹೆಚ್ಚು ದುಡ್ಡು ಕೊಟ್ಟಿದೀಯ?' ಸಿಟ್ಟಿನಲ್ಲೇ ಕೇಳಿದೆ.

'ರೀ ನಿಮ್ ಮನೆಯವರು 8 ಜನ ಇದೀರಿ, ನಮ್ ಫ್ಯಾಮಿಲಿಯಲ್ಲಿ 16 ಜನ ಇದಾರೆ. ಅವರಿಗೆ ಜಾಸ್ತಿ ಕೊಡೋದು ನ್ಯಾಯ ಅಲ್ವಾ?'

'ಹಂಗಲ್ವೆ, ನಮ್ ಫ್ಯಾಮಿಲಿಯಲ್ಲಿ ಐದು ಜನ ದುಡೀತಾರೆ, ಎಲ್ಲರದ್ದೂ ಜಾಸ್ತಿ ಸ್ಯಾಲರಿ. ಹೆಚ್ಚು ದುಡಿಯೋ ಕೆಳಗಡೆ ಮನೆಯವರಿಗೆ ಕಡಿಮೆ ದುಡ್ಡು ಕೊಟ್ಟು, ಕಡಿಮೆ ಸಂಪಾದನೆ ಮಾಡೋ ಮೇಲಿನ ಮನೆಯವರಿಗೆ ಜಾಸ್ತಿ ಕೊಟ್ಟಿದೀಯಲ್ಲ. ಇದು ಅನ್ಯಾಯ. ಅವರವರ ಸಂಪಾದನೆಗೆ ತಕ್ಕಂತೆ ಫಲ ಸಿಗಲಿ. ಇಲ್ಲದಿದ್ದರೆ ಬೇರೆ ಆಗೋಣ'.

'ದುಡ್ಡಿಗಾಗಿ ಬೇರೆಯಾಗೋಣ ಅನ್ನೋ ನೀವು ಕುಟುಂಬ ದ್ರೋಹಿ ಕಣ್ರೀ' ಬೈಯತೊಡಗಿದಳು ಹೆಂಡತಿ.

'ಹೆಚ್ಚು ದುಡ್ಡು ಕೊಟ್ರೂ ದ್ರೋಹಿ ಅನ್ನಿಸ್ಕೊಬೇಕಲ್ಲ, ನನ್ ಕರ್ಮ' ಅಂದುಕೊಂಡು ಸಿಟ್ಟಿನಿಂದ ಹೊರಬಂದೆ.

ದಿನದ ಟ್ವೀಟ್

ಶಿಕ್ಷಣದ ವ್ಯಾಪಾರೀಕರಣ ಸಲ್ಲ



ನಾನು ಈಗಷ್ಟೇ ಲೆಕ್ಕಾಚಾರ ಹಾಕಿದ ಪ್ರಕಾರ, ಭಾರತದಲ್ಲಿ ಕಿಂಡರ್ ಗಾರ್ಡನ್‌ನಿಂದ 12ನೇ ತರಗತಿಯವರೆಗೆ ಮತ್ತು ಬಿಎಸ್ಸಿಯಲ್ಲಿ ಅತ್ಯುತ್ತಮವಾದ ಶಿಕ್ಷಣ ಪಡೆಯಲು ನನಗೆ ಖರ್ಚಾದ ಒಟ್ಟು ಮೊತ್ತ ಸುಮಾರು ₹ 15,000, ಅಂದರೆ ಇದು 200 ಡಾಲರ್‌ಗಳಿಗಿಂತ ಕಡಿಮೆ. ಇದು ಸಾಧ್ಯವಾಗಿದ್ದು 1978– 1994ರ ಅವಧಿಯಲ್ಲಿ. ಕೈಗೆಟಕುವಂತಿದ್ದ ಶಿಕ್ಷಣವೊಂದೇ ನನ್ನನ್ನು ಇಂದು ಈ ಸ್ಥಾನಕ್ಕೆ ತಂದು ನಿಲ್ಲಿಸಿದೆ. ಸರ್ವರಿಗೂ ಉಚಿತ ಸಾರ್ವತ್ರಿಕ ಶಿಕ್ಷಣ ಸಿಗಬೇಕೆಂಬುದು ನನ್ನ ಕನಸು.

ಭ್ರಮರ್ ಮುಖರ್ಜಿ, ವಿಜ್ಞಾನಿ

ಕಿಡಿನುಡಿ

ಅಭಿವೃದ್ಧಿ, ಜನಕಲ್ಯಾಣ ಕಾರ್ಯಗಳನ್ನು ಸಂಪೂರ್ಣವಾಗಿ ಮರೆತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ, ಎಲ್ಲೆಂದರಲ್ಲಿ ಭ್ರಷ್ಟಾಚಾರದ ಅಂಗಡಿಗಳನ್ನು ತೆರೆಯುವುದರ ಜತೆಗೆ ಹೆಜ್ಜೆ ಹೆಜ್ಜೆಗೂ ಎಟಿಎಂ ಮಾದರಿ ಕಮಿಷನ್ ಕೌಂಟರ್‌ಗಳನ್ನೂ ತೆರೆದು ಕುಳಿತಿದೆ.



ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಬುಧವಾರ, 3-2-1999

• ಕಡುಬಡವರಿಗೆ ಪಡಿತರ ಬೆಲೆ ಏರಿಕೆ ಇಲ್ಲ

ನವದೆಹಲಿ, ಫೆ. 2– ಬಿಜೆಪಿಯ ಮಿತ್ರ ಪಕ್ಷಗಳ ಒತ್ತಡಕ್ಕೆ ಮಣಿದು ಕಡುಬಡವರಿಗೆ ಅನ್ವಯಿಸುವ ಪಡಿತರ ಆಹಾರಧಾನ್ಯಗಳ ಮೇಲೆ ಕಳೆದ ವಾರ ಏರಿಸಿದ್ದ ಬಜೆಟ್ ಪೂರ್ವ ಬೆಲೆಗಳನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿತು.

ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಪಾಲ್ಗೊಂಡಿರುವ ಪಕ್ಷಗಳ ಸಮನ್ವಯ ಸಮಿತಿಯ ಇಂದಿನ ಸಭೆಯಲ್ಲಿ ಬಂದ ಒತ್ತಡದ ಹಿನ್ನೆಲೆಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಈ ನಿರ್ಧಾರ ಕೈಗೊಂಡರು.

• ಸಂಘ ಪರಿವಾರಕ್ಕೆ ಅಂಕುಶ ಬಿಜೆಪಿ ಮಿತ್ರಪಕ್ಷಗಳ ಯತ್ನ

ನವದೆಹಲಿ, ಫೆ. 2– ಬಿಜೆಪಿಯು ತನ್ನ ಸಂಘ ಪರಿವಾರದಿಂದ ಕೇಂದ್ರದ ಸಮ್ಮಿಶ್ರ ಸರ್ಕಾರದ ನೀತಿಗಳಿಗಾಗಲಿ ಅಥವಾ ಅದರ ಘನತೆಗಾಗಲಿ ಧಕ್ಕೆ ಉಂಟು ಮಾಡದಂತೆ ನೋಡಿಕೊಳ್ಳಬೇಕೆಂದು ಸಮನ್ವಯ ಸಮಿತಿಯು ಇಂದು ಗಟ್ಟಿ ನಿರ್ಧಾರ ಕೈಗೊಳ್ಳುವ ಮೂಲಕ, ಸಂಘ ಪರಿವಾರಕ್ಕೆ ಅಂಕುಶ ಹಾಕುವ ಯತ್ನ ಮಾಡಿತು.

ಈ ಸಮ್ಮಿಶ್ರ ಸರ್ಕಾರದ ಒಕ್ಕೂಟದಲ್ಲಿ ಬಿಜೆಪಿಯು ದೊಡ್ಡ ಪಕ್ಷ. ಆದರೆ, ಅಂದ ಮಾತ್ರಕ್ಕೆ ಅದರ ಸಿದ್ಧಾಂತಗಳನ್ನು ಒಪ್ಪಿರುವ ಅದರ ಸಹೋದರ ಸಂಘಟನೆಗಳು, ಈ ಸಮ್ಮಿಶ್ರ ನೀತಿಗಳು ಮತ್ತು ಅದರ ಘನತೆ ಹಾಗೂ ಸಂಬದ್ಧತೆಗೆ ಧಕ್ಕೆ ಉಂಟು ಮಾಡಕೂಡದು. ಈ ಬಗೆಗೆ ಬಿಜೆಪಿಯು ಅವಶ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಂಟಿ ಘೋಷಣೆಯಲ್ಲಿ ತಿಳಿಸಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 3-2-1974

• ಪರಿಪೂರ್ಣ ವ್ಯಕ್ತಿಗಳ ತಯಾರಿಕೆಯೇ ಉನ್ನತ ಶಿಕ್ಷಣದ ಪ್ರಥಮ ಧ್ಯೇಯ

ಧಾರವಾಡ, ಫೆ. 2– ಉದಾತ್ತ ಧ್ಯೇಯಗಳನ್ನು ಹೊಂದಿದ ಪರಿಪೂರ್ಣ ವ್ಯಕ್ತಿಗಳನ್ನು ತಯಾರು ಮಾಡುವುದೇ ಉನ್ನತ ಶಿಕ್ಷಣದ ಪ್ರಥಮ ಧ್ಯೇಯವಾಗಬೇಕೆಂದು ಸುಪ್ರೀಂ ಕೋರ್ಟಿನ ಖ್ಯಾತ ವಕೀಲ ಎನ್. ಪಾಲ್ಕಿವಾಲಾ ಅವರು ಇಂದು ಇಲ್ಲಿ ತಿಳಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ 24ನೇ ವಾರ್ಷಿಕ ಘಟಿಕೋತ್ಸವ ಭಾಷಣ ಮಾಡುತ್ತಾ 'ದೇಶ ಇಂದು ಎದುರಿಸುತ್ತಿರುವ ಸಮಸ್ಯೆಗಳನ್ನು ಶ್ರಮ ಮತ್ತು ನಿಷ್ಠೆಯಿಂದ ಕೆಲಸ ಮಾಡುವ ಮೂಲಕ ನಿವಾರಿಸಬಹುದೇ ಹೊರತು ಘೋಷಣೆಗಳಿಂದ ಅಲ್ಲ' ಎಂದರು.

• ಮುಖ್ಯಮಂತ್ರಿ ವಿರುದ್ಧ ಶಿಸ್ತುಕ್ರಮ ಪ್ರಧಾನಿಗೆ ಸಾಗರ್ ಪತ್ರ

ಬೆಂಗಳೂರು, ಫೆ. 2– ಮುಖ್ಯಮಂತ್ರಿ ದೇವರಾಜ ಅರಸು ಅವರು ಗುರುವಾರ ಸೊಂಡೂರಿನಲ್ಲಿ ಆಡಿದ ನುಡಿಗಳು ಪಕ್ಷದ ಶಿಸ್ತನ್ನು ಮತ್ತು ಶಾಸಕರ ಹಕ್ಕು, ಬಾಧ್ಯತೆಗಳನ್ನು ಮುರಿದಿವೆ ಎಂದು ಆಪಾದಿಸಿರುವ ವಿಧಾನಸಭಾ ಸದಸ್ಯ ದಯಾನಂದ ಸಾಗರ್ ಅವರು, ಮುಖ್ಯಮಂತ್ರಿಯವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಪ್ರಧಾನಿಗೆ ಪತ್ರ ಬರೆದು ಆಗ್ರಹ ಸಲ್ಲಿಸಿದ್ದಾರೆ.

ಅರಸು ಅವರು ಪ್ರತಿಯೊಬ್ಬ ಶಾಸಕನ ನಿಷ್ಠೆ ಮತ್ತು ಚಾರಿತ್ರ್ಯವನ್ನು ಪ್ರಶ್ನಿಸಿದ್ದಾರೆ ಎಂದು ಸಾಗರ್ ಹೇಳಿದ್ದಾರೆ.

ಸಂಗತ

ಸಹಜವೇ ಅಸಹಜವಾದಾಗ...

ಶುದ್ಧವಾಗಿ ಕನ್ನಡ ಮಾತನಾಡುವುದೇ ಅಸಹಜವಾಗಿ ಕಾಣುತ್ತಿರುವ ಹೊತ್ತಿದು!

• ಪ್ರಸಾದ ಶೆಣೈ

ಶುದ್ಧ ಕನ್ನಡ ಮಾತನಾಡಿದರೆ, ಕನ್ನಡದಲ್ಲಿರುವ ಪದಗಳನ್ನೇ ಸಹಜವಾಗಿ ಬಳಸಿದರೆ 'ನೀವು ಶುದ್ಧ ಕನ್ನಡ ಮಾತಾಡುತ್ತೀರಿ, ಆ ಸಾಹಿತ್ಯಕ ಪದಗಳೆಲ್ಲ ನಮಗೆ ಅರ್ಥವಾಗೋದು ಕಷ್ಟ ಸರ್, ಸ್ವಲ್ಪ ಬಿಡಿಸಿ ಹೇಳಿ' ಎಂದು ಈಗಿನ ವಿದ್ಯಾರ್ಥಿಗಳು ಹೇಳಿದಾಗ ಗಾಬರಿಯಾಗುತ್ತದೆ. ಅಷ್ಟಕ್ಕೂ ನಾನು ಬಳಸಿದ ಧನ್ಯತೆ, ಬಿಸಿಲುಕೋಲು, ಸಾರ್ಥಕತೆಯಂತಹ ಪದಗಳೆಲ್ಲಾ ತೀರಾ ಕಷ್ಟವಾದ, ಸುಲಭಕ್ಕೆ ಅರ್ಥಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು ಆಗದ ಪದಗಳೇ ಎಂದು ಯೋಚಿಸುವಂತೆ ಆಗುತ್ತದೆ.

ಹಾಗಿದ್ದರೆ, ಮುಂದೆ ವಿದ್ಯಾರ್ಥಿಗಳ ಜೊತೆ ಇನ್ನೆಷ್ಟು ಸರಳವಾಗಿ ಮಾತನಾಡಬೇಕು ಎಂದು ಯೋಚಿಸುವಾಗ, ಕನ್ನಡ ಮೇಷ್ಟ್ರೊಬ್ಬರ ಅನುಭವದ ಮಾತು ಇನ್ನಷ್ಟು ವಾಸ್ತವವನ್ನು ಮುಂದಿರಿಸುತ್ತದೆ. 'ಈಗಿನ ವಿದ್ಯಾರ್ಥಿಗಳು ಹಾಗೇ ಸರ್. ಪದವಿ ಓದುತ್ತಿದ್ದರೂ ಅವರಿಗೆ ಕನ್ನಡದ ಎಷ್ಟೋ ಸಹಜ ಪದಗಳೇ ಗೊತ್ತಿಲ್ಲ. ದಿನನಿತ್ಯ ನಾವು ಕಾಣುವ ಕೆಲವೊಂದು ವಸ್ತುಗಳಿಗೆ ಏನೆನ್ನುತ್ತಾರೆ, ನಮ್ಮ ಕೆಲವು ಅನುಭವಗಳನ್ನು ಯಾವ ಪದಗಳಿಂದ ಹೇಳಿಕೊಳ್ಳುವುದು ಎಂದೆಲ್ಲಾ ಗೊಂದಲಕ್ಕೆ ಬೀಳುತ್ತಾರೆ. ಭಾಷೆ, ಶಬ್ದ, ಅರ್ಥ, ಅವುಗಳ ಜೊತೆಗೆ ಬೆಸೆದುಕೊಂಡಿರುವ ಭಾವಗಳನ್ನು ಅವರು ಅರ್ಥಮಾಡಿಕೊಳ್ಳುತ್ತಿಲ್ಲ ಅಥವಾ ಅವರಿಗೆ ಅರ್ಥವಾಗುತ್ತಿಲ್ಲ. ಪಠ್ಯದಲ್ಲಿರುವ ಸರಳವಾದ ತೇಜಸ್ವಿಯವರ ಬರಹ, ಕೆ.ಎಸ್.ನರಸಿಂಹಸ್ವಾಮಿ ಅವರ ಸರಳ ಪದ್ಯ, ಸಾಮಾನ್ಯ ಕನ್ನಡದಲ್ಲಿರುವ ಲೇಖನಗಳು, ಸಣ್ಣಪುಟ್ಟ ಹೋಲಿಕೆಗಳನ್ನು ನಾವು ಎಷ್ಟೇ ಸರಳ, ಸುಂದರ ಭಾಷೆಯಲ್ಲಿ, ಶಬ್ದಗಳಲ್ಲಿ ಹೇಳಿದರೂ ಅದು ಅವರಿಗೆ ಸರಳ ಎಂದು ಅನ್ನಿಸುವುದೇ ಇಲ್ಲ. ಅದ್ಯಾವುದೋ ಆಳದಿಂದ ಪಾತಾಳಗರಡಿ ಹಾಕಿ ಎತ್ತಿಕೊಂಡು ತಂದಂತಹ ಅನುಭವವಾಗುತ್ತದೆ ಅವರಿಗೆ' ಎಂದು ಅವರು ಹೇಳಿದಾಗ, ಈ ಕಾಲದ ವಿದ್ಯಾರ್ಥಿಗಳಿಗೆ ಭಾಷೆಯ ಕುರಿತಾಗಿ ಇರುವ ಅತೀವ ನಿರಾಸಕ್ತಿ ಸ್ಪಷ್ಟವಾಯಿತು.

ಸಹಜವೇ ಅಸಹಜವಾಗಿ ಕಾಣಿಸುತ್ತಿರುವ ಹೊತ್ತಿದು. ನಾವು ಸಹಜವಾಗಿ ಮಾತನಾಡಿದ್ದು, ಸಹಜವಾಗಿ ಬದುಕುವುದೇ ಕೆಲವರಿಗೆ ಅಸಹಜವಾಗಿ ಕಾಣಿಸುತ್ತದೆ. ಶುದ್ಧವಾಗಿ ಕನ್ನಡ ಮಾತನಾಡಲು ಶುರು ಮಾಡಿದರೆ, ಪರಿಸರಕ್ಕೆ ಏನಾದರೂ ಕೊಡುಗೆ ಕೊಡಬೇಕು ಎಂಬ ಕಾರಣದಿಂದ ಪ್ಲಾಸ್ಟಿಕ್ ಬಳಸದೇ ಇರಲು ನಿರ್ಧರಿಸಿದರೆ, ಜೀವನಪದ್ಧತಿಯನ್ನು ಸರಳಗೊಳಿಸಿ ಸಹಜವಾಗಿ ಬದುಕಿದರೆ, ನಮ್ಮನ್ನು ಹೊಗಳುವವರಿದ್ದರೂ ವಿಕ್ಷಿಪ್ತ ಜೀವಿಗಳಂತೆ, ನಾವು ತೀರಾ ಅಸಹಜವಾಗಿ ಬದುಕುತ್ತಿದ್ದೇವೆ ಎಂದುಕೊಳ್ಳುವವರೇ ಹೆಚ್ಚು ಮಂದಿ.

ನಮ್ಮ ಕನ್ನಡ ಸಾಹಿತ್ಯದ ಕತೆಯೂ ಹೀಗೇ ಆಗಿದೆ. ಶುದ್ಧವಾಗಿ ಕನ್ನಡವನ್ನು ಧ್ಯಾನಿಸುವುದು, ಶುದ್ಧವಾಗಿ ಬರೆಯುವುದನ್ನು ಕೂಡ ವಿಕ್ಷಿಪ್ತ ಕಣ್ಣುಗಳಿಂದ ನೋಡುವವರಿದ್ದಾರೆ. ಭಾಷೆ ಎನ್ನುವುದು ಪುಳಕ ನೀಡುವ, ಒಂದು ಆಹ್ಲಾದಕರ ಅನುಭವವಾಗಿ ಈ ಕಾಲದ ಹುಡುಗ, ಹುಡುಗಿಯರನ್ನು ಕಾಡುವುದಿಲ್ಲವೇಕೆ ಎಂದು ಯೋಚನೆಯಾಗುತ್ತದೆ. ಕನ್ನಡ ಎನ್ನುವುದು ಕಾಲೇಜು ಹಂತದ ವಿದ್ಯಾರ್ಥಿಗಳಿಗೆ ಬರೀ ಪರೀಕ್ಷೆ ಬರೆಯುವ ಒಂದು ಭಾಷೆಯಾಗಿ ಉಳಿದಿದೆ ಬಿಟ್ಟರೆ ಹೃದಯದ ಭಾವನೆಯಾಗಿ ಉಳಿದಿಲ್ಲ ಎನ್ನುವುದು, ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ.

ಪದವಿ ಪೂರೈಸಿ ಕೆಲಸದಲ್ಲಿರುವ ಒಬ್ಬ ಯುವಕನಿಗೆ 'ಯಾವ ಯಾವ ಕನ್ನಡ ಕೃತಿಗಳನ್ನು ಓದಿದ್ದೀರಿ?' ಎಂದು ಕೇಳಿದೆ. 'ಅಯ್ಯೋ ಯಾಕೆ ಓದಬೇಕು ಗೊತ್ತಾಗುತ್ತಿಲ್ಲ. ಓದುವುದರಿಂದ ಏನು ಸಿಗುತ್ತದೆ? ನಾನು ಇದುವರೆಗೆ ಏನೂ ಓದದೇ ಬದುಕಿಲ್ಲವಾ? ಆದ್ರೆ ಒಂದು ನಿಜ ನೋಡಿ, ಸಾಹಿತ್ಯವನ್ನು ಯಾಕೆ ಓದಬೇಕು ಎಂದು ನಮಗೆ ಪಿಯುಸಿಯಿಂದ ಡಿಗ್ರಿಯವರೆಗೂ ಯಾವ ಮೇಷ್ಟ್ರೂ ಹೇಳಿಕೊಟ್ಟಿಲ್ಲ, ಹಾಗಾಗಿ ಓದಿಲ್ಲವೇನೋ' ಎಂದು ಆ ಹುಡುಗ ನಸುನಕ್ಕ.



'ಓದುವುದರಿಂದ ನಮ್ಮೊಳಗೆ ಸಕಾರಾತ್ಮಕತೆ ಬೆಳೆಯುತ್ತದೆ, ಮನಃಸ್ಥಿತಿ ಗಟ್ಟಿಯಾಗುತ್ತದೆ, ತಾಳ್ಮೆ ಜಾಸ್ತಿಯಾಗುತ್ತದೆ, ಹೊಸತೇನನ್ನೋ ಕಂಡುಕೊಳ್ಳುವಿಕೆ, ಕುತೂಹಲ ರಂಗೇಳುತ್ತದೆ, ಎಲ್ಲಕ್ಕಿಂತಲೂ ಜಾಸ್ತಿ ಆತ್ಮಸಂತೃಪ್ತಿ ಸಿಗುತ್ತದೆ. ಹಿರಿಯರ ಕೃತಿಗಳು, ಅವರು ಬದುಕಿದ ರೀತಿ, ಒಂದು ಕಾಲದ ಜೀವನ ವಿಧಾನವನ್ನು ಧುತ್ತೆಂದು ಕಣ್ಣ ಮುಂದೆಯೇ ಮೂಡಿಸಿ ಜೀವನೋತ್ಸಾಹ ಕೊಡುತ್ತವೆ. ಹಾಗಾಗಿ, ಒಂದಷ್ಟು ಓದಲು ಪ್ರಯತ್ನಿಸು' ಅಂತ ನನ್ನದೇ ಸರಳ ಭಾಷೆಯಲ್ಲಿ ಹೇಳಿದೆ. ನನ್ನ ಇಂಗಿತ, ಭಾವನೆ ಅವನಿಗೆ ಅರ್ಥವಾಯಿತೋ ಅಥವಾ ಇವೆಲ್ಲ ಯೋಚನೆಗಳೇ ಅಪ್ರಸ್ತುತ ಎಂದು ಅನ್ನಿಸಿತೋ ಗೊತ್ತಿಲ್ಲ. ಇದು ಆ ಹುಡುಗನೊಬ್ಬನ ಮಾತಲ್ಲ. ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಈ ಕಾಲದ ವಿದ್ಯಾರ್ಥಿಗಳಿಗೊಂದು ಸಕಾರಾತ್ಮಕ ದೃಷ್ಟಿಯೇ ಇಲ್ಲವೇನೋ ಅನ್ನಿಸುತ್ತದೆ.

ಕನ್ನಡ ನಾಡಲ್ಲಿ ಇರುವ ಬಹುತೇಕ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯ ಆಳ ಗೊತ್ತಿರಬೇಕಿಲ್ಲ, ಆ ಭಾಷೆಯ ಒಂದು ಕೃತಿಯನ್ನೂ ಓದಬೇಕೆಂದಿಲ್ಲ, ಕನ್ನಡ ಎಷ್ಟು ಗಹನವಾಗಿದೆ ಎಂದು ತಿಳಿಯಲು ನಾಡಿನ ಯಾವ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಯೂ ಬೇಕಿಲ್ಲ ಎನ್ನುವಂತಹ ವಾತಾವರಣ ಸೃಷ್ಟಿಯಾಗಿರುವುದು ಆತಂಕಪಡುವಂತಹ ಸಂಗತಿ.

ಒಂದು ಪರಂಪರೆ ಮುಂದುವರಿಯಬೇಕಾದದ್ದು ಯುವಜನರಿಂದಲೇ ಅಲ್ಲವೆ? ಕಾಲೇಜಿನಲ್ಲಿ ಕಲಿಯುತ್ತಿರುವ ಈ ಯುವಜನರೇ ಕನ್ನಡವನ್ನು ಭವಿಷ್ಯದಲ್ಲಿಯೂ ಅಪ್ಪಿ ಹಿಡಿಯದೇ ಇದ್ದರೆ? ಇವರಿಗಿಷ್ಟು ಸಾಕು ಎಂದು ಬರೀ ಅಂಕಕ್ಕೆ, ಬೋಧನೆಗೆ ಕನ್ನಡವನ್ನು ಸೀಮಿತಗೊಳಿಸುತ್ತ, ಬದುಕಿಡೀ ಜೀವನೋತ್ಸಾಹ ತುಂಬುವ ಸಾಹಿತ್ಯ, ಓದಿನ ಕುರಿತು ಉಪನ್ಯಾಸಕರೇ ತಿಳಿಹೇಳದಿದ್ದರೆ ಪರಂಪರೆ ಬೆಳೆಯುವುದೇ? ಕನ್ನಡವು ಒಂದು ನದಿಯಾಗಿ ಹರಿಯುವುದೇ?

ಲೇಖಕ: ಉಪನ್ಯಾಸಕ, ಕಾರ್ಕಳ

ವಾಚಕರ ವಾಣಿ

ಗರ್ಭಪಾತಕ್ಕೆ ತಡೆ: ಮಾನವೀಯತೆಗೆ ಗೆಲುವು

ಗಂಡ ತೀರಿಕೊಂಡಿರುವ 32 ವಾರಗಳ ಗರ್ಭಿಣಿಗೆ ವೈದ್ಯಕೀಯ ಗರ್ಭಪಾತದ ಮೂಲಕ ಭ್ರೂಣವನ್ನು ತೆಗೆಸಲು ಸುಪ್ರೀಂ ಕೋರ್ಟ್ ಅವಕಾಶ ನಿರಾಕರಿಸಿರುವುದು (ಪ್ರ.ವಾ., ಫೆ. 1) ಸಂತಸದ ವಿಷಯ. ಮಕ್ಕಳಾಗಿಲ್ಲವೆಂದು ಅದೆಷ್ಟೋ ಗಂಡ– ಹೆಂಡತಿ ಗುಡಿ ಗುಂಡಾರ, ಆಸ್ಪತ್ರೆಗಳನ್ನು ಸುತ್ತುತ್ತಾರೆ, ಹರಕೆಗಳನ್ನು ಹೊತ್ತುಕೊಂಡಿರುತ್ತಾರೆ. ಮಗುವು ಗಂಡ, ಹೆಂಡತಿಯ ಪ್ರೀತಿಯ ಸಂಕೇತ. ಅದು ನಮ್ಮ ಅನೇಕ ದುಃಖಗಳನ್ನು ದೂರ ಮಾಡುವ ಒಂದು ಜೀವೋತ್ಪತ್ತಿ.

ತನ್ನ ಗಂಡನ ಪ್ರೀತಿಯ ಕಾಣಿಕೆ ಎಂದು ಬಹಳಷ್ಟು ವಿಧವೆಯರು ಮಕ್ಕಳನ್ನು ಸಾಕಿ ಸಲಹಿ ವಿದ್ಯಾವಂತರನ್ನಾಗಿ ಮಾಡುತ್ತಾರೆ. ಈ ಪ್ರಕರಣದಲ್ಲಿ, ಭ್ರೂಣಕ್ಕೂ ಬದುಕುವ ಹಕ್ಕಿದೆ ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್ ಮಾನವೀಯತೆ ಮೆರೆದಿದೆ. ಭ್ರೂಣಕ್ಕೆ 29 ವಾರಗಳಾಗಿದ್ದಾಗ ಗರ್ಭಪಾತಕ್ಕೆ ಅನುಮತಿ ನೀಡಿದ್ದ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿದ್ದ ಕೇಂದ್ರ ಸರ್ಕಾರದ ನಡೆ ಕೂಡ ಮೆಚ್ಚುವಂತಹದ್ದು.

ರಾಜೇಂದ್ರಕುಮಾರ್ ಕೆ. ಮುದ್ನಾಳ್, ಯಾದಗಿರಿ

ಸಮ್ಮೇಳನಕ್ಕೆ ಅಡ್ಡಿಯಾಗದಿರಲಿ ಮುಂಗಾರು

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಈ ಬಾರಿ ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುತ್ತಿರುವುದು ಸಂತಸದ ವಿಷಯ. ಆದರೆ ಜೂನ್ ತಿಂಗಳಲ್ಲಿ ಅದನ್ನು ಆಯೋಜಿಸಿರುವುದು ಸೂಕ್ತವೇ? ಯಾಕೆಂದರೆ, ಜೂನ್‌ನಲ್ಲಿ ಮುಂಗಾರು ಮಳೆ ಪ್ರಾರಂಭವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಷ್ಟೊಂದು ದೊಡ್ಡ ಸಮ್ಮೇಳನ ನಡೆದರೆ, ಮಳೆಯಿಂದ ಕಾರ್ಯಕ್ರಮಕ್ಕೆ ತೊಡಕಾಗಬಹುದು. ಆಗ ಸಾಹಿತ್ಯಾಸಕ್ತರಿಗೆ ಸಹಜವಾಗಿಯೇ ನಿರಾಸೆ ಆಗುತ್ತದೆ. ಆದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಈ ಬಗ್ಗೆ ಯೋಚಿಸಿ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ.

ಪಿ.ನಮ್ರತಾ, ಗೆಜ್ಜಗಳ್ಳಿ, ಮೈಸೂರು

ಸಿದ್ಧಾಂತಕ್ಕೆ ತಿಲಾಂಜಲಿ, ಅವಕಾಶವಾದಿತನ

ಪ್ರಮುಖ ರಾಜಕೀಯ ಪಕ್ಷಗಳು ಪ್ರಾದೇಶಿಕ ಪಕ್ಷಗಳನ್ನು ಹೆದರಿಸಿ ಅಥವಾ ಆಮಿಷವೊಡ್ಡಿ ಜೊತೆಗೆ ಸೇರಿಸಿಕೊಳ್ಳುತ್ತಿರುವ ಸಂಗತಿಯು ಈ ಪ್ರಮುಖ ಪಕ್ಷಗಳಲ್ಲಿ ಕೊಂಚವಾದರೂ ಉಳಿದುಕೊಂಡಿದ್ದ ಸಿದ್ಧಾಂತಗಳ ಸಾವು ಎನ್ನಬಹುದು. ಶೋಷಿತರ ಹೆಸರಿನಲ್ಲಿ ಕಟ್ಟಿದ ಪಕ್ಷವಾಗಲೀ ಪ್ರಬಲ ಜಾತಿ, ಸಮಾಜವಾದಿ ಸಿದ್ಧಾಂತಗಳ ಹಿನ್ನೆಲೆಯ ಪಕ್ಷಗಳಾಗಲೀ ಎಲ್ಲವೂ ತಮ್ಮ ಮೂಲ ಸಿದ್ಧಾಂತ ಮರೆತು, ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ. ಬಿಜೆಪಿಯು ಈಗಾಗಲೇ 400 ಲೋಕಸಭಾ ಸ್ಥಾನಗಳನ್ನು ಗೆದ್ದೇಬಿಟ್ಟಿದೆ ಎಂಬಂತೆ ವಿಶ್ಲೇಷಿಸಲಾಗುತ್ತಿದೆ. ಹಾಗಿದ್ದರೆ, ಚುನಾವಣೆಯ ಅಗತ್ಯವಾದರೂ ಏನು? ಮತದಾರರ ಹಕ್ಕಿಗೆ ಬೆಲೆಯೇನು? ಮತದಾರರ ತೀರ್ಮಾನ ಈಗಾಗಲೇ ಅಂತಿಮವಾಗಿದ್ದರೆ, ಅವರು ಬರೀ ಪಗಡೆಯಾಟದ ದಾಳಗಳೇ? ಚುನಾವಣೆ ಎಂಬುದು ಪೂರ್ವನಿರ್ಧರಿತ ವಿಡಿಯೊ ಗೇಮ್ ಆಗಿಬಿಟ್ಟಿದೆಯೇ?

ಒಂದೆಡೆ, ರಾಹುಲ್ ಗಾಂಧಿ ಯಾತ್ರೆಯಲ್ಲಿ ನಿರತರಾಗಿದ್ದರೆ, ಇನ್ನೊಂದೆಡೆ, ವಿರೋಧಪಕ್ಷಗಳ ಅಸ್ತಿತ್ವವನ್ನೇ ನಿರ್ನಾಮ ಮಾಡಿಬಿಡಬೇಕೆನ್ನುವ ತವಕ ಬಿಜೆಪಿಗೆ ಇದ್ದಂತಿದೆ. ಊಹಿಸಲು ಅಸಾಧ್ಯವಾದ ಶಿವಸೇನಾ ನಡೆ, ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಒಂದು ಕಾಲದಲ್ಲಿ ಬಿಂಬಿತವಾಗಿದ್ದ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಅವಕಾಶವಾದಿತನ ಇಂತಹ ಬೆಳವಣಿಗೆಗೆ ಕೆಲವು ನಿದರ್ಶನಗಳಷ್ಟೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು ಎಂಬ ಸತ್ಯವನ್ನು, ನೆಮ್ಮದಿಯ ನಾಳೆಗಳನ್ನು ನೋಡಬೇಕೆನ್ನುವ ಪ್ರತಿ ವ್ಯಕ್ತಿಯೂ ಮನಗಾಣಬೇಕಿದೆ. ರಾಜಕೀಯದಲ್ಲಿ ಯಾರೂ ಮುಖ್ಯರಲ್ಲ, ಅಮುಖ್ಯರೂ ಅಲ್ಲ. ಪ್ರಜೆಗಳೇ ಮುಖ್ಯ. ಅಮುಖ್ಯರನ್ನು ನಿರ್ಧರಿಸುವವರೂ ಅವರೇ.

ಶಾಂತರಾಜು ಎಸ್., ಬೆಂಗಳೂರು

ಪ್ರತ್ಯೇಕತೆಯ ಕೂಗು: ಮೊಳಕೆಯಲ್ಲೇ ಚಿವುಟಿ

ಇತ್ತೀಚಿನವರೆಗೆ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಪಂಜಾಬ್ ಮತ್ತು ಈಶಾನ್ಯ ಭಾರತದ ಕೆಲವು ರಾಜ್ಯಗಳಲ್ಲಿ ಆಗೊಮ್ಮೆ ಈಗೊಮ್ಮೆ ಕೇಳಿಬರುತ್ತಿದ್ದ ಪ್ರತ್ಯೇಕತೆಯ ಕೂಗು ಕರ್ನಾಟಕದಲ್ಲೂ ಕೇಳಿಬಂದಿರುವುದು ಅಚ್ಚರಿ ಮೂಡಿಸಿದೆ ಮತ್ತು ಇದು ತೀರಾ ಆತಂಕಕಾರಿ ಬೆಳವಣಿಗೆ ಎನ್ನಬಹುದು. ಇದರಲ್ಲಿನ ವಿಶೇಷವೆಂದರೆ, ಇಂತಹ ಕೂಗು ಹಿಂದಿಯೇತರ ಮತ್ತು ಡಬಲ್ ಎಂಜಿನ್ ಸರ್ಕಾರಗಳು ಇಲ್ಲದ ರಾಜ್ಯಗಳಿಂದ ಕೇಳಿಸುತ್ತಿದೆ. ಈ ಬಗೆಯ ಕೂಗು ಕೇಳಿಬರದಂತೆ ಕೇಂದ್ರ ಸರ್ಕಾರ ಹೆಚ್ಚಿನ ಎಚ್ಚರಿಕೆ ವಹಿಸಬೇಕು ಮತ್ತು ಇದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು.

ಸರ್ವರಿಗೂ ಸಮಪಾಲು ಮತ್ತು ಸಮಬಾಳು ಎಂಬುದು ಒಕ್ಕೂಟ ವ್ಯವಸ್ಥೆಯಲ್ಲಿ ಕಾಯಾ ವಾಚಾ ಮನಸಾ ಅನುಷ್ಠಾನಗೊಂಡರೆ ಇಂತಹ ಬೇಡಿಕೆಗಳಿಗೆ ಅವಕಾಶ ಇರುವುದಿಲ್ಲ ಎನ್ನುವ ಪ್ರಜ್ಞಾವಂತರ ಅಭಿಪ್ರಾಯದಲ್ಲಿ ಅರ್ಥವಿದೆ. ಕೇಂದ್ರ ಸರ್ಕಾರವು ಕರ್ನಾಟಕದ ವಿಷಯದಲ್ಲಿ ಪಕ್ಷಪಾತಿಯಾಗಿದೆ ಎನ್ನುವ ಆರೋಪ ಮತ್ತು ಟೀಕೆ ಕೆಲವು ತಿಂಗಳುಗಳಿಂದ ಕೇಳಿಬರುತ್ತಿದೆ. ಸರ್ಕಾರ ಆದ್ಯತೆಯ ಮೇರೆಗೆ ಇತ್ತ ಗಮನಹರಿಸಬೇಕು ಮತ್ತು ಇಂತಹ ಅಪಸ್ವರಗಳಿಗೆ ಅವಕಾಶ ಇಲ್ಲದಂತೆ ಮಾಡಬೇಕು.

ರಮಾನಂದ ಶರ್ಮಾ, ಬೆಂಗಳೂರು

ಪರೀಕ್ಷಾ ಕೇಂದ್ರ: ಆಯ್ಕೆ ಅವಕಾಶ ಬೇಡ

ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿಗಾಗಿ ಇತ್ತೀಚೆಗೆ ನಡೆದ ಲಿಖಿತ ಪರೀಕ್ಷೆಯಲ್ಲಿ, ಅಭ್ಯರ್ಥಿಗಳಿಗೆ ಅನುಕೂಲಕರವಾದ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನೇ ನೀಡಿರಲಿಲ್ಲ ಎಂದು ಎಚ್.ಕೆ.ಶರತ್ ಬೇಸರ ವ್ಯಕ್ತಪಡಿಸಿದ್ದಾರೆ (ಸಂಗತ, ಫೆ. 2). ಆದರೆ ಭ್ರಷ್ಟಾಚಾರದ ಮೂಲ ಇರುವುದೇ ಪರೀಕ್ಷಾ ಕೇಂದ್ರದ ಆಯ್ಕೆಯಲ್ಲಿ. ಬಹುತೇಕ ಪರೀಕ್ಷಾ ಕೇಂದ್ರಗಳಲ್ಲಿ ಸ್ಥಳೀಯರೇ ಅಭ್ಯರ್ಥಿಗಳಾಗಿದ್ದರಿಂದ ಇಡೀ ಕೇಂದ್ರವೇ ಅಭ್ಯರ್ಥಿಗಳಿಗೆ ಪೂರಕವಾಗಿ ಕೆಲಸ ನಿರ್ವಹಿಸಿದ ಉದಾಹರಣೆಗಳು ಬಹಳಷ್ಟಿವೆ. ಆದ್ದರಿಂದ, ಅಭ್ಯರ್ಥಿಗಳಿಗೆ ಸ್ಥಳೀಯವಾಗಿ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡದಿರುವುದು ಸೂಕ್ತವೇ ಆಗಿದೆ. ಇನ್ನು ಪರೀಕ್ಷಾರ್ಥಿಗಳಿಗೆ ಸೂಕ್ತ ವಸತಿ ವ್ಯವಸ್ಥೆ ಕಲ್ಪಿಸಬೇಕಾದುದು ಸರ್ಕಾರದ ಕರ್ತವ್ಯ.

ಗೋವಿಂದ ಎಸ್. ಭಟ್ಟ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ಅಥವಾ ತೀರ್ಪಿನಲ್ಲಿ ಧಾರ್ಮಿಕ ಗ್ರಂಥಗಳ ಉಲ್ಲೇಖ ಸರಿಯೇ?

ಪುರಾಣ, ಧರ್ಮ ಗ್ರಂಥಗಳಿಗೆ ಸಾಂವಿಧಾನಿಕ ಮಾನ್ಯತೆ ಇಲ್ಲ

• ಪ್ರೊ. ರವಿವರ್ಮ ಕುಮಾರ್



ಸಿರಿಗೆರೆ ಮಠದ ಅಧೀನದ ಎಲ್ಲ ಶಿಕ್ಷಣ ಸಂಸ್ಥೆಗಳ ಪ್ರಾಧ್ಯಾಪಕರು, ಉಪನ್ಯಾಸಕರು, ಶಿಕ್ಷಕರಿಗಾಗಿ ಆಯೋಜಿಸಿದ್ದ ಬೃಹತ್ ಕಾರ್ಯಾಗಾರ ಒಂದರಲ್ಲಿ ನಾನು ಸಂವಿಧಾನದ ಕುರಿತು ವ್ಯಾಖ್ಯಾನ ಮಾಡುತ್ತಿದ್ದೆ. ಸಿರಿಗೆರೆಯ ಸ್ವಾಮೀಜಿಯವರೇ ಸಭೆಯ ಅಧ್ಯಕ್ಷತೆ ವಹಿಸಿದ್ದರು. 'ಜಾತ್ಯತೀತತೆ ಸಂವಿಧಾನದ ಮೂಲಭೂತ ತತ್ತ್ವ. ಇದಕ್ಕೆ ಗೌರವ ನೀಡಿ ನಡೆದುಕೊಳ್ಳಬೇಕು' ಎಂದು ಹೇಳಿದೆ. 'ಜಾತ್ಯತೀತತೆ ಎಂದರೇನು? ವ್ಯಾಖ್ಯಾನಿಸಿ' ಎಂದು ಒಬ್ಬರು ಪ್ರಶ್ನಿಸಿದರು. 'ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಚರ್ಚ್‌ಗಳನ್ನು ರಾಜ್ಯಾಡಳಿತದಿಂದ ದೂರ ಇಡುವ (ಸಪ್ರೆಷನ್ ಆಫ್ ಚರ್ಚ್) ತತ್ವ ಪಾಲನೆಗೆ ಬಂತು. ಅದೇ ಮಾದರಿಯಲ್ಲಿ ಭಾರತದಲ್ಲಿ ಧರ್ಮವನ್ನು ರಾಜ್ಯಾಡಳಿತದಿಂದ ದೂರ ಇಡುವುದೇ ಜಾತ್ಯತೀತತೆ' ಎಂದೆ. ಆ ಕಾಲದಲ್ಲಿ ದೇಶದ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ವ್ಯಕ್ತಿಯೊಬ್ಬರು ನಾಲ್ಕು ಇಂಚು ಉದ್ದದ ನಾಮ ಹಾಕಿಕೊಳ್ಳುತ್ತಿದ್ದರು. ಸಭೆಯಲ್ಲಿದ್ದ ಪ್ರಾಧ್ಯಾಪಕರೊಬ್ಬರು, ಆಗಿನ ಮುಖ್ಯ ಚುನಾವಣಾ ಆಯುಕ್ತರು ಮಾಡುವುದು ಸರಿಯೇ? ಎಂದು ಪ್ರಶ್ನಿಸಿದರು. ಸ್ವಾಮೀಜಿಯವರು ಅದನ್ನು ಸಮರ್ಥಿಸುವಂತೆ ಮಾತನಾಡಿದರು. ನಾನು, 'ಸಂವಿಧಾನದ ಹಿನ್ನೆಲೆಯಲ್ಲಿ ಆ ಚಿಹ್ನೆಯನ್ನು ನೋಡುವುದು ಮುಖ್ಯ. ಮುಖ್ಯ ಚುನಾವಣಾ ಆಯುಕ್ತರ ಹುದ್ದೆಯಲ್ಲಿರುವ ವ್ಯಕ್ತಿಯನ್ನು ಅಲ್ಲಿಂದ ಎಬ್ಬಿಸಿಬಿಡಿ. ದೇಶದ ಉದ್ದಗಲಕ್ಕೂ ನಾಮ ಹಾಕಿ ನೋಡಿ ಅಥವಾ ಯಾವುದಾದರೂ ಧರ್ಮಸೂಚಕ ಟೋಪಿಯನ್ನು ಹಾಕಿ ನೋಡಿ ಅಥವಾ ಜುಟ್ಟು, ಜನಿವಾರ, ಶಿವದಾರ ಈ ಯಾವುದನ್ನಾದರೂ ತೊಡಿಸಿ ನೋಡಿ. ಅದು ಸರಿ ಕಾಣುತ್ತಾ? ಸರಿ ಕಾಣುವುದಿಲ್ಲ ಎಂದಾದರೆ ಸಾರ್ವಜನಿಕ ಕ್ಷೇತ್ರದಲ್ಲಿ, ರಾಜ್ಯಾಡಳಿತದಲ್ಲಿ ಕೆಲಸ ಮಾಡುವವರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹಾಗೂ ಧರ್ಮ ಮತ್ತು ಜಾತಿ ಸೂಚಕ ಸಂಕೇತಗಳನ್ನು ಮುನ್ನೆಲೆಗೆ ತರಬಾರದು' ಎಂದು ಹೇಳಿದೆ.

> ಸಾರ್ವಜನಿಕ ಆಡಳಿತ ಮತ್ತು ಕಾನೂನಿನ ಆಡಳಿತದಲ್ಲಿ ಧರ್ಮವನ್ನು ಹೇರಲಾಗದು. ನ್ಯಾಯದಾನ ಪ್ರಕ್ರಿಯೆಯಲ್ಲಿ ಧರ್ಮ ಗ್ರಂಥಗಳು, ಪುರಾಣಗಳು ಸಂಪೂರ್ಣವಾಗಿ ಅಪ್ರಸ್ತುತ

ಈಗ ಜಾರ್ಖಂಡ್ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಮನುಸ್ಮೃತಿಯನ್ನು ಉಲ್ಲೇಖಿಸಿ, 'ಮಹಿಳೆಯು ತನ್ನ ಗಂಡನ ಕುಟುಂಬದ ಹಿರಿಯರನ್ನು ಆರೈಕೆ ಮಾಡುವುದು ಆಕೆಯ ಜವಾಬ್ದಾರಿ' ಎಂಬ ಆದೇಶ ನೀಡಿರುವ ಪ್ರಕರಣಕ್ಕೂ ನನ್ನ ಮೇಲಿನ ಮಾತುಗಳು ಅನ್ವಯವಾಗುತ್ತವೆ.


ಸಂವಿಧಾನದ 14, 15 ಮತ್ತು 16ನೇ ವಿಧಿಗಳಲ್ಲಿ ಲಿಂಗ ಆಧಾರಿತ ತಾರತಮ್ಯ ಸಲ್ಲದು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಗಂಡಿಗೂ ಮತ್ತು ಹೆಣ್ಣಿಗೂ ಯಾವುದೇ ರೀತಿಯ ತಾರತಮ್ಯ ಇರಕೂಡದು ಎಂಬುದು ಸಂವಿಧಾನದ ಮೂಲ ತತ್ವಗಳಲ್ಲಿ ಒಂದಾಗಿದೆ. ಮಹಿಳೆಯು ತನ್ನ ಗಂಡನ ಮನೆಯವರನ್ನು ನೋಡಿಕೊಳ್ಳಬೇಕು ಎಂಬ ಅಂಶ ಸಂವಿಧಾನದ ಯಾವ ಭಾಗದಲ್ಲೂ ಇಲ್ಲ. ಗಂಡನ ಕುಟುಂಬದ ಹಿರಿಯರನ್ನು ನೋಡಿಕೊಳ್ಳಬೇಕು ಎಂಬ ಸದ್ಭಾವನೆ ಹೆಣ್ಣು ಮಕ್ಕಳಲ್ಲಿ ಇದ್ದೇ ಇರುತ್ತದೆ. ಬಹುತೇಕರು ಆ ಕೆಲಸವನ್ನು ಮಾಡುತ್ತಾರೆ. ಆದರೆ, ಅದನ್ನು ಒಂದು ಕರ್ತವ್ಯ ಎಂದು ನ್ಯಾಯಾಲಯ ಹೇಳಿರುವುದು ಗಂಭೀರವಾದ ಲೋಪ. ಸಂವಿಧಾನಕ್ಕೆ ಮಾಡಿದ ಅಪಚಾರ. ಸಂವಿಧಾನದಲ್ಲಿ ಇದಕ್ಕೆ ಅವಕಾಶವಿಲ್ಲ. ಮಹಿಳೆಯನ್ನು ಅಮಾನವೀಯವಾಗಿ, ಅವರ ದೌರ್ಜನ್ಯಕ್ಕೆ ಕಾರಣವಾಗುವಂತಹ ಪದ್ಧತಿಗಳನ್ನು ಸಂವಿಧಾನವು ರದ್ದುಗೊಳಿಸಿದೆ. ಸಂವಿಧಾನದ ವಿಧಿ 51–ಎ ಮೂಲಕ ಅಂತಹ ಆಚರಣೆಗಳನ್ನು ನಿಷೇಧಿಸಲಾಗಿದೆ. ಅದನ್ನು ನ್ಯಾಯಮೂರ್ತಿಗಳು ನೋಡಬೇಕಿತ್ತು. ಅವರು ನೋಡಿದ್ದರೆ ಈ ರೀತಿಯ ಆದೇಶವನ್ನು ಬರೆಯುತ್ತಿರಲಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆ ಖಾಸಗಿತನದ ಹಕ್ಕನ್ನು ಹೊಂದಿದ್ದಾಳೆ. ಮಹಿಳೆಯ ಮೇಲೆ ಪತಿ ಬಲವಂತ ಮಾಡುವುದನ್ನು ಅತ್ಯಾಚಾರ ಎಂದು ಪರಿಗಣಿಸುವ ಕುರಿತು ಗಂಭೀರವಾದ ಚರ್ಚೆ ನಡೆಯುತ್ತಿದೆ. ಜೀವಿಸುವ ಹಕ್ಕು ನಮ್ಮ ಸಂವಿಧಾನದ ಭಾಗವಾಗಿದೆ. ಮಹಿಳೆಯೊಬ್ಬರು ಪುರುಷನೊಬ್ಬನನ್ನು ಮದುವೆಯಾದ ಮಾತ್ರಕ್ಕೆ ಆಕೆಯು ಆತನ ಕುಟುಂಬವನ್ನೇ ವಿವಾಹವಾಗಿದ್ದಾಳೆ ಎಂದು ಭಾವಿಸಲಾಗದು. ಆ ದೃಷ್ಟಿಕೋನದಲ್ಲಿ ನೋಡುವುದೇ ತಪ್ಪು. ಸಂವಿಧಾನದ 21ನೇ ವಿಧಿಯು ಗೌರವಯುತ ಜೀವನ ನಡೆಸುವ ಹಕ್ಕನ್ನು ನೀಡಿದೆ. ಮಹಿಳೆಯು ಗಂಡ ಮತ್ತು ಆತನ ಕುಟುಂಬದವರ ಗುಲಾಮಳಾಗಿ ಬದುಕಬೇಕು ಎಂದು ನಮ್ಮ ಸಂವಿಧಾನ ಹೇಳುವುದಿಲ್ಲ. ಸಂವಿಧಾನವು ಮಹಿಳೆಗೆ ಪುರುಷನಷ್ಟೇ ಸ್ವಾಯತ್ತೆ ನೀಡಿದೆ. ದೈಹಿಕ, ಸಾಮಾಜಿಕ, ಆರ್ಥಿಕ ಸ್ವಾಯತ್ತತೆಯನ್ನು ಮಹಿಳೆಯರು ಹೊಂದಿದ್ದಾರೆ. ಇದೆಲ್ಲವನ್ನೂ ಗಾಳಿಗೆ ತೂರಿ ಜಾರ್ಖಂಡ್ ಹೈಕೋರ್ಟ್‌ನ ನ್ಯಾಯಮೂರ್ತಿ ಆದೇಶ ಹೊರಡಿಸಿದ್ದಾರೆ. ಸಂವಿಧಾನ ಮತ್ತು ಕಾನೂನುಗಳನ್ನು ನಿರ್ಲಕ್ಷಿಸಿ ಹೊರಡಿಸಿರುವ ಆದೇಶ (Per-Incuriam) ಎಂದು ಇದನ್ನು ಕಾನೂನಿನ ಪರಿಭಾಷೆಯಲ್ಲಿ ವ್ಯಾಖ್ಯಾನಿಸಬಹುದು. ಇಂತಹ ಆದೇಶಗಳು ಕಾನೂನಿನ ಅಡಿಯಲ್ಲಿ ಸಿಂಧುತ್ವವನ್ನು ಹೊಂದಿರುವುದಿಲ್ಲ.

ನಮ್ಮ ದೇಶವು ಮನುಸ್ಮೃತಿಯನ್ನು ದಾಟಿಕೊಂಡು ಬಹಳ ದೂರ ಬಂದಿದೆ. ಮನುಸ್ಮೃತಿಯಲ್ಲಿರುವ ಪ್ರತಿಯೊಂದು ಕಟ್ಟಳೆಯನ್ನೂ ಸಂವಿಧಾನವು ತುಂಡು ತುಂಡು ಮಾಡಿ ಬಿಸಾಡಿದೆ. 1927ರ ಡಿಸೆಂಬರ್ 25ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಎರಡನೇ ಮಹಾಡ್ ಸತ್ಯಾಗ್ರಹದಲ್ಲಿ ಮನುಸ್ಮೃತಿಯಲ್ಲಿರುವ ತಾರತಮ್ಯದ ವಿಷಯಗಳನ್ನು ಓದಿ, ಆ ಕೃತಿಯನ್ನು ಸುಟ್ಟು ಹಾಕಿದ್ದರು. ಹಿಂದೂ ಸಮಾಜವನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದಕ್ಕಾಗಿ ಅಂಬೇಡ್ಕರ್ ಅವರು ಆ ಕೆಲಸವನ್ನು ಮಾಡಿದ್ದರು. ಗುಲಾಮಗಿರಿ ಮತ್ತು ಧರ್ಮ ಒಟ್ಟಾಗಿ ಸಾಗಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದರು. ಮನುಸ್ಮೃತಿಯು ಗುಲಾಮಗಿರಿಯನ್ನು ಹೇರುವ ದಾಖಲೆ. ಮಹಿಳೆಯರು, ಶೂದ್ರರು ಮತ್ತು ದಲಿತರು ಗುಲಾಮರಂತೆ ಬದುಕಬೇಕು ಎಂಬುದೇ ಮನುಸ್ಮೃತಿಯ ಪ್ರಮುಖ ಪ್ರತಿಪಾದನೆ. ಹಿಂದೂ ಧರ್ಮದಲ್ಲಿ ಸುಧಾರಣೆ ತರುವುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಫ್ರೆಂಚ್ ಕ್ರಾಂತಿಯಿಂದ ಪ್ರಭಾವಿತರಾಗಿದ್ದ ಅವರು, ಮನುಸ್ಮೃತಿಯನ್ನು ಸುಟ್ಟು ಹಾಕಿದ ದಿನವೇ ಜೀವಿಸುವ ಹಕ್ಕು, ಸಮಾನತೆಯ ಹಕ್ಕು ಸೇರಿದಂತೆ ಆರು ಘೋಷಣೆಗಳನ್ನೂ ಮಾಡಿದ್ದರು. ಅದನ್ನೇ ಚರ್ಚಿಸಿ ಸಂವಿಧಾನದಲ್ಲಿ ಸೇರಿಸಲಾಯಿತು.

ಮನುಸ್ಮೃತಿಯ ಒಂಬತ್ತನೇ ಅಧ್ಯಾಯದಲ್ಲಿ, 'ಅಪ್ರಾಮಾಣಿಕತೆ ಮತ್ತು ಕಾಮ ಹೆಣ್ಣಿನ ಸಹಜ ಗುಣ. ಪತಿದ್ರೋಹ, ದುರ್ನಡತೆ ಹೆಣ್ಣಿನ ಸ್ವಾಭಾವಿಕ ಗುಣ. ಸ್ತ್ರೀಯರು ವೇದ ಅಧ್ಯಯನ ಮಾಡದ ಕಾರಣ ಸದಾ ಅಶುದ್ಧರು. ಹೆಂಡತಿಗೆ ಮಕ್ಕಳಾಗದಿದ್ದರೆ ಗಂಡನು ಎಂಟನೇ ವರ್ಷದಲ್ಲಿ ಮರು ಮದುವೆ ಆಗಬಹುದು. ಹತ್ತನೇ ವರ್ಷದಲ್ಲಿ ಮತ್ತೊಂದು ಮದುವೆ ಆಗಬಹುದು. ಹೆಂಡತಿಯು ಹೆಣ್ಣು ಮಕ್ಕಳಿಗಷ್ಟೇ ಜನ್ಮ ನೀಡುತ್ತಿದ್ದರೆ ಗಂಡ ಬೇರೊಂದು ಮದುವೆ ಆಗಬಹುದು' ಎಂಬ ಮಹಿಳೆಯರ ಘನತೆಗೆ ಧಕ್ಕೆ ತರುವ ಅಂಶಗಳಿವೆ. ಮಹಿಳೆಯರನ್ನು ಕೀಳಾಗಿ ನೋಡುವ, ಗುಲಾಮರಂತೆ ಪರಿಗಣಿಸುವ ಅನೇಕ ಸಂಗತಿಗಳು ಮನುಸ್ಮೃತಿಯಲ್ಲಿ ಇವೆ. ಮನುಸ್ಮೃತಿಯನ್ನು ಯಾವ ಹೆಣ್ಣು ಮಗಳೂ ಗೌರವಿಸಲು ಸಾಧ್ಯವಿಲ್ಲ. ಮಹಿಳೆಯರು ಮನುಸ್ಮೃತಿಯನ್ನು ಪಾಲಿಸಬೇಕು ಎಂದು ನ್ಯಾಯಮೂರ್ತಿಯೊಬ್ಬರು ಹೇಳುವುದು ಆಶ್ಚರ್ಯಕರ ಸಂಗತಿ. ಇದು ಮಹಿಳೆಯರ ಘನತೆಗೆ ಧಕ್ಕೆ ತರುವಂತಹ ವಿಚಾರ.

ಪೋಷಕರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಕಾಯ್ದೆ– 2007 ಜಾರಿಯಲ್ಲಿದೆ. ಇದು ಸಂಸತ್ತು ರೂಪಿಸಿದ ಕಾಯ್ದೆ. ಈ ಕಾಯ್ದೆಯ ಅಡಿಯಲ್ಲಿ ಪೋಷಕರನ್ನು ಸಾಕುವ ಕರ್ತವ್ಯ ಮಗನಿಗೆ ಇದೆ. ಸೊಸೆಯ ಮೇಲಿಲ್ಲ. ಆಸ್ತಿಯ ಒಡೆತನದ ಕಾರಣಕ್ಕಾಗಿ ಮೊಮ್ಮಗನಿಗೂ ಕರ್ತವ್ಯ ಇರುತ್ತದೆ. ಆಸ್ತಿ ವರ್ಗಾವಣೆಯಾದ ಸಂದರ್ಭದಲ್ಲಷ್ಟೇ ಸೊಸೆಗೆ ಕರ್ತವ್ಯ ಇರುತ್ತದೆ. ನ್ಯಾಯಮೂರ್ತಿಯವರು ಈ ಕಾಯ್ದೆಯನ್ನು ಪರಿಗಣಿಸದೇ ಆದೇಶ ನೀಡಿದ್ದಾರೆ. ಕಾನೂನಿನ ಅಂಶಗಳನ್ನು ಪಕ್ಕಕ್ಕಿಟ್ಟು ಮನುಸ್ಮೃತಿ ಆಧರಿಸಿ ತೀರ್ಪು ಕೊಡುವುದು ಮಿದುಳು ಪಳೆಯುಳಿಕೆಯಾಗುವುದರ ಉದಾಹರಣೆ. ಸಂವಿಧಾನವನ್ನೇ ಓದದಿರುವುದರ ಸಂಕೇತ.



ನಮ್ಮ ಸಂವಿಧಾನವು ಜಾತ್ಯತೀತ ತತ್ವದ ಮೇಲೆ ನಿಂತಿದೆ. ಅದರ ಜತೆಯಲ್ಲೇ ಧಾರ್ಮಿಕ ಸ್ವಾತಂತ್ರ್ಯವನ್ನೂ ನೀಡಿದೆ. ಆದರೆ, ಈ ಸ್ವಾತಂತ್ರ್ಯವು ನಿರ್ಬಂಧರಹಿತವಾದುದಲ್ಲ. ಸುಧಾರಣೆ, ಸಾರ್ವಜನಿಕ ಸ್ವಾಸ್ಥ್ಯ, ಸಾರ್ವಜನಿಕ ಸುರಕ್ಷತೆಗೆ ಅಪಾಯಕಾರಿಯಾಗದಂತೆ ಬಳಸಬೇಕಾದ ಸ್ವಾತಂತ್ರ್ಯವಿದು. ಧಾರ್ಮಿಕ ಸ್ವಾತಂತ್ರ್ಯವು ವ್ಯಕ್ತಿಗತವಾದುದು. ನಮ್ಮ ಧಾರ್ಮಿಕ ಸ್ವಾತಂತ್ರ್ಯವು ಬೇರೆಯವರಿಗೆ ತೊಂದರೆ ಮಾಡುವಂತಿಲ್ಲ. ಕುಟುಂಬ ಮತ್ತು ಮನೆಯೊಳಕ್ಕೆ ಸೀಮಿತವಾಗಿ ಅನುಭವಿಸಬಹುದಾದ ಸ್ವಾತಂತ್ರ್ಯವಿದು. ರಾಜ್ಯಾಡಳಿತದ ಭಾಗವಾಗಿ ಇದ್ದುಕೊಂಡು ಸರ್ಕಾರಿ ಕುರ್ಚಿಯ ಮೇಲೆ ಕುಳಿತು ಧಾರ್ಮಿಕ ಸ್ವಾತಂತ್ರ್ಯವನ್ನು ಅನುಭವಿಸಲಾಗದು. ನಮ್ಮ ದೇಶದಲ್ಲಿ ಪುರೋಹಿತಶಾಹಿ ಆಡಳಿತ ವ್ಯವಸ್ಥೆ ಇಲ್ಲ. ಭಾರತ ಹಿಂದೂ ರಾಷ್ಟ್ರವೂ ಅಲ್ಲ. ಹಿಂದೂ ಧಾರ್ಮಿಕ ಗ್ರಂಥಗಳನ್ನು ಬರೆದಿರುವುದು ಪುರಾಣ ಕಾಲದಲ್ಲಿ. ಆಗ ಗಂಡು ಮತ್ತು ಹೆಣ್ಣು ಸಮಾನರು ಎಂಬ ಪರಿಕಲ್ಪನೆಯೇ ಇರಲಿಲ್ಲ. ಹೆಣ್ಣಿಗೆ ಸ್ವಾತಂತ್ರ್ಯ ಇರಕೂಡದು ಎಂದು ಆ ಕಾಲದಲ್ಲಿ ಹೇಳಿದ್ದರು. ಈಗ ಆ ಮಾತನ್ನು ಹೇಳುವ ಗ್ರಂಥಗಳನ್ನು ಸುಟ್ಟು ಹಾಕಬೇಕು ಎಂಬ ಕೂಗು ಬಲವಾಗಿದೆ. ಪುರಾಣ ಗ್ರಂಥಗಳನ್ನು ಕಟ್ಟಳೆಯಾಗಿ, ಕಾನೂನಾಗಿ ಪರಿಗಣಿಸಲು, ನ್ಯಾಯದಾನ ಪ್ರಕ್ರಿಯೆಯಲ್ಲಿ ಆಧಾರವಾಗಿ ಬಳಸಲು ಅವಕಾಶವಿಲ್ಲ. ಪುರಾಣ ಗ್ರಂಥಗಳನ್ನು ಬೇಕಿದ್ದರೆ ಮಕ್ಕಳಿಗೆ ಕತೆ ಹೇಳಲು ಬಳಸಬಹುದು. ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ ಸೇರಿದಂತೆ ಆಯಾ ಧರ್ಮದ ಕಟ್ಟುಪಾಡುಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮಾತ್ರ ಧರ್ಮ ಗ್ರಂಥಗಳನ್ನು ಆಧಾರವಾಗಿ ಪರಿಗಣಿಸಬಹುದು. ಸಾರ್ವಜನಿಕ ಆಡಳಿತ ಮತ್ತು ಕಾನೂನಿನ ಆಡಳಿತದಲ್ಲಿ ಧರ್ಮವನ್ನು ಹೇರಲಾಗದು. ನ್ಯಾಯದಾನ ಪ್ರಕ್ರಿಯೆಯಲ್ಲಿ ಧರ್ಮ ಗ್ರಂಥಗಳು, ಪುರಾಣಗಳು ಸಂಪೂರ್ಣವಾಗಿ ಅಪ್ರಸ್ತುತ. ಅಂತಹ ಪುರಾಣಗಳಿಗೆ ಯಾವುದೇ ರೀತಿಯ ಸಾಂವಿಧಾನಿಕ ಮಾನ್ಯತೆಯೂ ಇಲ್ಲ.

ಲೇಖಕ: ಹಿರಿಯ ವಕೀಲ, ನಿರೂಪಣೆ– ವಿ.ಎಸ್. ಸುಬ್ರಹ್ಮಣ್ಯ

ಧಾರ್ಮಿಕ ವಿಷಯಗಳಲ್ಲಿ ಮಧ್ಯಪ್ರವೇಶ ಅನಿವಾರ್ಯ

• ಅಶೋಕ ಹಾರನಹಳ್ಳಿ



> ನ್ಯಾಯಾಲಯಗಳು ಧಾರ್ಮಿಕ ವಿಷಯಕ್ಕೆ ಮಧ್ಯಪ್ರವೇಶ ಮಾಡುವಂತಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಧರ್ಮದ ಹೆಸರಿನಲ್ಲಿ ಅನ್ಯಾಯವಾದ ಸಂದರ್ಭದಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶ ಮಾಡಲೇಬೇಕಾಗುತ್ತದೆ

ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬರುವ ಹಲವು ಪ್ರಕರಣಗಳು ಸಂಕೀರ್ಣತೆಯಿಂದ ಕೂಡಿರುತ್ತವೆ. ಈ ಪ್ರಕರಣಗಳ ವಿಚಾರಣೆ ಹಾಗೂ ವಿಶ್ಲೇಷಣೆ ಅಷ್ಟೇ ಸಂಕೀರ್ಣವಾಗಿರುತ್ತದೆ. ಅನೇಕ ಬಾರಿ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದ ಮುಂದೆ ಬರುತ್ತವೆ. ಕೆಲವೊಮ್ಮೆ, ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳು, ಇನ್ನೂ ಕೆಲವೊಮ್ಮೆ ಧಾರ್ಮಿಕ ವಿಚಾರಗಳಿಗೆ ಸಂಬಂಧಪಟ್ಟ ಪ್ರಕರಣಗಳೂ ಬರುತ್ತವೆ. ಇತಿಹಾಸ ತಿರುವಿ ಹಾಕಿದಾಗ, ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ವಿಚಾರಗಳು ನ್ಯಾಯಾಲಯಗಳ ಮುಂದೆ ಬಂದ ಹಲವು ಉದಾಹರಣೆಗಳಿವೆ. ಈ ಎಲ್ಲದರ ಮಧ್ಯೆಯೂ, ಧಾರ್ಮಿಕ ವಿಚಾರಗಳಲ್ಲಿ ತೀರ್ಮಾನ ನೀಡಲು ನ್ಯಾಯಾಲಯಗಳು ಎಷ್ಟರಮಟ್ಟಿಗೆ ಅಧಿಕಾರ ಹೊಂದಿವೆ ಎನ್ನುವ ಪ್ರಶ್ನೆಯೂ ಅನೇಕ ಬಾರಿ ಎದ್ದಿವೆ.

ಶಿರೂರು ಮಠದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಮಾನ ನೀಡಿತ್ತು. 1946ರಲ್ಲಿ ಮಠದಲ್ಲಿ ಆರ್ಥಿಕ ಸಂಕಷ್ಟ ಎದುರಾಯಿತು. ಇದಕ್ಕಾಗಿ ಆಡಳಿತ ಅಧಿಕಾರಿಯನ್ನು ನೇಮಿಸಲು ಸರ್ಕಾರವು ನಿರ್ದೇಶನ ನೀಡಿತು. ಈ ನಿರ್ದೇಶನವು ನಮ್ಮ ಧಾರ್ಮಿಕ ಆಚರಣೆಗೆ ಚ್ಯುತಿ ಬರುತ್ತದೆ ಎಂದು ಶಿರೂರು ಮಠದ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದರು. ಆದರೆ, ನ್ಯಾಯಾಲಯವು ಸ್ವಾಮೀಜಿ ಆಕ್ಷೇಪವನ್ನು ಪರಿಗಣಿಸಲಿಲ್ಲ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸರ್ಕಾರವೊಂದಕ್ಕೆ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇಲ್ಲ. ಆದರೆ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ, ಧಾರ್ಮಿಕವಲ್ಲದ ವಿಷಯಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಸರ್ಕಾರಕ್ಕೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಹೀಗೆ, ಯಾವುದು ಮೂಲಭೂತ ಧಾರ್ಮಿಕ ಆಚರಣೆ, ಯಾವುದು ಅಲ್ಲ ಎನ್ನುವ ಕುರಿತು ನ್ಯಾಯಾಲಯವೇ ತೀರ್ಮಾನಿಸಬೇಕಾಗುತ್ತದೆ.

ತಿರುಮಲ ತಿರುಪತಿ ದೇವಸ್ಥಾನದ ಆಡಳಿತವು ಕೆಲವು ಧರ್ಮಕರ್ತರ ಹಿಡಿತದಲ್ಲಿತ್ತು. 1987ರಲ್ಲಿ ಆಂಧ್ರ ಪ್ರದೇಶ ಸರ್ಕಾರವು ಕಾನೂನೊಂದನ್ನು ಜಾರಿಗೆ ತಂದಿತು. ಅರ್ಚಕರಿಗೆ ಸಂಬಂಧಿಸಿದ ಕೆಲವು ಹಕ್ಕುಗಳು ಮತ್ತು ಆನುವಂಶಿಕವಾದ ಕೆಲವು ಹಕ್ಕಗಳನ್ನು ಈ ಕಾನೂನು ಮೂಲಕ ತೆಗೆದು ಹಾಕಲಾಯಿತು. ಆ ಸಂದರ್ಭದಲ್ಲಿ ಎ.ಎಸ್. ನಾರಾಯಣ ದೀಕ್ಷಿತಲು ಪ್ರಕರಣವೊಂದನ್ನು ದಾಖಲಿಸಿದರು. ಹಿಂದೂ ಧಾರ್ಮಿಕ ಆಚರಣೆಯ ವಿಷಯದ ಕುರಿತು ಸುದೀರ್ಘವಾದ ಚರ್ಚೆ ನಡೆಯಿತು. ಬೃಹದಾರಣ್ಯಕ ಉಪನಿಷತ್ತು, ಪಂಚರಾತ್ರ ಆಗಮ, ಭೃಗು ಕ್ರಿಯಾಧಿಕಾರ ಮತ್ತು ಉಪನಿಷತ್ತುಗಳ ಕುರಿತು ತರ್ಕಗಳು ನಡೆದವು. ಎಲ್ಲ ತರ್ಕ ಹಾಗೂ ವಿಚಾರಣೆಗಳ ನಂತರ ಆಂಧ್ರಪ್ರದೇಶ ಸರ್ಕಾರ ರೂಪಿಸಿದ ಕಾನೂನನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿಯಿತು.

ಹಿಜಾಬ್ ಹಾಗೂ ತ್ರಿವಳಿ ತಲಾಖ್‌ಗೆ ಸಂಬಂಧಿಸಿದ ಪ್ರಕರಣಗಳಲ್ಲೂ ಮುಸ್ಲಿಂ ವೈಯಕ್ತಿಕ ಕಾನೂನು, ಷರಿಯಾ ಕಾನೂನುಗಳ ವಿಚಾರ–ವಿಮರ್ಶೆಯನ್ನು ಸುಪ್ರೀಂ ಕೋರ್ಟ್ ನಡೆಸಿದೆ. ತ್ರಿವಳಿ ತಲಾಖ್‌ಗೆ ಕಾನೂನಿನಲ್ಲಿ ಅವಕಾಶವಿದೆಯೇ ಎನ್ನುವುದು ಶಾಬಾನು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಿದೆ. ವಿವಾಹ, ತಲಾಖ್ ಮತ್ತು ಇತರೆ ಆಚರಣೆಗಳಿಗೆ ಷರಿಯ ಕಾನೂನು ಅನ್ವಯವಾಗುತ್ತದೆ. ಆದ್ದರಿಂದ ತ್ರಿವಳಿ ತಲಾಖ್ ಆಚರಣೆಯು ಷರಿಯಾ ಕಾನೂನಿನ ಪ್ರಕಾರವಾಗಿ ಒಪ್ಪಿಕೊಳ್ಳಬಹುದೇ ಅಥವಾ ಬೇಡವೇ ಎಂಬುದನ್ನು ಸುಪ್ರೀಂ ಕೋರ್ಟ್ ಪರಿಶೀಲಿಸಿತು. ಇದಕ್ಕಾಗಿ ಕುರಾನ್, ಹದೀಸ್ ಮತ್ತು ಇತರೆ ಗ್ರಂಥಗಳನ್ನು ಪರಿಶೀಲಿಸಲಾಯಿತು. ಇದರ ಆಧಾರದಲ್ಲಿ ತ್ರಿವಳಿ ತಲಾಖ್ ಅನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿತು.

ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ ಮಹಿಳೆಯರಿಗೆ ಪ್ರವೇಶ ನೀಡುವ ವಿಷಯದಲ್ಲಿಯೂ ಧಾರ್ಮಿಕ ವಿಚಾರಗಳ ಬಗ್ಗೆ ಪರಿಶೀಲನೆ ನಡೆದಿದೆ. ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶಕ್ಕೆ ಸಂಬಂಧಿಸಿ 1955-56ರಲ್ಲಿ ದೇವಾಲಯ ಸಮಿತಿಯು ನಿಯಮ ರೂಪಿಸಿತ್ತು. 10 ವರ್ಷದ ಬಾಲಕಿಯರಿಂದ ಹಿಡಿದು 50ರ ವಯೋಮಾನದ ಮಹಿಳೆಯರು ದೇವಾಲಯ ಪ್ರವೇಶವನ್ನು ನಿಷೇಧಿಸಲಾಗಿತ್ತು. ಈ ನಿಯಮವನ್ನು ಕೇರಳ ನ್ಯಾಯಾಲಯವು 1951ರಲ್ಲಿ ಎತ್ತಿಹಿಡಿಯಿತು. ಆದರೆ, ಕೇರಳ ನ್ಯಾಯಾಲಯದ ತೀರ್ಪನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಳ್ಳಲಿಲ್ಲ. ಧರ್ಮ ಮತ್ತು ನೈತಿಕತೆ ಮಧ್ಯೆ ಸಂಘರ್ಷ ಉಂಟಾದಲ್ಲಿ ಸಾಂವಿಧಾನಿಕ ನೈತಿಕತೆಯನ್ನೇ ಎತ್ತಿಹಿಡಿಯಬೇಕು ಎಂದು 2019ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. ಯಾವ ಆಚರಣೆಯು ವ್ಯಕ್ತಿಯೊಬ್ಬರ ಆತ್ಮಗೌರವಕ್ಕೆ ಧಕ್ಕೆ ತರುವಂತಿದ್ದರೆ, ಅಂಥ ಆಚರಣೆಯು ಸಾಂವಿಧಾನಿಕ ನೈತಿಕತೆಗೆ ವಿರುದ್ಧವಾದುದು ಎಂದು ಆದೇಶಿಸಿತು.

2016ರಲ್ಲಿ ನಡೆದ ಘಟನೆ. ಅಂಬಾಲಾ ನಗರದಲ್ಲಿ ದಿಲಾವರ್ ಸಿಂಗ್ ಎಂಬಾತ ವಿಚಾರಣೆಗೆ ಹಾಜರಾಗಬೇಕಿತ್ತು. ಆತ ಅಮೃತಧಾರಿ ಸಿಖ್ ಪಂಥಕ್ಕೆ ಸೇರಿದ ವ್ಯಕ್ತಿ. ಈ ಪಂಥದವರು, ಭಗವಂತನ ಕೈಂಕರ್ಯಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಇವರ ಸೊಂಟದಲ್ಲಿ ಯಾವಾಗಲೂ ಕೃಪಾಣ್ (ಕತ್ತಿ) ಇದ್ದೇ ಇರುತ್ತದೆ. ಕೃಪಾಣ್ ಅನ್ನು ತೆಗೆಯುವಂತೆ ವಿಚಾರಣೆ ವೇಳೆ ನ್ಯಾಯಾಧೀಶರು ದಿಲಾವರ್‌ಗೆ ಸೂಚಿಸಿದರು. ಅದನ್ನು ದಿಲಾವರ್ ನಿರಾಕರಿಸಿ, ಇದು ತನ್ನ ಧಾರ್ಮಿಕ ಆಚರಣೆಗೆ ಚ್ಯುತಿ ತಂದಿದೆ ಎಂದು ಅರ್ಜಿ ಸಲ್ಲಿಸಿದರು. ಈ ವಿಷಯಕ್ಕೆ ಸಂಬಂಧಿಸಿ, ನ್ಯಾಯಾಲಯವು ಎಲ್ಲ ಸಿಖ್ ಧಾರ್ಮಿಕ ಗ್ರಂಥಗಳನ್ನು ಪರಿಶೀಲಿಸಿತು. ಸಿಖ್ ಧರ್ಮದ 5 ಕರ್ಕಗಳು (ಕೇಶ, ಕಡ, ಖಂಗ (ಮರದ ಬಾಚಣಿಕೆ), ಕಚ್ಚೇರ (ಒಳ ಉಡುಪು) ಮತ್ತು ಕೃಪಾಣ್) ಪ್ರತಿಯೊಬ್ಬ ಸಿಖ್ ವ್ಯಕ್ತಿಯೂ ಧರಿಸಲೇಬೇಕಾದ ವಸ್ತುಗಳು. ಈ ಕಾರಣಕ್ಕೆ ದಿಲಾವರ್ ಸಿಂಗ್ ಅವರು ಕೃಪಾಣ್ ಧರಿಸಿಯೇ ವಿಚಾರಣೆಯಲ್ಲಿ ಭಾಗಿಯಾಗಬಹುದು ಎಂದು ನ್ಯಾಯಾಲಯ ಹೇಳಿತು.

ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥವಾಗಿವೆ. ಅಂತೆಯೇ, ಮಸೀದಿ–ಮಂದಿರಗಳಿಗೆ ಪ್ರವೇಶದ ಕುರಿತ ವಿವಾದಗಳ ವಿಚಾರಣೆಯೂ ನ್ಯಾಯಾಲಯದಲ್ಲಿ ನಡೆದಿವೆ. ಮಂದಿರದಲ್ಲಿ ಪೂಜೆ ಮಾಡುವ ಹಕ್ಕಿನ ಕುರಿತೂ ಭಕ್ತರು ನ್ಯಾಯಾಲಯದ ಕದ ತಟ್ಟಬಹುದು. ಧರ್ಮ ಮತ್ತು ಕಾನೂನಿನ ಸಂಘರ್ಷ ಹೀಗೆ ಅನೇಕ ಸಂದರ್ಭಗಳಲ್ಲಿ ನಡೆದಿವೆ. ಸೂಕ್ತ ಸಮಯದಲ್ಲಿ ನ್ಯಾಯಾಲಯವು ಮಧ್ಯಪ್ರವೇಶ ಮಾಡದೇ ಹೋದಲ್ಲಿ ಧಾರ್ಮಿಕ ಸಂಘರ್ಷಗಳು ಉಂಟಾಗುವ ಸಂಭವಗಳು ಇರುತ್ತವೆ. ಆದಕಾರಣ ನ್ಯಾಯಾಲಯಗಳು ಧಾರ್ಮಿಕ ವಿಷಯಕ್ಕೆ ಮಧ್ಯಪ್ರವೇಶ ಮಾಡುವಂತಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಧರ್ಮದ ಹೆಸರಿನಲ್ಲಿ ಅನ್ಯಾಯವಾದ ಸಂದರ್ಭದಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶ ಮಾಡಲೇಬೇಕಾಗುತ್ತದೆ.

ಲೇಖಕ: ಹಿರಿಯ ವಕೀಲ

ಸಾಧಾರಣ ಕಥೆಯ ಅಸಾಧಾರಣ ಅಂತ್ಯ



ದೀಪಿಕಾ ಆರಾಧ್ಯ, ನಿಶ್ಚಿತ್

ಗೋಪಾಲಕೃಷ್ಣ ದೇಶಪಾಂಡೆ ಸಿನಿಮಾವೊಂದಕ್ಕೆ ಶಕ್ತಿ ತುಂಬುವ ಸಾಮರ್ಥ್ಯವುಳ್ಳ ನಟ. 'ಗರುಡ ಗಮನ ವೃಷಭ ವಾಹನ', 'ಟೋಬಿ', 'ಸ್ವಾತಿ ಮುತ್ತಿನ ಮಳೆ ಹನಿಯೇ', 'ಸಪ್ತ ಸಾಗರದಾಚೆ ಎಲ್ಲೋ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ತಮ್ಮದೇ ಛಾಪು ಮೂಡಿಸಿದವರು. ಇವರಿದ್ದರೆ ಸಾಧಾರಣ ಕಥೆಯ ಸಿನಿಮಾವೊಂದಕ್ಕೂ ವಿಶೇಷ ಶಕ್ತಿ ಬರುತ್ತದೆ. ಇದಕ್ಕೆ 'ಸಪ್ಲಯರ್ ಶಂಕರ' ಸಿನಿಮಾವೇ ಸಾಕ್ಷಿ. ಈ ಸಿನಿಮಾದಲ್ಲಿ ಹಲವೆಡೆ ಜಾಳುಜಾಳಾಗಿರುವ ಚಿತ್ರಕಥೆಯು ವೀಕ್ಷಣೆಗೆ ತೊಡಕಾದರೂ, ಗೋಪಾಲಕೃಷ್ಣ ದೇಶಪಾಂಡೆ ನಟನೆ ಕೊನೆಯವರೆಗೂ ಹಿಡಿದಿಡುತ್ತದೆ. ಆ ನಟನೆ ಕ್ಲೈಮ್ಯಾಕ್ಸ್‌ನಲ್ಲೊಂದು ಚಪ್ಪಾಳೆ ಗಿಟ್ಟಿಸುತ್ತದೆ. ಹೀರೊ ಪಾತ್ರವಾಗಿ ಬದಲಾಗುತ್ತದೆ.

ಹಳ್ಳಿಯೊಂದರಲ್ಲಿ ಹುಟ್ಟಿದ ಶಂಕರನ(ನಿಶ್ಚಿತ್ ಕೊರೋಡಿ) ತಂದೆ ಕುಡುಕ. ಪತಿಯ ಈ ಚಟದಿಂದ ಬೇಸತ್ತ ಶಂಕರನ ತಾಯಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಆ ದುರ್ಘಟನೆಯಲ್ಲಿ ಪತಿ, ಪತ್ನಿ ಇಬ್ಬರೂ ಸಜೀವವಾಗಿ ಸುಟ್ಟುಹೋಗುತ್ತಾರೆ. ಅನಾಥನಾದ ಬಾಲಕ ಶಂಕರ 'ಮಾದಾಪುರ' ಎಂಬ ಪೇಟೆಗೆ ಪಯಣ ಬೆಳೆಸುತ್ತಾನೆ. ಅಲ್ಲಿ ಬಾರ್ ಮಾಲೀಕನೊಬ್ಬ ಈತನಿಗೆ ತನ್ನ ಬಾರ್‌ನಲ್ಲಿ ಸಪ್ಲಯರ್ ಕೆಲಸ ನೀಡುತ್ತಾನೆ. ಅಲ್ಲಿಂದ 'ಸಪ್ಲಯರ್ ಶಂಕರ'ನಾಗಿ ಬೆಳೆಯುತ್ತಾನೆ. ಅದೇ ಪೇಟೆಯ ಪ್ರಾಥಮಿಕ ಶಾಲೆ ಟೀಚರ್ ಪುಣ್ಯ (ದೀಪಿಕಾ ಆರಾಧ್ಯ) ಜೊತೆ ಪ್ರೀತಿಯಲ್ಲಿ ಬೀಳುತ್ತಾನೆ ಶಂಕರ. ಬೆನ್ನಲ್ಲೇ, ಪೇಟೆಯಲ್ಲಿ ಹೆಣ್ಣುಮಕ್ಕಳ ಕಳ್ಳಸಾಗಣೆ, 'ಪುಣ್ಯ'ಳ ಅಪಘಾತ, ಶಂಕರ ಅಪ್ಪಾಜಿಯಂತೆ ಕಂಡ ಬಾರ್ ಮಾಲೀಕನ ಹತ್ಯೆಯಾಗುತ್ತದೆ. ಹೆಣ್ಣುಮಕ್ಕಳ ಕಳ್ಳಸಾಗಣೆಯ ಬೆನ್ನತ್ತಿ 'ಮಾದಾಪುರ' ಠಾಣೆಯ ಹೆಡ್‌ಕಾನ್‌ಸ್ಟೆಬಲ್(ಗೋಪಾಲಕೃಷ್ಣ ದೇಶಪಾಂಡೆ) ತನಿಖೆಗೆ ಇಳಿಯುತ್ತಾನೆ. ಇಲ್ಲಿಂದ ಕಥೆ ತಿರುವು ಪಡೆದು ಮುಂದಡಿ ಇಡುತ್ತದೆ.

ನಾವು ನೋಡಿದ ಸಿನಿಮಾ

ಸಪ್ಲಯರ್ ಶಂಕರ (ಕನ್ನಡ)
- **ನಿರ್ದೇಶನ:** ರಂಜಿತ್ ಸಿಂಗ್ ರಜಪೂತ್
- **ನಿರ್ಮಾಣ:** ಎಂ. ಚಂದ್ರಶೇಖರ್ ಹಾಗೂ ಎಂ.ನಾಗೇಂದ್ರ ಸಿಂಗ್
- **ತಾರಾಗಣ:** ನಿಶ್ಚಿತ್ ಕೊರೋಡಿ, ದೀಪಿಕಾ ಆರಾಧ್ಯ, ಗೋಪಾಲಕೃಷ್ಣ ದೇಶಪಾಂಡೆ, ನವೀನ್ ಡಿ. ಪಡೀಲ್

ಒಟ್ಟು ಸಿನಿಮಾದ ಅವಧಿ 163 ನಿಮಿಷವಿದೆ. ಇದರಲ್ಲಿ ಕನಿಷ್ಠ ಇಪ್ಪತ್ತು ನಿಮಿಷದ ಚಿತ್ರಕಥೆಗೆ ನಿರ್ದೇಶಕರು ಕತ್ತರಿ ಹಾಕಿದ್ದರೆ ಒಟ್ಟು ಸಿನಿಮಾ ರೂಪವೇ ಬೇರೆಯಾಗಿರುತ್ತಿತ್ತು. ಚಿತ್ರದ ಮೊದಲಾರ್ಧದ ಕಥೆ ತೆವಳಿಕೊಂಡು ಸಾಗುತ್ತದೆ. ಪ್ರೀತಿ, ಬಾರ್‌ನಲ್ಲಿ ನಡೆಯುವ ಘಟನೆಗಳು, ಹಾಡುಗಳಿಂದಾಗಿ ಇಲ್ಲಿನ ಚಿತ್ರಕಥೆಗೆ ವೇಗವಿಲ್ಲ. ಬಾರ್ ಮಾಲೀಕನ ಹತ್ಯೆಯ ಬಳಿಕ ಸಿನಿಮಾದ ಕಥೆ ವೇಗ ಪಡೆದುಕೊಳ್ಳುತ್ತದೆ. ಆದರೂ, ದ್ವಿತೀಯಾರ್ಧದಲ್ಲಿ ಪೊಲೀಸ್ ಠಾಣೆಯೊಳಗೆ ನಡೆಯುವ ದೌರ್ಜನ್ಯದ ದೃಶ್ಯಾವಳಿಗಳು ಸಾಕೆನಿಸಿಬಿಡುವಷ್ಟಿದೆ. ಇಷ್ಟೆಲ್ಲಾ ತಡೆದುಕೊಂಡ ಬಳಿಕ ಕ್ಲೈಮ್ಯಾಕ್ಸ್ ಹತ್ತಿರವಾದಂತೆ ಗೋಪಾಲಕೃಷ್ಣ ದೇಶಪಾಂಡೆ ತೆರೆ ಆವರಿಸಿಕೊಳ್ಳಲಾರಂಭಿಸುತ್ತಾರೆ. ಬಳಿಕ ಕಥೆಯು ಊಹಿಸಿರದಂತಹ ಹೊಸ ಆಯಾಮವನ್ನೇ ಪಡೆದುಕೊಳ್ಳುತ್ತದೆ. ಈ ಸಂದರ್ಭದಲ್ಲಿ 'ಗರುಡ ಗಮನ ವೃಷಭ ವಾಹನ'ದಲ್ಲಿನ ಪಾತ್ರದಂತೆ ಗೋಪಾಲಕೃಷ್ಣ ದೇಶಪಾಂಡೆ ಕಾಣಿಸುತ್ತಾರೆ. ಸಿನಿಮಾದ ಎರಡನೇ ಭಾಗಕ್ಕೆ ಸುಳಿವನ್ನೂ ಕ್ಲೈಮ್ಯಾಕ್ಸ್ ನೀಡಿದೆ.


ಅಭಿನಯದಲ್ಲಿ ನಿಶ್ಚಿತ್ ಹಾಗೂ ದೀಪಿಕಾ ಆರಾಧ್ಯ ತಮ್ಮ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಇಬ್ಬರಿಗೂ ನಟನೆಯಲ್ಲಿ ಭವಿಷ್ಯವಿದೆ. ನೋಡುಗನ ದೃಷ್ಟಿಯಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಸಿನಿಮಾ ಕೊನೆಯಲ್ಲಿ ಹೀರೊ ಆಗಿ ಬದಲಾಗುತ್ತಾರೆ. ಕುಡುಕನ ಪಾತ್ರದಲ್ಲಿ ನವೀನ್ ಡಿ. ಪಡೀಲ್ ನಗಿಸುವ ಹೊಣೆ ಹೊತ್ತು ತೆರೆಯಲ್ಲಿದ್ದಷ್ಟು ಹೊತ್ತು ನಗಿಸುತ್ತಾರೆ. ಹಿನ್ನೆಲೆ ಸಂಗೀತ ಅಚ್ಚುಕಟ್ಟಾಗಿದೆ. ಸಿನಿಮಾದಲ್ಲಿ ನಿರ್ದೇಶಕರ ಹುರುಪು ಕಾಣಿಸುತ್ತದೆ. ಸಾಧಾರಣವಾದ ಕಥೆಗೆ ಭಿನ್ನ ಆಯಾಮಗಳನ್ನು ಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಆದರೆ ಚಿತ್ರಕಥೆಯಲ್ಲಿ ಎಲ್ಲವನ್ನೂ ವಿಸ್ತೃತವಾಗಿ ಹೇಳಲು ಹೊರಟು ಕೊಂಚ ಎಡವಿದ್ದಾರೆ.

– ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5580

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1. ದೇಶದ ಒಂದು ವಿಭಾಗ (3)
4. ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ (4)
6. ನೂರು ವರ್ಷದ ಅವಧಿ (4)
7. ರಜದಲ್ಲಿ ಖರೀದಿಸಿದ ಬೆಳ್ಳಿ (3)
10. ಬಿಡದಿ ಬಳಿಯಿರುವ ಹೆಂಡತಿ (3)
12. ಇದಿನ್ನೂ ಎಳೆ ಮಗು (4)
15. ಮನುಜ ಹಿಡಿದಿರುವ ಶ್ರೀಗಂಧ (4)
16. ಕತ್ತು ಮೇಲಿತ್ತಿದಾಗ ಪಿತ್ತಕೋಶ ಕಾಣಿಸಿತಲ್ಲಾ! (3)

ಮೇಲಿಂದ ಕೆಳಕ್ಕೆ
1. ವೇದಗಳಿಂದ ಸಂಗ್ರಹಿಸಿದ ಭಾಗ (3)
2. ಹೊಳೆಯ ದಡವಿದು (4)
3. ಲೋಹದ ಹಕ್ಕಿಯಲ್ಲಿನ ಪಯಣ (5)
5. ಕಳೇಬರವು ಉಲ್ಟಾ ಕಾಣುತ್ತಿದೆ (2)
8. ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9. ದಾಹವಿದ್ದಾಗ ನೀಡಿದ ದೃಷ್ಟಾಂತ (5)
11. ಎಲ್ಲದಿಕ್ಕುಗಳಲ್ಲಿನ ರಾಜ್ಯಗಳನ್ನು ಗೆಲ್ಲುವುದು (4)
13. ಸುಗಮವಾಗಿ ಕಿತ್ತಿರುವ ಹೂವು (2)
14. ಪ್ರಾಮಾಣಿಕತೆ ಇಲ್ಲಿ ಕಾಣುತ್ತಿದೆ (3)

5579ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅವಭೃಥಸ್ನಾನ 4.ಗುಣಕಾರ 5.ಸನದು 7.ಬುದ್ಬುದ 10.ರಿವಾಜು 11.ಕಲಹ 13.ನಳಪಾಕ 15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ: 1.ಅಗಸ 2.ನಗು 3.ಪರಭಾರೆ 6.ದುರಾಚಾರಿ 7.ಬುರುಜು 8.ದಣಾಯಕ 9.ಬಡನಡು 12.ಹರಕೆ 14.ಕವಿ

ಸುಡೊಕು 5965

		5	8				1	
2							7	
	1	4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5964 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಫೆಬ್ರುವರಿ 3, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಅಷ್ಟಮಿ ಗಂ. 17-21 ನಕ್ಷತ್ರ: ವಿಶಾಖಾ ಅಹೋರಾತ್ರ ಯೋಗ: ಗಂಡ ಗಂ. 12-51 ಕರಣ: ಕೌಲವ ಗಂ. 17-21, ಮಕರ ಮಾಸದ 18 ನೇ ದಿನ, ಮಳೆನಕ್ಷತ್ರ: ಶ್ರವಣ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 07-00 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ : 22 ರಜಬ್
ಅದೃಷ್ಟ ಸಂಖ್ಯೆ : 3, 9

ಮೇಷ: ಪುತ್ರರ ಸಹಾಯದಿಂದ ಮನೆತನದ ವ್ಯವಹಾರದಲ್ಲಿ ಮತ್ತಷ್ಟು ಬಲ ಬಂದಂತಾಗಿ ವಿಸ್ತರಣೆಗೆ ಅನುಕೂಲವಾಗಲಿದೆ. ಬಹಳ ದಿನಗಳ ಸಾಲ ಮರುಪಾವತಿ ಮಾಡಲು ಕಾಲ ಕೂಡಿಬರಲಿದೆ.

ವೃಷಭ: ಉದ್ದಿಮೆಗಾಗಿ ಹೆಚ್ಚಿನ ಬಂಡವಾಳ ಹೂಡಲು ಸಿದ್ಧತೆ ಮಾಡಿಕೊಳ್ಳಿ. ಈ ದಿನ ಪ್ರಯಾಣ ಮಾಡಲೇಬೇಕಾದ ಸಂದರ್ಭವಿದೆ. ಇದು ಲಾಭದಾಯಕವೆನಿಸಲಿದೆ. ಋಣದಿಂದ ಹೊರಬರಲು ಪ್ರಯತ್ನವಿರಲಿ.

ಮಿಥುನ: ವಿಳಂಬವಾಗಿದ್ದ ಕಾರ್ಯಗಳು ಚುರುಕುಗೊಳ್ಳುವುದು. ಈ ದಿನ ಅನಿರೀಕ್ಷಿತ ಸುತ್ತಾಟದಿಂದ ಆಯಾಸ ತೋರಿಬರಲಿದೆ. ಸಂಜೆ ವೇಳೆಗೆ ಅದರಿಂದ ಬಂದ ಲಾಭಾಂಶದಿಂದ ಆಯಾಸ ಮಾಯವಾದಂತಾಗುವುದು.

ಕರ್ಕಾಟಕ: ಮಿತ್ರವರ್ಗದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳು ಒದಗಿ ಬರುವವು. ಗುಡಿ ಕೈಗಾರಿಕೆಯವರಿಗೆ ಸಾಕಷ್ಟು ಲಾಭ ಸಿಗಲಿದೆ. ದೈವಾನುಗ್ರಹದಿಂದ ಅಭೀಷ್ಟವು ನೆರವೇರುವುದು.

ಸಿಂಹ: ಕುಟುಂಬ ನಿರ್ವಹಣೆಯಲ್ಲಿ ಅಸಹಾಯಕತನ ಮನೆಯ ಸದಸ್ಯರಿಗೆ ತೊಂದರೆಯನ್ನು ಉಂಟುಮಾಡಿದರೂ ನೆಂಟರು ನಿಮ್ಮ ಮೇಲೆ ಹೊಂದಿದ್ದ ಅಪನಂಬಿಕೆಗಳು ಅಥವಾ ದುರಾಲೋಚನೆಗಳು ದೂರಾಗುವುದು.

ಕನ್ಯಾ: ಸತ್ಕಾರ್ಯಗಳ ನಿರ್ವಹಣೆಗೆ ಸಹಾಯ ಸಹಕಾರ ಕೋರಿ ಬರುವವರಿಗೆ ಸಹಾಯ ಮಾಡಿ. ಇದೇ ನಿಮಗೆ ಶ್ರೀರಕ್ಷೆಯಾಗಲಿದೆ. ಹಣದ ಹರಿವು ಸುಗಮವಾಗಲಿದೆ. ಭೂ ಖರೀದಿಯ ಯೋಗವಿದೆ.

ತುಲಾ: ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಇಂದು ಸರಿಯಾದ ದಿನ. ಹೊರ ದೇಶಕ್ಕೆ ಹೋಗುವ ನಿಮ್ಮ ಕನಸಿಗೆ ಈ ದಿನ ಪುಷ್ಟಿ ಸಿಗುವುದು. ಧೈರ್ಯ ಮತ್ತು ಬುದ್ಧಿವಂತಿಕೆಯ ಮಾತುಗಳು ನಿಮ್ಮನ್ನು ಕಾಪಾಡಲಿದೆ.

ವೃಶ್ಚಿಕ: ಜೀವನಶೈಲಿಯನ್ನು ಬದಲಾಯಿಸಿಕೊಳ್ಳಲು ಈ ದಿನದಿಂದ ಪ್ರಾರಂಭಿಸಿ. ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಕೆಲಸಗಾರರಿಂದ ಅಸಹಕಾರವು ಕಂಡುಬರಲಿದೆ.

ಧನು: ಮಾತು ಕಡಿಮೆ ಮಾಡಿ ಕೆಲಸದಲ್ಲಿ ಮಗ್ನರಾಗುವುದರಿಂದ ಸುಖ ಶಾಂತಿ ತುಂಬಿರುತ್ತದೆ. ಕಮಿಷನ್ ಏಜೆಂಟ್‌ಗಳಿಗೆ ಮತ್ತು ಸರಕು ಸಾಗಣೆದಾರರಿಗೆ ಉತ್ತಮ ದಿನ.

ಮಕರ: ವೈಯಕ್ತಿಕ ಜೀವನದಲ್ಲಿನ ಅಸ್ಪಷ್ಟ ವಿಚಾರಗಳನ್ನು ಸ್ಪಷ್ಟಪಡಿಕೊಳ್ಳುವ ದಿಕ್ಕಿನಲ್ಲಿ ಒಂದು ಮುಖಾಮುಖಿ ಸಂಭಾಷಣೆ ಮಾಡಬೇಕಾಗುತ್ತದೆ. ಬಯಸಿದವರು ದೂರಾಗುವ ಆತಂಕ ಎದುರಾಗಬಹುದು.

ಕುಂಭ: ರೈತಾಪಿ ವರ್ಗದವರ ನೆನಸಿದ ಕಾರ್ಯಗಳು ಕೈಗೂಡುವುದು. ಕುಟುಂಬದವರ ಜೊತೆಯಲ್ಲಿ ಸಂತೋಷ ಸಮಯವನ್ನು ಕಳೆಯುವಿರಿ. ವಿದೇಶದಲ್ಲಿರುವ ಮಕ್ಕಳಿಂದ ಶುಭ ಸಂದೇಶವನ್ನು ಪಡೆಯುವಿರಿ.

ಮೀನ: ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು. ಮನೆಗೆ ಆಲಂಕಾರಿಕವಾದ ಅಥವಾ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಬಹುದು. ಬರವಣಿಗೆಯಲ್ಲಿ ಉತ್ಸಾಹ ಮೂಡುವುದು.





ನಾಜೂಕು ನಾರಿ ಯಾಕೋ ಭಯಾರಿ



ಸುಶೀಲಾ ಡೋಣೂರ

ನಿಶ್ಚಿತಾರ್ಥ ಮುಗಿದು ಬೀಗರು ವಾಪಸ್ಸು ಹೊರಡಲನುವಾಗಿದ್ದರು. ಧೈರ್ಯ ಸಾಹಸಕ್ಕೆ ಹೆಸರಾಗಿದ್ದ ಕನ್ಯಾಮಣಿ ಗಗನಸಖಿ. ಔಪಚಾರಿಕ ಮಾತುಕತೆಯ ನಂತರ ತನ್ನ ರೂಮಿಗೆ ಹೋಗಿದ್ದ ಹುಡುಗಿ, ಅಲ್ಲಿ ಜೇಡರ ಹುಳು ಕಂಡು, ಅರೆಕ್ಷಣದಲ್ಲಿಯೇ ಅರಚುತ್ತ ಆಚೆ ಓಡಿ ಬಂದಳು. ಕ್ಷಣಮಾತ್ರದಲ್ಲಿಯೇ ಅವಳ ಮೈಯೆಲ್ಲಾ ದದ್ದುಗಳೆದ್ದವು, ಬೆದರಿ ಬೆವತು ಹೋಗಿದ್ದಳು. ‘ಹುಡುಗಿ ತುಸು ನಾ... ಜೂಕು...’ ಅಂದರು ಮನೆಯವರು.

***

ಇಂತಹ ನಾಜೂಕು ನಾರಿಯರ ಈ ಕೀಟ ಪೀಡೆಯ ಬಗ್ಗೆ ಕೇಳಿದ್ದೀರ? ಅನೇಕರು, ತಮ್ಮ ಮನೆಯಲ್ಲಿ, ಬಂಧುಗಳಲ್ಲಿ ಅಥವಾ ಸ್ನೇಹಿತರಲ್ಲಿ ಇಂತಹ ನಾಜೂಕು ಕಣ್ಮಣಿಗಳನ್ನು ನೋಡೇ ಇರುತ್ತಾರೆ. ಸಿನಿಮಾ–ಧಾರಾವಾಹಿಗಳಲ್ಲಂತೂ ಇಂತಹ ಸೀನ್ ಒಂದಿಲ್ಲ ಒಂದು ಕಡೆ ಬಂದೇ ಬರುತ್ತದೆ. ಅವರೆಲ್ಲಾ ಅಂಜುಬುರುಕರೇನಲ್ಲ. ಯಾವುದಕ್ಕೂ ಹೆದರದವರೂ ಈ ಪುಟ್ಟ ಕೀಟಗಳಿಗೆ ಭಯಭೀತರಾಗುವುದು ಯಾಕೆ ?

ಇದಕ್ಕೆ ಅರಾಕ್ನೋಫೋಬಿಯಾ (Arachnophobia) ಎನ್ನುತ್ತಾರೆ ಮನೋವೈದ್ಯರು. ಆಡುಮಾತಿನಲ್ಲಿ ‘ಸ್ಪೈಡರ್ ಫೋಬಿಯಾ’ ಅಂದರೂ ಇದು ಕೇವಲ ಜೇಡರ ಹುಳುವಿಗಷ್ಟೇ ಸೀಮಿತವಾದ ಭಯವಲ್ಲ. ಜಿರಳೆ, ಹಲ್ಲಿ, ಹೇನು, ಉಣ್ಣೆಯಂಥ ಯಾವುದೇ ಕೀಟ ಕಂಡರೂ ಕಿಟಾರನೇ ಕಿರುಚುವುದು, ಓಡಿ ಹೋಗುವುದು, ನಡುಗುವುದು ಸೇರಿದಂತೆ ವಿಚಿತ್ರ ವರ್ತನೆ ತೋರುತ್ತಾರೆ. ಈ ಭಯದ ತೀವ್ರತೆಯಲ್ಲಿಯೂ ಹಲವಾರು ಬಗೆಗಳಿವೆ. ಕೆಲವರು ಕೀಟಗಳನ್ನು ಕಂಡಾಗ ಮಾತ್ರ ಈ ವರ್ತನೆ ತೋರಿದರೆ, ಇನ್ನೂ ಕೆಲವರು ಇಂತಹ ಕೀಟಗಳ ಚಿತ್ರ ನೋಡಿದಾಗಲೂ, ಅವುಗಳ ಬಗ್ಗೆ ಯೋಚಿಸಿದಾಗಲೂ ಭಯಭೀತರಾಗುತ್ತಾರೆ. ಅರಾಕ್ನೋಫೋಬಿಯಾ ಯಾರಲ್ಲಿ ಬೇಕಾದರೂ ಕಾಣಿಸಿಕೊಳ್ಳಬಹುದು, ಆದರೆ ಹೆಣ್ಮಕ್ಕಳಲ್ಲಿಯೇ ಹೆಚ್ಚು. ಯಾಕೆ ಹೀಗೆ ಎಂದು ಪತ್ತೆ ಮಾಡಲು ಕೆಲ ಸಂಶೋಧನೆಗಳು ಯತ್ನಿಸಿವೆ. ಕೀಟಗಳನ್ನು ಕಂಡಾಗ ಆಂತರಿಕ ಭಯ ಹುಟ್ಟಿಸುವ ಹಾರ್ಮೋನುಗಳು ಮಹಿಳೆಯರಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವುದೇ ಇದಕ್ಕೆ ಕಾರಣ. ಈ ಭಯದ ಬೇರು ಕೇವಲ ಮಾನಸಿಕವಾಗಿರಬಹುದು, ನಂಬಿಕೆಯಲ್ಲಿರಬಹುದು, ಹಾರ್ಮೋನ್‌ನ ವ್ಯತ್ಯಾಸದಲ್ಲಿರಬಹುದು ಅಥವಾ ಮಿದುಳಿನಾಳದಲ್ಲಿ ತಳ ಊರಿರಬಹುದು. ಅದರ ಮೂಲ ಪತ್ತೆ ಹಚ್ಚಿ, ಭಯವನ್ನು ಗೆಲ್ಲಲು, ಸಣ್ಣ ಪ್ರಯತ್ನ, ಗಟ್ಟಿ ಮನಸು ಬೇಕಷ್ಟೇ.

‘ಇದೂ ಒಂದು ರೋಗವೆ? ಇದೊಳ್ಳೆ ಅಂಜುಬುರುಕರ ಕಥೆಯಾಯ್ತಲ್ಲ...’ ಅಂತ ಮಾತು ತೇಲಿ ಬಿಡಬೇಡಿ. ಇದು ಮನೆಯೊಳಗಿನ ವಾತಾವರಣವನ್ನು ಬಿಗಡಾಯಿಸಬಹುದು. ಮನೆಗೆಲಸಕ್ಕೂ ಅಡ್ಡಿಯಾಗಬಹುದು. ಈ ಭಯ ಕೇವಲ ಭಯ ವಾಗಿರದೇ ಅವಳ ಮನೆ, ಮನಸು, ಜೀವನಗುಣಮಟ್ಟವನ್ನೂ ತಟ್ಟಬಹುದು!

‘ಇದು ಮೇಲ್ನೋಟಕ್ಕೆ ಸಣ್ಣ ಸಂಗತಿಯಾಗಿ ಕಂಡರೂ ಅನುಭವಿಸುವವರಿಗೆ ಭಯಾನಕವಾಗಿರುತ್ತದೆ. ಕೇವಲ ಭಾವನಾತ್ಮಕ ಸಂಗತಿಯೇ ಅಲ್ಲದೆ, ಕೆಲವೊಮ್ಮೆ ದೈಹಿಕ ಹಾವ–ಭಾವಗಳಲ್ಲೂ, ವರ್ತನೆಯಲ್ಲಿಯೂ, ಸಂವೇದನೆಯ ರೂಪದಲ್ಲಿಯೂ ಪ್ರಕಟ ವಾಗಬಹುದು. ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ಈ ಪುನರಾವರ್ತಿತ ಭಯದ ಸಂವೇದನೆಗಳು ಹೃದಯ ಬಡಿತವನ್ನು ಹೆಚ್ಚಿಸಲು ಕಾರಣವಾಗುತ್ತವೆ, ಉಸಿರಾಟದ ತೊಂದರೆ, ಬಾಯಿ ಒಣಗುವುದು, ತಲೆತಿರುಗುವುದು, ವಾಕರಿಕೆ, ಬೆವರುವಿಕೆ, ನಡುಕ, ಜಠರದಲ್ಲಿ ಉರಿತ, ಹೊಟ್ಟೆ ಉಬ್ಬುವುದು, ಮತ್ತೆಮತ್ತೆ ಶೌಚಾಲಯಕ್ಕೆ ಹೋಗುವುದು, ಸಮತೋಲನದ ಕೊರತೆ ಸೇರಿ ದೈಹಿಕ ಪ್ರತಿಕ್ರಿಯೆಗಳು ಅವರ ಜೀವನ ಕ್ರಮದ ಮೇಲೆ ಪರಿಣಾಮ ಬೀರಬಹುದು’ ಎನ್ನುತ್ತಾರೆ ಮನಶಾಸ್ತ್ರಜ್ಞರಾದ ಡಾ. ಶಿವದೇವ್ ಎಂ.

ಯಾಕೆ ಹೀಗೆ?

ಭಾರತದಂತಹ ದೇಶಗಳಲ್ಲಿ ಈ ಕೀಟಗಳ ಬಗೆಗಿರುವ ಕೆಲವು ಸಾಂಸ್ಕೃತಿಕ ಅಥವಾ ಧಾರ್ಮಿಕ ನಂಬಿಕೆಗಳು, ಆನುವಂಶಿಕ, ಕೌಟುಂಬಿಕ ಅಂಶಗಳೂ ಈ ಭೀತಿಗೆ ಕಾರಣವಾಗಬಹುದು. ಉದಾಹರಣೆಗೆ ಹಲ್ಲಿ ದೇಹದ ಕೆಲ ಭಾಗಗಳ ಮೇಲೆ ಬಿದ್ದರೆ ಅಶುಭ ಎನ್ನುವ ನಂಬಿಕೆ, ಜೇಡ ಮೈಮೇಲೆ ಹರಿದಾಡಿದರೆ ಅಪಶಕುನ ಎನ್ನುವ ನಂಬಿಕೆಗಳೂ ಅರಾಕ್ನೋಫೋಬಿಯಾಗೆ ಕಾರಣ. ಅಂತೆಯೇ ಪೋಷಕರು ಈ ರೀತಿಯ ಸಮಸ್ಯೆಯನ್ನು ಹೊಂದಿರುವಾಗ ಅಂಥ ಮಕ್ಕಳು ಬಾಲ್ಯದಿಂದಲೇ ಭೀತಿಯನ್ನು ಮೈಗೂಡಿಸಿಕೊಂಡು ಬೆಳೆಯುವ ಸಾಧ್ಯತೆ ಇರುತ್ತದೆ.

ಸಮಸ್ಯೆ ಇದೆ ಅಂತಾದರೆ ಅದಕ್ಕೆ ಪರಿಹಾರವೂ ಇರಲೇಬೇಕಲ್ಲವೆ? ಇದಕ್ಕೂ ಚಿಕಿತ್ಸೆ ಇದೆ ಮನಸು ಮಾಡಿದರೆ ಈ ಭೀತಿಯಿಂದ ಹೊರಬರಬಹುದು. ಸಾಧ್ಯವಾಗದೇ ಇದ್ದಾಗ ತಜ್ಞರ ನೆರವು ಪಡೆಯಬೇಕು ಎನ್ನುತ್ತಾರೆ ಡಾ. ಶಿವದೇವ್.


ಮನೆಯ ಸದಸ್ಯರು ಯಾವುದಕ್ಕೂ ಕೊಂಕು ಆಡದೆ, ಲೇವಡಿ ಮಾಡದಿರಿ. ಆಗ ಇಂಥ ಸಮಸ್ಯೆಗಳಿದ್ದರೆ ಹಿಂಜರಿಕೆಯಿಲ್ಲದೆ ಹಂಚಿಕೊಳ್ಳಬಹುದಾದ ಪರಿಸರ ಸೃಷ್ಟಿಸಿದಂತಾಗುತ್ತದೆ.

ಮನೆಯ ಸದಸ್ಯರ ಬಳಿ ಇಂಥ ಭೀತಿಯನ್ನು ಹಂಚಿಕೊಂಡಾಗ ಅಥವಾ ಕಂಡು ಬಂದಲ್ಲಿ ಮನೋವೈದ್ಯರು ಅಥವಾ ಸಮಾಲೋಚಕರ ಬಳಿಯಾದರೂ ಚರ್ಚಿಸುವುದು ಒಳಿತು. ಇಷ್ಟಕ್ಕೂ ಮನೆಯ ಮಹಿಳೆಯರ ಮನದಲ್ಲಿ ಸಂತಸ, ಸಂಭ್ರಮಗಳಿರಬೇಕೆ ಹೊರತು ಭಯ ಮತ್ತು ಭೀತಿಗಳಲ್ಲವಲ್ಲ. ಅದೂ ಇಂಥ ಕ್ಷುದ್ರ ಜೀವಿಗಳಿಂದಲಂತೂ ಅಲ್ಲವೇ ಅಲ್ಲ. ❖

> ಹಲ್ಲಿ, ಜೇಡ, ಜಿರಲೆ ಕಂಡರೆ ಭಯಭೀತರಾಗುವವರು ಒಮ್ಮೆ ಇದನ್ನು ಓದಿ, ಇದು ಕೇವಲ ಭೀತಿಯಷ್ಟೇ ಅಲ್ಲದೆ, ಮನಸಿನಾಳದ ಸಮಸ್ಯೆಯೂ ಆಗಿರಬಹುದು. ಇಷ್ಟಕ್ಕೂ ಭಯ–ಭೀತಿಗಳನ್ನು ಮೀರಿಯೂ ಬದುಕಲು ಹಲವಾರು ಪರಿಹಾರಗಳಿವೆ. ಎಲ್ಲದಕ್ಕೂ ಮನಸು ಮಾಡಬೇಕು ಅಷ್ಟೆ!

ಸಮಸ್ಯೆಗೆ ಪರಿಹಾರ ಹೀಗಿರಲಿದೆ

- ಆರಂಭಿಕ ಹಂತದಲ್ಲಿದ್ದರೆ ಈ ಪರಿಸ್ಥಿತಿಯನ್ನು ಎದುರಿಸಲು ನಿಮ್ಮನ್ನು ನೀವೇ ಸಿದ್ಧಪಡಿಸಿಕೊಳ್ಳಿ.
- ನಿಮಗಿರುವ ಭೀತಿಯ ಮೂಲವನ್ನು ಪತ್ತೆ ಮಾಡಿ, ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. (ಅಂದರೆ ಮನೆಯವರ ಸಹಾಯದಿಂದ ಆ ಜೇಡರ ಹುಳುವಿನ ಹತ್ತಿರಕ್ಕೆ ಹೋಗುವುದು, ಅದನ್ನು ಸಮೀಪದಿಂದ ದಿಟ್ಟಿಸುವುದು, ಅದು ಅಪಾಯ ತರುವುದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.)
- ಆಲೋಚನೆಯನ್ನು ಗುರುತಿಸಿ, ಮರುಮೌಲ್ಯಮಾಪನ ಮಾಡಿಕೊಳ್ಳಿ, ಅದನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಿ.
- ಇಂತಹ ಸ್ಥಿತಿಯಿಂದ ತಪ್ಪಿಸಿಕೊಳ್ಳುವ, ನುಣುಚಿಕೊಳ್ಳುವ ಬದಲು ಅದನ್ನು ಎದುರಿಸುವುದನ್ನು ಕಲಿಯಿರಿ.
- ಅಗತ್ಯವಿದ್ದಲ್ಲಿ ವೈದ್ಯಕೀಯ ನೆರವು ಪಡೆಯಬಹುದು. ಔಷಧಿ, ಥೆರಪಿ ಹಾಗೂ ತರಬೇತಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. (ಈ ಥೆರಪಿಯಲ್ಲಿ ಅವರನ್ನು ಭೀತಿಗೆ ಕಾರಣವಾಗುವ ವಾತಾವರಣದಲ್ಲಿ ಬಿಡಲಾಗುತ್ತದೆ ಹಾಗೂ ಆ ವಾತಾವರಣವನ್ನು ಒಪ್ಪಿಕೊಳ್ಳುವಂತೆ ಹಾಗೂ ಎದುರಿಸುವಂತೆ ತರಬೇತಿ ನೀಡಲಾಗುತ್ತದೆ.)
- ಒಂದು ವೇಳೆ ಈ ಭಯ ನರಮಂಡಲದ ಆಳದಲ್ಲಿ ಬೇರೂರಿದ್ದರೆ ಕೆಲವು ನಿರ್ದಿಷ್ಟ ಚಿಕಿತ್ಸೆ ಹಾಗೂ ಔಷಧಗಳ ಸಹಾಯ ಪಡೆಯಬೇಕಾಗುತ್ತದೆ. ಅದಕ್ಕಾಗಿ ಶಮನಕಾರಿ ಔಷಧಗಳನ್ನು ಸೂಚಿಸಲಾಗುವುದು.



ಬಳೆಗಳ ಕಿಣಿಕಿಣಿ ನಾದದೊಳು..

ಸಿಂಗಾರ

ಕಿವಿಯ ಬಳಿ ಎಲ್ಲೋ ಕಿಣಿಕಿಣಿ ನಾದ ಬಂದರೆ ಸಾಕು, ಅಮ್ಮ ಹತ್ತಿರ ಇದ್ದಂತೆ. ಆ ಬಣ್ಣಬಣ್ಣದ ಗಾಜಿನ ಬಳೆಗಳ ಕಿಣಿಕಿಣಿ ಸದ್ದು, ಮಿಣಮಿಣ ಮಿಂಚು ಯಾವಾಗಲೂ ಅಭಯ ಹಸ್ತವೊಂದು ನಮ್ಮೊಂದಿಗಿರುವ ಬೆಚ್ಚಗಿನ ಭಾವ ನೀಡುತ್ತದೆ.

ಪ್ರೇಯಸಿಯ ಬಳೆಗಳ ಸದ್ದು ಅವಳ ಸಂತಸ, ಸಂಭ್ರಮವನ್ನು ಸೂಚಿಸುತ್ತದೆ. ರೊಟ್ಟಿ ಬಡಿಯುವಾಗ ಬಳೆಯ ನಡುವೆ ನಾದಿದ ಹಿಟ್ಟನ್ನು ಒಂಚೂರು ತುರುಕಿ, ಅದು ಮುಂದೆ ಸರಿಯದಂತೆ, ಬಡಿಯುವಾಗ ಒಡೆಯದಂತೆ ಜತನು ಮಾಡುವ ಹೆಂಗಳೆಯರಿಗೆ ಗಾಜಿನ ಬಳೆಗಳೆಂದರೆ ಸದಾ ಒಂದು ತೂಕದ ಪ್ರೀತಿ ಹೆಚ್ಚು.

ಗಾಜಿನ ಬಳೆಯ ಇತಿಹಾಸ ಹರಪ್ಪ ಮೊಹೆಂಜೊದಾರೊದಷ್ಟೇ ಹಳತು. ಮಹಿಳೆಯರಿಗೆ ಬಳೆ ಹಾಕುವುದು ಕೇವಲ ಅಲಂಕಾರಕ್ಕಾಗಿ ಮಾತ್ರ ಅಲ್ಲ, ಅವಳಿಗೆ ಮದುವೆಯಾಗಿದೆ, ಅವಳಿಗೆ 'ರೋಕಾ' ನಿಶ್ಚಿತಾರ್ಥವಾಗಿದೆ ಎಂಬುದನ್ನು ಸೂಚಿಸುತ್ತದೆ.

ದಕ್ಷಿಣ ಏಷ್ಯಾದ ಎಲ್ಲ ದೇಶಗಳಲ್ಲಿಯೂ ಬಳೆಗಳ ಖನಕು ಕೇಳಿ ಬರುತ್ತಲೇ ಇರುತ್ತದೆ. ಕುಲುಮೆಯಲ್ಲಿ ಗಾಜಿನ ಬಳೆಗಳು ಸಿದ್ಧವಾಗಿ, ದುಂಡನೆಯ ಆಕಾರ ಪಡೆದ ನಂತರ ಇವು ಮಾರುಕಟ್ಟೆಗೆ ಬರುತ್ತವೆ.

ಹೆಣ್ಣುಮಗು ಹುಟ್ಟಿದ ಕೂಡಲೆ ಐದನೆಯ ದಿನದಿಂದಲೇ ಬಳೆತೊಡಿಸಿ, ಮಗುವಿಗೆ ಸಂಸ್ಕಾರ ನೀಡಲಾಗುತ್ತದೆ. ನಂತರ ಋತುಮತಿಯಾದಾಗ, ನಿಶ್ಚಿತಾರ್ಥವಾದಾಗ, ಮದುವೆಯಾದಾಗ, ಸೀಮಂತಕ್ಕೆ, ಮಗುವಿನ ನಾಮಕರಣಕ್ಕೆ ಕೊನೆಗೆ ಅಂತ್ಯಕ್ರಿಯೆಯ ಸಂದರ್ಭದಲ್ಲಿಯೂ ಬಳೆ ತೊಡಿಸಿಯೇ ವಿದಾಯ ಹೇಳಲಾಗುತ್ತದೆ.

ಸಾಮಾನ್ಯವಾಗಿ ಬೆಸ ಸಂಖ್ಯೆಯಲ್ಲಿಯೇ ಬಳೆ ತೊಡಿಸುವ ಸಂಪ್ರದಾಯವಿದೆ. ಉತ್ತರ ಕರ್ನಾಟಕ ದಲ್ಲಿಯಂತೂ ಚಿನ್ನದ ಬಳೆಗಳೊಂದಿಗೆ ಗಾಜಿನ ಬಳೆ ತೊಟ್ಟು ಸಂಭ್ರಮಿಸುತ್ತಾರೆ.

ಮೊದಲಿಗೆ ಪಾಟಲಿ ಎಂದು ಕರೆಯಲಾಗುವ ಕೈಯಿಂದಲೇ ಚಿನ್ನವನ್ನು ಬಡಿದು, ಮಾಡುವ ಬಳೆಯನ್ನು ಧರಿಸುತ್ತಾರೆ. ಇದರಲ್ಲಿ ಚಿನ್ನದೊಂದಿಗೆ ಇತರ ಲೋಹದ ಬೆರಕೆ ಕಡಿಮೆ. ಪಾಟಲಿಯೆಂಬುದು ಆಪದ್ಧನ ಇದ್ದಂತೆ ಎನ್ನುವ ಮಾತೂ ಇದೆ. ನಂತರ ಮೂರು, ಐದು ಗಾಜಿನ ಬಳೆ ಧರಿಸಿ ಬಿಲ್ವಾರ ತೊಡುತ್ತಾರೆ. ಇವು ತೆಳುವಾದ ಬಳೆಗಳು. ಗಟ್ಟಿ ಬಳೆಗಳು. ವಜ್ರಾಕೃತಿಯ ವಿನ್ಯಾಸ ಸಾಮಾನ್ಯವಾಗಿರುತ್ತದೆ. ಇದೀಗ ವಿವಿಧ ವಿನ್ಯಾಸಗಳನ್ನೂ ಧರಿಸುತ್ತಾರೆ. ನಂತರದ ಸ್ಥಾನ ರುಳಿ ಎಂದು ಕರೆಯಲಾಗುವ ಮುರಿಗೆ ಮುರಿಗೆ ವಿನ್ಯಾಸದ ಬಳೆಗಳು. ಅದಾದ ನಂತರ ಕೊನೆಗೆ ತೋಡೆಗಳು. ಗೋಧಿಕಾಳಿನ ವಿನ್ಯಾಸದ ಈ ಬಳೆಯ ನಂತರ ಗಾಜಿನ ಬಳೆ ತೊಡುವುದಿಲ್ಲ.

ಪಾಟಲಿ ತವರು ಮನೆಯ ಉಡುಗೊರೆಯಾದರೆ, ಬಿಲ್ವಾರ ಗಂಡನ ಮನೆಯ ಗುರುತು. ರುಳಿ, ತೋಡೆಗಳು ಅವರವರ ಮನೆಯ ಶ್ರೇಯೋಭಿವೃದ್ಧಿಯನ್ನು ಸೂಚಿಸುವ ಬಳೆಗಳು.

ಈ ನಾಲ್ಕು ಬಗೆಯ ಬಳೆ ತೊಟ್ಟವರು ಕನಿಷ್ಠವೆಂದರೂ 21. 15 ಗಾಜಿನ ಬಳೆಗಳನ್ನು ತೊಟ್ಟಿರುತ್ತಾರೆ.

ಗಾಜಿನ ಬಳೆಗಳನ್ನು ಹೊರತುಪಡಿಸಿದರೆ ಅತಿ ಹೆಚ್ಚು ಜನಪ್ರಿಯವಾಗಿರುವ ಬಳೆಗಳೆಂದರೆ ಮೇಣದ್ದು. ಸುಲಭವಾಗಿ ಒಡೆಯಲಾಗದ ಈ ಬಳೆಗಳಲ್ಲಿ ಕನ್ನಡಿ, ಕಸೂತಿಯಚಿತ್ತಾರಗಳು ಗಮನ ಸೆಳೆಯುವಂತಿರುತ್ತವೆ.

ಕೆಂಪು, ಹಸಿರು ಕಪ್ಪು ಬಳೆಗಳು: ಮದುವೆಯಂಥ ಶುಭ ಸಮಾರಂಭಗಳಲ್ಲಿ ಉತ್ತರ ಭಾರತದಲ್ಲಿ ಕೆಂಪು ಬಳೆಗಳು ಮಹತ್ವದ ಸ್ಥಾನ ಪಡೆದರೆ, ದಕ್ಷಿಣದಲ್ಲಿ ಕಡು ಹಸಿರು, ಹಸಿರು ಬಣ್ಣದ ಬಳೆಗಳು ಚಾಲ್ತಿಯಲ್ಲಿವೆ. ಕೆಲವೆಡೆ ಕಪ್ಪು ಬಳೆಗಳನ್ನೂ ತೊಡಿಸಲಾಗುತ್ತದೆ.

ಸಮೃದ್ಧಿಯ ಸಂಕೇತವಾಗಿ ಹಸಿರು, ಶಕ್ತಿಯ ಸಂಕೇತವಾಗಿ ಕೆಂಪು, ಸಂಯಮದ ಸಂಕೇತವಾಗಿ ಕಪ್ಪುಗಳನ್ನು ತೊಡಿಸಲಾಗುತ್ತದೆ. ಕಾಲ ಬದಲಾದಂತೆ ಬಳೆಗಳ ಕಿಣಿಕಿಣಿನಾದದಲ್ಲಿಯೂ ವ್ಯತ್ಯಾಸಗಳಾಗಿವೆ. ಪ್ಲಾಸ್ಟಿಕ್ ಬಳೆಯ ಲಕ್‌ಲಕ್ ಸದ್ದು, ಲೋಹದ ಬಳೆಗಳ ಟಿಂಗ್‌ಡಿಂಗ್ ಸದ್ದು, ಸದ್ದೇ ಇಲ್ಲದ ಗೋಟು ಬಳೆ, ಒಂದೇ ಹಾಕಿದರೂ ಕೈಮುಚ್ಚುವಂಥ ಬಳೆಗಳು ತಮ್ಮ ವಿನ್ಯಾಸ ಬದಲಿಸುತ್ತಲೇ ಬಂದಿವೆ.

ಮುಂಗೈ, ಮಣಿಕಟ್ಟಿನ ಸೌಂದರ್ಯ ಮುಚ್ಚುವಂತಿರಲಿ ಎಂದು ಬಯಸಿ ಧರಿಸಲು ನೀಡುತ್ತಿದ್ದ ಬಳೆಗಳು ಈಗಲೂ ಗಮನ ಸೆಳೆಯುವಂಥ ಆಭರಣಗಳಾಗಿಯೇ ಉಳಿದಿವೆ. ❖



ಬೀಟ್ರೂಟ್‌ನ ಸಿಹಿವೈವಿಧ್ಯ

ಕವಿತಾ ಹೆಗಡೆ

ರಸಸ್ವಾದ

ಬೀಟ್ರೂಟ್ ಢೋಕ್ಲಾ

ಬೇಕಾಗುವ ಸಾಮಗ್ರಿಗಳು:- ಬೀಟ್ರೂಟ್ ಪ್ಯೂರಿ 1/2 ಕಪ್, ಚಿರೋಟಿ ರವೆ 1/2 ಕಪ್, ಮೊಸರು 1/2 ಕಪ್, ಹಸಿಮೆಣಸಿನ ಪೇಸ್ಟ್ 1/2 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಈನೋ 1/2 ಚಮಚ, ಎಣ್ಣೆ 4 ಚಮಚ, ಸಾಸಿವೆ 1/2 ಚಮಚ, ಜೀರಿಗೆ 1/2 ಚಮಚ, ಕರಿಬೇವು 5 ಎಲೆ, ಇಂಗು ಚಿಟಿಕೆ

ವಿಧಾನ: ಒಂದು ಪಾತ್ರೆಯಲ್ಲಿ ಚಿರೋಟಿ ರವೆ, ಮೊಸರು, ಬೀಟ್ರೂಟ್ ಪ್ಯೂರಿ, ಹಸಿಮೆಣಸಿನ ಪೇಸ್ಟ್, ಉಪ್ಪು ಎಲ್ಲವನ್ನೂ ಸೇರಿಸಿ ಹತ್ತು ನಿಮಿಷ ಹಾಗೇ ಬಿಡಿ. ಈನೋ ಹಾಕಿ ಅಚ್ಚಿನಲ್ಲಿ ಮಿಶ್ರಣ ಬೆರೆಸಿ ಹಬೆಯಲ್ಲಿ ಇಪ್ಪತ್ತು ನಿಮಿಷ ಬೇಯಿಸಿ. ನಂತರ ಎಣ್ಣೆ, ಇಂಗು, ಸಾಸಿವೆ, ಕರಿಬೇವಿನ ಒಗ್ಗರಣೆ ಮಾಡಿಕೊಂಡು ಡೋಕ್ಲಾ ಮೇಲೆ ಸುರುವಿ.. ಅಚ್ಚಿನ ಪಾತ್ರೆಯಿಂದ ತೆಗೆದು ಬೇಕಾದ ಆಕಾರದಲ್ಲಿ ಕಟ್ ಮಾಡಿ, ಹಸಿರು ಚಟ್ನಿಯೊಂದಿಗೆ ಬಡಿಸಿ.



ಬೀಟ್ರೂಟ್ ಪುಟ್ಟು

ಬೇಕಾಗುವ ಸಾಮಗ್ರಿಗಳು: ಬೀಟ್ರೂಟ್ 1 , ಉಪ್ಪು ರುಚಿಗೆ ತಕ್ಕಷ್ಟು, ತೆಂಗಿನ ತುರಿ 1/4 ಕಪ್, ಪುಟ್ಟು ಮಿಕ್ಸ್ 1 ಕಪ್,

ಮಾಡುವ ವಿಧಾನ:- ಬೀಟ್ರೂಟ್ ಸಿಪ್ಪೆ ತೆಗೆದು ನುಣ್ಣಗೆ ರುಬ್ಬಿ ಪ್ಯೂರಿ ತಯಾರಿಸಿಕೊಳ್ಳಿ. ಮಾರುಕಟ್ಟೆಯಿಂದ ತಂದ ಪುಟ್ಟು ಮಿಕ್ಸ್ ಅನ್ನು ಒಂದು ಪಾತ್ರೆಗೆ ಹಾಕಿ, ರುಬ್ಬಿದ ಬೀಟ್ರೂಟ್ ಮಿಶ್ರಣವನ್ನು ಸ್ವಲ್ಪ ಸ್ವಲ್ಪವೇ ಹಾಕಿ. ಉಪ್ಪು ಹಾಕಿ ಚೆನ್ನಾಗಿ ಕಲಸಿ ಹದಿನೈದು ನಿಮಿಷಗಳ ಕಾಲ ಬಿಡಿ. ನಂತರ ಪುಟ್ಟು ಮಷಿನ್ ಅಲ್ಲಿ ಮೊದಲಿಗೆ ನಾಲ್ಕು ಚಮಚ ತೆಂಗಿನಕಾಯಿ ತುರಿ ನಂತರ ಕಲಸಿಟ್ಟ ಪುಟ್ಟು ಮಿಕ್ಸ್ ಆರು ಚಮಚ ಹಾಕಿ...ಪುನಃ ತೆಂಗಿನ ತುರಿ, ಪುಟ್ಟು ಮಿಕ್ಸ್ ಒಂದರ ನಂತರ ಒಂದನ್ನು ಹಾಕಿ. ಹತ್ತು ನಿಮಿಷ ಕಾಲ ಬೇಯಿಸಿ. ಈಗ ರುಚಿಕರವಾದ ಬೀಟ್ರೂಟ್ ಪುಟ್ಟು ರೆಡಿ.



ಬೀಟ್ರೂಟ್ ಮಸಾಲ ರೈಸ್

ಬೇಕಾಗುವ ಸಾಮಗ್ರಿಗಳು: ಅನ್ನ 2 ಕಪ್, ಬೀಟ್ರೂಟ್ ತುರಿ 1 ಕಪ್, ಹೆಚ್ಚಿದ ಈರುಳ್ಳಿ 1/2 ಕಪ್, ಚಕ್ರ ಮೊಗ್ಗು - 2, ಏಲಕ್ಕಿ- 3 ,ಪಲಾವ್ ಎಲೆ - 2, ಚಕ್ಕೆ 1 ತುಂಡು, ಲವಂಗ - 2, ಜೀರಿಗೆ 1 ಚಮಚ, ಧನಿಯಾ ಪುಡಿ 1 ಚಮಚ,ಖಾರದ ಪುಡಿ 1 ಚಮಚ, ಗರಂ ಮಸಾಲ 1 ಚಮಚ.

ಮಾಡುವ ವಿಧಾನ: ಮೊದಲಿಗೆ ಅನ್ನ ರೆಡಿ ಮಾಡಿಟ್ಟುಕೊಳ್ಳಿ. ನಂತರ ಬಾಣಲೆಗೆ ಎಣ್ಣೆ ಹಾಕಿ ಬಿಸಿಮಾಡಿ ಜೀರಿಗೆಯನ್ನು ಹಾಕಿ ನಂತರ ಎಲ್ಲ ಮಸಾಲೆ ಪದಾರ್ಥಗಳನ್ನು ಹಾಕಿ ಹುರಿದು ಕೊಳ್ಳಿ ನಂತರ ಈರುಳ್ಳಿ ಹಾಕಿ. ಹಸಿ ವಾಸನೆ ಹೋದ ನಂತರ ಬೀಟ್ರೂಟ್ ಹಾಕಿ ಹುರಿಯಿರಿ. ಬೀಟ್ರೂಟ್ ಫ್ರೈ ಆದ ನಂತರ ಅನ್ನ ಹಾಕಿ ಗರಂ ಮಸಾಲ ಧನಿಯಾ ಪುಡಿ, ಖಾರದ ಪುಡಿ ಮತ್ತು ರುಚಿಗೆ ತಕ್ಕಷ್ಟುಉಪ್ಪು ಹಾಕಿ. ಚೆನ್ನಾಗಿ ಬಿಸಿ ಮಾಡಿ ಸವಿಯಲು ನೀಡಿ.



ಬೀಟ್ರೂಟ್ ಪೂರಿ


ಬೇಕಾಗುವ ಸಾಮಗ್ರಿಗಳು: ಬೀಟ್ರೂಟ್ ತುರಿ 1/2 ಕಪ್ , ಗೋಧಿ ಹಿಟ್ಟು 1ಕಪ್, ಚಿರೋಟಿ ರವೆ 1/2 ಕಪ್, ಉಪ್ಪು ರುಚಿಗೆ ತಕ್ಕಷ್ಟು, ಖಾರದ ಪುಡಿ 1ಚಮಚ,ಎಣ್ಣೆ ಕರಿಯಲು ಸಾಕಷ್ಟು

ಮಾಡುವ ವಿಧಾನ: ಸಿಪ್ಪೆ ತೆಗೆದು ಬೀಟ್ರೂಟನ್ನು ತುರಿದು ರುಬ್ಬಿಕೊಳ್ಳಿ. ಬೀಟ್ರೂಟ್ ರಸಕ್ಕೆ ಗೋಧಿ ಹಿಟ್ಟು, ಚಿರೋಟಿ ರವೆ, ಉಪ್ಪು, ಖಾರದ ಪುಡಿ ಸೇರಿಸಿಕೊಂಡು 2 ಚಮಚ ಬಿಸಿ ಎಣ್ಣೆ ಹಾಕಿ ಮಿದ್ದುಕೊಳ್ಳಿ.

ಪೂರಿ ಹಿಟ್ಟಿನ ಹದಕ್ಕೆ ಕಲೆಸಿ, 30 ನಿಮಿಷದ ಬಿಟ್ಟು ಕಾದ ಎಣ್ಣೆಯಲ್ಲಿ ಪೂರಿ ಕರಿದು ಸವಿಯಿರಿ.



ಬೀಟ್ರೂಟ್ ಮೈಸೂರು ಪಾಕ್



ಬೇಕಾಗುವ ಸಾಮಗ್ರಿಗಳು: ಕಡಲೆ ಹಿಟ್ಟು 1 ಕಪ್, ಸಕ್ಕರೆ 1 ಕಪ್, ತುಪ್ಪ 3/4 ಕಪ್, ಬೀಟ್ರೂಟ್ ರಸ 1/4 ಕಪ್, ಏಲಕ್ಕಿ ಪುಡಿ 1/4 ಚಮಚ, ಬಾದಾಮಿ 8-10, ನೀರು 3/4 ಬಟ್ಟಲು

ವಿಧಾನ: ಒಂದು ಪಾತ್ರೆಗೆ ಸಕ್ಕರೆ ಹಾಗೂ ನೀರನ್ನು ಹಾಕಿ ಒಂದೆಳೆ ಪಾಕ ಮಾಡಿಡಿ.ಒಂದು ದಪ್ಪ ತಳ ಇರುವ ಬಾಣಲೆಗೆ ತುಪ್ಪ ಹಾಕಿ ಬಿಸಿ ಮಾಡಲು ಇಟ್ಟು ಅದಕ್ಕೆ ಕಡಲೆ ಹಿಟ್ಟನ್ನು ಹಾಕಿ ಗಂಟಿಲ್ಲದ ಹಾಗೆ ಕೈಯಾಡಿಸುತ್ತಾ ಇರಿ ಅದಕ್ಕೆ ಬೀಟರೂಟ್ ರಸ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಸಕ್ಕರೆ ಪಾಕ ಹಾಕಿ ಮಧ್ಯಮ ಉರಿಯಲ್ಲಿ ಕೈಯಾಡಿಸ್ತಾ ಇರಿ. ತಳ ಬಿಡುವ ಹಂತದಲ್ಲಿ ಅದಕ್ಕೆ ತುಪ್ಪದಲ್ಲಿ ಕರಿದ ಗೋಡಂಬಿ ತುಂಡು ಹಾಕಿ ಮಿಕ್ಸ್ ಮಾಡಿ. ತುಪ್ಪ ಸವರಿದ ತಟ್ಟೆಗೆ ಹಾಕಿ ಹರಡಿ ಆರಿದ ನಂತರ ಬೇಕಾದ ಆಕಾರದಲ್ಲಿ ಕಟ್ ಮಾಡಿ.

ಬೀಟ್ರೂಟ್ ಮೊಮೊಸ್

ಬೇಕಾಗುವ ಸಾಮಗ್ರಿಗಳು: ಗೋಧಿ ಹಿಟ್ಟು 1 ಕಪ್, ಬೀಟ್ರೂಟ್ 1, ವಿನೆಗರ್ 1 ಚಮಚ, ಕ್ಯಾಬೇಜ್ 1 ಕಪ್, ಈರುಳ್ಳಿ 1,ಹೆಚ್ಚಿದ ಕೊತ್ತಂಬರಿ ಸೊಪ್ಪು 1/4 ಕಪ್, ಹಸಿಮೆಣಸಿನ ಪೇಸ್ಟ್ 1 ಚಮಚ, ಶುಂಠಿ ಪೇಸ್ಟ್ 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು,ಎಣ್ಣೆ 5 ಚಮಚ.

ಮಾಡುವ ವಿಧಾನ: ಮೊದಲು ಬೀಟ್ರೂಟ್ ಬೇಯಿಸಿ, ಜಾಸ್ತಿ ನೀರು ಹಾಕದೇ ನುಣ್ಣಗೆ ರುಬ್ಬಿ ರಸ ತೆಗೆದಿಟ್ಟುಕೊಳ್ಳಿ. ಬೀಟ್ರೂಟ್ ಪ್ಯೂರಿಗೆ ವಿನೆಗರ್ ಬೆರೆಸಿ. ಗೋಧಿ ಹಿಟ್ಟಿಗೆ ಬೀಟ್ರೂಟ್ ರಸ , ಉಪ್ಪು, ಬಿಸಿ ನೀರು ಹಾಕಿ ಹಿಟ್ಟು ಕಲೆಸಿಕೊಂಡು ಎಣ್ಣೆ ಸವರಿ ಸಣ್ಣ ಸಣ್ಣ ಉಂಡೆ ಮಾಡಿಟ್ಟುಕೊಳ್ಳಿ. ಸ್ಟಫಿಂಗ್ ಗಾಗಿ ಹೆಚ್ಚಿದ ಕ್ಯಾಬೇಜ್, ಈರುಳ್ಳಿ ಪೀಸ್, ಕೊತ್ತಂಬರಿ ಸೊಪ್ಪು, ಮೆಣಸಿನ ಪೇಸ್ಟ್, ಶುಂಠಿ ಪೇಸ್ಟ್, ಉಪ್ಪು, ಎಲ್ಲ ಸೇರಿಸಿ .ತಯಾರಿಸಿದ ಗೋಧಿ ಹಿಟ್ಟಿನ ಉಂಡೆಗಳನ್ನು ಸ್ವಲ್ಪ ಲಟ್ಟಿಸಿಕೊಂಡು ಸ್ಟಫಿಂಗ್ ಸೇರಿಸಿ ಇಷ್ಟವಾದ ಆಕಾರದಲ್ಲಿ ಮೊಮೊಸ್ ತಯಾರಿಸಿಕೊಳ್ಳಿ..

ಸ್ಟೀಮರ್‌ನಲ್ಲಿ ಹತ್ತು ನಿಮಿಷ ಬೇಯಿಸಿ. ಕೆಂಪನೆಯ ಮೊಮೊಸ್ ಗಳನ್ನು ಚಟ್ನಿ ಮತ್ತು ಸಾಸ್ ಜೊತೆಗೆ ಸರ್ವ್ ಮಾಡಿ.



ಸ್ಪಂದನ



ಡಾ. ವೀಣಾ ಎಸ್. ಭಟ್

ಮೂರು ತಿಂಗಳಿಗೊಮ್ಮೆ ಮುಟ್ಟು ಪರಿಹಾರವೇನು?

● ನನಗೆ 18 ವರ್ಷಗಳು. ಮೂರು ತಿಂಗಳಿಗೊಮ್ಮೆ ಮುಟ್ಟಾಗುತ್ತದೆ. ವೈದ್ಯರು ಈಗಾಗಲೇ ಸ್ಕ್ಯಾನಿಂಗ್ ಮಾಡಿ ಒಂದು ತಿಂಗಳ ಔಷಧ ಕೊಟ್ಟಿದ್ದಾರೆ. ಈ ಸಮಸ್ಯೆಯಿಂದ ಪಾರಾಗುವುದು ಹೇಗೆ?

ಹದಿವಯಸ್ಸಿನಲ್ಲಿ 11 ರಿಂದ 15ರ ಒಳಗೆ ಪ್ರಥಮ ಋತುಚಕ್ರ ಆರಂಭವಾಗುತ್ತದೆ. ಹೈಪೋಥಲಾಮಸ್‌ನಿಂದ ನಿರ್ದೇಶಿತವಾಗಿ, ಪಿಟ್ಯೂಟರಿ ಗ್ರಂಥಿಯಿಂದ ಪ್ರಚೋದಕ ಹಾರ್ಮೋನುಗಳು ಬಿಡುಗಡೆಯಾಗಿ ಅಂಡಾಶಯವನ್ನು ಪ್ರಚೋದಿಸಿ ಅದರಿಂದ ಸ್ತ್ರೀತ್ವದ ಹಾರ್ಮೋನುಗಳು ಉತ್ಪಾದನೆಯಾಗುತ್ತವೆ. ಹರೆಯದಲ್ಲಿ ಲೈಂಗಿಕ ಬೆಳವಣಿಗೆಯಾಗಿ ಋತುಚಕ್ರ ಆರಂಭವಾಗುತ್ತದೆ.

ಹೈಪೋಥಲಾಮಸ್, ಪಿಟ್ಯೂಟರಿ ಅಂಡಾಶಯದ ಅಕ್ಷವು (ಎಚ್‌ಪಿಎ ಆಕ್ಸಿಸ್) ಪಕ್ವವಾಗಿರಬೇಕು. ಋತುಮತಿಯಾಗಿ ಮೊದಲೆರಡು ವರ್ಷಗಳು ಈ ಎಚ್‌ಪಿಎ ಅಕ್ಷವು ಪಕ್ವವಾಗಿರುವುದಿಲ್ಲ. ಋತುಚಕ್ರವು ನಿಯಮಿತವಾಗಿ ಬರದೇ ಸ್ವಲ್ಪ ಏರುಪೇರಾಗಬಹುದು.

ನಿಮಗೆ ಋತುಚಕ್ರ ಆರಂಭವಾಗಿ ಮೂರು ನಾಲ್ಕು ವರ್ಷಗಳಾಗಿರಬಹುದಲ್ಲವೇ?. ಬೊಜ್ಜಿದ್ದಲ್ಲಿ ಸಮತೂಕ ಗಳಿಸಲು ಪ್ರಯತ್ನಿಸಿ. ವಾತಾವರಣದ ಬದಲಾವಣೆಯಿಂದ ಮುಟ್ಟಿನ ಅವಧಿಯಲ್ಲಿ ಬದಲಾವಣೆಯಾಗಬಹುದು.

ಹದಿವಯಸ್ಸಿನ ಹೆಣ್ಣು ಮಕ್ಕಳಲ್ಲಿ ಮುಟ್ಟಿನ ಅವಧಿಯ ವ್ಯತ್ಯಾಸ ಪ್ರಕರಣ ಹೆಚ್ಚುತ್ತಿದೆ. ಇದಕ್ಕೆ ಕಾರಣ ಜೀವನಶೈಲಿ. ಕಡಿಮೆ ದೈಹಿಕ ಚಟುವಟಿಕೆ, ಹೆಚ್ಚು ಜಂಕ್‌ಫುಡ್ ಸೇವನೆ, ಅತಿ ಮೊಬೈಲ್ ಬಳಕೆ, ತಡವಾಗಿ ಮಲಗಿ ತಡವಾಗಿ ಏಳುವ ಅಭ್ಯಾಸದಿಂದ ಜೈವಿಕ ಗಡಿಯಾರದಲ್ಲಿ ವ್ಯತ್ಯಾಸ, ಹೆಚ್ಚುತ್ತಿರುವ ಮಾನಸಿಕ ಒತ್ತಡವೂ ಕಾರಣವಾಗಿದೆ.

ಕೃಷಿ, ಹೈನುಗಾರಿಕೆ ಕ್ಷೇತ್ರಗಳಲ್ಲಿ ವ್ಯಾಪಕ ಬಳಕೆಯಲ್ಲಿರುವ ರಾಸಾಯನಿಕಗಳು ದೇಹವನ್ನು ಸೇರುತ್ತಿದೆ. ಪ್ಲಾಸ್ಟಿಕ್ ಬಳಕೆಯಿಂದಲೂ ಶರೀರವನ್ನು ಸೇರುತ್ತಿರುವ ಬಿಸ್ಫಿನಾಲ್ ಮತ್ತು ಥ್ಯಾಲೇಟ್‌ನಂಥ ರಾಸಾಯನಿಕಗಳು ಹೆಣ್ತನದ ಹಾರ್ಮೋನುಗಳ ಅಸಮತೋಲನಕ್ಕೆ ಕಾರಣವಾಗಿದೆ.

ಇವೆಲ್ಲವೂ ಪಾಲಿಸಿಸ್ಟಿಕ್ ಒವೇರಿಯನ್ ಡಿಸೀಸ್ (ಪಿಸಿಒಡಿ) ನಂಥ ಸಮಸ್ಯೆಗಳನ್ನು ಹೆಚ್ಚು ಮಾಡುತ್ತಾ ಋತುಚಕ್ರದ ಏರುಪೇರು, ಬಂಜೆತನ, ಅನಗತ್ಯ ಜಾಗದಲ್ಲಿ ಕೂದಲುಗಳ ಬೆಳವಣಿಗೆ ಕಾರಣವಾಗಿದೆ. ಮಧುಮೇಹ, ಏರು ರಕ್ತದೊತ್ತಡ, ಹೃದ್ರೋಗ, ಕ್ಯಾನ್ಸರ್‌ನಂಥ ದೀರ್ಘಾವಧಿ ಆರೋಗ್ಯ ಸಮಸ್ಯೆ ತಂದೊಡ್ಡಬಹುದು. ಉತ್ತಮ ಪೋಷಕಾಂಶಗಳುಳ್ಳ ಹಸಿರು ಸೊಪ್ಪು, ತರಕಾರಿಗಳು, ಒಣ ಹಣ್ಣುಗಳು, ಮೊಳಕೆ ಕಾಳುಗಳನ್ನು ಸೇವನೆ ಮಾಡಿ. ನಿಗದಿತ ಸಮಯದಲ್ಲಿ ನಿಯಮಿತವಾಗಿ ದೈಹಿಕ ಚಟುವಟಿಕೆ ಇರಲಿ. ರಾತ್ರಿ 6 ರಿಂದ 8 ತಾಸು ನಿದ್ರೆ ಮಾಡಬೇಕು. ವಯಸ್ಸಿಗೆ ಹಾಗೂ ಎತ್ತರಕ್ಕೆ ತಕ್ಕ ಸಮತೂಕವನ್ನು ಹೊಂದಲು ಪ್ರಯತ್ನಿಸಿ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಅಂತರ್ಜಲ ಮಟ್ಟ ಸುಧಾರಿಸಲು ತಜ್ಞರಿಂದ ಕ್ರಿಯಾಯೋಜನೆ

‘ನೀರಿನ ಕ್ರೆಡಿಟ್’ ಜಾರಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಸಂಗ್ರಹ ಮಾಡಿ, ಅಂತರ್ಜಲ ಹೆಚ್ಚಿಸಲು ಕ್ರಮ ಕೈಗೊಂಡಿರುವ ರೈತರಿಗೆ ಪ್ರೋತ್ಸಾಹ ಧನ ನೀಡುವ ‘ನೀರಿನ ಕ್ರೆಡಿಟ್’ ಪದ್ಧತಿ ಜಾರಿಗೊಳಿಸಲು ತಜ್ಞರು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ರಾಜ್ಯದಲ್ಲಿ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಸುಧಾರಿಸುವ ಬಗ್ಗೆ ವರದಿ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ, ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಲಾನಯನ ನಿರ್ವಹಣೆಯ ಉತ್ಕೃಷ್ಟತಾ ಕೇಂದ್ರದ ವತಿಯಿಂದ ಶುಕ್ರವಾರ ನಡೆದ ತಜ್ಞರ ಕಾರ್ಯಾಗಾರದಲ್ಲಿ ‘ಇಂಗಾಲದ ಕ್ರೆಡಿಟ್’ ಮಾದರಿಯಂತೆ ‘ನೀರಿನ ಕ್ರೆಡಿಟ್ ಪದ್ಧತಿ’ಯನ್ನು ಜಾರಿಗೆ ತರಬೇಕೆಂಬ ಅಭಿಪ್ರಾಯ ವ್ಯಕ್ತವಾಯಿತು.

> **ನೀರಿನ ಕ್ರೆಡಿಟ್ ಎಂದರೇನು?**
>
> ಅಂತರ್ಜಲ ವೃದ್ಧಿಗೆ ಕ್ರಮಗಳು ಹಾಗೂ ಹವಾಮಾನ ವೈಪರೀತ್ಯವನ್ನು ತಡೆಯಲು ಜಮೀನಿನಲ್ಲಿ ವಿವಿಧ ಪದ್ಧತಿಗಳಿಂದ ನೀರನ್ನು ಸಂಗ್ರಹಣೆ ಮಾಡುವ ರೈತರಿಗೆ ಪ್ರೋತ್ಸಾಹ ಧನ ನೀಡುವುದಕ್ಕೆ ‘ನೀರಿನ ಕ್ರೆಡಿಟ್’ ಎಂದು ಕರೆಯಲಾಗುತ್ತದೆ.

ರಾಜ್ಯದಲ್ಲಿ ಅಂತರ್ಜಲದ ಸಮರ್ಪಕ ಬಳಕೆಗೆ ಜಲ-ಸಮರ್ಥ ನೀರಾವರಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು, ರೈತರಿಗೆ ನೀರಿನ ಸದ್ಬಳಕೆ ಕುರಿತು ಶಿಕ್ಷಣ ನೀಡಬೇಕು, ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಒಗ್ಗೂಡಿಸಿಕೊಂಡು ಕಾರ್ಯತಂತ್ರ ಹಾಗೂ ಅಂತರ್ಜಲ ನಿರ್ವಹಣೆ ಕುರಿತು ನೀತಿ ನಿಯಮಾವಳಿ ಸೇರಿದಂತೆ ‘ನೀರಿನ ಕ್ರೆಡಿಟ್ ಪದ್ಧತಿ’ ಜಾರಿಗೆ ತರಲು ಸಮಗ್ರ ಕ್ರಿಯಾಯೋಜನೆ ರಚಿಸಲು ನಿರ್ಧರಿಸಲಾಯಿತು.

ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಜಲಾನಯನ ನಿರ್ವಹಣೆಯ ಉತ್ಕೃಷ್ಟತಾ ಕೇಂದ್ರದ ವತಿಯಿಂದ ಮಾನದಂಡಗಳೊಂದಿಗೆ ಕ್ರಿಯಾಯೋಜನೆ ಶೀಘ್ರ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲು ತೀರ್ಮಾನಿಸಲಾಯಿತು.

ಅಂತರ್ಜಲ ಅಭಿವೃದ್ಧಿಗಾಗಿ ನೀರು ಶೇಖರಣಾ ವಿನ್ಯಾಸಗಳಾದ ಚೆಕ್ ಡ್ಯಾಮ್, ಇಂಗು ಗುಂಡಿ ನಿರ್ಮಾಣ, ಕೃತಕ ಮರು ಪೂರಣ ವಿನ್ಯಾಸಗಳ ನಿರ್ವಹಣೆ, ನೀರಿನ ಸದ್ಬಳಕೆಗಾಗಿ ಸಮರ್ಥ ನೀರಾವರಿ ಪದ್ಧತಿಗಳಾದ ಹನಿ ಮತ್ತು ತುಂತುರು ನೀರಾವರಿ, ಸೂಕ್ತ ಬೆಳೆಗಳ ಆಯ್ಕೆ ಮತ್ತು ಬೆಳೆ ಹೊದಿಕೆ ಅಳವಡಿಸುವ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.

ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಗಿರೀಶ್, ತೋಟಗಾರಿಕೆ ಇಲಾಖೆಯ ನಿರ್ದೇಶಕ ಡಿ.ಎಸ್. ರಮೇಶ್, ಉಪ ಅರಣ್ಯ ಅಧಿಕಾರಿ ರುದ್ರನ್, ಕೃಷಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎ.ಬಿ.ಪಾಟೀಲ್, ಭಾರತೀಯ ವಿಜ್ಞಾನ ಸಂಸ್ಥೆಯ ಡಾ.ಶೇಖರ್ ಮುದ್ದು, ಭೂಮಿ ಸರ್ವೆ ಮತ್ತು ಮಣ್ಣು ಸರ್ವೆ ಬಳಕೆ ಯೋಜನೆಯ (ಎನ್‌ಬಿಎಸ್‌ಎಸ್- ಎಲ್‌ಯುಪಿ) ಡಾ. ರಾಜೇಂದ್ರನ್, ರಿವಾರ್ಡ್ ಯೋಜನೆಯ ವಿಶ್ವಬ್ಯಾಂಕ್ ಸಲಹೆಗಾರ ನಟರಾಜನ್, ಜಲಾನಯನ ಅಭಿವೃದ್ಧಿ ಉತ್ಕೃಷ್ಟತಾ ಕೇಂದ್ರದ ನಿರ್ದೇಶಕ ಡಾ. ಪ್ರಕಾಶ್, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಕೇಂದ್ರೀಯ ಅಂತರ್ಜಲ ಪ್ರಾಧಿಕಾರದ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಅಂಜನಾದ್ರಿಗೂ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮನ ಬಂಟ ಹನುಮನ ಜನ್ಮಸ್ಥಳ ಎಂದು ನಂಬಲಾದ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟವನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಅಗತ್ಯ ಅನುದಾನವನ್ನೂ ಬಜೆಟ್‌ನಲ್ಲಿ ಘೋಷಣೆ ಮಾಡುವ ಬಗ್ಗೆ ಸಿದ್ದರಾಮಯ್ಯ ಆಲೋಚಿಸಿದ್ದಾರೆ.

‘ಅಂಜನಾದ್ರಿ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವ ಮೂಲಕ, ಶ್ರೀರಾಮನ ಭಕ್ತನ ನೆಲೆಯನ್ನು ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಲಿದೆ ಎಂದು ಬಿಂಬಿಸುವ ಬಗ್ಗೆ ಆರಂಭಿಕ ಚರ್ಚೆ ನಡೆದಿದೆ. ಎಷ್ಟು ಅನುದಾನ ನೀಡಬೇಕು? ಯೋಜನೆ ಯಾವ ರೀತಿ ಇರಬೇಕು ಎಂಬ ಬಗ್ಗೆ ಈವರೆಗೆ ಯಾವುದೇ ತೀರ್ಮಾನವಾಗಿಲ್ಲ’ ಎಂದು ಮೂಲಗಳು ಹೇಳಿವೆ.

ವಿಧಾನಸಭೆ ಚುನಾವಣೆ ಮುನ್ನ ಬಜೆಟ್ ಮಂಡಿಸಿದ್ದ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ₹100 ಕೋಟಿ ಅನುದಾನ ನೀಡಿದ್ದರು. ಪ್ರವಾಸಿಗಳಿಗೆ ಮೂಲಸೌಕರ್ಯ ಕಲ್ಪಿಸಲು ವಿವಿಧ ಕಾಮಗಾರಿಗಳನ್ನು ಒಳಗೊಂಡ ವಿಸ್ತೃತವಾದ ಯೋಜನೆ ತಯಾರಿಸಿ ಟೆಂಡರ್ ಕರೆಯಲಾಗಿದೆ ಎಂದೂ ಹೇಳಿದ್ದರು. ಚುನಾವಣೆ ಘೋಷಣೆಯಾಗುವ ಕೆಲವೇ ದಿನಗಳ ಮೊದಲು ವಿವಿಧ ಕಾಮಗಾರಿಗಳಿಗೆ ಶಿಲಾನ್ಯಾಸವನ್ನೂ ನಡೆಸಿದ್ದರು.

‘ಹಿಂದೆ ನೀಡಲಾಗಿದ್ದ ₹100 ಕೋಟಿಯಲ್ಲಿ ₹22 ಕೋಟಿ ಮೊತ್ತದ ವಿವಿಧ ಕಾಮಗಾರಿಗಳು ನಡೆಯುತ್ತಿವೆ’ ಎಂದು ಮೂಲಗಳು ಹೇಳಿವೆ.

ರಾಮ ಮಂದಿರ ಅಭಿವೃದ್ಧಿಗೆ ₹ 100 ಕೋಟಿ

ಒಂದನೇ ಪುಟದಿಂದ...

ಲೋಕಸಭೆ ಚುನಾವಣೆಯನ್ನು ಎದುರುಗೊಳ್ಳುತ್ತಿರುವ ಹೊತ್ತಿನೊಳಗೆ ಸಿದ್ದರಾಮಯ್ಯ ತಮ್ಮ 15ನೇ ಬಜೆಟ್ ಮಂಡಿಸಿ, ತಮ್ಮ ದಾಖಲೆಯನ್ನು ತಾವೇ ಮುರಿಯಲಿದ್ದಾರೆ. ದೇಗುಲಗಳ ಅಭಿವೃದ್ಧಿಗೆ ಅನುದಾನ ನೀಡುವ ಮೂಲಕ ‘ಹಿಂದೂ ವಿರೋಧಿ’ ಎಂಬ ಅಪಪ್ರಚಾರ ತೊಡೆದು ಹಾಕುವತ್ತ ಹೆಜ್ಜೆ ಇಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

₹ 100 ಕೋಟಿ: ರಾಜ್ಯದಲ್ಲಿರುವ ರಾಮನ ಹೆಸರಿನ ರಾಮಮಂದಿರಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸೂಚನೆ ಆಧರಿಸಿ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

ಒಂದು ರಾಮಮಂದಿರಕ್ಕೆ ತಲಾ ₹1 ಕೋಟಿ ನೀಡಿ ಪುರಾತನ ದೇವಾಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ ಅವರು, ಬಜೆಟ್ ಪೂರ್ವಭಾವಿ ಸಮಾಲೋಚನೆಯನ್ನು ಇಲಾಖಾವಾರು ನಡೆಸುತ್ತಿದ್ದಾರೆ. ಮುಜರಾಯಿ ಇಲಾಖೆಗೆ ಸಂಬಂಧಿಸಿ ನಡೆದ ಸಭೆಯಲ್ಲಿ ಈ ಪ್ರಸ್ತಾವವನ್ನು ಮುಖ್ಯಮಂತ್ರಿ ಮುಂದೆ ಮಂಡಿಸಲಾಗಿದೆ.

ಬಿಯರ್ ದರ ಹೆಚ್ಚಳ ಜಾರಿ

ಬೆಂಗಳೂರು: ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು (ಎಇಡಿ) ಶೇಕಡ 10ರಷ್ಟು ಹೆಚ್ಚಿಸುವ ತೀರ್ಮಾನ ಗುರುವಾರದಿಂದಲೇ ಜಾರಿಯಾಗಿದೆ. ಇದರಿಂದ ಪ್ರತಿ ಬಾಟಲಿ ಬಿಯರ್ ದರದಲ್ಲಿ ₹8ರಿಂದ ₹10ರಷ್ಟು ಹೆಚ್ಚಳವಾಗಿದೆ.

ಆರು ತಿಂಗಳಲ್ಲೇ ಮತ್ತೊಮ್ಮೆ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಏರಿಕೆ ಮಾಡಲಾಗಿದೆ.

ಭಾರತೀಯ ಮದ್ಯದ ಮೇಲಿನ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಕಾರ್ಯದರ್ಶಿ ಅಮಾನತಿಗೆ ಆಗ್ರಹ

ಒಂದನೇ ಪುಟದಿಂದ...

ಆಯೋಗದ ಅನುಮೋದನೆ ಇಲ್ಲದೆ ಕಾರ್ಯದರ್ಶಿಯವರು ಪರೀಕ್ಷಾ ದಿನಾಂಕ ನಿಗದಿ ಮಾಡಿದ್ದಾರೆ. ಪರೀಕ್ಷೆಯನ್ನೂ ನಡೆಸಿದ್ದಾರೆ ಮತ್ತು ಕೀ ಉತ್ತರಗಳನ್ನು ಪ್ರಕಟಿಸಿದ್ದಾರೆ. ಆಯೋಗದ ವೆಬ್‌ಸೈಟ್ ಅನ್ನು ವೈಯಕ್ತಿಕ ಸ್ವತ್ತು ಎಂಬಂತೆ ಬಳಸಿಕೊಳ್ಳುತ್ತಿದ್ದಾರೆ. ಕಾರ್ಯಸೂಚಿಯ ಕುರಿತು ಮಾಹಿತಿ ನೀಡದೇ ಸಭೆ ಕರೆದಿದ್ದು, ಸಭೆ ಮುಂದೂಡುವಂತೆ ನೀಡಿದ್ದ ಸೂಚನೆಯನ್ನು ಉಲ್ಲಂಘಿಸಿದ್ದಾರೆ. ಅಧ್ಯಕ್ಷರ ಗಮನಕ್ಕೆ ತರದೇ ಪರ್ಯಾಯ ಸಭೆ ನಡೆಸಿದ್ದಾರೆ ಎಂದು ಸಾಹುಕಾರ ಪತ್ರದಲ್ಲಿ ದೂರಿದ್ದಾರೆ.

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ, ದಾಖಲೆ ಒದಗಿಸುವಂತೆ ಟಿಪ್ಪಣಿ ನೀಡಿದ್ದರೂ, ಅದನ್ನು ಪಾಲಿಸಿಲ್ಲ. ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಆಯೋಗದ ಹೆಸರಿನಲ್ಲಿ ಹೊಸ ಅಧಿಸೂಚನೆ ಹೊರಡಿಸಿರುತ್ತಾರೆ ಎಂದು ಆರೋಪ ಮಾಡಿದ್ದಾರೆ.

‘ಕಾರ್ಯದರ್ಶಿಯವರು ತಮ್ಮ ತಪ್ಪು ಮುಚ್ಚಿಕೊಳ್ಳಲು ಆಯೋಗದ ಅಧ್ಯಕ್ಷರು, ಸದಸ್ಯರ ಕುರಿತು ತಪ್ಪಾಗಿ ಬಿಂಬಿಸುವ ಪತ್ರಿಕಾ ಪ್ರಕಟಣೆ ನೀಡುತ್ತಿದ್ದಾರೆ. ನಾನು ಅಧ್ಯಕ್ಷನಾಗಿ ನೇಮಕಗೊಂಡ ನಂತರ ಆಯೋಗದ ಒಟ್ಟಾರೆ ಕಾರ್ಯನಿರ್ವಹಣೆ, ಕರ್ತವ್ಯಲೋಪದ ಕುರಿತು ಸತ್ಯಾಸತ್ಯತೆ ಅರಿಯಲು ವಿಚಾರಣೆಗೆ ಆದೇಶಿಸಬೇಕು. ವಿಚಾರಣಾ ಪ್ರಕ್ರಿಯೆ ಮುಗಿಯುವವರೆಗೂ ಲತಾಕುಮಾರಿ ಅವರನ್ನು ಅಮಾನತಿನಲ್ಲಿ ಇರಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಪತ್ರ ಬರೆದಿರುವುದು ದುರ್ನಡತೆ’

‘ಸಾಂವಿಧಾನಿಕ ಹುದ್ದೆಯಲ್ಲಿರುವ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆಯುವ ಅಧಿಕಾರ ಸರ್ಕಾರಿ ಅಧಿಕಾರಿಯಾಗಿರುವ ಕೆಪಿಎಸ್‌ಸಿ ಕಾರ್ಯದರ್ಶಿಯವರಿಗೆ ಇಲ್ಲ. ಆ ರೀತಿ ಪತ್ರ ಬರೆದು ದುರ್ನಡತೆ ಮತ್ತು ಕರ್ತವ್ಯಲೋಪ ಎಸಗಿರುವ ಲತಾಕುಮಾರಿ, ಸರ್ಕಾರಕ್ಕೂ ಮುಜುಗರ ಉಂಟುಮಾಡಿರುತ್ತಾರೆ’ ಎಂದು ಶಿವಶಂಕರಪ್ಪ ಸಾಹುಕಾರ ಪತ್ರದಲ್ಲಿ ಹೇಳಿದ್ದಾರೆ.

ಜೆರಾಲ್ಡ್‌ಗೆ ಕೊಂಕಣಿ ಸಾಹಿತ್ಯ ಪ್ರಶಸ್ತಿ



ಜೆರಾಲ್ಡ್ ಪಿಂಟೊ

ಮಂಗಳೂರು: 'ಕರ್ನಾಟಕ ಕೊಂಕಣಿ ಲೇಖಕ್ ಸಂಘ್' ನೀಡುವ ಸಾಹಿತ್ಯ ಪ್ರಶಸ್ತಿಗೆ ಕೊಂಕಣಿ ಸಾಹಿತಿ ಜೆರಾಲ್ಡ್ ಪಿಂಟೊ (ಜೆರಿ ನಿಡ್ಡೋಡಿ) ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಪತ್ರ, ಸ್ಮರಣಿಕೆ ಒಳಗೊಂಡಿದೆ. ಬಜ್ಜೋಡಿಯ ಸಂದೇಶ ಪ್ರತಿಷ್ಠಾನದಲ್ಲಿ ಫೆ.17ರಂದು ಸಂಜೆ 6.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಸಂಚಾಲಕ ರಿಚರ್ಡ್ ಮೊರಾಸ್ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಡುಪಿ ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿರುವ ಜೆರಾಲ್ಡ್ ಪಿಂಟೊ ಅವರು 6 ಕಾದಂಬರಿಗಳನ್ನು ಬರೆದಿದ್ದಾರೆ. 75 ಕತೆಗಳು, 900ಕ್ಕೂ ಹೆಚ್ಚು ಲೇಖನಗಳು ಕೊಂಕಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ ಎಂದರು.

ಸಮಿತಿಯ ಸದಸ್ಯರಾದ ಡೊಲ್ಫಿ ಎಫ್. ಲೋಬೊ, ಹೆನ್ರಿ ಮಸ್ಕರೇನಸ್ ಹಾಗೂ ಜೆ.ಎಫ್. ಡಿಸೋಜ ಇದ್ದರು.

'ಸವದಿ ಬಿಜೆಪಿಗೆ ಮರಳುವ ವಿಶ್ವಾಸ'

ಚನ್ನಮ್ಮನ ಕಿತ್ತೂರು: 'ಶಾಸಕ ಲಕ್ಷ್ಮಣ ಸವದಿ ಅವರು ಆದಷ್ಟು ಬೇಗೆ ಬಿಜೆಪಿಗೆ ಮರಳುವರು' ಎಂದು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ವಿಶ್ವಾಸ ವ್ಯಕ್ತಪಡಿಸಿದರು. 'ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ, ಸಂಸದ ಅಣ್ಣಾಸಾಹೇಬ ಜೊಲ್ಲೆ, ನಾನೂ ಮತ್ತು ಕೆಲ ಮುಖಂಡರು ಸೇರಿ ಸವದಿ ಅವರ ಜತೆ ಚರ್ಚಿಸಿದ್ದೇವೆ. ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಮಯ ತೆಗೆದುಕೊಂಡಿರುವ ಅವರು ವಿಚಾರ ಮಾಡಿ, ಸೂಕ್ತ ನಿರ್ಧಾರ ಕೈಗೊಳ್ಳುವರು' ಎಂದರು.

ನಾಡಗೀತೆ ಧಾಟಿ ಬದಲಾವಣೆ ಮನವಿಗಳನ್ನು ಪುರಸ್ಕರಿಸಬಾರದು: ರಾಜ್ಯ ಸರ್ಕಾರದಿಂದ ಹೈಕೋರ್ಟ್‌ಗೆ ಮನವಿ

ಕಣ್ಣುಮುಚ್ಚಿ ಕಡ್ಡಾಯಗೊಳಿಸಿಲ್ಲ: ಸರ್ಕಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಮ್ಮದು ಅನುಪಮ ನಾಡಗೀತೆ
- ಹೆಚ್ಚು ಕಿತ್ತಾಡಬೇಡಿ: ನ್ಯಾಯಪೀಠದ ಸಲಹೆ

ಬೆಂಗಳೂರು: 'ನಾಡಗೀತೆಯನ್ನು ಇಂತಹುದೇ ಧಾಟಿಯಲ್ಲಿ ಹಾಡಬೇಕು ಎಂದು ಸರ್ಕಾರದ ಆದೇಶ ಇರುವಾಗ ಮತ್ತೊಂದು ಧಾಟಿಯಲ್ಲಿ ಹಾಡಲು ನಿರ್ದೇಶಿಸಬೇಕು ಎಂಬಂತಹ ಮನವಿಗಳನ್ನು ಪುರಸ್ಕರಿಸಬಾರದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

'ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿಯೇ ನಾಡಗೀತೆಯನ್ನು 2 ನಿಮಿಷ 30 ಸೆಕೆಂಡ್‌ಗಳಲ್ಲಿ ಹಾಡಬೇಕು' ಎಂಬುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್ 25ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹಮದ್, 'ಕೋರ್ಟ್ ಇಂತಹ ಮನವಿಗಳನ್ನೆಲ್ಲಾ ಮಾನ್ಯ ಮಾಡುತ್ತಾ ಹೋದರೆ ಮುಂದೆ ಮತ್ತೊಬ್ಬರು ಮತ್ತೊಂದು ಧಾಟಿಯಲ್ಲಿ ಹಾಡುವುದಕ್ಕೆ ನಿರ್ದೇಶಿಸಿಬೇಕು ಎಂದು ಕೋರಿ ಕೋರ್ಟ್ ಮೆಟ್ಟಿಲೇರುತ್ತಾರೆ. ಆಗ ಅದು ಅನಪೇಕ್ಷಿತ ಬೆಳವಣಿಗೆಗಳಿಗೆ ನಾಂದಿ ಹಾಡುತ್ತದೆ' ಎಂದರು.

'ಇಂತಹುದೇ ಧಾಟಿಯಲ್ಲಿ ಹಾಡಬೇಕು ಎಂಬುದನ್ನು ಸರ್ಕಾರ ಕಣ್ಣುಮುಚ್ಚಿ ಕಡ್ಡಾಯಗೊಳಿಸಿಲ್ಲ. ಇದಕ್ಕಾಗಿಯೇ ಇದ್ದ ಸಮಿತಿ ಈ ಅಖೈರು ತೀರ್ಮಾನ ಕೈಗೊಂಡಿದೆ. ಇದು ಯಾರ ಮೂಲಭೂತ ಹಕ್ಕನ್ನೂ ಕಸಿಯುವ ಪ್ರಯತ್ನವಲ್ಲ. ನಾಡಗೀತೆಯ ಗೌರವ ಕಾಪಾಡುವ ದೃಷ್ಟಿಯಿಂದ ಏಕರೂಪದ



ಅನುಶಾಸನಕ್ಕೆ ಒಳಪಡಿಸಲಾಗಿದೆ. ಇಂತಹ ವಿಷಯಗಳಲ್ಲಿ ಶಾಸನಾತ್ಮಕ ಅಧಿಕಾರದ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ಸರ್ಕಾರದ ಈ ಆದೇಶ ಅಭಿವ್ಯಕ್ತಿ ಹಾಗೂ ವಾಕ್ ಸ್ವಾತಂತ್ರ್ಯ ಧಕ್ಕೆ ಉಂಟು ಮಾಡುತ್ತದೆ. ಇಂತಹುದೇ ಧಾಟಿಯಲ್ಲಿ ಹಾಡಬೇಕು ಎನ್ನುವುದು ಒಪ್ಪುವಂತಹ ವಿಚಾರವಲ್ಲ. ಈ ಹಿಂದೆ ಸಿ.ಅಶ್ವತ್ಥ್ ಅವರ ರಾಗ ಸಂಯೋಜನೆ ಮುಂದುವರಿಸುವ ಬಗ್ಗೆ ಸ್ವತಃ ಮೈಸೂರು ಅನಂತಸ್ವಾಮಿಯವರೇ ಒಪ್ಪಿಕೊಂಡಿದ್ದರು' ಎಂದು ಪುನರುಚ್ಚರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, 'ಜಯಭಾರತ ಜನನಿಯ ತನುಜಾತೆ... ಗೀತೆಯು ಅರ್ಥಪೂರ್ಣ ಮತ್ತು ಸುಂದರವಾದ ಪದ್ಯ. ಇದರ ಬಗ್ಗೆ ಹೆಚ್ಚು ಬಡಿದಾಡಿಕೊಳ್ಳಬೇಡಿ. ಬೇಕಿದ್ದರೆ ಉಭಯ ಪಕ್ಷಗಾರರೂ ಒಂದೆಡೆ ಕಲೆತು ಗೌರವಯುತವಾದ ಒಮ್ಮತದ ನಿರ್ಧಾರಕ್ಕೆ ಬನ್ನಿ' ಎಂದು ಸಲಹೆ ನೀಡಿ ವಿಚಾರಣೆ ಮುಂದೂಡಿದರು

'ಆದೇಶಕ್ಕೆ ಸ್ಪಷ್ಟನೆ ನೀಡಿ'

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರಡಿಸಿರುವ ತಿದ್ದುಪಡಿ ಅಧಿಸೂಚನೆಯನ್ನು ಪರಿಶೀಲಿಸಿದ ನ್ಯಾಯಪೀಠ, ಆದೇಶದಲ್ಲಿನ 'ಎಲ್ಲಾ ಶಾಲೆಗಳಲ್ಲಿ' ಎಂಬ ಪದದ ಅರ್ಥವನ್ನು ಸ್ಪಷ್ಟಪಡಿಸಿ ಮತ್ತು ಖಾಸಗಿ ಶಾಲೆಗಳೂ ಈ ಆದೇಶದ ವ್ಯಾಪ್ತಿಗೆ ಒಳಪಡುತ್ತವೆಯೇ ಹೇಗೆ ಎಂಬುದನ್ನು ವಿಶದಪಡಿಸಿ ಎಂದು ಸರ್ಕಾರಕ್ಕೆ ಸೂಚಿಸಿತು.

ಇ.ಡಿ ಅಧಿಕಾರಿಗಳ ವಿರುದ್ಧ ತನಿಖೆಗೆ ತಡೆ

ಬೆಂಗಳೂರು: 'ವಿಚಾರಣೆ ವೇಳೆ ಹೊಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣವೊಂದರಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ನಡೆಸುತ್ತಿದ್ದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಇಡಿ ಉಪ ನಿರ್ದೇಶಕ ಮನೋಜ್ ಮಿತ್ತಲ್ ಮತ್ತು ಸಹಾಯಕ ನಿರ್ದೇಶಕ ಅಜಯ್ ಕುಮಾರ್ ವೈದ್ಯ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, 'ವಿಚಾರಣೆ ವೇಳೆ ಇ.ಡಿ ಅಧಿಕಾರಿಗಳು ಪ್ಲಾಸ್ಟಿಕ್ ಪೈಪ್‌ನಲ್ಲಿ ಹೊಡೆದಿದ್ದಾರೆ ಎಂದು ದೂರಲಾಗಿದೆ. ವಾಸ್ತವದಲ್ಲಿ ಇದೊಂದು ಸುಳ್ಳು ದೂರು. ದೂರುದಾರರು ಆರೋಪವನ್ನು ಪುಷ್ಟೀಕರಿಸುವ ಯಾವುದೇ ದಾಖಲೆಯನ್ನೂ ಒದಗಿಸಿಲ್ಲ. ಆದ್ದರಿಂದ, ತನಿಖೆಗೆ ತಡೆ ನೀಡಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ ದೂರುದಾರರೂ ಆದ ಕೊಮುಲ್ ನಿರ್ದೇಶಕ ವೈ.ಬಿ.ಅಶ್ವತ್ಥ ನಾರಾಯಣ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: 'ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನನ್ನ ವಿಚಾರಣೆ ನಡೆಸುವ ವೇಳೆ ಇ.ಡಿ ಅಧಿಕಾರಿಗಳಾದ ಮನೋಜ್ ಮಿತ್ತಲ್ ಮತ್ತು ಅಜಯ್ ಕುಮಾರ್ ವೈದ್ಯ ಲಾಠಿ ಹಾಗೂ ಪ್ಲಾಸಿಕ್ ಪೈಪ್‌ನಿಂದ ನನಗೆ ಹೊಡೆದಿದ್ದಾರೆ' ಎಂದು ವೈ.ಬಿ.ಅಶ್ವತ್ಥ ನಾರಾಯಣ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು.

ಹಂಪಿ ಉತ್ಸವ ಅಗತ್ಯವಿರಲಿಲ್ಲ: ಕುಂ.ವೀ

ಹಂಪಿ (ವಿಜಯನಗರ): 'ಮಳೆಯಿಲ್ಲದೇ ರೈತರು ಹತಾಶೆ, ಸಂಕಷ್ಟದಲ್ಲಿ ಇರುವಾಗ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಹಂಪಿ ಉತ್ಸವ ಮಾಡುವ ಅಗತ್ಯವಿರಲಿಲ್ಲ' ಎಂದು ಕುಂ.ವೀರಭದ್ರಪ್ಪ ತಿಳಿಸಿದರು.

ಹಂಪಿ ಉತ್ಸವದ ಪ್ರಯುಕ್ತ ವಿರುಪಾಕ್ಷೇಶ್ವರ ದೇವಸ್ಥಾನ ವೇದಿಕೆಯಲ್ಲಿ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಪ್ರತ್ಯೇಕ ರಾಷ್ಟ್ರ': ಸಂಸತ್‌ನಲ್ಲಿ ಪ್ರತಿಧ್ವನಿ

ಒಂದನೇ ಪುಟದಿಂದ

'ರಾಷ್ಟ್ರದ ಅಖಂಡತೆಗೆ ಧಕ್ಕೆ ತಂದಿದ್ದಾರೆ. ಹಾಗಾಗಿ ಅವರ ವಿರುದ್ಧ ಕಾನೂನಾತ್ಮಕ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

'ದೇಶವನ್ನು ದಕ್ಷಿಣ ಭಾರತ-ಉತ್ತರ ಭಾರತ ಎಂದು ಹೇಳುವುದೇ ತಪ್ಪು. ನಾನೂ ಒಬ್ಬ ದಕ್ಷಿಣ ಭಾಗದ ಸಂಸದ. ದೇಶದ ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆ. ದೇಶ ವಿಭಜಿಸುವ ಹೇಳಿಕೆ ನೀಡಿದವರಿಗೆ ತಕ್ಕ ಶಾಸ್ತಿ ಆಗಬೇಕು' ಎಂದು ಅವರು ಹೇಳಿದರು. ಸುರೇಶ್ ಹೇಳಿಕೆಗೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಸಹ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಸದನದ ನಾಯಕ ಪೀಯೂಷ್ ಗೋಯಲ್, 'ಕಾಂಗ್ರೆಸ್ ಸಂಸದ ದುರದೃಷ್ಟಕರ ಹೇಳಿಕೆ ನೀಡಿದ್ದಾರೆ. ಅವರು ಸಾಮಾನ್ಯ ಕಾರ್ಯಕರ್ತರಲ್ಲ. ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ. ಕಾಂಗ್ರೆಸ್‌ನಲ್ಲಿ ವಿಭಜಕ ಶಕ್ತಿಗಳು ಇನ್ನೂ ಜೀವಂತವಾಗಿವೆ ಎಂಬುದಕ್ಕೆ ಇದೊಂದು ನಿದರ್ಶನ' ಎಂದರು.

'ದೇಶದ ಸಂವಿಧಾನದ ಅಡಿಯಲ್ಲಿ ಚುನಾಯಿತರಾದ ಸಂಸದರು ದೇಶದ ಸಾರ್ವಭೌಮತೆಯನ್ನು ರಕ್ಷಿಸುತ್ತೇನೆ ಎಂದು ಪ್ರಮಾಣವಚನ ಸ್ವೀಕರಿಸುತ್ತಾರೆ. ಇಂತಹ ಹೇಳಿಕೆಗಳನ್ನು ನಿರ್ಲಕ್ಷ್ಯ ಮಾಡಲು ಸಾಧ್ಯವೇ ಇಲ್ಲ. ಇದು ಸಂವಿಧಾನದ ಮೇಲಿನ ನೇರ ದಾಳಿ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

> **ಪ್ರತ್ಯೇಕ ದೇಶ ಎನ್ನುವ ಮಾತನ್ನು ಸಂಸದ ಡಿ.ಕೆ.ಸುರೇಶ್ ನೋವಿನಿಂದ ಹೇಳಿದ್ದಾರೆ. ದಕ್ಷಿಣ ರಾಜ್ಯಗಳ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ**
> **ಡಾ.ಎಂ.ಸಿ.ಸುಧಾಕರ್,** ಸಚಿವ

ಕಲ್ಲೊಡೆಯುತ್ತಿದ್ದವರು ಲೋಕಸಭೆಗೆ

ರಾಮನಗರ: 'ಕಲ್ಲೊಡೆದು ಕೊಂಡು ಇದ್ದವರನ್ನು ಲೋಕಸಭೆಗೆ ಆರಿಸಿ ಕಳಿಸಿದರೆ ಇನ್ನೇನಾಗುತ್ತೆ. ಇಲ್ಲಿ ಬಡ ಜನರನ್ನು ಲೂಟಿ ಮಾಡಿಕೊಂಡು ಸಾಕಷ್ಟು ಗುಡ್ಡೆ ಮಾಡಿದ್ದಾರೆ. ಅಂತಹವರನ್ನು ದೇಶ ಕಟ್ಟಲು ಲೋಕಸಭೆಗೆ ಕಳಿಸಿದರೆ ಕಟ್ಟುತ್ತಾರಾ? ಅವರ ಸಾಮ್ರಾಜ್ಯ ಕಟ್ಟಿಕೊಳ್ಳುತ್ತಾರಷ್ಟೆ. ಇವರಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು. ಸಂಸದ ಡಿ.ಕೆ. ಸುರೇಶ್ ಅವರ ಹೇಳಿಕೆ ಕುರಿತು, ತಾಲ್ಲೂಕಿನ ಕೇತಗಾನಹಳ್ಳಿಯಲ್ಲಿ ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ವಿರೋಧಪಕ್ಷದ ನಾಯಕ ಖರ್ಗೆ, 'ಸುರೇಶ್ ಅವರು ಲೋಕಸಭೆಯ ಸದಸ್ಯರು. ಹಾಗಾಗಿ, ಮೇಲ್ಮನೆಯಲ್ಲಿ ಈ ವಿಷಯ ಚರ್ಚಿಸುವುದು ಸರಿಯಲ್ಲ. ಈ ವಿಷಯದ ಬಗ್ಗೆ ಚರ್ಚಿಸಲು ನಿಯಮಗಳು ಅನುಮತಿಸುವುದಿಲ್ಲ' ಎಂದರು. ಆಗ ಸಭಾಪತಿ ಜಗದೀಪ್ ಧನಕರ್ ಅವರು ತಾವು ನೀಡಿರುವ ರೂಲಿಂಗ್ ಅನ್ನು ನೆನಪಿಸಿದರು. 'ಇಂತಹ ವಿಷಯಗಳ ಬಗ್ಗೆ ಚರ್ಚಿಸಬಹುದು' ಎಂದು ಸ್ಪಷ್ಟಪಡಿಸಿದರು.

ಖರ್ಗೆ ಮಾತನಾಡಿ, 'ಯಾರಾದರೂ ದೇಶವನ್ನು ವಿಭಜಿಸುವ ಬಗ್ಗೆ ಮಾತನಾಡಿದರೆ ನಾವು ಅದನ್ನು ಯಾವತ್ತೂ ಸಹಿಸುವುದಿಲ್ಲ. ದೇಶದ ಏಕತೆ ಕಾಪಾಡಲು ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ತಮ್ಮ ಜೀವವನ್ನೇ ಕೊಟ್ಟಿದ್ದಾರೆ' ಎಂದರು. 'ಒಂದು ವೇಳೆ ಸುರೇಶ್ ಅವರು ಅಂತಹ ಹೇಳಿಕೆ ನೀಡಿದ್ದರೆ, ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿ ಅದನ್ನು ಪರಿಶೀಲಿಸಲಿ' ಎಂದೂ ಖರ್ಗೆ ಹೇಳಿದರು.

ನ್ಯಾಯಾಲಯಕ್ಕೆ ದೂರು

ಮಂಗಳೂರು: ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ, ಆದ್ದರಿಂದ, ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಡಬೇಕಾಗುತ್ತದೆ ಎಂದು ಹೇಳಿಕೆ ನೀಡಿರುವ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ವಿರುದ್ಧ ಬಿಜೆಪಿ ಮುಖಂಡ ಬಂಟ್ವಾಳ ತಾಲ್ಲೂಕಿನ ವಿಕಾಸ್ ಪುತ್ತೂರು ಇಲ್ಲಿನ 2ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶುಕ್ರವಾರ ದೂರು ನೀಡಿದ್ದಾರೆ.

ದೆಹಲಿಯಲ್ಲಿ ಪ್ರತಿಭಟನೆ–ಸಿ.ಎಂ

ಒಂದನೇ ಪುಟದಿಂದ

₹62 ಸಾವಿರ ಕೋಟಿ ನಷ್ಟ: 'ಕೇಂದ್ರ ಬಜೆಟ್‌ನಲ್ಲಿ ಪ್ರತಿ ವರ್ಷವೂ ಕರ್ನಾಟಕ್ಕೆ ಅನ್ಯಾಯವಾಗುತ್ತಿದೆ. ಕೇಂದ್ರದ ತಾರತಮ್ಯ ಧೋರಣೆಯೇ ಇದಕ್ಕೆ ಕಾರಣ. ಕಳೆದ ಐದು ವರ್ಷಗಳಲ್ಲಿ ರಾಜ್ಯಕ್ಕೆ ಒಟ್ಟು ₹62 ಸಾವಿರ ಕೋಟಿ ನಷ್ಟ ಆಗಿದೆ' ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, 'ಸಚಿವರು, ಕಾಂಗ್ರೆಸ್‌ನ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಸಂಸದರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಪ್ರತಿಭಟನೆಗೆ ಸ್ಥಳಾವಕಾಶ ಕೇಳಿ ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಅನುಮತಿ ಸಿಕ್ಕ ಸ್ಥಳದಲ್ಲಿ ಪ್ರತಿಭಟನೆ ನಡೆಸುತ್ತೇವೆ' ಎಂದು ತಿಳಿಸಿದರು. ಈ ಪ್ರತಿಭಟನೆಯಲ್ಲಿ ವಿರೋಧ ಪಕ್ಷಗಳ ಶಾಸಕರು ಮತ್ತು ಸಂಸದರೂ ಭಾಗವಹಿಸಬೇಕು' ಎಂದು ಮನವಿ ಮಾಡಿದರು.

'2018-19ರಲ್ಲಿ ಕೇಂದ್ರ ಸರ್ಕಾರದ ಬಜೆಟ್ ಗಾತ್ರ ₹24.5 ಲಕ್ಷ ಕೋಟಿ ಇತ್ತು. 2023-24ನೇ ಸಾಲಿನಲ್ಲಿ ಕೇಂದ್ರ ಬಜೆಟ್ ಗಾತ್ರ ದುಪ್ಪಟ್ಟಾಗಿದ್ದು, ₹45 ಲಕ್ಷ ಕೋಟಿಯಾಗಿದೆ. 2018-19ರಲ್ಲಿ ಕೇಂದ್ರದ ಬಜೆಟ್‌ನಿಂದ ರಾಜ್ಯಕ್ಕೆ ₹46 ಸಾವಿರ ಕೋಟಿ ಅನುದಾನ ಸಿಕ್ಕಿತ್ತು. ಈ ಬಜೆಟ್‌ನಲ್ಲಿ ಕೇವಲ ₹50 ಸಾವಿರ ಕೋಟಿ ಪ್ರಕಟಿಸಿದ್ದಾರೆ. ಕೇಂದ್ರ ಸರ್ಕಾರದ ಬಜೆಟ್ ಗಾತ್ರ ದುಪ್ಪಟ್ಟಾಗಿದ್ದರೂ ರಾಜ್ಯಕ್ಕೆ ಬರುವ ಅನುದಾನ ಪ್ರಮಾಣದಲ್ಲಿ ಅತ್ಯಲ್ಪ ಏರಿಕೆಯಾಗಿದೆ' ಎಂದು ಅಂಕಿ ಅಂಶ ನೀಡಿದರು.

ದಿನಾ ಮಾತನಾಡಿದ್ರೆ ಹುಚ್ಚ ಅಂತಾರೆ: ಯತ್ನಾಳ

ನವದೆಹಲಿ: 'ನಾನು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸೇರಿದಂತೆ ಯಾವುದೇ ಸಿಂಗ್‌ಗಳನ್ನು ಭೇಟಿ ಮಾಡುವುದಿಲ್ಲ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನಷ್ಟೇ ಭೇಟಿ ಮಾಡುತ್ತೇನೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಅವರು ಮಾತನಾಡಿದರು. ಯತ್ನಾಳ ಮೌನ ಆಗಿದ್ದಾರೆ ಎಂದು ಕೆಲವರು ಹೇಳುತ್ತಾರೆ. ದಿನಾ ಮಾತನಾಡಿದರೆ ಹಾದಿಬೀದಿಯಲ್ಲಿ ಮಾತನಾಡುವ ಹುಚ್ಚ ಎಂದು ಕರೆಯುತ್ತಾರೆ. ನಾನು ಹಾದಿ ಬೀದಿಯಲ್ಲೇ ಇರುವವನು. ಅಲ್ಲೇ ಮಾತನಾಡುತ್ತೇನೆ. ಪಂಚತಾರಾ ಹೋಟೆಲ್‌ನಲ್ಲಿ ಮಾತನಾಡಲು ನಾನೇನೂ ವಿಜಯೇಂದ್ರನಾ' ಎಂದು ಅವರು ವ್ಯಂಗ್ಯವಾಗಿ ಪ್ರಶ್ನಿಸಿದರು.

ಐಐಟಿ ಮದ್ರಾಸ್‌ನಲ್ಲಿ ಕ್ರೀಡಾ ಕೋಟಾ

ನವದೆಹಲಿ (ಪಿಟಿಐ): ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಮದ್ರಾಸ್, 2024-25ನೇ ಶೈಕ್ಷಣಿಕ ಸಾಲಿನಿಂದ ಪದವಿ ಶಿಕ್ಷಣದಲ್ಲಿ ಕ್ರೀಡಾ ಕೋಟಾ ಪರಿಚಯಿಸಿದೆ. ಪ್ರತಿ ಕೋರ್ಸ್‌ನಲ್ಲೂ ಎರಡು ಹೆಚ್ಚುವರಿ ಸೀಟುಗಳನ್ನು ರಚಿಸಿದೆ ಎಂದು ನಿರ್ದೇಶಕ ವಿ.ಕಾಮಕೋಟಿ ತಿಳಿಸಿದ್ದಾರೆ.

ಈ ಮೂಲಕ ಕ್ರೀಡಾ ಕೋಟಾವನ್ನು ಪರಿಚಯಿಸಿದ ಮೊದಲ ಐಐಟಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಸಾಮಾನ್ಯ ವರ್ಗಕ್ಕೆ ಒಂದು ಸೀಟಿದ್ದರೆ, ಇನ್ನೊಂದನ್ನು ಯುವತಿಯರಿಗೆ ಮೀಸಲಿಡಲಾಗಿದೆ.

ಮಂಗಳೂರು ಮಹಾನಗರಪಾಲಿಕೆ

ಮಮನಪಾ/ಇ/2023–24 /ಇ.ಟಿ.1 ದಿನಾಂಕ: 31.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಗೆ ಸೂಚಿಸಿರುವ ಇಂಡೆಂಟ್‌ಗಳ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

2023–24ನೇ ಸಾಲಿನ ಸಾಮಾನ್ಯ ನಿಧಿಯಲ್ಲಿ DMA/2023-24/WORK INDENT NO. 13842, 13843, 13904, 13902. ಗಳ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15.02.2024 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1217/23-24 ದಿ.02.02.2024

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ನಂ. 8, ಎಂಎಸ್ಐಎಲ್ ಕಟ್ಟಡ, 6ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052

ಸಂ: ಕವಶಿಸಸಂ/ಕಾಇ–2/ಟೆಂಡರ್–07/2023–24 ದಿನಾಂಕ: 02.02.2024

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಹಾಗೂ ಇಂದಿರಾಗಾಂಧಿ ವಸತಿ ಶಾಲೆಗಳ ನಿರ್ಮಾಣ ಕಾಮಗಾರಿಗಳು ಹಾಗೂ ಪವರ್ ನಿರ್ಮಾಣ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ 104, 112, 114, 116, 119, 122, 123, 125, 126, 128, 129, 132, 134, 135, 137, 144, 148 ಹಾಗೂ 150) ಇ-ಪೋರ್ಟಲ್ ಮುಖಾಂತರ ದಿನಾಂಕ: 02.02.2024ರಂದು ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16.02.2024ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://kppp.karnataka.gov.in ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2, ಕ.ವ.ಶಿ.ಸ.ಸಂ.

ವಾಸಾಸಂಇ/ವಾಪ್ರ/ಎಲ್‌ಸಿ/3385/2023–24

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ,
ಅಂತರಿಕ ಭದ್ರತಾ ವಿಭಾಗ, ನಂ.60, ರಿಚ್‌ಮಂಡ್ ರಸ್ತೆ, ಬೆಂಗಳೂರು–560025.

ಸಂ: KSP/2023-24/SE0018 ದಿನಾಂಕ: 02.02.2024

ಇ–ಟೆಂಡರ್ ನೋಟೀಸ್

ಅಂತರಿಕ ಭದ್ರತಾ ವಿಭಾಗದ ಕೇಂದ್ರ ಕಛೇರಿ, ಬೆಂಗಳೂರು ಡಿವಿಷನ್ ಕಛೇರಿ ಹಾಗೂ ಭಯೋತ್ಪಾದನ ನಿಗ್ರಹ ಕೇಂದ್ರ (ಕೂಡ್ಲು, ಅಗರ ಹಾಗೂ ಎಬಿಸಿ ಮೆಯೋಹಾಲ್ ಕ್ಯಾಂಪ್) ಕಛೇರಿಗಳಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯ ನಿರ್ವಹಣೆಗಾಗಿ ಹೌಸ್ ಕೀಪಿಂಗ್ ಸರ್ವೀಸ್ ಅನ್ನು ಕೆ.ಟಿ.ಪಿ.ಪಿ ಕಾಯಿದೆ ಪ್ರಕಾರ ಕರ್ನಾಟಕ ಸರ್ಕಾರದ https://kppp.karnataka.gov.in ಇ–ಟೆಂಡರ್ ಪ್ರಕ್ರಿಯೆ ಮೂಲಕ ನೀಡಲು ಅರ್ಜಿಯನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ
1	KSP/ 2023-24/ SE0018	Providing Housekeeping Services at the Office and premises of the Internal Security Division Head Quarters and Unit Ofices.

ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: 17.02.2024 ಸಂಜೆ 17:30 ಗಂಟೆಯವರೆಗೆ.

ಹೌಸ್ ಕೀಪಿಂಗ್ ಸರ್ವೀಸ್ ಅನ್ನು ನೀಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಸಹಾಯವಾಣಿ: +91–8046010000/+91–8068948777 ಗೆ ಸಂಪರ್ಕಿಸತಕ್ಕದ್ದು.

ಸಹಿ/–
ಪೊಲೀಸ್ ಅಧೀಕ್ಷಕರು (ಆಡಳಿತ),
ಅಂತರಿಕ ಭದ್ರತಾ ವಿಭಾಗ.

DIPR/CP/3364/Maa/2022-23

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾ.ಕು.ನೀ. & ನೈ. ವಿಭಾಗ, ಬೆಂಗಳೂರು ಗ್ರಾಮಾಂತರ.
ದೂ.: 080–29787463, 9448367736, ಇಮೇಲ್: eerwsd.bngr1@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 15, 16, 17/2023-24/1372 ದಿನಾಂಕ : 02-02-2024

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, 2023–24 ನೇ ಸಾಲಿನ **Swach Bharath Kosh Trust** ಲೆಕ್ಕ ಶೀರ್ಷಿಕೆಯಡಿ **Construction of STP using Vermifilter Technology** ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಯಾಗಿರುವ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಯೋಗಾಲಯಕ್ಕೆ **FTK** ಮತ್ತು **H2S Vials** ಗಳನ್ನು ಸರಬರಾಜು ಮಾಡಲು ಹಾಗೂ **ಜೆ.ಜೆ.ಎಂ. ಯೋಜನೆಯಡಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಬೆಂಬಲ ಸಂಸ್ಥೆಯನ್ನು ನೇಮಿಸಿಕೊಳ್ಳಲು**, ಕೆ.ಪಿ.ಪಿ.ಪಿ. ರಲ್ಲಿ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ – 1, 2, 3, ಕೆಜಿ –1 ಮತ್ತು ಕೆ/ಸಿ–5 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿ.ಯನ್ನು ಈ ಪೇಮೆಂಟ್ ಮುಖಾಂತರ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಸಾಮಾನ್ಯ ಸೂಚನೆಗಳು : **1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.**

1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 03–02–2024 ರ ಸಂಜೆ 4.00 ಗಂಟೆಯ ನಂತರ. 2) ಪೂರ್ವ ಭಾವಿ ಸಭೆ ನಡೆಯುವ ಸ್ಥಳ ಮತ್ತು ದಿನಾಂಕ : ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ದಿನಾಂಕ : 06–02–2024 ರ ಬೆಳಿಗ್ಗೆ 11.00 ಗಂಟೆಗೆ. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17–02–2024 ರ ಸಂಜೆ 4.05 ಗಂಟೆಯವರೆಗೆ. 4) ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19–02–2023 ರ ಬೆಳಿಗ್ಗೆ 11.00 ಗಂಟೆಯ ನಂತರ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20–02–2024 ರ ಸಂಜೆ 4.00 ಗಂಟೆಯ ನಂತರ.

ಸಹಿ/– (ಎಸ್. ಎಂ. ಸುಭಾನ್ ಸಾಹೇಬ್)
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/3363/2023–24

ಕರ್ನಾಟಕ ಸರ್ಕಾರ (ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ. ಬಿ.ಎಂ.ಟಿ.ಸಿ. ಕಟ್ಟಡ, ಯಶವಂತಪುರ, ಬೆಂಗಳೂರು–560022. ದೂರವಾಣಿ ಸಂಖ್ಯೆ: 080–23570382.
ಇ-ಮೇಲ್: jcctdgstol.bng@ka.gov.in

ವಾ.ತೆ.ಜಂ.ಆ(ಆ)/ವಿಸಸೇತೆಕ–1/ಜಿಎಮ್/ಆರ್–II/2023–24 ದಿನಾಂಕ: 29.01.2024

ಸಾಮಾನ್ಯ ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದ ಕಛೇರಿ ಕರ್ತವ್ಯ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ 14 ವಾಹನಗಳನ್ನು (ಹಳದಿ ಬೋರ್ಡ್ ಹೊಂದಿರುವ 2018 ಮತ್ತು ನಂತರದ ವರ್ಷದಲ್ಲಿ ತಯಾರಾದ ವಾಹನಗಳು) ಸರಬರಾಜು ಮಾಡಲು ಮಾಲೀಕರೇ ಚಾಲಕರಾಗಿರುವವರಿಂದ ಮೊಹರಾದ ಲಕೋಟೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಮತ್ತು ಟೆಂಡರ್ ಅಧಿಸೂಚನೆಯನ್ನು ಈ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಅರ್ಜಿಯನ್ನು ಮೊಹರಾದ ಲಕೋಟೆಯಲ್ಲಿ ಸಲ್ಲಿಸಲು ಅಂತಿಮ **ದಿನಾಂಕ: 29.02.2024**. ಹೆಚ್ಚಿನ ವಿವರಗಳಿಗಾಗಿ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು(ಕೇಂ.ಕ), ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿ.ಸ&ಸೇ.ತೆ.ಕ–01, ಯಶವಂತಪುರ, ಬೆಂಗಳೂರು ಇವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿ.ಸ&ಸೇ.ತೆ.ಕ–01.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನಿಯರಿಂಗ್ ಘಟಕ

ಮುಖ್ಯ ಇಂಜನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: cekhsdrp@gmail.com

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ–3/ಸಇಂ–8/ಟೆಂಡರ್/2023–24/2321 ದಿನಾಂಕ:02.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) **ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನರ್ಸಿಂಗ್ ಶಾಲೆಯ ನಿರ್ಮಾಣ ಕಾಮಗಾರಿ (ಉಳಿಕೆ ಕಾಮಗಾರಿ)**. ಅಂದಾಜು ಮೊತ್ತ: **ರೂ.284.32 ಲಕ್ಷಗಳು**. ಇಎಂಡಿ ಮೊತ್ತ: **ರೂ.4.27 ಲಕ್ಷಗಳು**. ಕಾಲಾವಧಿ (ಮಳೆಗಾಲ ಸೇರಿದಂತೆ): **05 ತಿಂಗಳು**. ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **19.02.2024 ರಂದು 16.00 ಗಂಟೆಯವರೆಗೆ**. (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **20.02.2024 ರಂದು 16.00 ಗಂಟೆಗೆ**. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through Karnataka Public Procurement Portal) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ **(Electronic)** ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ **(Through Karnataka Public Procurement Portal)** ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜನಿಯರ್, ಆ&ಕುಕಇ, ಇಂಜನಿಯರಿಂಗ್ ಘಟಕ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–5ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣಾ ವಿಭಾಗ,
4ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್ ಚೌಕ, ಬೆಂಗಳೂರು – 560 002.

ಸಂ: ಬಿಬಿಎಂಪಿ/ಕಾಪಾಅ–5/ಘತ್ಯಾನಿ/ಟೆಂಡರ್/01/2023–24/2ನೇ ಕರೆ ದಿನಾಂಕ:02.02.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ) (2ನೇ ಕರೆ)

ಕಾರ್ಯಪಾಲಕ ಅಭಿಯಂತರರು–5, ಘನ ತ್ಯಾಜ್ಯ ನಿರ್ವಹಣಾ ವಿಭಾಗ, ಬಿಬಿಎಂಪಿ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಲಕ್ಷಗಳಲ್ಲಿ)
1	ಪೂರ್ವ ಮತ್ತು ಯಲಹಂಕ ವಲಯದಲ್ಲಿ ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಉನ್ನತೀಕರಣ ಕಾಮಗಾರಿ.	824.66	12.37
2	ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯದಲ್ಲಿ ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಉನ್ನತೀಕರಣ ಕಾಮಗಾರಿ.	825.68	12.38
3	ರಾಜರಾಜೇಶ್ವರಿನಗರ ವಲಯದಲ್ಲಿ ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಉನ್ನತೀಕರಣ ಕಾಮಗಾರಿ.	831.10	12.49
4	ಪಶ್ಚಿಮ ಮತ್ತು ದಾಸರಹಳ್ಳಿ ವಲಯದಲ್ಲಿ ಹೊಸ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳ ಉನ್ನತೀಕರಣ ಕಾಮಗಾರಿ.	499.80	7.50

1)ಆರ್‌ಎಫ್‌ಪಿ ದಸ್ತಾವೇಜುಗಳನ್ನು **ದಿನಾಂಕ: 03.02.2024, ಸಂಜೆ 4.00**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಕುರಿತ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **07.02.2024ರ ಸಂಜೆ 4.00 ಗಂಟೆಯವರೆಗೆ**. 3) ಪೂರ್ವಭಾವಿ ಸಭೆ ದಿನಾಂಕ: **08.02.2024ರ ಅಪರಾಹ್ನ 3.00 ಗಂಟೆಗೆ**. 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.02.2024ರ ಸಂಜೆ 5.00 ಗಂಟೆಯವರೆಗೆ**. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **16.02.2024ರ ಸಂಜೆ 5.30 ಗಂಟೆಗೆ**. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಹಾಗೂ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಲಾಗಿನ್ ಮಾಡಿ ಅಥವಾ ಕಪಿಪಿಪಿ ಸಹಾಯವಾಣಿ 080–25501216 / 25501217ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–5, ಘನ ತ್ಯಾಜ್ಯ ನಿರ್ವಹಣಾ ವಿಭಾಗ.

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು.

Ph.No.0816-2955247, e-mail:ka.tumakuru.dudc@gmail.com

ನಂ.ಟ(1)/ವಿವ/104/2023–24 ದಿನಾಂಕ: 30.01.2024

ಟೆಂಡರ್ ಪ್ರಕಟಣೆ

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ತುಮಕೂರು ಜಿಲ್ಲೆಯ ಚುನಾವಣಾ ಸಂಬಂಧ ಟೆಂಡರ್ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ https://kppp.karnataka.gov.in ಈ ವೆಬ್‌ಸೈಟ್ ನಂತೆ ಕ್ರಮವಹಿಸುವುದು. ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

INDENT No. & Details: 01. DMA/2023-24/IND1246, Supply of Catering Services for General Election of Lok Sabha-2024 Tumkur District, **EMD (In Lakhs):** 0.70. 02. DMA/2023-24/IND1353 SUPPLY PF PRINTING ITEMS FOR LOKASABHA ELECTION 2024- TUMKUR DISTRICT, **EMD (In Lakhs):** 0.75.

ಸಹಿ/– ಜಿಲ್ಲಾಧಿಕಾರಿಗಳ ಪರವಾಗಿ,
ತುಮಕೂರು ಜಿಲ್ಲೆ.

DIPR/TUM/498KSMCA/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ ಕೇಂದ್ರ–2),
ಎನ್ ಆರ್ ಚೌಕ, ಬೆಂಗಳೂರು – 560002

ನಂ.ಕಾಅ/ಪಿಸಿ–2/ಟೆಂಡರ್/02/2023–24 ದಿನಾಂಕ: 02.02.2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ದ್ವಿ ಲಕೋಟೆ ಪದ್ಧತಿ),(ಅಲ್ಪಾವಧಿ ಟೆಂಡರ್ ಸೂಚನೆ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ ಕೇಂದ್ರ –2), ಬಿಬಿಎಂಪಿ, ಬೆಂಗಳೂರು ಇವರು, ಈ ಕೆಳಗೆ ನಮೂದಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್ ದಾರರಿಂದ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.govt. in** ಮೂಲಕ ಸಲ್ಲಿಸಬಹುದು. ಕಾಮಗಾರಿಗೆ ಅರ್ಹತೆ ಪಡೆಯಲು ಕೆ ಪಿ ಪಿ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಿರುವ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಸೂಚನೆಗಳ ಷರತ್ತು 3ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್ ದಾರರಿಗೆ ಸೂಚಿಸಲಾಗಿದೆ.

ಟೆಂಡರ್ ಡಾಕ್ಯುಮೆಂಟ್ ಗಳನ್ನು ಕರ್ನಾಟಕ ಸರಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ ಮೂಲಕ 02.02.2024 ರಿಂದ ಡೌನ್ ಲೋಡ್ ಮಾಡುವುದು. ಟೆಂಡರ್ ಗಳನ್ನು ಕೆ ಪಿ ಪಿ ಪೋರ್ಟಲ್ ಮುಖಾಂತರ ದಿನಾಂಕ 17.02.2024, ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು. ಮತ್ತು ಟೆಂಡರ್‌ಗಳನ್ನು ಕೆ ಪಿ ಪಿ ಪೋರ್ಟಲ್ ಮಾರ್ಗಸೂಚಿಗಳಂತೆ ತೆರೆಯಲಾಗುವುದು.

ಕಾಮಗಾರಿ ವಿವರ : ಕರ್ನಾಟಕ ಸರ್ಕಾರದ ಅನುದಾನದಲ್ಲಿ (ಪ್ಯಾಕೇಜ್ –5) ವೈಟ್ ಟಾಪಿಂಗ್ ಒದಗಿಸುವ ಮೂಲಕ ಆಯ್ದ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ.

ಟೆಂಡರಿಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ): 11024.78, ಇ ಎಂ ಡಿ (ರೂ ಲಕ್ಷಗಳಲ್ಲಿ) : 110.25, ಟೆಂಡರ್ ನಮೂನೆಯ ಬೆಲೆ (ರೂ. ಗಳಲ್ಲಿ) : ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಪ್ರಕಾರ, ಕಾಮಗಾರಿ ಮುಗಿಸುವ ಅವಧಿ : 11 ತಿಂಗಳು. (ಮಳೆಗಾಲ ಸೇರಿ).

ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ವೀಕ್ಷಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, (ಯೋಜನೆ ಕೇಂದ್ರ–2),
ಬಿಬಿಎಂಪಿ, ಬೆಂಗಳೂರು.

PUBLIC WORKS DEPARTMENT

Executive Engineer, No. 1, Building Division,
S.J.P. Campus Bangalore - 560 001.
Phone : 080 - 2225 5210, Fax : 080 - 2225 0755
E-mail : eebld1@kpwd.gov.in, eebld1@yahoo.com

No. : EE/Bld1/AE-4/2023-24/34 Date : 01-02-2024

INVITATION FOR SHORT TERM TENDER (IFT)

1. The Executive Engineer No 1, Buildings Division, Bangalore invites tenders from eligible tenderers, for the construction of works detailed in the Table below. The tenderers have to submit the tender for the work given in the Table through e-procurement portal of the Government of Karnataka **(Viz http://kppp.karnataka.gov.in)**. The Tenderers are advised to note the minimum qualification criteria specified in Clause 3 of the Instructions to Tenderers to qualify for award of the contract. (**Standard Tender Document KW-4**).
2. Tender Documents for Sl no.1 can be Downloaded from the e-procurement portal of the Government of Karnataka **16-02-2024 up to 16.00 hours** and for Sl no 2 maybe downloaded from the e-procurement portal of the Government of Karnataka **19-02-2024 up to 16.00 hours.**
3. Tenders must be accompanied by earnest money deposit specified for the work in the Table below. Earnest money deposit will have to be in any one of the forms as specified in the Tender document and shall have to be valid for **45 days** beyond the validity of the tender.
4. Tenders must be submitted online through e-procurement portal for Sl no 1 from **01-02-2024 to before 16.00 hours on 16-02-2024** and for Sl no 2 from **03-02-2024 to before 16.00 hours** on **19-02-2024** the Opening of Tenders will be as per the e-procurement portal guidelines.
5. Pre Bid Meeting will be at 11.30 a.m. on **08-02-2024** for Sl no 1 and at 1.30 a.m. on **08-02-2024** for Sl no 2 at Office of Executive Engineer, No. 1, Building Division, S.J.P. Campus, Bangalore.
6. Other details can be seen in the tender documents.

Name of Work : 1) Proposed Construction of Additional Renovation of Interiors and Elevation at Karnataka Administrative Services Officer Research and Training Centre, Infantry Road, Bangalore. PWD/2023-24/BD/WORK_INDENT7908, Approximate Value of Work (Rs. in Lakhs) : 754.11, Earnest Money Deposit (Rs. in Lakhs) : 11.32, Cost of Document (In Rs.) : As per E-portal, Period of Completion : 11 Months, No. of Call : 1st Call, Category : Others. 2) Renovation of Auditorium & Cafeteria at Secretariat Training Centre, 4th Floor, Mini Tower, V. V. Centre Bangalore. Approximate Value of Work (Rs. in Lakhs) : 326.65, Earnest Money Deposit (Rs. in Lakhs) : 4.90, Cost of Document (In Rs.) : As per E-portal, Period of Completion : 09 Months, No. of Call : 1st Call, Category : Others.

Sd/- Executive Engineer,
No.1, Building Division, Bangalore.

DIPR/Urban/3370/Manipal/2023-24

ಆಯುಷ್ ಇಲಾಖೆ

ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಡಾ:ಬಿದ್ದಯ್ಯ ಮುಖ್ಯರಸ್ತೆ, ಬಸವೇಶ್ವರನಗರ, ಬೆಂಗಳೂರು–560079.
gumcprincipal1975@gmail.com ದೂರವಾಣಿ ಸಂಖ್ಯೆ: 080–23116061

ಸಂಖ್ಯೆ: ಸಯುವೈಮಆ/40/ಸರು/2023–24 ದಿನಾಂಕ: 01/02/2024

ಇ–ಟೆಂಡರ್ ಅಧಿಸೂಚನೆ

ದ್ವಿ ಲಕೋಟೆ ಪದ್ಧತಿ ಟೆಂಡರ್ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್)

ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಸವೇಶ್ವರನಗರ, ಬೆಂಗಳೂರು ರವರಿಂದ ಆಸ್ಪತ್ರೆಯ ಒಳರೋಗಿಗಳಿಗೆ ಇ-ಟೆಂಡರ್ ಮೂಲಕ ಪಥ್ಯಾಹಾರವನ್ನು ಒದಗಿಸಲು ಸರಬರಾಜುದಾರರಿಗೆ ಅನುಭವಿ ಮತ್ತು ಆಸಕ್ತ ಹಾಗೂ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳ ಮತ್ತು ಮುಂದುವರೆದ ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ (https://kppp.karnataka.gov.in) ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ.15.00 ಲಕ್ಷಗಳು. (ರೂಪಾಯಿಗಳು ಹದಿನೈದು ಲಕ್ಷ ಮಾತ್ರ)

1) ಟೆಂಡರ್ ಬಿಡ್‌ಗಳನ್ನು ಡೌನ್ ಲೋಡ್ ಮಾಡಿಕೊಳ್ಳುವುದು – **ದಿನಾಂಕ: 02.02.2024 ಸಂಜೆ 5.00 ನಂತರ.** 2) ಭರ್ತಿ ಮಾಡಲಾದ ಟೆಂಡರ್‌ನ್ನು ಸಲ್ಲಿಸುವುದು – **ದಿನಾಂಕ: 17.02.2024 ಸಂಜೆ 5.00 ವರೆಗೆ.** 3) ಆನ್‌ಲೈನ್ ಟೆಂಡರನ್ನು ತೆರೆಯುವುದು – **ದಿನಾಂಕ:19.02.2024ರ ಪೂರ್ವಾಹ್ನ 11.00 ಗಂಟೆ.**

ಇತರೆ ಯಾವುದೇ ಮಾಹಿತಿಯನ್ನು ಕಚೇರಿಯ ಸಮಯದಲ್ಲಿ ಕೆಳಕಂಡವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ/ಪ್ರಾಚಾರ್ಯರು
ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ಬಸವೇಶ್ವರನಗರ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3365/ಆಕಾರ್/2023–24

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನಿಯರಿಂಗ್ ಘಟಕ

ಮುಖ್ಯ ಇಂಜನಿಯರ್‌ರವರ ಕಛೇರಿ ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023,
ದೂ: 080–29557023 ಇಮೇಲ್: cekhsdrp@gmail.com

ಸಂಖ್ಯೆ: ಆಕುಕ/ಇಂ.ಘ/ಮು.ಇಂ/ತಾ.ಸ–3/ಸ.ಇಂ–8/KMERC/2023–24/2301ದಿ: 01.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಖ್ಯ ಇಂಜನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ (1) (A) ಬಳ್ಳಾರಿ ಜಿಲ್ಲೆಯಲ್ಲಿ ವಿವಿಧ PHCಗಳನ್ನು CHCಗಳನ್ನಾಗಿ (ಕುಡಿತಿನಿ, ಚೋರ್ನೂರು ಮತ್ತು ಮೆಟ್ರಿಕಿ) ಮೇಲ್ದರ್ಜೆಗೇರಿಸುವ ಕಾಮಗಾರಿ. (B) ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನಲ್ಲಿ 7 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಕಾಮಗಾರಿ. (2) (A) ವಿಜಯನಗರ ಜಿಲ್ಲೆಯ ಗಣಿಗಾರಿಕೆಯಿಂದ ಪೀಡಿತ ಪ್ರದೇಶಗಳಲ್ಲಿ 7 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಮತ್ತು 4 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿ ವಸತಿ ಗೃಹ ಉನ್ನತೀಕರಣ ಕಾಮಗಾರಿ. (B) ವಿಜಯನಗರ ಜಿಲ್ಲೆಯಲ್ಲಿ ಹೊಸ ಉಪ ಕೇಂದ್ರಗಳ (15 ಸಂಖ್ಯೆಗಳು) ಸ್ಥಾಪನೆ ಮತ್ತು ಬಾಡಿಗೆಯಲ್ಲಿರುವ ಉಪ ಕೇಂದ್ರಗಳಿಗೆ ಸ್ವಂತ ಕಟ್ಟಡವನ್ನು ಒದಗಿಸುವ (7 ಸಂಖ್ಯೆಗಳು) ಕಾಮಗಾರಿ. (3) (A) ಹೊಳಲ್ಕೆರೆ ತಾಲ್ಲೂಕಿನ ಗಣಿಗಾರಿಕೆಯಿಂದ ಪೀಡಿತ ಪ್ರದೇಶಗಳಲ್ಲಿ ಆಯ್ದ ಉಪ ಕೇಂದ್ರ, PHC, CHC ಮತ್ತು ಜನರಲ್ ಆಸ್ಪತ್ರೆಗಳ ಉನ್ನತೀಕರಣ ಕಾಮಗಾರಿ. (B) ಚಿತ್ರದುರ್ಗ ತಾಲ್ಲೂಕಿನ ಗಣಿಗಾರಿಕೆಯಿಂದ ಪೀಡಿತ ಪ್ರದೇಶಗಳಲ್ಲಿ ಆಯ್ದ ಉಪ ಕೇಂದ್ರ, PHC, CHCಗಳ ಉನ್ನತೀಕರಣ ಕಾಮಗಾರಿ. (C) ಹೊಸದುರ್ಗ ತಾಲ್ಲೂಕಿನ ಗಣಿಗಾರಿಕೆಯಿಂದ ಪೀಡಿತ ಪ್ರದೇಶಗಳಲ್ಲಿ ಆಯ್ದ ಉಪ ಕೇಂದ್ರ, PHC, CHC ಮತ್ತು ಜನರಲ್ ಆಸ್ಪತ್ರೆಗಳ ಉನ್ನತೀಕರಣ ಕಾಮಗಾರಿಗಳಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP-portal) ಮೂಲಕ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ KPPP-portal ಅನ್ನು ಪರಿಶೀಲಿಸುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **17.02.2024 ರಂದು 16.00 ಗಂಟೆಯವರೆಗೆ.** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **19.02.2024 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka Public Procurement portal Platform) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ **(electronic)** ವಿಧಾನದಲ್ಲಿ ಪಾವತಿಸ ಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement portal Platform) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಮುಖ್ಯ ಇಂಜನಿಯರ್, ಆ&ಕುಕಇ, ಇಂಜನಿಯರಿಂಗ್ ಘಟಕ, ಬೆಂಗಳೂರು.

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2023–24/5235 ದಿನಾಂಕ:01/02/2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2023–24 ನೇ ಸಾಲಿನ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ (ಡಿ.ಎಮ್.ಎಫ್) ಅಡಿ 2 ಕಾಮಗಾರಿಗಳು, 3054–ಜಿಮುರ ನಿರ್ವಹೆ–ನಿರ್ವಹಣಾ ವೆಚ್ಚ ಅಡಿ 1 ಕಾಮಗಾರಿ, 2059–ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ 1 ಕಾಮಗಾರಿ ಹಾಗೂ ಆರ್.ಐ.ಡಿ.ಎಫ್.–28 ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 6 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 12.50 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 166.66 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 5 & 6 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:06–02–2024 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:07–02–2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:09–02–2024 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 12–02–2024 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 1 ರಿಂದ 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:08–02–2024 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:09–02–2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:12–02–2024 (ಸಾಯಂಕಾಲ 5.00 ಗಂಟೆಯವರೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System):14–02–2024 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):14–02–2024 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 7)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1046/KSMCA/2023-24

ಕರ್ನಾಟಕ ಸರ್ಕಾರ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/2023–24/4507 ದಿನಾಂಕ: 31.01.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ದತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in** ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2023-24/BD/WORK_INDENT7390 (Reserved for SC Category)	36.00
2)	PWD/2023-24/RD/WORK_INDENT8130 (Reserved for SC Category)	93.37
3)	PWD/2023-24/RD/WORK_INDENT8145 (Reserved for SC Category)	59.77
4)	PWD/2023-24/RD/WORK_INDENT8128 (Reserved for ST Category)	24.40
5)	PWD/2023-24/RD/WORK_INDENT8129 (General Category)	35.00
6)	PWD/2023-24/RD/WORK_INDENT8133 (General Category)	24.40
7)	PWD/2023-24/BD/WORK_INDENT7386 (General Category)	37.48
8)	PWD/2023-24/BD/WORK_INDENT7396 (General Category)	35.01
9)	PWD/2023-24/BD/WORK_INDENT7388 (General Category)	25.74
10)	PWD/2023-24/BD/WORK_INDENT8146 (General Category)	13.10
11)	PWD/2023-24/BD/WORK_INDENT8144 (General Category)	10.00
12)	PWD/2023-24/RD/WORK_INDENT8141 (General Category)	40.00
13)	PWD/2023-24/RD/WORK_INDENT8132 (General Category)	120.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಕ್ರಮ ಸಂಖ್ಯೆ (13) ಕಾಮಗಾರಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ **03–02–2024 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **05–02–2024 ರಂದು 12.00 ಗಂಟೆಯ ವರೆಗೆ.** ಇ) ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **09–02–2024 ರಂದು 16.00 ಗಂಟೆಯ ವರೆಗೆ** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **12–02–2024 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/775/ಕೆಎಸ್‌ಎಂಸಿಎ/2023–24

(ಕರ್ನಾಟಕ ಸರ್ಕಾರ) ಪ್ರವಾಸೋದ್ಯಮ ಇಲಾಖೆ

ನಿರ್ದೇಶಕರ ಕಛೇರಿ,
ನಂ.3, 4ನೇ ಮಹಡಿ, ಎಂಬಸ್ಸೀ ಐಕಾನ್ ಕಟ್ಟಡ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು 560001.
ಇ–ಮೇಲ್ : director@karnatakatourism.org ದೂರವಾಣಿ : 080–22352727 ಫ್ಯಾಕ್ಸ್: 080–22352626

ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ

ಸಂ. ಪ್ರಇ/ಪ್ರಚಾರ–1/19/2023–24 ದಿನಾಂಕ : 02.02.2024
Tender Indent Number: DT/2023-24/SE0015

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)

ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಜಾಲತಾಣ ಆದ www.karnatakatourism.org ರ ಅನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿ, ಕಾರ್ಯಾಚರಣೆ, ನಿರ್ವಹಣೆ ಮತ್ತು ಇಂದೀಕರಿಸುವ ಕಾರ್ಯವನ್ನು ನಿರ್ವಹಿಸಿ, ಜಾಲತಾಣ ನಿರ್ವಹಣಾ ಸೇವೆಯನ್ನು ಒದಗಿಸಲು ಸೂಕ್ತ ಏಜೆನ್ಸಿ ಆಯ್ಕೆ ಮಾಡುವ ಬಗ್ಗೆ.

ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಜಾಲತಾಣ ಆದ **www.karnatakatourism.org** ಅನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿ, ಕಾರ್ಯಾಚರಣೆ, ನಿರ್ವಹಣೆ ಮತ್ತು ಇಂದೀಕರಿಸುವ ಕಾರ್ಯವನ್ನು ನಿರ್ವಹಿಸಿ, ಜಾಲತಾಣ ನಿರ್ವಹಣಾ ಸೇವೆಯನ್ನು ಒದಗಿಸಲು ಹಾಗೂ ಸೇವೆಯನ್ನು ಒದಗಿಸುವಲ್ಲಿ ಸಹಕರಿಸಲು ಇದೇ ಮಾದರಿಯ ಅನುಭವವನ್ನು ಹೊಂದಿರುವ ಏಜೆನ್ಸಿ/ ಏಜೆನ್ಸಿಗಳಿಂದ ಪ್ರಸ್ತಾವನೆಯ ವಿನಂತಿ **(Request for Proposal)** ದಾಖಲೆಯನ್ವಯ ಪ್ರಸ್ತಾವನೆಗಳನ್ನು ಆಹ್ವಾನಿಸಲು ಅಲ್ಪಾವಧಿ ಟೆಂಡರ್ ಕರೆಯಲು ಉದ್ದೇಶಿಸಿರುತ್ತದೆ. ಈ ಸಂಬಂಧ ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ವೆಬ್‌ಸೈಟ್ ವಿಳಾಸ **https://kppp.karnataka.gov.in.** ದಿಂದ ದಿನಾಂಕ : 02–02–2024ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇದೇ ವೇದಿಕೆಯ ಮೂಲಕ ಆಸಕ್ತ ಬಿಡ್ಡುದಾರರು ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ.

ಈ ಸಂಬಂಧ ದಿನಾಂಕ : 12–02–2024 ರಂದು ಸಮಯ : 12.00 ಗಂಟೆಗೆ ಈ ಕೆಳಗೆ ನಮೂದಿಸಿರುವ ಇಲಾಖೆಯ ವಿಳಾಸದಲ್ಲಿ ಪ್ರಸ್ತಾವನೆಗಳ ಪೂರ್ವಭಾವಿ ಸಭೆ ಆಯೋಜಿಸಲಾಗುವುದು. ಈ ಟೆಂಡರ್‌ಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಅಂತಿಮ ದಿನಾಂಕ : 22–02–2024 ಸಮಯ: ಸಂಜೆ 4.00 ಗಂಟೆ ಆಗಿರುತ್ತದೆ. ಈ ಟೆಂಡರ್ ಸಂಬಂಧ ಎಲ್ಲಾ ಹೆಚ್ಚುವರಿ ಅಧಿಸೂಚನೆಗಳು, ಬದಲಾವಣೆಗಳು ಟೆಂಡರ್ ದಾಖಲೆ ತಿದ್ದುಪಡಿಗಳನ್ನು **https://kppp.karnataka.gov.in.** ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ಆಹ್ವಾನ ಪ್ರಾಧಿಕಾರವು ಈ ಅಲ್ಪಾವಧಿ ಟೆಂಡರ್‌ಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಯಾವುದೇ ಒಂದು ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕು ಹೊಂದಿರುತ್ತದೆ.

ಈ ಟೆಂಡರ್ ದಾಖಲೆ ಸಂಬಂಧ ಯಾವುದೇ ವಿಚಾರಣೆ/ಸ್ಪಷ್ಟೀಕರಣ ಕುರಿತು ಜಂಟಿ ನಿರ್ದೇಶಕರು (ಪಿ&ಪಿ), ಪ್ರವಾಸೋದ್ಯಮ ಇಲಾಖೆ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಜಂಟಿ ನಿರ್ದೇಶಕರು (ಪಿ&ಪಿ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ ಪ್ರವಾಸೋದ್ಯಮ ಇಲಾಖೆ

DIPR/CP/3374/Zenkar/2023-24

ಮುಂಬೈ ಧಾರಣೆ

ಶೇಂಗಾ

02-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1530 (1520)
ಒಂದು ವಾರದ ಡೆಲಿವರಿ	1525 (1515)
ಸೋಯಾ ಕಚ್ಚಾ	835 (838)
ಪಾಮ್ ವಾರದ ಡೆಲಿವರಿ	843 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,600 (62,300)
ಬೆಳ್ಳಿ ಕೆ.ಜಿ ₹71,000 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು 440



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,697
ಇಂದಿನ ಅಂತ್ಯ	21,853
▲	156
ದಿನದ ಗರಿಷ್ಠ	22,126

ವಿನಿಮಯ ದರ

$ ಡಾಲರ್	82.98
£ ಪೌಂಡ್	105.77
€ ಯುರೊ	90.30
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹570
12 ಕ್ಕೆ	₹75
ಮೈಸೂರು 100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1510)
ಸೋಯಾ (ರಿಫೈನ್ಡ್)	₹885 (880)
ಸೂರ್ಯಕಾಂತಿ (ರಿಫೈನ್ಡ್)	₹905 (910)
ಪಾಮೋಲಿನ್	₹845 (845)

ಕೊಬ್ಬರಿ ಧಾರಣೆ (ಕ್ವಿಂಟಲ್)

ಅರಸೀಕೆರೆ	₹9000-9610
ಬಂಟ್ವಾಳ	₹7000-10000
ತುಮಕೂರು	₹8850-10400

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹161
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹139

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹331-465
ದ್ವಿತಳಿ (ಪ್ರ.ಕೆ)	₹301-548

₹29ಕ್ಕೆ ಕೆ.ಜಿ 'ಭಾರತ್ ಬ್ರ್ಯಾಂಡ್' ಅಕ್ಕಿ

ಒಂದನೇ ಪುಟದಿಂದ

ಭಾರತ್ ಬ್ರ್ಯಾಂಡ್

ಸರಕು	ಧಾರಣೆ (₹ಒಂದು ಕೆ.ಜಿಗೆ)
ಅಕ್ಕಿ	29
ಗೋಧಿ ಹಿಟ್ಟು	27.50
ಕಡಲೆ ಬೇಳೆ	60

ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಶೇ 14.5 ಮತ್ತು ಸಗಟು ಮಾರುಕಟ್ಟೆಯಲ್ಲಿ ಶೇ 15.5ರಷ್ಟು ಅಕ್ಕಿ ದರ ಏರಿಕೆಯಾಗಿದೆ.

ಬೆಲೆ ನಿಯಂತ್ರಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹಾಗಾಗಿ, ದಾಸ್ತಾನು ಮಾಡಿರುವ ಅಕ್ಕಿ ಮತ್ತು ಭತ್ತದ ಪ್ರಮಾಣವನ್ನು ವರ್ತಕರು, ಗಿರಣಿ ಮಾಲೀಕರು ಬಹಿರಂಗಪಡಿಸಬೇಕು ಎಂದು ಸೂಚಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ, 'ಅಕ್ಕಿ ರಫ್ತಿನ ಮೇಲೆ ವಿಧಿಸಿರುವ ನಿರ್ಬಂಧವನ್ನು ತೆರವುಗೊಳಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ. ದೇಶೀಯ ಮಾರುಕಟ್ಟೆಯಲ್ಲಿ ದರ ಇಳಿಕೆಯಾಗುವವರೆಗೂ ಈ ನಿರ್ಬಂಧ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿದರು.

ಮೊದಲ ಹಂತದಲ್ಲಿ ಚಿಲ್ಲರೆ ಮಾರುಕಟ್ಟೆಗೆ 5 ಲಕ್ಷ ಟನ್‌ನಷ್ಟು ಅಕ್ಕಿಯನ್ನು ಪೂರೈಕೆ ಮಾಡಲಾಗುವುದು ಎಂದು ಚೋಪ್ರಾ ವಿವರಿಸಿದರು.

ಸಗಟು ದರ ಕ್ವಿಂಟಲ್‌ಗೆ ₹200 ಇಳಿಕೆ

ಬೆಂಗಳೂರು: 'ಭಾರತ್ ಬ್ರ್ಯಾಂಡ್' ಅಕ್ಕಿಯು ಮಾರುಕಟ್ಟೆ ಪ್ರವೇಶಿಸಲು ಸಜ್ಜಾಗಿರುವ ಬೆನ್ನಲ್ಲೇ, ರಾಜ್ಯದ ಸಗಟು ಮಾರುಕಟ್ಟೆಯಲ್ಲಿ ಅಕ್ಕಿ ಧಾರಣೆಯು ಒಂದು ಕ್ವಿಂಟಲ್‌ಗೆ ₹200 ಇಳಿಕೆಯಾಗಿದೆ.

ಕರ್ನಾಟಕದಿಂದ ತಮಿಳುನಾಡು, ಕೇರಳ, ಮಹಾರಾಷ್ಟ್ರ, ಗುಜರಾತ್ ಹಾಗೂ ಛತ್ತೀಸಗಢಕ್ಕೆ ಅಕ್ಕಿ ಪೂರೈಕೆಯಾಗುತ್ತದೆ. ಅಲ್ಲಿನ ಖರೀದಿದಾರರು ನೇರವಾಗಿ ಇಲ್ಲಿನ ಗಿರಣಿಗಳಿಗೆ ಬಂದು ಅಕ್ಕಿ ಖರೀದಿಸುತ್ತಾರೆ.

ಆದರೆ, 'ಭಾರತ್ ಬ್ರ್ಯಾಂಡ್' ಅಕ್ಕಿ ಮಾರಾಟ ಆರಂಭ ಆಗುತ್ತಿರುವುದರಿಂದ ಹೊರರಾಜ್ಯಗಳ ಖರೀದಿದಾರರು ಬರುತ್ತಿಲ್ಲ. ಇದೇ ಸಗಟು ದರ ಇಳಿಕೆಗೆ ಕಾರಣವಾಗಿದೆ ಎನ್ನುತ್ತಾರೆ ಗಿರಣಿ ಮಾಲೀಕರು.

ಬ್ಯಾಂಕ್ ಆಫ್ ಇಂಡಿಯಾಗೆ ಶೇ 62ರಷ್ಟು ಲಾಭ

ನವದೆಹಲಿ (ಪಿಟಿಐ): 2023-24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾವು ₹1,870 ಕೋಟಿ ನಿವ್ವಳ ಲಾಭ ಗಳಿಸಿದೆ.

2022-23ರ ಡಿಸೆಂಬರ್ ತ್ರೈಮಾಸಿಕದಲ್ಲಿ ₹1,151 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿದಲ್ಲಿನ ಲಾಭದಲ್ಲಿ ಶೇ 62ರಷ್ಟು ಏರಿಕೆ ಆಗಿದೆ ಎಂದು ಬ್ಯಾಂಕ್ ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

ಬಡ್ಡಿ ವರಮಾನವು ₹12,728 ಕೋಟಿಯಿಂದ ₹15,218 ಕೋಟಿಗೆ ಹೆಚ್ಚಳವಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 7.66ರಿಂದ ಶೇ 5.35ಕ್ಕೆ ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 1.61ರಿಂದ ಶೇ 1.14ಕ್ಕೆ ಕುಗ್ಗಿದೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಜಾರಿಯಾಗದ ಬೆಂಬಲ ಬೆಲೆ: ನುರಿತ ಟ್ಯಾಪಿಂಗ್ ಕಾರ್ಮಿಕರ ಕೊರತೆ

ರಬ್ಬರ್ ದರ ಏರಿಕೆಯ 'ತಾತ್ಕಾಲಿಕ' ಖುಷಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಎರಡು ತಿಂಗಳಿಂದ ಆರ್‌ಎಸ್‌ಎಸ್-4 (ರಿಬ್ಬ್‌ಡ್ ಸ್ಮೋಕ್ಡ್ ಶೀಟ್) ದರ್ಜೆಯ ರಬ್ಬರ್ ಧಾರಣೆ ಏರಿಕೆಯಾಗುತ್ತಿದೆ.

ಒಂದು ಕೆ.ಜಿಗೆ ₹147ರಿಂದ ₹148ರ ಆಸುಪಾಸಿನಲ್ಲಿದ್ದ ಬೆಲೆಯು ಒಂದು ವಾರದಿಂದ ₹161ಕ್ಕೆ ತಲುಪಿದ್ದು ರಾಜ್ಯದ ಬೆಳೆಗಾರರಲ್ಲಿ ಖುಷಿ ತಂದಿದೆ. ಇದರ ನಡುವೆಯೇ ಎಷ್ಟು ದಿನಗಳವರೆಗೆ ಈ ಬೆಲೆ ಇರಲಿದೆ ಎಂಬ ಪ್ರಶ್ನೆಯೂ ಕಾಡತೊಡಗಿದೆ.

ಬೆಳೆಗಾರರ ಪ್ರಕಾರ ದಶಕದ ಹಿಂದೆ ರಾಜ್ಯದಲ್ಲಿ ರಬ್ಬರ್ ಧಾರಣೆಯು ಕೆ.ಜಿಗೆ ₹240 ಆಗಿತ್ತು. ನಂತರ ಬೆಲೆ ಕುಸಿಯುತ್ತ ಬಂದಿದೆ. ಇತ್ತೀಚಿನ ದಿನಗಳಲ್ಲಿ ₹200ರ ಆಸುಪಾಸು ತಲುಪಿದ್ದೇ ಇಲ್ಲ. ಆದ್ದರಿಂದ ಈಗಿನ ಧಾರಣೆ ಸಮಾಧಾನಕರ ಎನಿಸಿದರೂ ಉತ್ಪಾದನಾ ವೆಚ್ಚಕ್ಕೆ ಹೋಲಿಸಿದರೆ ಇದು ತೀರಾ ಕಡಿಮೆ ಎಂಬುದು ಅವರ ಅಭಿಪ್ರಾಯ.

ಹೀಗಾಗಿ, ಕೇರಳದಂತೆ ಕರ್ನಾಟಕದಲ್ಲೂ ಬೆಂಬಲ ಬೆಲೆ ನೀಡಬೇಕೆಂಬುದು ಬೆಳೆಗಾರರ ಒತ್ತಾಯ.

ರಬ್ಬರ್‌ನಲ್ಲಿ ಅತ್ಯುತ್ತಮ ಗುಣಮಟ್ಟದ್ದು ಆರ್‌ಎಕ್ಸ್ ದರ್ಜೆ. ಭಾರತದಲ್ಲಿ ಹೆಚ್ಚು ಚಾಲ್ತಿಯಲ್ಲಿರುವುದು ಆರ್‌ಎಸ್‌ಎಸ್-4. ರಬ್ಬರ್ ಮಂಡಳಿಯ 2016ರ ಅಂದಾಜಿನ ಪ್ರಕಾರ ಇದರ ಉತ್ಪಾದನಾ ವೆಚ್ಚ ಕೆ.ಜಿಗೆ ₹178. ಆದರೆ, ಈಗ ಸುಮಾರು ₹240 ವೆಚ್ಚ ತಗಲುತ್ತದೆ. ಹೀಗಾಗಿ ಕೆ.ಜಿಗೆ ₹260 ಸಿಕ್ಕಿದರೆ ಲಾಭ ಆಗುತ್ತದೆ. ಸದ್ಯ ₹161 ಸಿಗುತ್ತಿರುವುದು ಸ್ವಲ್ಪ ಸಮಾಧಾನ ಎನ್ನುತ್ತಾರೆ ಕರ್ನಾಟಕ ರಬ್ಬರ್ ಬೆಳೆಗಾರರ ಸಂಘದ ಅಧ್ಯಕ್ಷ ಪಕಳಕುಂಜ ಗೋಪಾಲಕೃಷ್ಣ ಭಟ್.



ಸುಳ್ಯ ತಾಲ್ಲೂಕಿನ ರಬ್ಬರ್ ತೋಟವೊಂದರಲ್ಲಿ ಟ್ಯಾಪಿಂಗ್ ಮಾಡಿದ ಮರಗಳು

ವಾರ್ಷಿಕ 11 ಲಕ್ಷ ಟನ್ ನೈಸರ್ಗಿಕ ರಬ್ಬರ್‌ಗೆ ದೇಶದಲ್ಲಿ ಬೇಡಿಕೆ ಇದೆ. ಅಷ್ಟು ಉತ್ಪಾದನೆ ಆಗುತ್ತಿಲ್ಲ. ಕೊರತೆ ನೀಗಿಸಲು ಮಲೇಷ್ಯಾ ಮತ್ತಿತರ ಕಡೆಗಳಿಂದ 'ಬ್ಲಾಕ್ ರಬ್ಬರ್' ಅನ್ನು ಆಮದು ಮಾಡಲಾಗುತ್ತಿದೆ. ಅದು ಸುಲಭವಾಗಿ ಬೆಳೆಯುವ ರಬ್ಬರ್. ದೇಶದಲ್ಲಿ ಗುಣಮಟ್ಟದ ರಬ್ಬರ್ ಬೆಳೆಯುವವರು ಇದ್ದರೂ ನಿರೀಕ್ಷಿತ ಬೆಲೆ ಸಿಗದ ಕಾರಣ ಈ ಕೃಷಿಯಿಂದ ವಿಮುಖರಾಗುತ್ತಿದ್ದಾರೆ.

ದಕ್ಷಿಣ ಕನ್ನಡದ ಸುಳ್ಯದ ಗುಡ್ಡ ಪ್ರದೇಶಗಳಲ್ಲಿ ಅತಿಹೆಚ್ಚು ರಬ್ಬರ್ ಬೆಳೆಯುತ್ತಿದ್ದು ಮಾಣಿಲ, ವಿಟ್ಲ ಮತ್ತಿತರ ಕಡೆಗಳಲ್ಲೂ ಉತ್ತಮ ಬೆಳೆ ಇದೆ. ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ ಭಾಗದಲ್ಲೂ ರಬ್ಬರ್ ಬೆಳೆಗಾರರು ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಸುಮಾರು 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಬ್ಬರ್ ಬೆಳೆ ಇದೆ. ಆದರೆ, ಬೇರೆ ಬೇರೆ ಸಮಸ್ಯೆಗಳಿಂದ ರಬ್ಬರ್ ತೋಟಗಳು ಅಡಿಕೆ ತೋಟಗಳಾಗಿ ಪರಿವರ್ತನೆಯಾಗುತ್ತಿವೆ.

'ರಬ್ಬರ್ ಉತ್ಪನ್ನಗಳಿಗೆ ನಿರಂತರವಾಗಿ ಉತ್ತಮ ಬೆಲೆ ಸಿಗುತ್ತಿದೆ. ಆದರೆ, ಬೆಳೆಗಾರರಿಗೆ ರಬ್ಬರ್ ಲಾಭದಾಯಕ ಅಲ್ಲ. ಹೀಗಾಗಿ ಬೆಳೆಯುವ ಪ್ರದೇಶ ಕಡಿಮೆ ಆಗುತ್ತಿದೆ. ಟ್ಯಾಪಿಂಗ್‌ಗೆ ಕಾರ್ಮಿಕರು ಸಿಗುತ್ತಿಲ್ಲ. ಟ್ಯಾಪಿಂಗ್ ಸಮರ್ಪಕವಾಗಿ ಆಗದೇ ಇದ್ದರೆ ಬೆಳೆ ಹಾಳಾಗುತ್ತದೆ. ಕೇರಳದಲ್ಲಿ ಕೆ.ಜಿಗೆ ₹175 ಬೆಂಬಲ ಬೆಲೆ ಸಿಗುತ್ತಿದೆ. ನಮ್ಮ ರಾಜ್ಯದಲ್ಲಿ ಬೆಂಬಲ ಬೆಲೆಯ ಕೂಗು ಸಂಬಂಧಪಟ್ಟವರಿಗೆ ಇನ್ನೂ ಕೇಳಿಸಲಿಲ್ಲ' ಎನ್ನುತ್ತಾರೆ ಗೋಪಾಲಕೃಷ್ಣ ಭಟ್.

'ಕೆಲವು ದಿನಗಳಿಂದ ಕೆಜಿಗೆ ₹161 ಸಿಗುತ್ತಿದೆ. ಕನಿಷ್ಠ ₹175 ಆದರೂ ಸಿಕ್ಕಿದರೆ ಇನ್ನಷ್ಟು ಅನುಕೂಲ ಆಗುತ್ತಿತ್ತು. ಸದ್ಯ ರಬ್ಬರ್ ಬೆಳೆಯಲ್ಲಿ ಹೆಚ್ಚು ಲಾಭವೇನೂ ಇಲ್ಲ. ಆದರೂ ನಿರೀಕ್ಷೆಯಿಂದ ಬೆಳೆಯುತ್ತಿದ್ದೇವೆ' ಎಂದು ಸುಳ್ಯ ತಾಲ್ಲೂಕಿನ ಪಡಪ್ಪಾಡಿಯ ನಿತ್ಯಾನಂದ ಮುಂಡೋಡಿ ತಿಳಿಸಿದರು.

ಟ್ಯಾಪಿಂಗ್ ತರಬೇತಿ ಕಾರ್ಯಾಗಾರ

ಕರ್ನಾಟಕದಲ್ಲಿ ರಬ್ಬರ್ ತೋಟಗಳ ಮಾಲೀಕರ ತೊಂದರೆ ಗಮನಕ್ಕೆ ಬಂದಿದೆ. ಟ್ಯಾಪಿಂಗ್ ಕಾರ್ಮಿಕರು ಇಲ್ಲದೇ ಇರುವುದು ಇಲ್ಲಿನ ದೊಡ್ಡ ಸಮಸ್ಯೆ ಎನ್ನುತ್ತಾರೆ ರಬ್ಬರ್ ಮಂಡಳಿ ಮಂಗಳೂರು ವಲಯದ ಮುಖ್ಯಸ್ಥೆ ಶೀಜಾ.

ಟ್ಯಾಪಿಂಗ್ ಕಾರ್ಯಕ್ಕೆ ಬಹುತೇಕ ಮಾಲೀಕರು ಕೇರಳ ಮತ್ತು ಜಾರ್ಖಂಡ್‌ನಿಂದ ಕೆಲಸಗಾರರನ್ನು ಕರೆದುಕೊಂಡು ಬರುತ್ತಾರೆ. ಸ್ಥಳೀಯವಾಗಿ ನುರಿತ ಕಾರ್ಮಿಕರು ಸಿಗುವುದು ಕಡಿಮೆ. ತಮ್ಮ ತೋಟಗಳಲ್ಲಿ ತಾವೇ ಟ್ಯಾಪಿಂಗ್ ಮಾಡುವ ಸಂಪ್ರದಾಯವೂ ಇಲ್ಲಿಲ್ಲ. ಈ ಸಮಸ್ಯೆ ನೀಗಿಸಲು ರಬ್ಬರ್ ಮಂಡಳಿ ಟ್ಯಾಪಿಂಗ್ ತರಬೇತಿ ನೀಡುತ್ತಿದೆ. ಮಹಿಳೆಯರೂ ಸೇರಿದಂತೆ ಅನೇಕ ಮಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ ಎಂದು ವಿವರಿಸಿದರು.

> **ಒಂದು ದಶಕದಿಂದ ರಾಜ್ಯದಲ್ಲಿ ಬೆಳೆಗಾರರಿಗೆ ಒಳ್ಳೆಯ ಬೆಲೆ ಸಿಗಲಿಲ್ಲ. ಈಗ ಆಗಿರುವ ಏರಿಕೆ ಮಳೆಗಾಲ ಆರಂಭದವರೆಗಾದರೂ ಇರಲಿ ಎಂಬುದು ಎಲ್ಲರ ಆಶಯ**
>
> **ಶೀಜಾ,** ರಬ್ಬರ್ ಮಂಡಳಿ ಮಂಗಳೂರು ವಲಯದ ಮುಖ್ಯಸ್ಥೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	550
ಬಂಟ್ವಾಳ(ಅಡಿಕೆ)	
ಕೋಕ	18000-28500
ಹೊಸತು	28500-35000
ಹಳತು	42000-44000
ಕುಮಟ	
ಚಿಪ್ಪು	26509-32099
ಕೋಕ	16569-29999
ಫ್ಯಾಕ್ಟರಿ	11509-20899
ಹಳೆಚಾಲಿ	36399-38005
ಹೊಸಚಾಲಿ	32089-34319
ಶಿವಮೊಗ್ಗ	
ಬೆಟ್ಟೆ	35000-54800
ಗೊರಬಲು	16509-35519
ರಾಶಿ	34399-49099
ಸರಕು	50199-82096
ಸಿದ್ದಾಪುರ	
ಬಿಳಿಗೋಟು	28699-31413
ಚಾಲಿ	36289-38899
ಕೋಕ	27099-30699
ಹೊಸಚಾಲಿ	31979-36729
ಕೆಂಪುಗೋಟು	31019-35899
ರಾಶಿ	43869-47512
ತಟ್ಟಿಬೆಟ್ಟೆ	40169-47029
ಶಿರಸಿ	
ಬೆಟ್ಟೆ	38099-44608
ಬಿಳಿಗೋಟು	25169-33821
ಚಾಲಿ	36218-39112
ಕೆಂಪುಗೋಟು	31099-36418
ರಾಶಿ	43508-48001
ಕಾರ್ಕಳ	
ಹೊಸತು	25000-35000
ಹಳತು	30000-44500
ಯಲ್ಲಾಪುರ	
ಅಪಿ	54809-59069
ಬಿಳಿಗೋಟು	24899-34428
ಚಾಲಿ	33757-39090
ಕೋಕ	17712-31799
ಕೆಂಪುಗೋಟು	25399-37499
ರಾಶಿ	46000-52992
ತಟ್ಟಿಬೆಟ್ಟೆ	37050-45920

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14500	-	194 .20 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	12,800	-	ಲಂಡನ್
ಆರ್‌ಸಿ	-	7500	-	3,287 ಡಾಲರ್ಸ್

ಪೇಟಿಎಂ ಷೇರು ಶೇ 20ರಷ್ಟು ಕುಸಿತ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ ಬ್ಯಾಂಕ್ ಲಿಮಿಟೆಡ್‌ಗೆ (ಪಿಪಿಬಿಎಲ್) ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿರುವ ನಿರ್ಬಂಧದಿಂದಾಗಿ ಶುಕ್ರವಾರವೂ ಪೇಟಿಎಂ ಷೇರುಗಳ ಮೌಲ್ಯ ಕುಸಿದಿದೆ.

ಕಳೆದ ಎರಡು ದಿನಗಳ ಅವಧಿಯಲ್ಲಿ ಷೇರುಗಳ ಮೌಲ್ಯ ಶೇ 20ರಷ್ಟು ಕುಸಿದಿದೆ. ಒಟ್ಟಾರೆ ಕಂಪನಿಯ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ₹30,931 ಕೋಟಿಯಿಂದ ₹17,378 ಕೋಟಿಗೆ ಇಳಿಕೆಯಾಗಿದೆ.

ಇದೇ 29ರ ಬಳಿಕ ಪೇಟಿಎಂ ಬಳಕೆದಾರರ ಪ್ರಿಪೇಯ್ಡ್ ಪೇಮೆಂಟ್, ವ್ಯಾಲೆಟ್, ಫಾಸ್ಟ್ಯಾಗ್‌ಗಳಿಗೆ ಯಾವುದೇ ಠೇವಣಿ ಅಥವಾ ಟಾಪ್‌ಅಪ್‌ಗಳನ್ನು ಸ್ವೀಕರಿಸಬಾರದು ಎಂದು ಪಿಪಿಬಿಎಲ್‌ಗೆ ಆರ್‌ಬಿಐ ಸೂಚಿಸಿದೆ.

ಆ್ಯಪ್ ಕಾರ್ಯ ನಿರ್ವಹಣೆ: 'ಪೇಟಿಎಂ ಆ್ಯಪ್ ಕಾರ್ಯ ನಿರ್ವಹಣೆಗೆ ಯಾವುದೇ ಸಮಸ್ಯೆಯಾಗಿಲ್ಲ. ಫೆಬ್ರುವರಿ 29ರ ನಂತರವೂ ಎಂದಿನಂತೆ ಕಾರ್ಯ ನಿರ್ವಹಿಸಲಿದೆ' ಎಂದು ಒನ್97 ಕಮ್ಯುನಿಕೇಷನ್ಸ್ ಕಂಪನಿ ಸಂಸ್ಥಾಪಕ ಮತ್ತು ಸಿಇಒ ವಿಜಯ್ ಶೇಖರ್ ಶರ್ಮಾ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಪ್ರತಿಯೊಂದು ಸವಾಲಿಗೂ ಪರಿಹಾರವಿದೆ. ಪೇಟಿಎಂ ಬಳಕೆದಾರರು ನೀಡಿರುವ ಬೆಂಬಲಕ್ಕೆ ನಾವು ಆಭಾರಿಯಾಗಿದ್ದೇವೆ' ಎಂದಿದ್ದಾರೆ.

ಷೇರು ಸೂಚ್ಯಂಕಗಳು ಏರಿಕೆ



ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಮತ್ತು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಷೇರುಗಳ ಖರೀದಿಗೆ ಹೂಡಿಕೆದಾರರು ಹೆಚ್ಚು ಉತ್ಸಾಹ ತೋರಿದ್ದರಿಂದ ಶುಕ್ರವಾರ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 440 ಅಂಶ ಏರಿಕೆಯಾಗಿ 72,085ಕ್ಕೆ ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 1,441 ಅಂಶ ಜಿಗಿತ ಕಂಡು 73,089 ಅಂಶಕ್ಕೆ ಮುಟ್ಟಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 156 ಅಂಶ ಹೆಚ್ಚಳವಾಗಿ 21,853ಕ್ಕೆ ಕೊನೆಗೊಂಡಿತು. ದಿನದ ಆರಂಭಿಕ ವಹಿವಾಟಿನಲ್ಲಿ 429 ಅಂಶ ಏರಿಕೆಯಾಗಿ 22,126 ಅಂಶಕ್ಕೆ ತಲುಪಿತ್ತು.

ಟಾಟಾ ಮೋಟರ್ಸ್‌ಗೆ ₹7,100 ಕೋಟಿ ಲಾಭ

ಮುಂಬೈ (ಪಿಟಿಐ): 2023-24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್ ಲಿಮಿಟೆಡ್ ₹7,100 ಕೋಟಿ ನಿವ್ವಳ ಲಾಭ ಗಳಿಸಿದೆ.

2022-23ರ ಮೂರನೇ ತ್ರೈಮಾಸಿಕದಲ್ಲಿ ₹3,043 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 133ರಷ್ಟು ಹೆಚ್ಚಳವಾಗಿದೆ. ಸಂಚಿತ ವರಮಾನವು ಶೇ 25ರಷ್ಟು ಏರಿಕೆ ಆಗಿದ್ದು, ಒಟ್ಟು ₹1.10 ಲಕ್ಷ ಕೋಟಿಗೆ ತಲುಪಿದೆ. ನಿವ್ವಳ ಸಾಲವು ₹9,500 ಕೋಟಿಗೆ ಇಳಿದಿದೆ ಎಂದು ಕಂಪನಿ ತಿಳಿಸಿದೆ.

ಟ್ರಕ್ ಚಾಲಕರಿಗೆ ಸಾವಿರ ವಿಶ್ರಾಂತಿ ಗೃಹ

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟ್ರಕ್ ಮತ್ತು ಟ್ಯಾಕ್ಸಿ ಚಾಲಕರಿಗೆ ಅನುಕೂಲ ಕಲ್ಪಿಸಲು ಪ್ರಥಮ ಹಂತದಲ್ಲಿ ಒಂದು ಸಾವಿರ ಸುಸಜ್ಜಿತ ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶುಕ್ರವಾರ ನಡೆದ ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋದಲ್ಲಿ ಅವರು ಮಾತನಾಡಿದರು. 2014ಕ್ಕೂ ಮೊದಲು ದೇಶದಲ್ಲಿ 12 ಕೋಟಿ ಪ್ರಯಾಣಿಕ ವಾಹನಗಳು ಮಾರಾಟವಾಗಿದ್ದು, ಈ ಪೈಕಿ 2 ಸಾವಿರ ಎಲೆಕ್ಟ್ರಿಕ್ ವಾಹನಗಳಿವೆ. 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಇಲ್ಲಿಯವರೆಗೆ 21 ಕೋಟಿ ಪ್ರಯಾಣಿಕ ವಾಹನಗಳು ಮಾರಾಟವಾಗಿದ್ದು, ಇದರಲ್ಲಿ 12 ಲಕ್ಷ ಎಲೆಕ್ಟ್ರಿಕ್ ವಾಹನಗಳಿವೆ. ಒಂದು ದಶಕದ ಅವಧಿಯಲ್ಲಿ ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಶೇ 60ರಷ್ಟು ಬೆಳವಣಿಗೆಯಾಗಿದೆ ಎಂದು ವಿವರಿಸಿದರು.

ಕೇಂದ್ರದಲ್ಲಿ ಮೂರನೇ ಬಾರಿಗೆ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು, ಇದೇ ಅವಧಿಯಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದರು.

ಎಚ್‌ಎಸ್‌ಆರ್‌ಪಿ ಅಳವಡಿಕೆ ಕೇವಲ ಶೇ 5ರಷ್ಟು ಪ್ರಗತಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹಳೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸಿಕೊಳ್ಳಲು ನಿಗದಿಪಡಿಸಿದ್ದ ಗಡುವು ಮುಗಿಯಲು ಕೆಲವೇ ದಿನಗಳು ಬಾಕಿ ಉಳಿದಿವೆ. ಇಲ್ಲಿವರೆಗೆ ಶೇ 5ರಷ್ಟು ವಾಹನಗಳಿಗಷ್ಟೇ ಎಚ್‌ಎಸ್‌ಆರ್‌ಪಿ ಅಳವಡಿಸಲಾಗಿದೆ. ಅತಿ ಕಡಿಮೆ ಪ್ರಗತಿ ಸಾಧಿಸಿರುವುದರಿಂದ ಅವಧಿ ವಿಸ್ತರಿಸಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.

ಅಪರಾಧ ಕಡಿಮೆ ಮಾಡಲು, ವಾಹನಗಳನ್ನು ಸುಲಭದಲ್ಲಿ ಪತ್ತೆ ಹಚ್ಚಲು, ನಕಲಿ ನಂಬರ್‌ಗಳನ್ನು ತಡೆಗಟ್ಟಲು ಎಚ್‌ಎಸ್‌ಆರ್‌ಪಿ ಅಳವಡಿಸುವುದು ಅಗತ್ಯ ಎಂದು ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯವು ತಿಳಿಸಿತ್ತು. 2018ರ ಡಿ.4ರಂದು ಸಿಎಂವಿಆರ್ ಕಾಯ್ದೆಗೆ ತಿದ್ದುಪಡಿ ಮಾಡಿ ಇನ್ನು ಮುಂದೆ ತಯಾರಿಸುವ ಎಲ್ಲ ವಾಹನಗಳಿಗೆ ಅತಿಸುರಕ್ಷಿತ ನೋಂದಣಿ ಫಲಕ ಕಡ್ಡಾಯಗೊಳಿಸಲಾಯಿತು. 2019ರ ಏ.1ರಿಂದ ಜಾರಿಗೆ ಬಂದಿತ್ತು.

2023ರ ನವೆಂಬರ್ 17ರ ಒಳಗೆ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳುವಂತೆ ಆಗಸ್ಟ್‌ನಲ್ಲಿ ರಾಜ್ಯ ಸಾರಿಗೆ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಆದರೆ, ವಾಹನ ಮಾಲೀಕರು ಹೊಸ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಲು ಉತ್ಸಾಹ ತೋರಿರಲಿಲ್ಲ. ವಾಹನಗಳ ಮೂಲ ತಯಾರಿಕಾ ಸಂಸ್ಥೆಗಳು ಅನುಮತಿ ನೀಡಿದ ಏಜೆನ್ಸಿಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸುವ ಅವಕಾಶವನ್ನು ನೀಡಿರುವುದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಎಲ್ಲ ಕಾರಣದಿಂದ ಶೇ 1ರಷ್ಟೂ ಪ್ರಗತಿ ಆಗಿರಲಿಲ್ಲ.

ಅದಕ್ಕಾಗಿ ಮತ್ತೆ ಮೂರು ತಿಂಗಳ ಅವಕಾಶ ನೀಡಲಾಗಿತ್ತು. ಫೆ.17 ಕೊನೇ ದಿನವಾಗಿದ್ದು, ವಾಹನ ಮಾಲೀಕರು ಇನ್ನೂ ಎಚ್ಚೆತ್ತುಕೊಂಡಿಲ್ಲ. ರಾಜ್ಯದಲ್ಲಿ 2 ಕೋಟಿ ವಾಹನಗಳು ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕಿದ್ದು, ಕೇವಲ 11 ಲಕ್ಷ ಮಂದಿ ಮಾತ್ರ ತಮ್ಮ ವಾಹನಗಳಿಗೆ ಹೊಸ ಫಲಕ ಅಳವಡಿಸಿದ್ದಾರೆ.

15 ದಿನಗಳಲ್ಲಿ ಮಾಡಿ: 'ತೆರೆದ ಮಾರುಕಟ್ಟೆಯಲ್ಲಿ ರಸ್ತೆ ಬದಿಯ ಮಾರಾಟಗಾರರಿಂದ ನಕಲಿ ಹಾಲೊಗ್ರಾಮ್, ಐಎನ್‌ಡಿ ಮಾರ್ಕ್, ಇಂಡಿಯಾ ಎಂದು ಬರೆದಿರುವ ನಂಬರ್ ಪ್ಲೇಟ್ ಅಳವಡಿಸುವಂತಿಲ್ಲ. ಅಸಲಿ ಎಚ್‌ಎಸ್‌ಆರ್‌ಪಿ ಅಳವಡಿಸದೇ ಇದ್ದರೆ ವಾಹನ ಮಾಲೀಕತ್ವ ವರ್ಗಾವಣೆ, ವಿಳಾಸ ಬದಲಾವಣೆ, ಕಂತು ಕರಾರು ನಮೂದು/ರದ್ದತಿ, ಅರ್ಹತಾ ಪತ್ರ ನವೀಕರಣ ಮಾಡಲಾಗುವುದಿಲ್ಲ. ಅವಧಿ ಮುಗಿಯಲು ಇನ್ನೂ 15 ದಿನಗಳಿವೆ. ಅದರೊಳಗೆ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ವಾಹನ ಮಾಲೀಕರು http//transport.karnataka.gov.in ಅಥವಾ www.siam.in ಮೂಲಕ ನಿಗದಿತ ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಮಾಡಿಕೊಂಡವರು ಒಂದು ತಿಂಗಳ ಒಳಗೆ ಫಲಕ ಅಳವಡಿಸಿಕೊಳ್ಳಬೇಕು ಎಂದು ಸಾರಿಗೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಮಾಹಿತಿ ನೀಡಿದ್ದಾರೆ.

ಚುನಾವಣೆ ಮುಗಿದ ಮೇಲೆ ಬಿಗಿ ಕ್ರಮ

'ಫೆ.17ರ ಒಳಗೆ ಎಲ್ಲರೂ ತಮ್ಮ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳಬೇಕು. ಅವಧಿ ವಿಸ್ತರಣೆ ಬಗ್ಗೆ ಈಗ ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ. ಈ ಅವಧಿಯಲ್ಲಿ ಎಷ್ಟು ವಾಹನಗಳು ಅಳವಡಿಸಿಕೊಳ್ಳುತ್ತವೆ ಎಂದು ನೋಡಿಕೊಂಡು ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ಚುನಾವಣೆ ಮುಗಿದ ಮೇಲೆ ಬಿಗಿ ಕ್ರಮ ಕೈಗೊಳ್ಳಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಜಾಗೃತಿ ಮೂಡಿಸಿ

ಅತಿ ಸುರಕ್ಷಿತ ನೋಂದಣಿ ಫಲಕ ಎಲ್ಲ ವಾಹನಗಳಿಗೆ ಅಳವಡಿಸುವುದು ಒಳ್ಳೆಯದು. ಆದರೆ, ವಾಹನ ಮಾಲೀಕರಿಗೆ ಈ ಬಗ್ಗೆ ಸರಿಯಾಗಿ ಜಾಗೃತಿ ಮೂಡಿಸುವ ಕಾರ್ಯವಾಗಿಲ್ಲ. ಮೊದಲು ಎಲ್ಲರಿಗೂ ಜಾಗೃತಿ ಮೂಡಿಸಬೇಕು. ಎಚ್‌ಎಸ್‌ಆರ್‌ಪಿ ಅಳವಡಿಸಲು ಈಗ ನೀಡಿರುವ ಅವಧಿ ಸಾಲದು. ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ಬೆಂಗಳೂರು ಸಾರಥಿ ಸೇನೆ ಅಧ್ಯಕ್ಷ ಬಿ. ರಾಮೇಗೌಡ ಆಗ್ರಹಿಸಿದರು.

ಬೈಜುಸ್ ಸಿಇಒ ಹೊರಹಾಕಲು ಸಭೆ ಕರೆದ ಹೂಡಿಕೆದಾರರು

ನವದೆಹಲಿ (ಪಿಟಿಐ): 'ಹೂಡಿಕೆದಾರರಿಗೆ ಸಿಇಒ ಅಥವಾ ಆಡಳಿತ ಮಂಡಳಿಯನ್ನು ಬದಲಾವಣೆ ಮಾಡುವ ಮತದಾನದ ಹಕ್ಕು ಇಲ್ಲ. ಷೇರುದಾರರ ಒಪ್ಪಂದದಲ್ಲಿಯೇ ಇದನ್ನು ಸ್ಪಷ್ಟಪಡಿಸಲಾಗಿದೆ' ಎಂದು ಬೈಜುಸ್ ಕಂಪನಿ ಹೇಳಿದೆ.

ಕಂಪನಿ ಮೇಲಿನ ನಿಯಂತ್ರಣದಿಂದ ಸಂಸ್ಥಾಪಕ ಬೈಜು ರವೀಂದ್ರನ್ ಅವರನ್ನು ಹೊರಹಾಕಲು ಆರು ಮಂದಿ ಹೂಡಿಕೆದಾರರು ವಿಶೇಷ ಸಾಮಾನ್ಯ ಸಭೆ (ಇಜಿಎಂ) ಕರೆದಿರುವ ಹಿನ್ನೆಲೆಯಲ್ಲಿ ಕಂಪನಿಯು ಈ ಪ್ರತಿಕ್ರಿಯೆ ನೀಡಿದೆ.

ಕಂಪನಿಯು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಹಾಗಾಗಿ, ಹಣಕಾಸಿನ ಸಮಸ್ಯೆಗಳನ್ನು ಪರಿಹರಿಸಬೇಕಿದೆ. ಹಾಗಾಗಿ, ಸಭೆ ಕರೆಯಲಾಗಿದೆ ಎಂದು ಹೂಡಿಕೆದಾರರು ಹೇಳಿದ್ದಾರೆ.

ಸಭೆ ನಡೆಸುವಂತೆ ಜುಲೈ ಮತ್ತು ಡಿಸೆಂಬರ್‌ನಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಿಗೆ ಕೋರಲಾಗಿತ್ತು. ಆದರೆ, ಇದನ್ನು ಕಡೆಗಣಿಸಿದ್ದರು ಎಂದು ಹೇಳಿದ್ದಾರೆ.

ಅಮೆರಿಕ: ಭಾರತ ಮೂಲದ ಮತ್ತೊಬ್ಬ ವಿದ್ಯಾರ್ಥಿ ಸಾವು

ನ್ಯೂಯಾರ್ಕ್ (ಪಿಟಿಐ): ಭಾರತ ಮೂಲದ ಮತ್ತೊಬ್ಬ ವಿದ್ಯಾರ್ಥಿ ಅಮೆರಿಕದ ಒಹಿಯೊದಲ್ಲಿ ಗುರುವಾರ ಸಾವನ್ನಪ್ಪಿದ್ದು, ಒಂದೇ ತಿಂಗಳೊಳಗೆ ನಡೆದ 4ನೇ ಸಾವು ಪ್ರಕರಣ ಇದಾಗಿದೆ.

'ಸಿನ್ಸಿನಾಟಿಯ ಲಿಂಡ್ನೆರ್ ಸ್ಕೂಲ್ ಆಫ್ ಬ್ಯುಸಿನೆಸ್‌ನ ವಿದ್ಯಾರ್ಥಿಯಾಗಿದ್ದ ಶ್ರೇಯಸ್ ರೆಡ್ಡಿ ಬೆನಿಗೇರಿ ಸಾವಿನ ಬಗ್ಗೆ ತನಿಖೆ ನಡೆಯುತ್ತಿದೆ. ಸಾವಿಗೆ ಏನು ಕಾರಣ ಎಂಬ ಮಾಹಿತಿ ಲಭ್ಯವಾಗಿಲ್ಲ' ಎಂದು ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ತಿಳಿಸಿದ್ದಾರೆ.

ಒಂದು ತಿಂಗಳ ಅವಧಿಯಲ್ಲಿ ವಿವಿಧ ಸ್ಥಳಗಳಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ಶ್ರೇಯಸ್ ಹೊರತುಪಡಿಸಿ ಭಾರತ ಮೂಲದ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಒಟ್ಟು 403 ಪ್ರಕರಣ: (ನವದೆಹಲಿ ವರದಿ): 2018ರಿಂದ ಈವರೆಗೆ ವಿವಿಧ ಕಾರಣಗಳಿಂದಾಗಿ ಭಾರತ ಮೂಲದ ವಿದ್ಯಾರ್ಥಿಗಳು ವಿದೇಶದಲ್ಲಿ ಸಾವನ್ನಪ್ಪಿರುವ 403 ಪ್ರಕರಣಗಳು ವರದಿಯಾಗಿವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಶುಕ್ರವಾರ ಲೋಕಸಭೆಗೆ ತಿಳಿಸಿದರು.

ಕೇಂದ್ರದ ವಿರುದ್ಧ ಗೊತ್ತುವಳಿಗೆ ಅಂಗೀಕಾರ

ತಿರುವನಂತಪುರ (ಪಿಟಿಐ): ರಾಜ್ಯವನ್ನು ಆರ್ಥಿಕವಾಗಿ ದುರ್ಬಲಗೊಳಿಸುವ ಮೂಲಕ ಸಹಕಾರ ತತ್ವವನ್ನು ನಾಶ ಮಾಡಲಾಗಿದೆ ಎಂದು ಆರೋಪಿಸಿ ಕೇರಳ ಸರ್ಕಾರವು ಕೇಂದ್ರ ಸರ್ಕಾರದ ವಿರುದ್ಧ ವಿಧಾನಸಭೆಯಲ್ಲಿ ಗುರುವಾರ ಗೊತ್ತುವಳಿಯನ್ನು ಅಂಗೀಕರಿಸಿದೆ.

ಸದನದಲ್ಲಿ ವಿರೋಧ ಪಕ್ಷದ ಗೈರುಹಾಜರಿಯ ನಡುವೆಯೂ, ಗೊತ್ತುವಳಿಯು ಸರ್ವಾನುಮತದಿಂದ ಅಂಗೀಕಾರಗೊಂಡಿದೆ ಎಂದು ಸ್ಪೀಕರ್ ಎ.ಎನ್ ಶಮ್ಸೀರ್ ಘೋಷಣೆ ಮಾಡಿದ್ದಾರೆ.

ಗೊತ್ತುವಳಿಯನ್ನು ಮಂಡಿಸಿದ ಹಣಕಾಸು ಸಚಿವ ಕೆ.ಎನ್ ಗೋಪಾಲ್ ಅವರು, 'ಹಣಕಾಸು ಆಯೋಗದ ಸಲಹೆಗಳನ್ನು ನಿರಾಕರಿಸಿರುವ ಕೇಂದ್ರವು ಕೇರಳದ ಖರೀದಿ ಮಿತಿಯನ್ನು ಕಡಿಮೆಗೊಳಿಸಿದೆ ಮತ್ತು ಕಂದಾಯ ಕೊರತೆ ಅನುದಾನಕ್ಕೆ ಕತ್ತರಿ ಹಾಕಿದೆ' ಎಂದು ಆರೋಪಿಸಿದರು.

'ಕೇಂದ್ರ ಸರ್ಕಾರದ ಚಟುವಟಿಕೆಗಳು ದೇಶದ ಸಹಕಾರಿ ತತ್ವಕ್ಕೆ ಗಾಸಿಗೊಳಿಸುತ್ತಿವೆ. ಕೆಲ ವಿಚಾರಗಳಲ್ಲಿ ಸಂವಿಧಾನವು ರಾಜ್ಯಗಳಿಗೂ ಕೆಲವೊಂದು ವಿಚಾರಗಳಲ್ಲಿ ಸಂಪೂರ್ಣ ಅಧಿಕಾರವನ್ನು ನೀಡಿದೆ' ಎಂದು ತಿಳಿಸಿದ್ದಾರೆ.

ಜಾರ್ಖಂಡ್‌ನ 12ನೇ ಮುಖ್ಯಮಂತ್ರಿ ● ಇದೇ 5ರಂದು ವಿಶ್ವಾಸ ಮತಯಾಚನೆ

ಮುಖ್ಯಮಂತ್ರಿಯಾಗಿ ಚಂಪೈ ಪ್ರಮಾಣ

ರಾಂಚಿ (ಪಿಟಿಐ): ಜೆಎಂಎಂ ಶಾಸಕಾಂಗ ಪಕ್ಷದ ನಾಯಕ ಚಂಪೈ ಸೊರೇನ್ ಅವರು ಜಾರ್ಖಂಡ್ ನೂತನ ಮುಖ್ಯಮಂತ್ರಿಯಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಅವರ ಜತೆಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ಅಲಂಗೀರ್ ಆಲಂ ಮತ್ತು ಆರ್‌ಜೆಡಿ ನಾಯಕ ಸತ್ಯಾನಂದ್ ಭೋಕ್ತಾ ಅವರೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದ ದರ್ಬಾರ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಜೆಎಂಎಂ ನೇತೃತ್ವದ ಮೈತ್ರಿಕೂಟದ (ಕಾಂಗ್ರೆಸ್, ಆರ್‌ಜೆಡಿ) ಹಿರಿಯ ನಾಯಕರು ಈ ವೇಳೆ ಹಾಜರಿದ್ದರು. ಆದಿವಾಸಿ ನಾಯಕರೂ ಆಗಿರುವ 67 ವರ್ಷದ ಚಂಪೈ ಅವರು ರಾಜ್ಯದ 12ನೇ ಮುಖ್ಯಮಂತ್ರಿ. ಜಾರ್ಖಂಡ್‌ನ ಕೊಲ್ಹಾನ್ ಪ್ರದೇಶದವರಾದ ಅವರು, ಈ ಪ್ರದೇಶದಿಂದ ಮುಖ್ಯಮಂತ್ರಿಯಾದ ಆರನೆಯವರು.

ಜಾರ್ಖಂಡ್ ಅಭಿವೃದ್ಧಿಗೆ ಬದ್ಧ: 'ಜಾರ್ಖಂಡ್‌ನ ಅಭಿವೃದ್ಧಿಗೆ ನಾನು ಬದ್ಧನಾಗಿದ್ದೇನೆ. ಅಲ್ಲದೆ ಹಿಂದಿನ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಕೈಗೊಂಡಿದ್ದ ಕಲ್ಯಾಣ ಯೋಜನೆಗಳನ್ನು ಮುಂದುವರಿಸುತ್ತೇನೆ. ಆದಿವಾಸಿಗಳು ಮತ್ತು ಇತರರ ಅಭಿವೃದ್ಧಿಗಾಗಿ ನಾವು ಜಲ್, ಜಂಗಲ್, ಜಮೀನ್ ಹೋರಾಟವನ್ನು ಮುಂದುವರಿಸುತ್ತೇವೆ' ಎಂದು ನೂತನ ಮುಖ್ಯಮಂತ್ರಿ ಚಂಪೈ ಸೊರೇನ್ ಪ್ರತಿಕ್ರಿಯಿಸಿದರು.



ಜಾರ್ಖಂಡ್‌ನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಚಂಪೈ ಸೊರೇನ್ ಅವರಿಗೆ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು —ಪಿಟಿಐ ಚಿತ್ರ

ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಚಂಪೈ ಅವರು, ಬುಡಕಟ್ಟು ಸಮುದಾಯದ ನಾಯಕರಾದ ಬಿರ್ಸಾ ಮುಂಡಾ ಮತ್ತು ಮತ್ತು ಸಿಧೂ ಕನ್ಹೊ ಅವರಿಗೆ ಗೌರವ ಅರ್ಪಿಸಿದರು. ಚಂಪೈ ಅವರ ಗ್ರಾಮ ಜಿಲಿಂಗ್ ಗೋರಾದಲ್ಲಿ ಅವರ ಸಂಬಂಧಿಕರು ಮತ್ತು ಕುಟುಂಬದ ಸದಸ್ಯರು ಸಾಂಪ್ರದಾಯಿಕ ನೃತ್ಯಗಳನ್ನು ಪ್ರದರ್ಶಿಸಿ ಸಂಭ್ರಮಿಸಿದರು.

'ಜಾರ್ಖಂಡನ್ ಹುಲಿ'

ರಾಂಚಿ (ಪಿಟಿಐ): ಜಾರ್ಖಂಡ್‌ನ ಸೆರೈಕೆಲಾ–ಖಾರ್ಸಾವಾನ್ ಜಿಲ್ಲೆಯ ಗ್ರಾಮ ಜಿಲಿಂಗ್‌ಗೋರಾದ ಕೃಷಿ ಕುಟುಂಬದವರಾದ 67 ವರ್ಷದ ಚಂಪೈ ಸೊರೇನ್ ಅವರು, 1990ರ ದಶಕದಲ್ಲಿ ಪ್ರತ್ಯೇಕ ರಾಜ್ಯ ರಚನೆಗಾಗಿ ಸುದೀರ್ಘ ಕಾಲ ಹೋರಾಟ ನಡೆಸಿದವರು. ಇದಕ್ಕಾಗಿಯೇ ಅವರನ್ನು 'ಜಾರ್ಖಂಡನ್ ಹುಲಿ' ಎಂದು ಕರೆಯಲಾಗುತ್ತದೆ.

ಪ್ರತ್ಯೇಕ ರಾಜ್ಯ ಹೋರಾಟದ ಫಲವಾಗಿ 2000ನೇ ಇಸವಿಯಲ್ಲಿ ಬಿಹಾರ ವಿಭಜನೆಯಾಗಿ ಜಾರ್ಖಂಡ್ ರಾಜ್ಯ ರಚನೆಯಾಯಿತು. ಜಾರ್ಖಂಡ್ ಮುಕ್ತಿ ಮೋರ್ಚಾದ ಅಧ್ಯಕ್ಷ ಶಿಬು ಸೊರೇನ್ ಅವರ ನಿಷ್ಠರಾದ ಚಂಪೈ ಅವರು ಶಿಬು ಸೊರೇನ್ ಮತ್ತು ಅವರ ಮಗ ಹೇಮಂತ್ ಸೊರೇನ್ ನಂತರ ಆ ಸ್ಥಾನಕ್ಕೇರಿದ ಜೆಎಂಎಂನ ಮೂರನೆಯವರು.

'ನನ್ನ ತಂದೆಯೊಂದಿಗೆ (ಸಿಮಲ್ ಸೊರೇನ್) ಹಿಂದೆ ಹೊಲದಲ್ಲಿ ಉಳುಮೆ ಮಾಡುತ್ತಿದ್ದೆ. ಈಗ ಅದೃಷ್ಟವು ನನಗೆ ವಿಭಿನ್ನ ಪಾತ್ರ ನೀಡಿದೆ' ಎಂದು ಚಂಪೈ ಅವರು ಜೆಎಂಎಂ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಬಳಿಕ ಪ್ರತಿಕ್ರಿಯಿಸಿದ್ದರು.

ಹೈದರಾಬಾದ್‌ಗೆ ಶಾಸಕರು

ಹೈದರಾಬಾದ್ (ಪಿಟಿಐ): ಜಾರ್ಖಂಡ್‌ನ ಆಡಳಿತಾರೂಢ ಜೆಎಂಎಂ ನೇತೃತ್ವದ ಮೈತ್ರಿಕೂಟದ ಸುಮಾರು 40 ಶಾಸಕರು ಶುಕ್ರವಾರ ಹೈದರಾಬಾದ್‌ಗೆ ಬಂದಿಳಿದರು.

ಚಂಪೈ ಸೊರೇನ್ ನೇತೃತ್ವದ ನೂತನ ಸರ್ಕಾರ ಇದೇ 5ರಂದು ವಿಶ್ವಾಸ ಮತ ಎದುರಿಸಲಿದ್ದು, ಅಷ್ಟರಲ್ಲಿ ವಿರೋಧ ಪಕ್ಷ ಬಿಜೆಪಿಯು ಶಾಸಕರ ಖರೀದಿ ಯತ್ನ ನಡೆಸಬಹುದು ಎಂಬ ಆತಂಕದ ಕಾರಣ ಮೈತ್ರಿಕೂಟದ ಶಾಸಕರನ್ನು ಹೈದರಾಬಾದ್‌ಗೆ ಸ್ಥಳಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಎರಡು ವಿಮಾನಗಳಲ್ಲಿ ಬೇಗಂಪೇಟೆ ವಿಮಾನ ನಿಲ್ದಾಣಕ್ಕೆ ಸುಮಾರು 40 ಶಾಸಕರು ಬಂದಿಳಿದರು.

ಇದೇ 5ರಂದು ವಿಶ್ವಾಸ ಮತಯಾಚನೆ: ಜಾರ್ಖಂಡ್‌ನಲ್ಲಿ ರಚನೆಯಾಗಿರುವ ಚಂಪೈ ಸೊರೇನ್ ನೇತೃತ್ವದ ಸಮ್ಮಿಶ್ರ ಸರ್ಕಾರವು ಇದೇ 5ರಂದು ವಿಶ್ವಾಸ ಮತ ಕೋರಲಿದೆ ಎಂದು ಸಚಿವ ಅಲಂಗೀರ್ ಆಲಂ ಶುಕ್ರವಾರ ತಿಳಿಸಿದರು.


5 ದಿನ ಇ.ಡಿ ವಶಕ್ಕೆ ಹೇಮಂತ್ ಸೊರೇನ್

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿತರಾಗಿರುವ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಐದು ದಿನಗಳವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿ ನ್ಯಾಯಾಲಯ ಆದೇಶಿಸಿದೆ. ಈ ಕುರಿತು ವಿಶೇಷ ಪಿಎಂಎಲ್‌ಎ ನ್ಯಾಯಾಲಯವು ಶುಕ್ರವಾರ ಆದೇಶ ಹೊರಡಿಸಿದೆ ಎಂದು ವಕೀಲರು ತಿಳಿಸಿದ್ದಾರೆ. ಗುರುವಾರ ಸೊರೇನ್ ಅವರನ್ನು ಒಂದು ದಿನದ ಮಟ್ಟಿಗೆ ನ್ಯಾಯಾಂಗ ಬಂಧನಕ್ಕೆ ನ್ಯಾಯಾಲಯ ಒಪ್ಪಿಸಿತ್ತು.

ನಟಿ ಪೂನಂ ಪಾಂಡೆ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: ವಿವಾದಗಳ ಮೂಲಕವೇ ಹೆಚ್ಚು ಸುದ್ದಿ ಮಾಡಿದ್ದ ನಟಿ–ರೂಪದರ್ಶಿ ಪೂನಂ ಪಾಂಡೆ ಗರ್ಭಕಂಠದ ಕ್ಯಾನ್ಸರ್‌ನಿಂದಾಗಿ ಶುಕ್ರವಾರ ಮೃತಪಟ್ಟಿದ್ದಾರೆ.



ಪೂನಂ ಪಾಂಡೆ

ಅವರ ಕುಟುಂಬದವರು ಹಾಗೂ ಸ್ನೇಹಿತರು ಪೂನಂ ಅವರದ್ದೇ ಇನ್‌ಸ್ಟಾಗ್ರಾಂನಲ್ಲಿ, 32 ವರ್ಷದ ನಟಿಯ ಸಾವಿನ ಕುರಿತು ಪೋಸ್ಟ್ ಹಾಕಿದ್ದಾರೆ.

ಪೂನಂ ಕಾನ್ಪುರದಲ್ಲಿ ವಾಸವಿದ್ದರು. ಅಂತಿಮ ಸಂಸ್ಕಾರ ಕೂಡ ಅಲ್ಲಿಯೇ ನೆರವೇರಲಿದೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

2011ರಲ್ಲಿ ಹಿಂದಿ 'ಬಿಗ್ ಬಾಸ್' ರಿಯಾಲಿಟಿ ಶೋ ಸ್ಪರ್ಧಿಗಳಲ್ಲಿ ಒಬ್ಬರಾಗಿದ್ದ ಪೂನಂ, 2013ರಲ್ಲಿ 'ನಶಾ' ಹಿಂದಿ ಸಿನಿಮಾ ಮೂಲಕ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು. 'ಜಿಎಸ್‌ಟಿ– ಸಿರ್ಫ್ ತುಮ್ಹಾರಿ' ಎಂಬ ಸಿನಿಮಾದಲ್ಲಿಯೂ ನಟಿಸಿದ್ದರು. ಟಿ.ವಿ. ಧಾರಾವಾಹಿಗಳಲ್ಲಿ ಕೂಡ ನಟಿಸಿದ್ದ ಅವರು, ಸಾಮಾಜಿಕ ಮಾಧ್ಯಮಗಳಲ್ಲಿ 'ಬೋಲ್ಡ್' ಫೋಟೊಗಳನ್ನು ಪೋಸ್ಟ್ ಮಾಡಿ ಜನಪ್ರಿಯರಾಗಿದ್ದರು.

2020ರಲ್ಲಿ ಚಿತ್ರ ತಯಾರಕ ಸ್ಯಾಮ್ ಬಾಂಬೆ ಅವರನ್ನು ವಿವಾಹವಾಗಿದ್ದ ಪೂನಂ, ಕೆಲವೇ ದಿನಗಳ ನಂತರ ಅವರು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಆರೋಪಿಸಿದ್ದರು.

'ತಮಿಳಗ ವೆಟ್ರಿ ಕಳಗಂ' ಹೊಸ ಪಕ್ಷ ಘೋಷಣೆ

ರಾಜಕಾರಣಕ್ಕೆ 'ದಳಪತಿ'

ಚೆನ್ನೈ (ಪಿಟಿಐ): ತಮಿಳಿನ ಹೆಸರಾಂತ ನಟ ದಳಪತಿ ವಿಜಯ್ ಅವರು ಸಕ್ರಿಯ ರಾಜಕಾರಣಕ್ಕೆ ಧುಮುಕಿದ್ದು, 'ತಮಿಳಗ ವೆಟ್ರಿ ಕಳಗಂ' ಹೆಸರಿನ ಹೊಸ ರಾಜಕೀಯ ಪಕ್ಷ ಆರಂಭಿಸಿರುವುದಾಗಿ ಶುಕ್ರವಾರ ಘೋಷಿಸಿದರು. ಈ ಘೋಷಣೆ ಹೊರಬೀಳುತ್ತಿದ್ದಂತೆಯೆ ಅವರ ಅಭಿಮಾನಿಗಳು ಸಂಭ್ರಮಿಸಿದರು.



ದಳಪತಿ ವಿಜಯ್

ಎಂ.ಜಿ. ರಾಮಚಂದ್ರನ್, ಜೆ.ಜಯಲಲಿತಾ ಮತ್ತು ವಿಜಯಕಾಂತ್ ಅವರು ಚಿತ್ರರಂಗದಿಂದ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟ ರೀತಿಯೇ ವಿಜಯ್ ಕೂಡ ರಾಜಕೀಯಕ್ಕೆ ಧುಮುಕುತ್ತಾರೆ ಎಂಬ ಊಹಾಪೋಹಗಳು ಹರಿದಾಡುತ್ತಿದ್ದವು. ಈಗ ಅದು ನಿಜವಾಗಿದೆ. 2026ರಲ್ಲಿನಡೆಯಲಿರುವ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ವಿಜಯ್, ತಮಿಳುನಾಡಿನ ಜನರು ಬದಲಾವಣೆಗಾಗಿ ಹಂಬಲಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಡಿಎಂಕೆ ಸರ್ಕಾರದ ಅವಧಿ 2026ರಲ್ಲಿ ಕೊನೆಗೊಳ್ಳಲಿದೆ.

'ತಮಿಳಗ ವೆಟ್ರಿ ಕಳಗಂ' ಎಂದರೆ 'ತಮಿಳುನಾಡು ವಿಜಯ ಪಕ್ಷ' ಎಂದರ್ಥ. 'ತಂದೆ–ತಾಯಿಯ ನಂತರ, ಹೆಸರು ಮತ್ತು ಕೀರ್ತಿ ತಂದುಕೊಟ್ಟ ರಾಜ್ಯದ ಜನತೆಗೆ ಮನಃಪೂರ್ವಕವಾಗಿ ಸಹಾಯ ಮಾಡಬೇಕೆನ್ನುವುದು ಬಹುದಿನಗಳ ಬಯಕೆಯಾಗಿತ್ತು' ಎಂದು ಹೆಸರಾಂತ ಸಿನಿಮಾ ನಿರ್ದೇಶಕ ಎಸ್.ಎ. ಚಂದ್ರಶೇಖರ್ ಅವರ ಪುತ್ರರೂ ಆದ ವಿಜಯ್, ಪಕ್ಷ ಸ್ಥಾಪನೆಯ ಹಿಂದಿರುವ ಉದ್ದೇಶವನ್ನು ತೆರೆದಿಟ್ಟರು.

ಪಕ್ಷದ ಅಧ್ಯಕ್ಷರಾಗಿ ವಿಜಯ್ ಜವಾಬ್ದಾರಿ ಹೊತ್ತಿದ್ದಾರೆ. 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯಾರನ್ನೂ ಬೆಂಬಲಿಸುವುದಿಲ್ಲ' ಎಂದೂ ವಿಜಯ್ ಹೇಳಿದರು. ಆಡಳಿತ ಕುಸಿತ, ಭ್ರಷ್ಟಾಚಾರ ಮತ್ತು ಏಕತೆಗೆ ಧಕ್ಕೆ ತರುವ ವಿಭಜಕ ರಾಜಕಾರಣದಿಂದ ತುಂಬಿರುವ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಬಗ್ಗೆ 49ರ ಹರೆಯದ ನಟ ವಿಜಯ್ ತೀವ್ರ ಕಳವಳ ವ್ಯಕ್ತಪಡಿಸಿದರು.

ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಕೆ

'ಪಕ್ಷದ ನೋಂದಣಿಗೆ ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿ) ಅರ್ಜಿ ಸಲ್ಲಿಸಲಾಗಿದೆ' ಎಂದು ವಿಜಯ್ ತಿಳಿಸಿದರು.

ಕಳೆದ ಜನವರಿ 25ರಂದು ನಡೆದ ಪಕ್ಷದ ಸಾಮಾನ್ಯ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿಯ ಸಭೆಗಳಲ್ಲಿ ಪಕ್ಷದ ಅಧ್ಯಕ್ಷರು ಮತ್ತು ಹಿರಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪಕ್ಷದ ಸಂವಿಧಾನ ಮತ್ತು ಬೈಲಾಗಳನ್ನು ಸಹ ಅಂಗೀಕರಿಸಲಾಯಿತು ಎಂದು ಅವರು ತಿಳಿಸಿದರು.

ಇಸಿ ಮಾನ್ಯತೆ ಸಿಕ್ಕಿದ ನಂತರ ಪಕ್ಷದ ನೀತಿಗಳು, ಧ್ವಜ, ಚಿಹ್ನೆ ಮತ್ತು ಇತರ ಯೋಜನೆಗಳನ್ನು ನಂತರ ಅಂತಿಮಗೊಳಿಸಲಾಗುವುದು. ಈಗಾಗಲೇ ಒಪ್ಪಿಕೊಂಡಿರುವ ಚಿತ್ರವನ್ನು ಪಕ್ಷದ ಕೆಲಸಗಳಿಗೆ ಧಕ್ಕೆಯಾಗದಂತೆ ಪೂರ್ಣಗೊಳಿಸಲು ಮತ್ತು ಸಾರ್ವಜನಿಕ ಸೇವೆಯ ರಾಜಕೀಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಿರುವುದಾಗಿಯೂ ಹೇಳಿದರು.

> **ಅಭಿಮಾನಿಯಾಗಿ ಅವರ ಸಿನಿಮಾಗಳನ್ನು ನೋಡುವುದನ್ನು ನಾನು ಮಿಸ್ ಮಾಡಿಕೊಳ್ಳುತ್ತೇನೆ. ಆದರೆ, ಅವರಂತಹ ನಾಯಕರು ಬೇಕಾಗಿರುವುದರಿಂದ ರಾಜಕಾರಣ ಪ್ರವೇಶದ ಅವರ ನಿರ್ಧಾರ ಬೆಂಬಲಿಸುತ್ತೇನೆ**
> **ಸಿಬಿ ಸತ್ಯರಾಜ್,** ನಟ

ಭದ್ರತೆ ನಡುವೆ ವಾರಾಣಸಿಯಲ್ಲಿ ಬಂದ್

ಗ್ಯಾನವಾಪಿ ಮಸೀದಿ: ವಾರಾಣಸಿ ಜಿಲ್ಲಾ ನ್ಯಾಯಾಲಯದ ಆದೇಶಕ್ಕೆ ಮುಸ್ಲಿಮರಿಂದ ವಿರೋಧ

ವಾರಾಣಸಿ (ಪಿಟಿಐ): ಗ್ಯಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಪೂಜೆಗೆ ಅವಕಾಶ ನೀಡಿದ ಜಿಲ್ಲಾ ನ್ಯಾಯಾಲಯದ ಆದೇಶ ವಿರೋಧಿಸಿ ವಾರಾಣಸಿಯಲ್ಲಿ ಮುಸ್ಲಿಮರು ಶುಕ್ರವಾರ ಬಂದ್ ಆಚರಿಸಿದರು.

ವಾರಾಣಸಿಯ ಮುಸ್ಲಿಂ ಬಾಹುಳ್ಯ ಪ್ರದೇಶಗಳಾದ ದಾಲ್‌ಮಂಡಿ, ನಯೀ ಸಡಕ್, ನದೇಸರ್ ಹಾಗೂ ಅರ್ದಾಲಿ ಬಜಾರ್‌ನ ಮಾರುಕಟ್ಟೆಗಳು ಸೇರಿದಂತೆ ವಿವಿಧೆಡೆ ಅಂಗಡಿಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಶುಕ್ರವಾರದ ನಮಾಜ್ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.

ಮಸೀದಿಯ ನಿರ್ವಹಣೆ ನೋಡಿಕೊಳ್ಳುತ್ತಿರುವ ಅಂಜುಮಾನ್ ಇಂತೆಜಾಮಿಯಾ ಸಮಿತಿಯು ಈ ಬಂದ್‌ಗೆ ಕರೆ ನೀಡಿತ್ತು. 'ಜಿಲ್ಲೆಯ ಮಾರುಕಟ್ಟೆಗಳನ್ನೆಲ್ಲ ಮುಚ್ಚಿ, ಶಾಂತಿಯುತವಾಗಿ ನಮಾಜ್ ಮಾಡಬೇಕು' ಎಂದು ಸಮಿತಿಯು ಪತ್ರಮುಖೇನ ಮುಸ್ಲಿಮರನ್ನು ಕೇಳಿಕೊಂಡಿತ್ತು. ಅಲ್ಲದೇ, 'ಮುಸ್ಲಿಂ ಮಹಿಳೆಯರು ಮನೆಯಲ್ಲಿಯೇ ಇರಬೇಕು' ಎಂದೂ ಅದು ಸಲಹೆ ನೀಡಿತ್ತು.

ಜಿಲ್ಲೆಯಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ನೆರೆಯ ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಗಿತ್ತು. ಕಾಶಿ ವಿಶ್ವನಾಥ ಮಂದಿರದ ಬಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಪಡೆಯನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಪ್ರದೇಶಗಳಲ್ಲಿ ಕ್ಷಿಪ್ರ ಪೊಲೀಸ್ ಪಡೆಯನ್ನು ನಿಯೋಜನೆಗೊಳಿಸಲಾಗಿತ್ತು.

ಬಂದ್ ನಡುವೆಯೂ ನಮಾಜ್: ಬಂದ್ ನಡುವೆಯೂ ಗ್ಯಾನವಾಪಿ ಮಸೀದಿಯಲ್ಲಿ ಅಪಾರ ಸಂಖ್ಯೆಯ ಮುಸ್ಲಿಮರು ನಮಾಜ್ ಮಾಡಿದರು. ಬಿಗಿ ಭದ್ರತೆಯ ನಡುವೆ ಶುಕ್ರವಾರದ ನಮಾಜ್ ಶಾಂತಿಯುತವಾಗಿ ನಡೆಯಿತು.

'ಪ್ರತಿ ಶುಕ್ರವಾರ ನಮಾಜ್‌ಗೆ ಬರುತ್ತಿದ್ದ ಜನರಿಗಿಂತಲೂ ದುಪ್ಪಟ್ಟು ಮಂದಿ ಈ ಶುಕ್ರವಾರ ಬಂದಿದ್ದರು' ಎಂದು ಕೆಲವು ಕೆಲವು ಪ್ರತ್ಯಕ್ಷದರ್ಶಿಗಳು ಹೇಳಿದರು. 'ವಾರಾಣಸಿಯಾದ್ಯಂತ ನಿಯಮಿತವಾಗಿ ಪರಿಸ್ಥಿತಿಯ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳ ಮೇಲೂ ತೀವ್ರ ನಿಗಾ ಇರಿಸಲಾಗಿದೆ. ಸುತ್ತಮುತ್ತಲಿನ ಪ್ರದೇಶಗಳ ಮೇಲೆ ನಿಗಾ ಇಡಲು ಡ್ರೋನ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ' ಎಂದು ಪೊಲೀಸ್ ಕಮಿಷನರ್ ಮುತಾ ಅಶೋಕ್ ಜೈನ್ ಹೇಳಿದರು.

> **ನ್ಯಾಯಾಲಯದ ಆದೇಶಗಳಿಗೆ ವಿರೋಧ ಇದ್ದೇ ಇರುತ್ತದೆ. ಹಲವಾರು ಸಂದರ್ಭಗಳಲ್ಲಿ ನ್ಯಾಯಾಲಯಗಳು ಸರಿಯಾದ ತೀರ್ಪು ನೀಡಿರುವುದಿಲ್ಲ**
> **ರಾಮ್‌ಗೋಪಾಲ್ ಯಾದವ್,** ಸಮಾಜವಾದಿ ಪಕ್ಷದ ನಾಯಕ

ವಿಚಾರಣೆ ಮುಂದಕ್ಕೆ

ಪ್ರಯಾಗ್‌ರಾಜ್ (ಪಿಟಿಐ): ಗ್ಯಾನವಾಪಿ ಮಸೀದಿಯಲ್ಲಿ ಪೂಜೆಗೆ ಅವಕಾಶ ಕಲ್ಪಿಸಿದ್ದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಫೆಬ್ರುವರಿ 6ಕ್ಕೆ ಮುಂದೂಡಿ ಅಲಹಾಬಾದ್ ಹೈಕೋರ್ಟ್ ಶುಕ್ರವಾರ ಆದೇಶ ಹೊರಡಿಸಿದೆ.



ನಮಾಜ್ ಮಾಡಲು ಅಪಾರ ಸಂಖ್ಯೆಯ ಮುಸ್ಲಿಮರು ಶುಕ್ರವಾರ ಜ್ಞಾನವಾಪಿ ಮಸೀದಿ ಬಳಿ ಸೇರಿದ್ದರು —ಪಿಟಿಐ ಚಿತ್ರ

'ನ್ಯಾಯಾಲಯದ ಆದೇಶ ತರಾತುರಿಯದ್ದು'

ನವದೆಹಲಿ (ಪಿಟಿಐ): 'ವಾರಾಣಸಿ ಜಿಲ್ಲಾ ನ್ಯಾಯಾಲಯ ತರಾತುರಿಯಿಂದ ಗ್ಯಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಹಿಂದೂಗಳಿಗೆ ಪೂಜೆ ಮಾಡುವ ಅವಕಾಶ ನೀಡಿದೆ. ಈ ವಿಷಯದಲ್ಲಿ ನ್ಯಾಯ ಪಡೆಯಲು ನಾವು ಸುಪ್ರೀಂ ಕೋರ್ಟ್‌ವರೆಗೂ ಹೋಗಲು ಸಿದ್ಧ' ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಶುಕ್ರವಾರ ಹೇಳಿದೆ.

ಅಂಜುಮಾನ್ ಇಂತೆಜಾಮಿಯಾ ಸಮಿತಿಯ ಮೇಲ್ಮನವಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಮುಂದೂಡಿದ ಬೆನ್ನಲ್ಲೇ ಎಐಎಂಪಿಎಲ್‌ಬಿ ಈ ಹೇಳಿಕೆ ನೀಡಿದೆ.

ಎಎಪಿ, ಬಿಜೆಪಿ ಪ್ರತಿಭಟನೆ

ನವದೆಹಲಿ (ಪಿಟಿಐ): ಚಂಡೀಗಢ ನಗರ ಪಾಲಿಕೆ ಮೇಯರ್ ವಿಚಾರಕ್ಕೆ ಸಂಬಂಧಿಸಿ ಎಎಪಿ ಕಾರ್ಯಕರ್ತರು ಬಿಜೆಪಿ ವಿರುದ್ಧ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿ ಬಿಜೆಪಿ ಕಾರ್ಯಕರ್ತರು ಎಎಪಿ ಸರ್ಕಾರದ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು.

ಇದರಿಂದಾಗಿ ಕೇಂದ್ರ ದೆಹಲಿಯ ರಸ್ತೆಗಳಲ್ಲಿ ಬ್ಯಾರಿಕೇಡ್ ಮತ್ತು ಪೊಲೀಸ್ ಸರ್ಪಗಾವಲು ಏರ್ಪಡಿಸಲಾಗಿತ್ತು.

ಚಂಡೀಗಢ ನಗರ ಪಾಲಿಕೆ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಮೋಸ ಮಾಡಿದೆ ಎಂದು ಆರೋಪಿಸಿ ಬಿಜೆಪಿ ಕಚೇರಿ ಎದುರು ಎಎಪಿ ಪ್ರತಿಭಟನೆಗೆ ಮುಂದಾದರೆ, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಎಎಪಿ ಕಚೇರಿ ಎದುರು ಬಿಜೆಪಿ ಪ್ರತಿಭಟನೆಗೆ ಮುಂದಾಗಿತ್ತು.

ಪಂಡಿತ್ ದೀನದಯಾಳ್ ಉಪಾಧ್ಯಾಯ (ಡಿಡಿಯು) ರಸ್ತೆಯಲ್ಲಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು. ಇದರಿಂದಾಗಿ ಎರಡೂ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರಿಗೆ 800 ಮೀಟರ್ ದೂರ ಇರುವ ಬಿಜೆಪಿ ಮತ್ತು ಎಎಪಿ ಕಚೇರಿಗಳ ಎದುರಿಗೆ ತೆರಳಲಾಗಲಿಲ್ಲ. ಹೀಗಾಗಿ ಡಿಡಿಯು ರಸ್ತೆಯಲ್ಲೇ ಪ್ರತಿಭಟನೆ ನಡೆಸಿದರು.

ಮೇಯರ್ ಚುನಾವಣೆ- ವಿಚಾರಣೆಗೆ 'ಸುಪ್ರೀಂ' ಸಮ್ಮತಿ: ಚಂಡೀಗಢ ಮೇಯರ್ ಚುನಾವಣೆಯನ್ನು ಮತ್ತೆ ನಡೆಸಬೇಕು ಎಂದು ಆದೇಶಿಸಲು ನಿರಾಕರಿಸಿದ ಪಂಜಾಬ್–ಹರಿಯಾಣ ಹೈಕೋರ್ಟ್ ಆದೇಶ ಪ್ರಶ್ನಿಸಿ ಎಎಪಿಯ ಪಾಲಿಕೆ ಸದಸ್ಯ ಕುಲದೀಪ್ ಕುಮಾರ್ ಸಲ್ಲಿಸಿರುವ ಅರ್ಜಿಯ ತ್ವರಿತ ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಐದನೇ ಬಾರಿಯೂ ಕೇಜ್ರಿವಾಲ್ ಗೈರು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆಗೆ ಐದನೇ ಬಾರಿ ಶುಕ್ರವಾರ ಗೈರುಹಾಜರಾದರು.

ಹಣ ಅಕ್ರಮ ವರ್ಗಾವಣೆ ಪ್ರಕರಣದ ಕುರಿತು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಇ.ಡಿ ಐದನೇ ಬಾರಿಗೆ ನೋಟಿಸ್ ನೀಡಿದೆ. ಆದರೆ, ಈ ಕುರಿತ ವಿಚಾರಣೆಗೆ ಶುಕ್ರವಾರವೂ ಹಾಜರಾಗದ ಕೇಜ್ರಿವಾಲ್, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

'ಬಹುವಿವಾಹ ನಿಷೇಧ ಮಸೂದೆ: ಬಜೆಟ್ ಅಧಿವೇಶನದಲ್ಲಿ ಮಂಡನೆ'

ಗುವಾಹಟಿ(ಪಿಟಿಐ): ಬಹುವಿವಾಹ ಪದ್ಧತಿಯನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದ ಮಸೂದೆಯನ್ನು ಮುಂಬರುವ ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಶುಕ್ರವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ವಿಭಾಗವು ಕರಡು ಮಸೂದೆಯ ಪರಿಶೀಲನೆ ನಡೆಸುತ್ತಿದೆ ಎಂದು ಹೇಳಿದರು.

'ಉತ್ತರಾಖಂಡ ಸರ್ಕಾರವು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸಲು ಮುಂದಾಗಿದೆ. ಈ ಕುರಿತು ಚರ್ಚಿಸಲು ಅಲ್ಲಿನ ಸರ್ಕಾರ ಫೆ.5ರಿಂದ ನಾಲ್ಕು ದಿನಗಳ ವಿಶೇಷ ಅಧಿವೇಶನ ಕರೆದಿದೆ. ಅಸ್ಸಾಂನಲ್ಲಿಯೂ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಚಿಂತನೆ ಇದೆ. ಈ ಸಂಬಂಧ, ಉತ್ತರಾಖಂಡ ಸರ್ಕಾರ ಕೈಗೊಳ್ಳುವ ಕ್ರಮವನ್ನು ಎದುರು ನೋಡುತ್ತಿದ್ದೇವೆ' ಎಂದು ಶರ್ಮ ಹೇಳಿದರು.

ಅಸ್ಸಾಂ ವಿಧಾನಸಭೆಯ ಬಜೆಟ್ ಅಧಿವೇಶನವು ಫೆ.5ರಿಂದ 28ರ ವರೆಗೆ ನಡೆಯಲಿದ್ದು, ಫೆ. 12ರಂದು ಬಜೆಟ್ ಮಂಡನೆ ಮಾಡಲಾಗುತ್ತಿದೆ.

ವಿಪಕ್ಷಗಳ ವಿರೋಧ: ಈ ಹಿಂದೆ, ಬಹುವಿವಾಹ ಪದ್ಧತಿ ನಿಷೇಧ ಕಾಯ್ದೆ ಜಾರಿಗೊಳಿಸುವುದಾಗಿ ಅಸ್ಸಾಂ ಸರ್ಕಾರ ಘೋಷಿಸಿದಾಗ, ವಿರೋಧ ಪಕ್ಷಗಳಿಂದ ಟೀಕೆ ವ್ಯಕ್ತವಾಗಿತ್ತು.

ಯುಸಿಸಿ: ಕರಡು ಪ್ರತಿ ಸಲ್ಲಿಕೆ

ಡೆಹ್ರಾಡೂನ್ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಕರಡು ಸಿದ್ಧಪಡಿಸಲಿಕ್ಕಾಗಿ ರಾಜ್ಯ ಸರ್ಕಾರ ನೇಮಿಸಿದ್ದ ಸಮಿತಿಯು, ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ಶುಕ್ರವಾರ ಕರಡು ಪ್ರತಿಯನ್ನು ಸಲ್ಲಿಸಿತು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದ ಐವರು ಸದಸ್ಯರ ಸಮಿತಿಯು ಈ ಕರಡನ್ನು ಮುಖ್ಯಮಂತ್ರಿಗೆ ಹಸ್ತಾಂತರಿಸಿತು.

'2022ರ ವಿಧಾನಸಭೆ ಚುನಾವಣೆ ಸಂದರ್ಭ ರಾಜ್ಯದ ಜನರಿಗೆ ನೀಡಿದ್ದ ಭರವಸೆಯನ್ನು ಈಡೇರಿಸುವ ಕಡೆಗೆ ಮತ್ತೊಂದು ಹೆಜ್ಜೆಯಿಟ್ಟಂತಾಗಿದೆ. ಬಹು ಕಾಲದಿಂದಲೂ ಕಾದಿದ್ದ ಸಮಯ ಇದೀಗ ಬಂದಿದೆ. ವಿಧಾನಸಭೆಯಲ್ಲಿ ಮಂಡಿಸುವ ಮೊದಲು ಪರಿಶೀಲಿಸುತ್ತೇವೆ. ಅಧ್ಯಯನ ಮಾಡುತ್ತೇವೆ ಮತ್ತು ಚರ್ಚಿಸುತ್ತೇವೆ' ಎಂದು ಕರಡು ಪ್ರತಿ ಸ್ವೀಕರಿಸಿದ ಕೆಲ ಹೊತ್ತಿನಲ್ಲೇ ಧಾಮಿ ಹೇಳಿದರು.

ಕರಡು ಕುರಿತಂತೆ ಚರ್ಚಿಸಲು ಶನಿವಾರ ರಾಜ್ಯ ಸಚಿವ ಸಂಪುಟ ಸಭೆ ಕರೆಯಲಾಗಿದೆ.

ವಿಶೇಷ ಅಧಿವೇಶನ: ಯುಸಿಸಿಯ ಕರಡು ಕುರಿತು ಚರ್ಚಿಸಲು ವಿಧಾನ ಸಭೆಯ ವಿಶೇಷ ಅಧಿವೇಶನವನ್ನು ಸೋಮವಾರದಿಂದ ನಡೆಸಲಾಗುವುದು ಎಂದು ಧಾಮಿ ತಿಳಿಸಿದರು.

'ಸಮಿತಿಯು ನಾಲ್ಕು ಸಂಪುಟಗಳಲ್ಲಿ ಯುಸಿಸಿಯ ಕರಡು ಜೊತೆಗೆ ಸುಮಾರು 749 ಪುಟಗಳ ವರದಿಯನ್ನು ಸಲ್ಲಿಸಿದೆ. ಇದನ್ನು ಫೆ. 6ರಂದು ವಿಧಾನಸಭೆಯಲ್ಲಿ ಚರ್ಚೆಗೆ ಮಂಡಿಸಲಾಗುವುದು' ಎಂದು ಹೇಳಿದರು.

ಗಮನ ಬೇರೆಡೆ ಸೆಳೆಯಲು ಯುಸಿಸಿ: ರಾವತ್

ಡೆಹ್ರಾಡೂನ್: 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲಿಕ್ಕಾಗಿಯೇ ಬಿಜೆಪಿಯು ಪದೇ ಪದೇ ಯುಸಿಸಿ ಬಗ್ಗೆ ಮಾತನಾಡುತ್ತಿದೆ' ಎಂದು ಉತ್ತರಾಖಂಡದ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಟೀಕಿಸಿದ್ದಾರೆ.


ಗುರುಚರಣ್ ದಾಸ್ ಅನಿಸಿಕೆ ಖಂಡಿಸಿದ ಮಣಿಶಂಕರ್ ಅಯ್ಯರ್

ಆತ್ಮಕಥೆ ಬರೆದವರಿಬ್ಬರ ಶೀತಲ ಸಮರ

● ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ: ಇಬ್ಬರೂ ಹಿರಿಯ ವ್ಯಕ್ತಿಗಳು ಸಮಕಾಲೀನರು. ಒಬ್ಬರು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡು ಸದ್ದು ಮಾಡಿದ ಬರಹಗಾರರಾದರೆ, ಮತ್ತೊಬ್ಬರು ಉದ್ಯಮ ಕ್ಷೇತ್ರದಲ್ಲಿ ಗುರುತಿಸಿಕೊಂಡು ಬಳಿಕ ಬರವಣಿಗೆಯನ್ನು ಅಪ್ಪಿಕೊಂಡವರು. ಇಬ್ಬರೂ ಪಾಕಿಸ್ತಾನದಲ್ಲಿ ಹುಟ್ಟಿ ಭಾರತದಲ್ಲಿ ಬದುಕು ಸಾಗಿಸುತ್ತಿರುವುದರಿಂದ ಇವರಿಬ್ಬರ ಆತ್ಮಕಥೆಗಳ ಕುರಿತ ಗೋಷ್ಠಿಯೊಂದು 'ಜೈಪುರ್ ಲಿಟರೇಚರ್ ಫೆಸ್ಟಿವಲ್'ನಲ್ಲಿ ಶುಕ್ರವಾರ ಆಸಕ್ತಿದಾಯಕವಾಗಿತ್ತು. ರಾಜಕೀಯ ಮುತ್ಸದ್ದಿ ಮಣಿಶಂಕರ್ ಅಯ್ಯರ್ ಮತ್ತು ಲೇಖಕ ಗುರುಚರಣ್ ದಾಸ್ ಅವರು ಪಾಕಿಸ್ತಾನದಲ್ಲಿ ತಾವು ಕಳೆದ ಬಾಲ್ಯದ ದಿನಗಳನ್ನು ಹಾರ್ದಿಕವಾಗಿ ಹಂಚಿಕೊಳ್ಳುತ್ತ ಮಾತು ಶುರುಮಾಡಿದರು.

'ಬಾಲ್ಯದಲ್ಲಿ ನನಗೊಂದು ಹೆಸರು ನಿಶ್ಚಿತವಾಗಿರಲಿಲ್ಲ. ಬೋರ್ಡಿಂಗ್ ಸ್ಕೂಲ್‌ಗೆ ಹೋದಾಗ ನನಗೆ ನಾನೇ ಮಣಿಶಂಕರ್ ಎಂದು ಹೆಸರಿಸಿಕೊಂಡಿದ್ದು ನೆನಪಿದೆ. ದೇಶ ವಿಭಜನೆಯಾದಾಗ ಭಾರತಕ್ಕೆ ಬಂದರೂ, ನಂತರ ಪಾಕಿಸ್ತಾನ ಸರ್ಕಾರದ ಜೊತೆಗೆ ಕೆಲಸ ಮಾಡುವ ಅವಕಾಶಗಳು ಸಾಕಷ್ಟು ಬಾರಿ ಎದುರಾಗಿವೆ. ಅಲ್ಲಿನವರು ನನ್ನನ್ನು ಬಹಳ ಮೆಚ್ಚುಗೆ, ಪ್ರೀತಿಯಿಂದ ಬರಮಾಡಿಕೊಂಡಿದ್ದು ವಿಶೇಷ. ಈಗಲೂ ಅಷ್ಟೇ, ಭಾರತವು ಪಾಕಿಸ್ತಾನದ ಜೊತೆಗೆ ನಿರಂತರವಾಗಿ ಮಾತುಕತೆ ನಡೆಸುತ್ತಾ ಬಂದಲ್ಲಿ ಎಷ್ಟೋ ಸಮಸ್ಯೆಗಳಿಗೆ ಉತ್ತರ ಸಿಗಬಹುದು. ಸರ್ಜಿಕಲ್ ದಾಳಿ ಮಾಡಲು ಧೈರ್ಯವಿರುವ ಸರ್ಕಾರಕ್ಕೆ, ಸೌಹಾರ್ದವಾಗಿ ಕುಳಿತು ಮಾತನಾಡುವುದಕ್ಕೆ ಏತಕ್ಕೆ ಧೈರ್ಯ ಇಲ್ಲವೊ ಗೊತ್ತಾಗುವುದಿಲ್ಲ' ಎಂದು ಹೇಳಿದರು.



'ಜೈಪುರ ಲಿಟರೇಚರ್ ಫೆಸ್ಟಿವೆಲ್'ನಲ್ಲಿ ಶುಕ್ರವಾರ ಮಣಿಶಂಕರ್ ಅಯ್ಯರ್ ಮತ್ತು ಗುರುಚರಣ್ ದಾಸ್ ಅವರು ತಮ್ಮ ಆತ್ಮಕಥೆಗಳ ಕುರಿತು ಮಾತನಾಡಿದರು. ಮಂದಿರಾ ನಾಯರ್ ಸಂವಾದ ನಡೆಸಿಕೊಟ್ಟರು.

ವಿದೇಶದಲ್ಲಿ ತತ್ವಶಾಸ್ತ್ರ ಓದಿ, ನಂತರ ಉದ್ಯಮವನ್ನು ನಿರ್ವಹಿಸಿ, ಆ ಬಳಿಕ ಬರಹಗಾರರಾಗಿ ಹೊರಹೊಮ್ಮಿದವರು ಗುರುಚರಣ್ ದಾಸ್. ವಿಭಜನೆಯ ನಂತರ ಲಾಹೋರ್‌ನಿಂದ ಭಾರತಕ್ಕೆ ಹೊರಟ ಆ ದಿನವಿನ್ನೂ ತಮ್ಮ ಕಣ್ಣಮುಂದಿದೆ ಎಂದು ಅವರು ಮಾತಿಗೆ ಶುರುವಿಟ್ಟರು. 'ಜಲಂಧರ್‌ನಿಂದ ಭಾರತದತ್ತ ಹೊರಟ ರೈಲಿನಲ್ಲಿ ಕುಳಿತು ಕಿಟಕಿಯಲ್ಲಿ ನೋಡ ನೋಡುತ್ತಿದ್ದಂತೆಯೇ ಫ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದ ಒಬ್ಬ ಪೊಲೀಸ್‌ಗೆ ಇಬ್ಬರು ವ್ಯಕ್ತಿಗಳು ಹಿಂಬದಿಯಿಂದ ಬಂದು ಇರಿದು ಓಡಿಹೋದರು.

ರಕ್ತಮಯವಾದ ಆ ಕ್ಷಣವನ್ನು ನೋಡುತ್ತಿದ್ದಾಗ ಅಮ್ಮ ಕಿಟಕಿಯನ್ನು ಮುಚ್ಚಿಬಿಟ್ಟಳು. ಈ ಕ್ಷಣಗಳು ನನ್ನನ್ನು ಸದಾ ಕಾಡುತ್ತವೆ' ಎನ್ನುತ್ತ, ತಮ್ಮ ಆತ್ಮಚರಿತ್ರೆಯನ್ನು ಬರೆಯುವಾಗ ಎದುರಾದ ಸಂದಿಗ್ಧತೆಗಳನ್ನು ವಿವರಿಸಿದರು. ಉದ್ಯಮಿಯಾಗಿ ತಾವು ಭಾರತದಲ್ಲಿ ಕಾರ್ಯನಿರ್ವಹಿಸುವಾಗ ಇಲ್ಲಿದ್ದ 'ಲೈಸನ್ಸ್‌ರಾಜ್ ಕಾಲ'ವು ಎಷ್ಟು ಕಠಿಣವಾಗಿತ್ತು ಎಂಬುದು ಇಂದಿನ ಯುವಜನತೆಗೆ ತಿಳಿದಿಲ್ಲ. ವಿನಾ ಕಾರಣ ತಮಗೆ ಬಂಧನದ ನೋಟಿಸ್ ಬಂದ ಘಟನೆಯೊಂದನ್ನು ನಿಭಾಯಿಸಲು ತಾವು ಹೇಗೆ ಹರಸಾಹಸ ಪಡಬೇಕಾಯಿತು ಎನ್ನುವುದನ್ನೂ ಹೇಳಿಕೊಂಡರು. ಆದ್ದರಿಂದ ದೇಶಕ್ಕೆ ನಿಜವಾದ ಸ್ವಾತಂತ್ರ್ಯವು 1991ರಲ್ಲಿ ದೊರೆಯಿತು ಅನಿಸುತ್ತಿದೆ ಎಂದರು.

ಅವರ ಅನಿಸಿಕೆಯೊಂದಿಗೆ ಗೋಷ್ಠಿಯು ಮುಕ್ತಾಯವಾಗಬೇಕೆನ್ನು ವಷ್ಟರಲ್ಲಿ, ಮಣಿಶಂಕರ್ ಅಯ್ಯರ್ ಮೈಕ್ ಪಡೆದು, 'ಗುರುಚರಣ್ ದಾಸ್ ಹೇಳಿಕೆಯನ್ನು ನಾನು ವಿರೋಧಿಸುತ್ತೇನೆ. ಇಡೀ ಘಟನೆಯನ್ನೇ ಅವರು ತಿರುಚಿ ಹೇಳಿದ್ದಾರೆ. ಇಂತಹ ತಿರುಚುವಿಕೆಯ ಪರಿಣಾಮವಾಗಿಯೇ ಭಾರತವು ಇಂದಿನ ಸ್ಥಿತಿಗೆ ಬಂದು ನಿಂತಿದೆ' ಎನ್ನುತ್ತಾ ಗೋಷ್ಠಿಗೆ ಮಂಗಳ ಹಾಡಿದರು. ಇದ್ದಕ್ಕಿದ್ದಂತೆಯೇ ಅವರು ಖಂಡತುಂಡವಾಗಿ ನೀಡಿದ ಹೇಳಿಕೆಯಿಂದ ವಿಚಲಿತರಾದ ಪ್ರೇಕ್ಷಕರು, ಲೇಖಕರಿಬ್ಬರ ಆತ್ಮಕಥೆಗಳನ್ನು ಖರೀದಿಸಿ ಅವರ ಸಹಿ ಪಡೆಯಲು ಸರತಿಯಲ್ಲಿ ನಿಂತರು.

ಸಂಕ್ಷಿಪ್ತ ಸುದ್ದಿ

ಹರ್ಷ ಮಂದರ್ ಮನೆ, ಕಚೇರಿ ಮೇಲೆ ಸಿಬಿಐ ದಾಳಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಟೀಕಾಕಾರ, ಲೇಖಕ ಹರ್ಷ ಮಂದರ್ ಅವರ ಮನೆ ಮತ್ತು ಅವರ ಎನ್‌ಜಿಒ 'ಸೆಂಟರ್ ಫಾರ್ ಇಕ್ವಿಟಿ ಸ್ಟಡೀಸ್' (ಸಿಇಎಸ್) ಆವರಣದಲ್ಲಿ ಸಿಬಿಐ ಶುಕ್ರವಾರ ಶೋಧ ನಡೆಸಿದೆ.

ವಿದೇಶಿ ದೇಣಿಗೆಗೆ ಸಂಬಂಧಿಸಿದ ಕಾನೂನು ಉಲ್ಲಂಘಿಸಿ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ₹ 32.71 ಲಕ್ಷ ವರ್ಗಾಯಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ ಎಂದು ಸಿಬಿಐ ಹೇಳಿದೆ.

'2020–21ರಲ್ಲಿ ಎನ್‌ಜಿಒ ತನ್ನ ಎಫ್‌ಸಿಆರ್‌ಎ ಖಾತೆಯಿಂದ ವೇತನ/ಸಂಭಾವನೆ ಹೊರತುಪಡಿಸಿ ₹32,71,915 ಅನ್ನು ವ್ಯಕ್ತಿಗಳ ಖಾತೆಗೆ ವರ್ಗಾಯಿಸಿದೆ ಎಂಬ ಆರೋಪ ಇದೆ. ಈ ಮೂಲಕ ಎನ್‌ಜಿಒ 2010ರ ಎಫ್‌ಸಿಆರ್‌ಎ ನಿಬಂಧನೆಗಳನ್ನು ಉಲ್ಲಂಘಿಸಿದೆ' ಎಂದು ಸಿಬಿಐ ಹೇಳಿಕೆಯಲ್ಲಿ ತಿಳಿಸಿದೆ.

'ನನ್ನ ಜೀವನ, ನನ್ನ ಬರಹ ಮತ್ತು ನನ್ನ ಕೆಲಸವೇ ನನ್ನ ಪ್ರತಿಕ್ರಿಯೆ' ಎಂದು ಹರ್ಷ ಮಂದರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹರ್ಷ ಮಂದರ್ ಅವರನ್ನು ಬೆಂಬಲಿಸಿ ಸುಮಾರು 250 ಜನರು ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಹಿಮಂತ್, ಮಿಲಿಂದ್ ರೀತಿಯ ನಾಯಕರು 'ಕೈ' ತೊರೆಯಲಿ'

ಬಹರಂಪುರ (ಪಶ್ಚಿಮ ಬಂಗಾಳ) (ಪಿಟಿಐ): 'ಕಾಂಗ್ರೆಸ್‌ನಿಂದ ನಾಯಕರು ನಿರ್ಗಮಿಸುತ್ತಿರುವ ಸರಣಿಯ ನಡುವೆ, ಹಿಮಂತ್ ಬಿಸ್ವ ಶರ್ಮ ಮತ್ತು ಮಿಲಿಂದ್ ದೇವರ ಅವರಂಥವರು ಪಕ್ಷದ ಸಿದ್ಧಾಂತಕ್ಕೆ ಹೊಂದಿಕೆಯಾಗದ ಕಾರಣ ನಮಗೆ ಬೇಕಾಗಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಗುರುವಾರ ರಾತ್ರಿ ಪಕ್ಷದ 'ಡಿಜಿಟಲ್ ಮಾಧ್ಯಮ ಸೇನಾನಿ'ಗಳನ್ನು ಉದ್ದೇಶಿಸಿ ಮಾತನಾಡಿದ ರಾಹುಲ್, ಕಾಂಗ್ರೆಸ್ ಎತ್ತಿಹಿಡಿದ ತತ್ವಸಿದ್ಧಾಂತಗಳನ್ನು ರಕ್ಷಿಸುವ ಬದ್ಧತೆಯನ್ನು ಒತ್ತಿಹೇಳಿದರು.

ಸೀಟು ಹಂಚಿಕೆ ಸಭೆಯಲ್ಲಿ ಪ್ರಕಾಶ್ ಅಂಬೇಡ್ಕರ್ ಭಾಗಿ

ಮುಂಬೈ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯ ಸೀಟು ಹಂಚಿಕೆಗಾಗಿ ಮಹಾರಾಷ್ಟ್ರದ ವಿರೋಧ ಪಕ್ಷಗಳ ಮೈತ್ರಿಕೂಟ 'ಮಹಾ ವಿಕಾಸ ಅಘಾಡಿ' ಶುಕ್ರವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಮೊಮ್ಮಗ ಮತ್ತು ವಂಚಿತ್ ಬಹುಜನ ಅಘಾಡಿ (ವಿಬಿಎ) ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಪಾಲ್ಗೊಂಡಿದ್ದಾರೆ.

ಪ್ರಕಾಶ್ ಅವರನ್ನು ಸಭೆಗೆ ಸ್ವಾಗತಿಸುತ್ತಿರುವ ಫೋಟೊವನ್ನು ಶಿವಸೇನಾ ಉದ್ಧವ್ ಠಾಕ್ರೆ ಬಣದ(ಯುಬಿಟಿ) ಮುಖಂಡ ಸಂಜಯ್ ರಾವುತ್ ಅವರು ಹಂಚಿಕೊಂಡಿದ್ದಾರೆ.

'ಮಹಾ ವಿಕಾಸ ಅಘಾಡಿ ಜೊತೆ ವಿಬಿಎ ಕೈಜೋಡಿಸಿದೆ. ಇದರಿಂದ ದೇಶದ ಸಂವಿಧಾನ ರಕ್ಷಣೆಗಾಗಿ ನಡೆಸುವ ಹೋರಾಟಕ್ಕೆ ಹೆಚ್ಚಿನ ಬಲ ಬಂದಿದೆ' ಎಂದು ರಾವುತ್ ಅವರು ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.



ಎಎಫ್‌ಪಿ ಚಿತ್ರ

ಇಂಗ್ಲೆಂಡ್ ವಿರುದ್ಧ ಎರಡನೇ ಟೆಸ್ಟ್ ಕ್ರಿಕೆಟ್ • ಬೃಹತ್ ಮೊತ್ತದತ್ತ ಭಾರತ

ಜೈಸ್ವಾಲ್ ಶತಕದ ಕಮಾಲ್

ಮುಖ್ಯಾಂಶಗಳು

- ಟೆಸ್ಟ್ ಕ್ರಿಕೆಟ್‌ಗೆ ರಜತ್ ಪಾಟೀದಾರ್ ಪದಾರ್ಪಣೆ
- ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸಿದ ಇಂಗ್ಲೆಂಡ್
- ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡನೇ ಶತಕ ದಾಖಲಿಸಿದ ಯಶಸ್ವಿ ಜೈಸ್ವಾಲ್

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ: 'ಮುಂಬೈ ಹುಡುಗ' ಯಶಸ್ವಿ ಜೈಸ್ವಾಲ್ ಶುಕ್ರವಾರ ಇಂಗ್ಲೆಂಡ್ ತಂಡದ ಬೌಲರ್‌ಗಳ ಬೆವರಿಳಿಸಿದರು.

22 ವರ್ಷದ ಯಶಸ್ವಿ (ಔಟಾಗದೆ 179; 257ಎ, 4X17, 6X5) ಚೆಂದದ ಬ್ಯಾಟಿಂಗ್ ಬಲದಿಂದ ಭಾರತ ತಂಡ ಇಲ್ಲಿ ಆರಂಭವಾದ ಎರಡನೇ ಟೆಸ್ಟ್‌ನಲ್ಲಿ ದಿನದಾಟ ಮುಗಿದಾಗ 93 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 336 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಆರನೇ ಟೆಸ್ಟ್ ಆಡುತ್ತಿರುವ ಯಶಸ್ವಿಗೆ ಇದು 2ನೇ ಶತಕ. ಹೋದ ವರ್ಷ ವೆಸ್ಟ್ ಇಂಡೀಸ್ ಎದುರು (171 ರನ್) ಚೊಚ್ಚಲ ಶತಕ ಹೊಡೆದಿದ್ದರು. ಇದೀಗ ಇಂಗ್ಲೆಂಡ್ ಎದುರು ವೈಯಕ್ತಿಕ ಶ್ರೇಷ್ಠ ಸ್ಕೋರ್ ದಾಖಲಿಸಿದರು. ಕ್ರೀಸ್‌ನಲ್ಲಿ ಉಳಿದಿರುವ ಅವರಿಗೆ ಶನಿವಾರದ ಆಟದಲ್ಲಿ ದ್ವಿಶತಕದ ಗಡಿ ದಾಟುವ ಅವಕಾಶವೂ ಇದೆ.

'ಒಂದೊಂದೇ ಸೆಷನ್ (ಅವಧಿ)ಗಳಲ್ಲಿ ಆಡುವ ಯೋಜನೆಯೊಂದಿಗೆ ಕಣಕ್ಕಿಳಿದಿದ್ದೆ. ಅವರು (ಇಂಗ್ಲೆಂಡ್) ಉತ್ತಮವಾಗಿ ಬೌಲಿಂಗ್ ಮಾಡಿದರು. ಆರಂಭದ ಅವಧಿಯಲ್ಲಿ ಪರಿಣಾಮಕಾರಿ ಬೌಲಿಂಗ್ ಇತ್ತು. ಆ ಸಮಯ ಸರಿಯುವವರೆಗೆ ತಾಳ್ಮೆಯಿಂದ ಆಡಿದೆ. ನಂತರ ಲಭಿಸಿದ ಸಡಿಲ ಎಸೆತಗಳನ್ನು ಬೌಂಡರಿಗೆರೆ ದಾಟಿಸಿದೆ. ಆತ್ಮವಿಶ್ವಾಸ ಬೆಳೆದಂತೆ ಇನಿಂಗ್ಸ್ ಕೂಡ ಬೆಳೆಯಿತು' ಎಂದು ದಿನದಾಟದ ನಂತರ ಸುದ್ದಿಗಾರರಿಗೆ ಜೈಸ್ವಾಲ್ ಹೇಳಿದರು.


ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ತಂಡವು 49 ರನ್‌ಗಳಾದಾಗಲೇ ಎರಡು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಯಶಸ್ವಿ ಗಟ್ಟಿಯಾಗಿ ನಿಂತರು. ಅವರು ಶ್ರೇಯಸ್ ಅಯ್ಯರ್ ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು.

ಊಟದ ವಿರಾಮದ ನಂತರದ ಅವಧಿಯಲ್ಲಿ ಟಾಮ್ ಹಾರ್ಟ್ಲಿ ಬೌಲಿಂಗ್‌ನಲ್ಲಿ ಶ್ರೇಯಸ್ ಔಟಾದರು. ಇದರೊಂದಿಗೆ ಜೊತೆಯಾಟ ಮುರಿದುಬಿತ್ತು. ಯಶಸ್ವಿ ಮಾತ್ರ ತಮ್ಮ ಏಕಾಗ್ರತೆಯನ್ನು ಕಳೆದುಕೊಳ್ಳಲಿಲ್ಲ. ಚೆಂದದ ಡ್ರೈವ್, ಲಾಫ್ಟ್‌ಗಳನ್ನು ಆಡಿದರು. ಸ್ಪಿನ್ನರ್‌ಗಳಿಗೆ ಸ್ವೀಪ್‌ಗಳ ಪ್ರತ್ಯುತ್ತರ ಕೊಟ್ಟ ಎಡಗೈ ಬ್ಯಾಟರ್ ಸ್ಕೋರ್ ಬೋರ್ಡ್‌ನಲ್ಲಿ ರನ್‌ಗಳನ್ನು ನಿರಂತರವಾಗಿ ಜೋಡಿಸಿದರು.

ಪದಾರ್ಪಣೆ ಪಂದ್ಯವಾಡಿದ ರಜತ್ ಅವರೊಂದಿಗಿನ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ರಜತ್ 72 ಎಸೆತಗಳಲ್ಲಿ 32 ರನ್ ಗಳಿಸಿದರು. ಚಹಾ ವಿರಾಮದ ನಂತರದ ಅವಧಿಯಲ್ಲಿ ಭಾರತ ತಂಡವು 111 ರನ್‌ಗಳನ್ನು ಗಳಿಸಿತು. ಇದೇ ಅವಧಿಯಲ್ಲಿ ಮೂರು ವಿಕೆಟ್‌ಗಳೂ (ರಜತ್ ಪಾಟೀದಾರ್, ಅಕ್ಷರ್ ಪಟೇಲ್ ಮತ್ತು ಕೆ.ಎಸ್. ಭರತ್) ಪತನವಾದವು. ಆರ್. ಅಶ್ವಿನ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

ಇಂಗ್ಲೆಂಡ್ ತಂಡವು ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸಿತು. ಅದರಲ್ಲಿ ಶೋಯಬ್ ಬಷೀರ್ ಮತ್ತು ರೆಹಾನ್ ಅಹಮದ್ ತಲಾ ಎರಡು ವಿಕೆಟ್ ಗಳಿಸಿದರು.

'ರೋಹಿತ್ ವಿಕೆಟ್ ಅವಿಸ್ಮರಣೀಯ'



'ರೋಹಿತ್ ಶರ್ಮಾ ಅವರ ವಿಕೆಟ್ ಗಳಿಸಿದ್ದು ನನ್ನ ಜೀವನದ ಅವಿಸ್ಮರಣೀಯ ಕ್ಷಣ' ಎಂದು ಇಂಗ್ಲೆಂಡ್ ತಂಡದ ಬೌಲರ್ ಶೋಯಬ್ ಬಷೀರ್ ಸಂತಸ ವ್ಯಕ್ತಪಡಿಸಿದರು.

ಜ್ಯಾಕ್ ಲೀಚ್ ಅವರು ಗಾಯಗೊಂಡ ಕಾರಣ ಬಷೀರ್ ಅವರಿಗೆ ಟೆಸ್ಟ್ ಪದಾರ್ಪಣೆ ಮಾಡುವ ಅವಕಾಶ ಲಭಿಸಿತು. ರೋಹಿತ್ ಶರ್ಮಾ ಅವರನ್ನು ಔಟ್ ಮಾಡಿದ ಅವರು ತಮ್ಮ ವೃತ್ತಿಜೀವನದ ಚೊಚ್ಚಲ ವಿಕೆಟ್ ಗಳಿಸಿದರು.

ಅವರು ಭಾರತ ಪ್ರವಾಸಕ್ಕೆ ಹೊರಡುವ ಮುನ್ನ ವೀಸಾ ಪಡೆಯಲು ಕೆಲವು ತಾಂತ್ರಿಕ ಅಡಚಣೆಗಳನ್ನು ಎದುರಿಸಿದ್ದರು. ಹೋದವಾರ ಹೈದರಾಬಾದ್ ನಲ್ಲಿ ನಡೆದಿದ್ದ ಪಂದ್ಯದ ಎರಡು ದಿನಗಳು ಮುಗಿದ ಮೇಲೆ ಅವರು ಭಾರತಕ್ಕೆ ಬಂದಿಳಿದಿದರು.

6.4 ಅಡಿ ಎತ್ತರದ ಆಫ್‌ಸ್ಪಿನ್ನರ್ ಶೋಯಬ್ ಅವರು ಪಾಕಿಸ್ತಾನ ಮೂಲದವರು.

'ಇವತ್ತು ನನಗೆ ವಿಶೇಷವಾದ ದಿನ. ಕಳೆದ ಎರಡು, ಮೂರು ವರ್ಷಗಳಲ್ಲಿ ನಾನು ಪಟ್ಟ ಪರಿಶ್ರಮಕ್ಕೆ ಈಗ ಫಲ ಸಿಗುತ್ತಿದೆ. ರೋಹಿತ್ ಶ್ರೇಷ್ಠ ಬ್ಯಾಟರ್. ಅವರ ವಿಕೆಟ್ ಪಡೆಯುವುದೆಂದರೆ ಅದೊಂದು ಸಾಧನೆ' ಎಂದು ಬಣ್ಣಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 6ಕ್ಕೆ336 (93 ಓವರ್‌ಗಳಲ್ಲಿ)

ಯಶಸ್ವಿ ಬ್ಯಾಟಿಂಗ್ 179 (257ಎ, 4X17, 6X5)
ರೋಹಿತ್ ಸಿ ಪೋಪ್ ಬಿ ಬಷೀರ್ 14 (41ಎ)
ಶುಭಮನ್ ಸಿ ಫೋಕ್ಸ್ ಬಿ ಆ್ಯಂಡರ್ಸನ್ 34 (46ಎ, 4X5)
ಶ್ರೇಯಸ್ ಸಿ ಫೋಕ್ಸ್ ಬಿ ಹಾರ್ಟ್ಲಿ 27 (59ಎ, 4X3)
ರಜತ್ ಬಿ ರೆಹಾನ್ 32 (72ಎ, 4X3)
ಅಕ್ಷರ್ ಸಿ ರೆಹಾನ್ ಬಿ ಬಷೀರ್ 27 (51ಎ, 4X4)
ಭರತ್ ಸಿ ಬಷೀರ್ ಬಿ ರೆಹಾನ್ 17 (23ಎ, 4X2, 6X1)
ಅಶ್ವಿನ್ ಬ್ಯಾಟಿಂಗ್ 5 (10ಎ, 4X1)
ಇತರೆ: 1 (ನೋಬಾಲ್ 1)
ವಿಕೆಟ್ ಪತನ: 1–40 (ರೋಹಿತ್ ಶರ್ಮಾ; 17.3), 2–89 (ಶುಭಮನ್ ಗಿಲ್; 28.5), 3–179 (ಶ್ರೇಯಸ್ ಅಯ್ಯರ್; 50.4), 4–249 (ರಜತ್ ಪಾಟೀದಾರ್; 71.1), 5–301 (ಅಕ್ಷರ್ ಪಟೇಲ್; 85.3), 6–330 (ಶ್ರೀಕರ್ ಭರತ್; 90.6)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 17–3–30–1, ಜೋ ರೂಟ್ 14–0–71–0, ಟಾಮ್ ಹಾರ್ಟ್ಲಿ 18–2–74–1, ಶೋಯಬ್ ಬಷೀರ್ 28–0–100–2, ರೆಹಾನ್ ಅಹಮದ್ 16–2–61–2

ಯುವ ವಿಶ್ವಕಪ್ ಕ್ರಿಕೆಟ್ ಭಾರತ ಸೆಮಿಫೈನಲ್‌ಗೆ



ಸಚಿನ್ ದಾಸ್

ಬ್ಲೊಮ್‌ಫೊಂಟೀನ್ (ದಕ್ಷಿಣ ಆಫ್ರಿಕಾ): ನಾಯಕ ಉದಯ್ ಸಹಾರನ್ ಮತ್ತು ಸಚಿನ್ ದಾಸ್ ಅವರ ಅಮೋಘ ಶತಕಗಳ ನೆರವಿನಿಂದ ಭಾರತ ತಂಡ, 19 ವರ್ಷದೊಳಗಿನವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ನೇಪಾಳ ತಂಡವನ್ನು 132 ರನ್‌ಗಳಿಂದ ಸುಲಭವಾಗಿ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಭಾರತ ಒಂದು ಹಂತದಲ್ಲಿ 62 ರನ್‌ಗಳಾಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡಿತ್ತು. ಆದರೆ ಸಹಾರನ್ (100, 107ಎ, 9x5) ಮತ್ತು ಸಚಿನ್ ದಾಸ್ (116, 101ಎ, 11x4, 3x6) ಅವರ ಅಮೋಘ ಆಟದ ಬಲದಿಂದ ಚೇತರಿಸಿತು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 215 ರನ್ ಸೇರಿಸಿ ಭಾರತ ಸುಭದ್ರ ಸ್ಥಿತಿಗೆ ತಲುಪಲು ನೆರವಾದರು. ತಂಡ 50 ಓವರುಗಳಲ್ಲಿ 5 ವಿಕೆಟ್‌ಗೆ 297 ರನ್ ಪೇರಿಸಿತು.

ಉತ್ತರವಾಗಿ ನೇಪಾಳ ತಂಡ ನಿಧಾನಗತಿಯ ಆರಂಭ ಮಾಡಿದ್ದು, ಒಂದು ಹಂತದಲ್ಲಿ 1 ವಿಕೆಟ್‌ಗೆ 65 ರನ್ ಗಳಿಸಿತ್ತು. ಆದರೆ ಮುಂದಿನ 55 ರನ್ ಗಳಿಸುವಷ್ಟರಲ್ಲಿ ಎಂಟು ವಿಕೆಟ್‌ಗಳನ್ನು ಕಳೆದುಕೊಂಡಿತು. ಆಕಾಶ್ ಚಂದ್ (ಔಟಾಗದೇ 18) ಮತ್ತು ದುರ್ಗೇಶ್ ಗುಪ್ತಾ (ಔಟಾಗದೇ 29) ಮುರಿಯದ ಕೊನೆಯ ವಿಕೆಟ್‌ಗೆ 45 ರನ್ ಸೇರಿಸಿ ಆಲೌಟ್ ಆಗುವುದನ್ನು ತಪ್ಪಿಸಿದರು. ತಂಡ 9 ವಿಕೆಟ್‌ಗೆ 165 ರನ್ ಗಳಿಸಿ ಓವರುಗಳನ್ನು ಪೂರೈಸಿತು.

ಮುಖ್ಯಾಂಶಗಳು

- ಉದಯ್ ಸಹಾರನ್ ಮತ್ತು ಸಚಿನ್ ದಾಸ್ ಶತಕ
- ಸೌಮಿ ಪಾಂಡೆಗೆ ನಾಲ್ಕು ವಿಕೆಟ್

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 5 ವಿಕೆಟ್‌ಗೆ 297 (ಉದಯ್ ಸಹಾರನ್ 100, ಸಚಿನ್ ದಾಸ್ 116; ಗುಲ್ಶನ್ ಝಾ 56ಕ್ಕೆ3); **ನೇಪಾಳ:** 50 ಓವರುಗಳಲ್ಲಿ 9 ವಿಕೆಟ್‌ಗೆ 165 (ದೀಪಕ್ ಬೊಹರಾ 22, ಅರ್ಜುನ್ ಕುಮಾಲ್ 26, ದೇವ್ ಖನಾಲ್ 33, ದುರ್ಗೇಶ್ ಗುಪ್ತಾ ಔಟಾಗದೇ 29; ಸೌಮಿ ಪಾಂಡೆ 29ಕ್ಕೆ4, ಅರ್ಷಿನ್ ಕುಲಕರ್ಣಿ 18ಕ್ಕೆ2). **ಫಲಿತಾಂಶ:** ಭಾರತಕ್ಕೆ 132 ರನ್ ಜಯ.

10ನೇ ಆವೃತ್ತಿಯ ನೂರನೇ ಪಂದ್ಯ: ಬೆಂಗಾಲ್ ವಾರಿಯರ್ಸ್ ಜಯಭೇರಿ

ದೆಹಲಿ: ನಾಯಕ ಮಣಿಂದರ್ ಸಿಂಗ್ (11) ಮತ್ತು ನಿತಿನ್ ಕುಮಾರ್ (13) ಅವರ ಅಮೋಘ ರೈಡಿಂಗ್ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡ ಪ್ರೊ ಕಬಡ್ಡಿ ಲೀಗ್ 10ನೇ ಆವೃತ್ತಿಯ 100ನೇ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ತಂಡವನ್ನು 45–38 ಪಾಯಿಂಟ್ಸ್‌ಗಳಿಂದ ಸೋಲಿಸಿ ಐದು ಅಂಕಗಳನ್ನು ಕಲೆಹಾಕಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ದೆಹಲಿ ಪರ ಪ್ರಮುಖ ರೈಡರ್ ಆಶು ಮಲಿಕ್ ಹೋರಾಟ ತೋರಿ 14 ಟಚ್ ಪಾಯಿಂಟ್ಸ್ ಸಹಿತ 17 ಪಾಯಿಂಟ್ಸ್ ಗಳಿಸಿದರೂ, ಅದು ತಂಡದ ಗೆಲುವಿಗೆ ಸಾಕಾಗಲಿಲ್ಲ. ಇತರ ಆಟಗಾರರಿಂದ ಅವರಿಗೆ ಉತ್ತಮ ಬೆಂಬಲ ದೊರೆಯಲಿಲ್ಲ. ಒಂದೆಡೆ ಬೆಂಗಾಲ್ ತಂಡ ಹ್ಯಾಟ್ರಿಕ್ ಸೋಲಿನಿಂದ ಹೊರಬಂದರೆ, ಇನ್ನೊಂದೆಡೆ ದಬಾಂಗ್ ತಂಡ ಮೂರು ಪಂದ್ಯಗಳ ಸತತ ಗೆಲುವಿನ ನಂತರ ಸೋಲನುಭವಿಸಿದೆ.

ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 34–30 ಪಾಯಿಂಟ್‌ಗಳಿಂದ ಗುಜರಾತ್ ಜೈಂಟ್ಸ್ ಮೇಲೆ ಜಯಗಳಿಸಿತು.

ಶನಿವಾರದ ಪಂದ್ಯಗಳು: ಯು.ಪಿ. ಯೋಧಾಸ್ –ಯು ಮುಂಬಾ (ರಾತ್ರಿ 8), ದಬಾಂಗ್ ದಿಲ್ಲಿ– ತೆಲುಗು ಟೈಟನ್ಸ್ (ರಾತ್ರಿ 9)

ಟೆಸ್ಟ್: ಜಡೇಜ, ಶಮಿ ಅಲಭ್ಯ



ರವೀಂದ್ರ ಜಡೇಜ

ವಿಶಾಖಪಟ್ಟಣ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಇಂಗ್ಲೆಂಡ್ ವಿರುದ್ಧದ ಸರಣಿಯ ಉಳಿದೆಲ್ಲ ಪಂದ್ಯಗಳಿಗೂ ಅಲಭ್ಯರಾಗುವ ಸಾಧ್ಯತೆ ಇದೆ.

ಹೈದರಾಬಾದಿನಲ್ಲಿ ಈಚೆಗೆ ನಡೆದ ಇಂಗ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಜಡೇಜ ರನ್ ಗಳಿಸುವ ಓಡುವಾಗ ಸ್ನಾಯುಸೆಳೆತ ಅನುಭವಿಸಿದ್ದರು. ಇದರಿಂದಾಗಿ ಅವರು ಎರಡನೇ ಟೆಸ್ಟ್‌ಗೆ ಅಲಭ್ಯರಾಗಿದ್ದಾರೆಂದು ತಿಳಿಸಲಾಗಿತ್ತು. ಅವರ ಗಾಯ ವಾಸಿಯಾಗಲು ದೀರ್ಘ ಸಮಯದ ಅಗತ್ಯವಿರುವುದರಿಂದ ಸರಣಿಯ ಉಳಿದ ಮೂರು ಪಂದ್ಯಗಳಲ್ಲಿ ಆಡುವ ತಂಡದಿಂದ ಕೈಬಿಡುವ ಸಾಧ್ಯತೆ ಇದೆ.

ವೇಗಿ ಮೊಹಮ್ಮದ್ ಶಮಿ ಕೂಡ ಗಾಯದಿಂದಾಗಿ ಬಹಳ ದಿನಗಳಿಂದ ತಂಡದಿಂದ ಹೊರಗಿದ್ದಾರೆ. ಈ ಸರಣಿಯ ಉಳಿದ ಪಂದ್ಯಕ್ಕೂ ಅವರು ಅಲಭ್ಯರಾಗಿದ್ದಾರೆ.

ಸೆಮಿಗೆ ಅಶ್ಮಿತಾ ಚಾಲಿಹಾ



ಅಶ್ಮಿತಾ ಚಾಲಿಹಾ

ಬ್ಯಾಂಕಾಕ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಅಶ್ಮಿತಾ ಚಾಲಿಹಾ ಶುಕ್ರವಾರ ಮೂರು ಗೇಮ್‌ಗಳ ಆಟದಲ್ಲಿ ಇಂಡೊನೇಷ್ಯಾದ ಇಸ್ಟರ್ ನುರುಮಿ ವಾರ್ಡೊಯೊ ಅವರನ್ನು ಸೋಲಿಸಿ, ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

ಮಿಥುನ್ ಮಂಜುನಾಥ್ ಪುರುಷರ ಸಿಂಗಲ್ಸ್‌ನಲ್ಲಿ ಸೋಲನುಭವಿಸಿದ್ದು, ಅಸ್ಸಾಮಿನ ಅಶ್ಮಿತಾ ಇದೀಗ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಸ್ಪರ್ಧಿ ಎನಿಸಿದ್ದಾರೆ. ಮಹಿಳೆಯರ ಡಬಲ್ಸ್‌ನಲ್ಲಿ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಕೂಡ ಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು.

ಅರ್ಹತಾ ಸುತ್ತನ್ನು ದಾಟಿ ಪ್ರಧಾನ 'ಡ್ರಾ'ದಲ್ಲಿ ಆಡುತ್ತಿರುವ, ವಿಶ್ವದ 61ನೇ ಕ್ರಮಾಂಕದ ಅಶ್ಮಿತಾ ಎಂಟರ ಘಟ್ಟದ ಪಂದ್ಯದಲ್ಲಿ 21-14, 19-21, 21-13 ರಿಂದ 44ನೇ ಕ್ರಮಾಂಕದ ನುರುಮಿ ವಾರ್ಡೊಯೊ ಅವರನ್ನು ಸೋಲಿಸಿದರು. ಪಂದ್ಯ 57 ನಿಮಿಷಗಳ ಕಾಲ ನಡೆಯಿತು.

ವಿಶ್ವ ಕ್ರಮಾಂಕದಲ್ಲಿ 61ನೇ ಸ್ಥಾನದಲ್ಲಿರುವ ಅಶ್ಮಿತಾ ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಸುಪಾನಿದಾ ಕಟೆಥಾಂಗ್ ಅವರನ್ನು ಎದುರಿಸಲಿದ್ದಾರೆ. ಸುಪಾನಿದಾ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ವೆನ್ ಚಿ ಹ್ಸು ಅವರನ್ನು 21-17, 21-11 ರಿಂದ ನೇರ ಆಟಗಳಿಂದ ಸೋಲಿಸಿದರು.

ಡಬಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಫ್ಯಾಬ್ರಿಯಾನಾ ದ್ವಿಪುಜಿ ಕುಸುಮಾ–ಅಮೇಲಿಯಾ ಪೃಥ್ವಿ 21-12, 17-21, 23-21 ರಿಂದ ಆರನೇ ಶ್ರೇಯಾಂಕದ ಟ್ರಿಸಾ ಮತ್ತು ಗಾಯತ್ರಿ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 63ನೇ ಕ್ರಮಾಂಕದ ಮಿಥುನ್ ಮಂಜುನಾಥ್ 19-21, 15-21ರಲ್ಲಿ ನೆದರ್ಲೆಂಡ್ಸ್‌ನ ಮಾರ್ಕ್ ಕಲ್ಜಿಯು ಅವರಿಗೆ ಮಣಿದರು.

ರಣಜಿ ಕ್ರಿಕೆಟ್: ಒಂದೇ ದಿನ 16 ವಿಕೆಟ್ ಪತನ • ಕೌಶಿಕ್, ಹಾರ್ದಿಕ್ ಮಿಂಚು

ಬೌಲರ್‌ಗಳ ಆರ್ಭಟ: ಬ್ಯಾಟರ್‌ಗಳ ಪರದಾಟ

ಸೂರತ್: ಶುಕ್ರವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಮೊದಲು ಕರ್ನಾಟಕದ ಬೌಲರ್‌ಗಳು ರೈಲ್ವೇಸ್ ತಂಡವನ್ನು ಹಳಿ ತಪ್ಪಿಸಿದರು. ನಂತರ 'ಆತಿಥೇಯ' ತಂಡದ ಬೌಲರ್‌ಗಳು ಕರ್ನಾಟಕ ಪಡೆಯನ್ನು ಆತಂಕದ ಸ್ಥಿತಿಗೆ ತಳ್ಳಿದರು. ಇದರಿಂದಾಗಿ ಲಾಲಭಾಯಿ ಕ್ರೀಡಾಂಗಣದಲ್ಲಿ ಒಂದೇ ದಿನ 16 ವಿಕೆಟ್‌ಗಳು ಪತನವಾದವು.

ಕರ್ನಾಟಕದ ಸ್ಪಿನ್ನರ್ ಹಾರ್ದಿಕ್ ರಾಜ್ (28ಕ್ಕೆ3), ಮಧ್ಯಮವೇಗಿ ಕೌಶಿಕ್ (22ಕ್ಕೆ3) ಹಾಗೂ ವೈಶಾಖ ವಿಜಯಕುಮಾರ್ (57ಕ್ಕೆ2) ಅವರ ದಾಳಿಗೆ ರೈಲ್ವೇಸ್ ತಂಡವು 155 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಕರ್ನಾಟಕದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಕುಸಿದರು. ದಿನದಾಟದ ಮುಕ್ತಾಯಕ್ಕೆ ತಂಡವು 27.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 90 ರನ್ ಗಳಿಸಿತು. ಕಿಶನ್ ಬೆದರೆ (ಬ್ಯಾಟಿಂಗ್ 2) ಕ್ರೀಸ್‌ನಲ್ಲಿದ್ದಾರೆ. ಇನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಲು ಕರ್ನಾಟಕ ತಂಡಕ್ಕೆ 65 ರನ್‌ಗಳ ಅವಶ್ಯಕತೆ ಇದೆ.

ಮಯಂಕ್ ಅಗರವಾಲ್ ಅವರ ಗೈರುಹಾಜರಿಯಲ್ಲಿ ತಂಡವನ್ನು ಮುನ್ನಡೆಸುತ್ತಿರುವ ಯುವ ಆಟಗಾರ ನಿಕಿನ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮೊದಲ ಓವರ್‌ನಲ್ಲಿ ರಿಷಭ್ ಮಿಶ್ರಾ ಅವರ ವಿಕೆಟ್ ಗಳಿಸಿದ ವಿದ್ವತ್ ಮಿಂಚಿದರು. ಇನ್ನೊಂದು ಬದಿಯಿಂದ ಕೌಶಿಕ್ ಮತ್ತು ವೈಶಾಖ ಅವರೂ ಪರಿಣಾಮಕಾರಿ ದಾಳಿ ನಡೆಸಿದರು. ಇದರಿಂದಾಗಿ ರೈಲ್ವೇಸ್ ತಂಡವು ಕೇವಲ ಏಳು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ನಾಯಕ ಪ್ರಥಮ್ ಸಿಂಗ್ (56; 131ಎ) ಮತ್ತು ಮೊಹಮ್ಮದ್ ಸೈಫ್ (45; 115ಎ) ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. ಊಟದ ನಂತರ ಪ್ರಥಮ್ ವಿಕೆಟ್ ಗಳಿಸಿದ ವೈಶಾಖ ಜೊತೆಯಾಟವನ್ನು ಮುರಿದರು. ವೈಶಾಖ,ತಮ್ಮ ಇನ್ನೊಂದು ಓವರ್‌ನಲ್ಲಿ ಸೈಫ್ ವಿಕೆಟ್ ಕಬಳಿಸಿದರು. ನಂತರದ ಆಟದಲ್ಲಿ ನವಪ್ರತಿಭೆ ಹಾರ್ದಿಕ್ ತಮ್ಮ ಕೈಚಳಕ ತೋರಿಸಿದರು. ಅದರಿಂದಾಗಿ ರೈಲ್ವೇಸ್ ಇನಿಂಗ್ಸ್‌ಗೆ ತೆರೆಬಿತ್ತು.



ಕರ್ನಾಟಕ ತಂಡದ ವಿ. ಕೌಶಿಕ್

ಆದರೆ ಕರ್ನಾಟಕ ತಂಡದ ಬ್ಯಾಟರ್‌ಗಳು ಮತ್ತೆ ವೈಫಲ್ಯ ಅನುಭವಿಸಿದರು. ಸಮರ್ಥ್ ಮತ್ತು ನಿಶ್ಚಲ್ ಐದು ಓವರ್‌ಗಳಲ್ಲಿ 24 ರನ್ ಸೇರಿಸಿ ಉತ್ತಮ ಆರಂಭ ಮಾಡಿದ್ದರು. ಆದರೆ ನಿಶ್ಚಲ್ ದೊಡ್ಡ ಹೊಡೆತಗಳನ್ನು ಆಡುವ ಭರದಲ್ಲಿ ಔಟಾದರು. ನಿಕಿನ್ ಖಾತೆಯನ್ನೇ ತೆರೆಯಲಿಲ್ಲ. ಅನುಭವಿ ಮನೀಷ್ ಪಾಂಡೆ, ಸಮರ್ಥ್ ಕೂಡ ದೊಡ್ಡ ಇನಿಂಗ್ಸ್ ಆಡಲಿಲ್ಲ. ರೈಲ್ವೆ ತಂಡದ ಆಕಾಶ್ ಪಾಂಡೆ ಹಾಗೂ ಅಯಾನ್ ಚೌಧರಿ ಕ್ರಮವಾಗಿ 3 ಹಾಗೂ 2 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ರೈಲ್ವೇಸ್:** 56 ಓವರ್‌ಗಳಲ್ಲಿ 155 (ಪ್ರಥಮ್ ಸಿಂಗ್ 56, ಮೊಹಮ್ಮದ್ ಸೈಫ್ 45, ವಿದ್ವತ್ ಕಾವೇರಪ್ಪ 25ಕ್ಕೆ2, ವಿ. ಕೌಶಿಕ್ 22ಕ್ಕೆ3, ವೈಶಾಖ ವಿಜಯಕುಮಾರ್ 57ಕ್ಕೆ2, ಹಾರ್ದಿಕ್ ರಾಜ್ 28ಕ್ಕೆ3) **ಕರ್ನಾಟಕ:** 27.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 90 (ಆರ್. ಸಮರ್ಥ್ 22, ಡಿ. ನಿಶ್ಚಲ್ 20, ಕೆ.ವಿ. ಅನೀಶ್ 27, ಆಕಾಶ್ ಪಾಂಡೆ 21ಕ್ಕೆ3, ಆಯಾನ್ ಬಿ ಚೌಧರಿ 18ಕ್ಕೆ2)

ಮಾಹಿತಿ: ಬಿಸಿಸಿಐ ಡಾಟ್ ಟಿವಿ

ಟಿ20 ಕ್ರಿಕೆಟ್: ಕರ್ನಾಟಕ ಅಂಧರ ತಂಡಕ್ಕೆ ಪ್ರಶಸ್ತಿ

ನಾಗ್ಪುರ (ಪಿಟಿಐ): ಸುನಿಲ್ ರಮೇಶ್ ಅಜೇಯ ಶತಕ (149ರನ್) ಬಲದಿಂದ ಕರ್ನಾಟಕ ಅಂಧರ ಕ್ರಿಕೆಟ್ ತಂಡವು ಪುರುಷರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಂಧ್ರ ತಂಡವನ್ನು ಸೋಲಿಸಿ ನಾಗೇಶ್ ಟ್ರೋಫಿಯನ್ನು ಗೆದ್ದಿತು.

ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಂಧ್ರ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 237 ರನ್ ಗಳಿಸಿ ದೊಡ್ಡ ಗುರಿ ನೀಡಿದರು. ಟಿ. ದುರ್ಗಾರಾವ್ (128 ರನ್) ಶತಕ ಹೊಡೆದರು. ಇದಕ್ಕುತ್ತರವಾಗಿ ಕರ್ನಾಟಕ ತಂಡವು 19.3 ಓವರ್‌ಗಳಲ್ಲಿ 1 ವಿಕೆಟ್‌ಗೆ 240 ರನ್ ಗಳಿಸಿ ಗೆದ್ದಿತು.

ವಿಜೇತ ತಂಡಕ್ಕೆ ₹ 1.04 ಲಕ್ಷ ಮತ್ತು ರನ್ನರ್ಸ್ ಅಪ್ ತಂಡಕ್ಕೆ ₹ 80 ಸಾವಿರ ನಗದು ಬಹುಮಾನ ನೀಡಲಾಯಿತು.



ನಾಗ್ಪುರದಲ್ಲಿ ನಡೆದ ಅಂಧರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ನಾಗೇಶ್ ಟ್ರೋಫಿ ಜಯಿಸಿದ ಕರ್ನಾಟಕ ತಂಡ

ಸಂಕ್ಷಿಪ್ತ ಸ್ಕೋರು: ಆಂಧ್ರಪ್ರದೇಶ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 237 (ಟಿ. ದುರ್ಗಾರಾವ್ 128, ಜವರೇಗೌಡ ಬಿ 40ಕ್ಕೆ2) **ಕರ್ನಾಟಕ:** 19.3 ಓವರ್‌ಗಳಲ್ಲಿ 1 ವಿಕೆಟ್‌ಗೆ 240 (ಸುನಿಲ್ ರಮೇಶ್ ಔಟಾಗದೆ 149, ಗುಡದಪ್ಪ 51, ಪ್ರಕಾಶ್ ಜಯರಾಮಯ್ಯ ಔಟಾಗದೆ 19, ದುರ್ಗಾರಾವ್ 32ಕ್ಕೆ1) **ಫಲಿತಾಂಶ:** ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ.



ಭಾರತ ಹಾಕಿ ತಂಡಕ್ಕೆ ಹರ್ಮನ್ ನಾಯಕತ್ವ

ನವದೆಹಲಿ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಇದೇ 10ರಂದು ಆರಂಭವಾಗುವ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಭಾರತದ ಪುರುಷರ ಹಾಕಿ ತಂಡವನ್ನು ಮುನ್ನಡೆಸಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಭಾರತ ತಂಡದ ಸಿದ್ಧತೆಗೆ ಇದು ವೇದಿಕೆಯಾಗಿದೆ.

24 ಆಟಗಾರರ ಭಾರತ ತಂಡವನ್ನು ಹಾಕಿ ಇಂಡಿಯಾ ಗುರುವಾರ ಪ್ರಕಟಿಸಿದೆ. ಭುವನೇಶ್ವರ ಲೆಗ್ ಫೆ.10ರಿಂದ ಫೆ.16ರವರೆಗೆ ಮತ್ತು ರೂರ್ಕೆಲಾ ಲೆಗ್ ಫೆ.19ರಿಂದ 25ರವರೆಗೆ ನಡೆಯಲಿದೆ. ಎರಡೂ ಲೆಗ್‌ಗಳಲ್ಲಿ ಭಾರತವು ಐರ್ಲೆಂಡ್, ನೆದರ್ಲೆಂಡ್ಸ್, ಸ್ಪೇನ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಸೆಣಸಲಿದೆ. ಭಾರತವು ಫೆ.10ರಂದು ಸ್ಪೇನ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ತಂಡ ಹೀಗಿದೆ: ಗೋಲ್ ಕೀಪರ್ಸ್: ಪಿ.ಆರ್.ಶ್ರೀಜೇಶ್, ಕ್ರಿಶನ್ ಬಹದ್ದೂರ್ ಪಾಠಕ್. **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಜರ್ಮನ್‌ಪ್ರೀತ್ ಸಿಂಗ್, ಸುಮಿತ್, ಜುಗರಾಜ್ ಸಿಂಗ್, ಅಮಿತ್ ರೋಹಿದಾಸ್, ವರುಣ್ ಕುಮಾರ್, ಸಂಜಯ್, ವಿಷ್ಣುಕಾಂತ್ ಸಿಂಗ್. **ಮಿಡ್‌ಫೀಲ್ಡರ್ಸ್:** ಹಾರ್ದಿಕ್ ಸಿಂಗ್ (ಉಪನಾಯಕ), ವಿವೇಕ್ ಸಾಗರ್ ಪ್ರಸಾದ್, ಮನ್‌ಪ್ರೀತ್ ಸಿಂಗ್, ನೀಲಕಂಠ ಶರ್ಮಾ, ಶಂಷೇರ್ ಸಿಂಗ್, ರಾಜಕುಮಾರ್ ಪಾಲ್, ರವಿಚಂದ್ರ ಸಿಂಗ್ ಮೊಯಿರಂಗ್ಥೆಮ್. **ಫಾರ್ವರ್ಡ್ಸ್:** ಲಲಿತ್ ಕುಮಾರ್, ಮನದೀಪ್ ಸಿಂಗ್, ಗುರ್ಜಂತ್ ಸಿಂಗ್, ಸುಖಜೀತ್ ಸಿಂಗ್, ಅಭಿಷೇಕ್, ಅಕ್ಷದೀಪ್ ಸಿಂಗ್, ಅರಿಜಿತ್ ಸಿಂಗ್.

ಇಸ್ಲಾಮಾಬಾದ್: ಪಾಕ್ ವಿರುದ್ಧ ಡೇವಿಸ್ ಕಪ್ ಪಂದ್ಯ ಇಂದಿನಿಂದ

ಭಾರತ ತಂಡಕ್ಕೆ ಗೆಲುವಿನ ನಿರೀಕ್ಷೆ

ಇಸ್ಲಾಮಾಬಾದ್ (ಪಿಟಿಐ): ಸಿಂಗಲ್ಸ್‌ನಲ್ಲಿ ಅಗ್ರ ಆಟಗಾರರಿಲ್ಲದೇ ಭಾರತ ಟೆನಿಸ್ ತಂಡ ಪಾಕಿಸ್ತಾನಕ್ಕೆ ಬಂದಿದ್ದರೂ, ಶನಿವಾರ ಇಸ್ಲಾಮಾಬಾದಿನಲ್ಲಿ ನಡೆಯುವ ಡೇವಿಸ್ ಕಪ್ ವಿಶ್ವ ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡವೆನಿಸಿದೆ. ಭದ್ರತೆಯ ಕಾರಣದಿಂದ 'ಇಸ್ಲಾಮಾಬಾದ್ ಟೆನಿಸ್ ಕೋರ್ಟ್ ಸಂಕೀರ್ಣ'ದಲ್ಲಿ ಪ್ರೇಕ್ಷಕರ ಸಂಖ್ಯೆಗೆ ನಿರ್ಬಂಧ ಹೇರಲಾಗಿದೆ.

ಪಂದ್ಯ ವೀಕ್ಷಣೆಗೆ ಒಟ್ಟು 500 ಮಂದಿ ಅತಿಥಿಗಳು ಮತ್ತು ಅಭಿಮಾನಿಗಳಿಗಷ್ಟೇ ಅವಕಾಶ ಕಲ್ಪಿಸಲಾಗಿದೆ. ಭಾರತ ಟೆನಿಸ್ ತಂಡ 60 ವರ್ಷಗಳ ನಂತರ ಪಾಕಿಸ್ತಾನಕ್ಕೆ ಬಂದಿಳಿದಿದೆ. ಈ ಹಿಂದೆ ಇವೆರಡು ತಂಡಗಳು ಏಳು ಬಾರಿ ಮುಖಾಮುಖಿ ಆಗಿದ್ದು ಪ್ರತಿ ಸಲ ಭಾರತ ಜಯಗಳಿಸಿದೆ. ಈ ಬಾರಿಯೂ ಇದೇ ಫಲಿತಾಂಶ ಮುಂದುವರಿಯುವ ಸಾಧ್ಯತೆಯಿದೆ.

ಈ ಸಲ ಆತಿಥೇಯರು ಪಂದ್ಯಕ್ಕೆ ಹುಲ್ಲಿನಂಕಣವನ್ನು ಆಯ್ಕೆ ಮಾಡಿಕೊಂಡಿದ್ದು ತಮ್ಮ ಅನುಭವಿ ಆಟಗಾರರಾದ ಐಸಾಮ್-ಉಲ್-ಹಕ್ ಖುರೇಷಿ ಮತ್ತು ಅಖೀಲ್ ಖಾನ್ ಅವರ ಮೂಲಕ ಪೈಪೋಟಿಯೊಡ್ಡುವ ಸೂಚನೆ ನೀಡಿದ್ದಾರೆ. ಈ ಅಂಕಣದಲ್ಲಿ ಪಾಕ್ ಆಟಗಾರರು ಉತ್ತಮ ಹೋರಾಟದ ಸಾಮರ್ಥ್ಯ ಹೊಂದಿದ್ದಾರೆ. ಇಸ್ಲಾಮಾಬಾದಿನ ಕೋರ್ಟ್‌ಗಳಲ್ಲಿ ಚೆಂಡು ವೇಗವಾಗಿ ಮತ್ತು ಕೆಳ ಮಟ್ಟದಲ್ಲಿ ಬೌನ್ಸ್ ಆಗುತ್ತದೆ.

ಡೇವಿಸ್ ಕಪ್ ಪಂದ್ಯದಲ್ಲಿ ಮುಖಾಮುಖಿ

ಫೆಬ್ರುವರಿ 3

- ಮೊದಲ ಸಿಂಗಲ್ಸ್: ರಾಮಕುಮಾರ್ ರಾಮನಾಥನ್ – ಐಸಾಮ್ ಉಲ್ ಹಕ್ ಖುರೇಷಿ
- ಎರಡನೇ ಸಿಂಗಲ್ಸ್: ಅಖೀಲ್ ಖಾನ್ – ಶ್ರೀರಾಮ್ ಬಾಲಾಜಿ

ಫೆಬ್ರುವರಿ 4

- ಡಬಲ್ಸ್: ಬರ್ಕತ್‌ಉಲ್ಲಾ/ ಮುಝಾಮಿಲ್ ಮುರ್ತಾಝಾ – ಯೂಕಿ ಭಾಂಬ್ರಿ/ ಸಾಕೇತ್ ಮೈನೇನಿ
- ಮೊದಲ ರಿವರ್ಸ್ ಸಿಂಗಲ್ಸ್: ರಾಮಕುಮಾರ್ – ಅಖೀಲ್ ಖಾನ್
- ಎರಡನೇ ರಿವರ್ಸ್ ಸಿಂಗಲ್ಸ್: ಐಸಾಮ್ ಉಲ್ ಹಕ್ – ಶ್ರೀರಾಮ್ ಬಾಲಾಜಿ

ಈಗಿನ ತಂಡದಲ್ಲಿರುವ ಪ್ರಮುಖ ಆಟಗಾರ ರಾಮಕುಮಾರ್ ರಾಮನಾಥನ್ ಅವರ ನಂತರ ಮೊದಲ ದಿನ ಎರಡನೇ ಸಿಂಗಲ್ಸ್ ಆಟಗಾರರಾಗಿ ಡಬಲ್ಸ್ ಪರಿಣತ ಎನ್.ಶ್ರೀರಾಮ್ ಬಾಲಾಜಿ ಅವರನ್ನು ಕಣಕ್ಕಿಳಿಲು ನಿರ್ಧರಿಸಿರುವುದು ಸಮಂಜಸ ಕ್ರಮವೆನಿಸಿದೆ. ನಿಕಿ ಪೂಣಚ್ಚ ಅವರನ್ನು ಆಡಿಸುವ ಅವಕಾಶ ಮುಂದಿದ್ದರೂ, ಅಂಕಣದ 'ಸ್ವಭಾವ' ನೋಡಿ ಕಡಿಮೆ ಎತ್ತರ ಹೊಂದಿರುವ ಬಾಲಾಜಿ ಅವರನ್ನು ಆಯ್ಕೆ ಮಾಡಲಾಗಿದೆ. ಯುವ ಪೀಳಿಗೆಯಲ್ಲಿ ಉತ್ತಮ ಸರ್ವ್ ಮತ್ತು ವಾಲಿ ಆಟಗಾರ ಎನಿಸಿರುವ ರಾಮಕುಮಾರ್, ಗ್ರಾಸ್ ಕೋರ್ಟ್‌ನಲ್ಲಿ ಪ್ರಬಲ ಆಟಗಾರ ಎನಿಸಿದ್ದಾರೆ. ನ್ಯೂಪೋರ್ಟ್‌ನಲ್ಲಿ (ಎಟಿಪಿ 250 ಟೂರ್ನಿಯ ಫೈನಲ್ ತಲುಪಿದ್ದು) ಅವರ ಜೀವನ ಶ್ರೇಷ್ಠ ಸಾಧನೆಯಾಗಿದ್ದು ಈ ಟೂರ್ನಿ ಹುಲ್ಲಿನಂಕಣದಲ್ಲಿ ನಡೆದಿತ್ತು.

ರಾಮಕುಮಾರ್ ಮೊದಲ ಪಂದ್ಯದಲ್ಲಿ 43 ವರ್ಷದ ಐಸಾಮ್ ಅವರನ್ನು ಎದುರಿಸಲಿದ್ದಾರೆ. 'ನೀವೆಲ್ಲ ನನ್ನ ವಯಸ್ಸು ನೆನಪಿಸುತ್ತಿದ್ದೀರಿ. ಆದರೆ ಅಷ್ಟು ವಯಸ್ಸು ಹೃದಯಕ್ಕೆ ಆಗಿಲ್ಲ' ಎಂದು ಐಸಾಮ್ ಖುರೇಷಿ ಲಘುಧಾಟಿಯಲ್ಲಿ ಹೇಳಿದರು.

'ಈ ಪಂದ್ಯದ ಮೂಲಕ ಬದಲಾವಣೆ ಉಂಟಾಗಬಹುದೆಂಬ ವಿಶ್ವಾಸವಿದೆ. ಭಾರತದ ಹೆಚ್ಚೆಚ್ಚು ತಂಡಗಳು ಪಾಕ್‌ಗೆ ಬರಲೆಂಬ ಆಶಾವಾದ ಹೊಂದಿದ್ದೇನೆ. ಇದು ಟೆನಿಸ್‌ನಿಂದ ಆರಂಭವಾಗಿರುವುದಕ್ಕೆ ಸಂಸತವಾಗಿದೆ' ಎಂದು ಪಾಕ್‌ನ ಜನಪ್ರಿಯ ಟೆನಿಸ್ ತಾರೆ ಹೇಳಿದರು.



ಪಂದ್ಯಗಳ ಡ್ರಾ ಎತ್ತುವ ಸಮಾರಂಭದಲ್ಲಿ ಹಸ್ತಲಾಘವ ಮಾಡಿದ ಪಾಕಿಸ್ತಾನದ ಐಸಾಮ್ ಉಲ್‌ಹಕ್ ಖುರೇಷಿ (ಎಡ) ಮತ್ತು ಭಾರತದ ರಾಮಕುಮಾರ್ ರಾಮನಾಥನ್

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಸುಲಭ ಜಯ

ಢಾಕಾ (ಪಿಟಿಐ): ಭಾರತ ತಂಡ ಸ್ಯಾಫ್ 19 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ 10–0 ಗೋಲುಗಳಿಂದ ಭೂತಾನ್ ತಂಡವನ್ನು ಸೋಲಿಸಿತು. ಶುಕ್ರವಾರ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪೂಜಾ ನಾಲ್ಕು ಗೋಲುಗಳನ್ನು ಗಳಿಸಿದರು.

ಪೂಜಾ 31, 58, 59 ಮತ್ತು ಇಂಜ್ಯುರಿ ಅವಧಿಯಲ್ಲಿ ಗೋಲುಗಳನ್ನು ಗಳಿಸಿದರು. ಸಿಬಾನಿ ದೇವಿ (8, 19 ಮತ್ತು 36ನೇ) ಅವರು ವಿರಾಮಕ್ಕೆ ಮೊದಲೇ ಹ್ಯಾಟ್ರಿಕ್ ಸಾಧಿಸಿದರು. ಸುಲಂಜನಾ ರಾಹುಲ್ (53ನೇ), ಮೇನಕಾ ಲೋರೆಂಬಮ್ (61ನೇ ನಿಮಿಷ) ಮತ್ತು ಅರಿನಾ ದೇವಿ (73ನೇ) ಅವರು ಉಳಿದ ಗೋಲುಗಳನ್ನು ಗಳಿಸಿದರು. ಭಾರತ ಭಾನುವಾರ ಬಾಂಗ್ಲಾದೇಶ ವಿರುದ್ಧ ಆಡಲಿದೆ.

ಬಿಎಫ್‌ಸಿಗೆ ಇಂದು ಪಂಜಾಬ್ ಸವಾಲು

ನವದೆಹಲಿ: ಬೆಂಗಳೂರು ಎಫ್‌ಸಿ ತಂಡವು ಶನಿವಾರ ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯುವ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಆತಿಥೇಯ ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಈ ಹಿಂದೆ ನವೆಂಬರ್ ಕೊನೆಯಲ್ಲಿ ಐಎಸ್‌ಎಲ್‌ನಲ್ಲಿ ಕೊನೆಯ ಸಲ ಎದುರಾದಾಗ, ಪಂಜಾಬ್ ಎಫ್‌ಸಿ 3–3 ಗೋಲುಗಳಿಂದ ಬೆಂಗಳೂರು ತಂಡದ ವಿರುದ್ಧ ಸಮ ಮಾಡಿ ಅಚ್ಚರಿಗೆ ಕಾರಣವಾಗಿತ್ತು. ಪಂಜಾಬ್ ಬಡ್ತಿ ಪಡೆದು ಮೊದಲ ಬಾರಿ ಎಲೈಟ್ ಲೀಗ್‌ನಲ್ಲಿ ಆಡುತ್ತಿದೆ. ಬಿಎಫ್‌ಸಿ ಕಳೆದ ಬಾರಿಯ ಐಎಸ್‌ಎಲ್‌ನಲ್ಲಿ ರನ್ನರ್ ಅಪ್ ಸ್ಥಾನ ಕಳೆದಿತ್ತು.

ಫೆ.12ರಿಂದ ಟೆನಿಸ್ ಟೂರ್ನಿ

ಬೆಂಗಳೂರು: ಟೆನಿಸ್ ಅಡ್ವಾಂಟೇಜ್ ಸಂಸ್ಥೆಯು ಸಿಎಫ್‌ಎಸ್ ಟ್ರಸ್ಟ್ ಎಐಟಿಎ ಚಾಂಪಿಯನ್‌ಷಿಪ್ ಸರಣಿಯ 16 ವರ್ಷ ದೊಳಗಿನವರ ಟೆನಿಸ್ ಟೂರ್ನಿಯನ್ನು ಇದೇ 12ರಿಂದ 16ರವರೆಗೆ ನಗರದ ಟೆನಿಸ್ ಅಡ್ವಾಂಟೇಜ್ ಪ್ಯಾಲೇಸ್ ಕ್ರೀಡಾಂಗಣದಲ್ಲಿ ಆಯೋಜಿಸಿದೆ.

ಬಾಲಕರ ಮತ್ತು ಬಾಲಕಿಯರ ವಿಭಾಗದ ಮುಖ್ಯಸುತ್ತಿನಲ್ಲಿ ತಲಾ 32 ಸ್ಪರ್ಧಾಳುಗಳು ಇರುವರು. ಎರಡೂ ವಿಭಾಗದಲ್ಲೂ ಮುಖ್ಯಸುತ್ತಿಗೆ ತಲಾ 24 ಮಂದಿ ನೇರ ಪ್ರವೇಶ ಪಡೆದರೆ, ಉಳಿದ 8 ಮಂದಿ ಅರ್ಹತಾ ಸುತ್ತಿನಿಂದ ಬರುವರು. ಫೆ.10 ಮತ್ತು 11ರಂದು ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳ ಸ್ಪರ್ಧಾಳುಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಶನಿವಾರ • ಫೆಬ್ರುವರಿ 3, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

SALE BUILDING



G+5 Consist of 20 single BHK, 4 SINGLE RK, G FLOOR PARKING WITH MODERN ALL FACILITIES
RENT INCOME 3.89L
SHIRDI SAI LAYOUT, KUNDALAHALLI
7353779800, 9886737977

ನಿವೇಶನ ಬೇಕಾಗಿದೆ

ಬೆಂಗಳೂರು ಮೆಟ್ರೋಗೆ ಸಮೀಪವಿರುವ ವಿಜಯನಗರದ ಆರ್‌ಪಿಸಿ ಬಡಾವಣೆಯಲ್ಲಿ 50'X80' ಮತ್ತು ಅದಕ್ಕಿಂತ ಹೆಚ್ಚಿನ ಅಳತೆಯ ನಿವೇಶನ ಹಾಗೂ ದೇವನಹಳ್ಳಿ ವಿಮಾನ ನಿಲ್ದಾಣ ರಸ್ತೆಯ ನಿವೇಶನ ಮತ್ತು ಭೂಮಿ ಮುಂಬರುವ ಮೆಟ್ರೋಗೆ ಅತಿ ಸಮೀಪ ಬೇಕಾಗಿದೆ.
ಸಂಪರ್ಕಿಸಿ: 98440 45744

REAL ESTATE SELLING

Sites

Anjanapura

BDA SITE for Sale, Residential and Commercial JP Nagara, Anjanapura Kanakapura Main Road 30x40, 40x60, 50x80, 80% bank loan, 9916592400

SALE BDA Anjanapura 5th Block 30x40 south Facing 80 lakh also 20x30 East facing 2nd Block 55 lakh 9620041313/ 9945373839

Arkavathi Layout

ARKAVATHI LAYOUT 2 block 20x30 30x40 40x60, 3 block 20x30 30x40 40x40 Corner, 7 block 26x30, 19 block 20x30 14x30 18x30. USR- 7019770736/ 8951614989.

ARKAVATHI LAYOUT 20x30 East 2 block Near Green Field School Genuine Buyers only 7019770736/ 8951614989.

Banashankari

BANASHANKARI 6TH Stage, 7th Block 30x43, East Facing,10000/- Negotiable Owner Meeting Contact: 6366599555.

ಸೈಟುಗಳು ಮಾರಾಟಕ್ಕಿವೆ
ಮಾಗಡಿ ರೋಡ್
ಕಿತ್ತನಹಳ್ಳಿ ಹತ್ತಿರ
1 BHK & 2 BHK ವಿಲ್ಲಾ ಮಾರಾಟಕ್ಕಿವೆ
ರೂ. 20 ಲಕ್ಷದಿಂದ ಪ್ರಾರಂಭ
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 8880660099

BANASHANKARI 6TH STAGE- ANJANAPURA BDA- Available/ Wanted 20x30 30x40 40x60, 50x80 Sites BRINDAVAN ASSOCIATES- 9980863245

SALE BANASHANKARI 6- Stage 40X60 1st Block on 60feet Road, near NPS School 16000/-sft Nego. Contact 9845062822/ 8660751654

AVAILABLE BDA sites in Banashankari 6th stage measuring 30x40, 40x60, 50x80. Buyers contact: 98454-95879, 99020-66606.

BANASHANKARI 6th Stage, 4th Block, 50x80, 60ft Road 7th Block,40x60, Karishma Hills 50x80 East: 9845082299

BDA SITE for Sale, Residential and Commercial BSK 6th stage BSK 5th stage, Uttarahalli Rajarajeshwarinagar, ISRO layout 30x40, 40x60, 50x80, 80% bank loan, 9916592400

SALE BSK 6th stage 9th Block 30x40 East Facing 70lakh also 40x60 facing 6th Block 1.72Cr Negotiable all owners site 9945373839, 9620041313

"BANASHANKARI" 6TH Stage,7th Block 40x60, Close To 100 Feet Road Good Location Contact: 9900097239

AUCTION SITE, SALE Banashankari 6th Stage 10th Block N/E Corner 1034 sqft 10500/-`Owner Meeting: 9880611211.

Basaweshwaranagar

***BASAVESHWARANAGAR* 3RD** Stage 3rd Block Good Location 40x60 BDA Site for Sale Contact: 9945079777

Hennur

HENNUR 30'X50' North Facing Near D-MART 'A' Katha, Clear title, Buyers only, Commission 2%. 94815-03116/ 98456-09477

HSR Layout

"HSR 20X30 Duplex House 1.6Cr, 30x40,40x60 Houses & Residential/ Commercial sites sale. "Krishna"- 9886294610/ 7760526548"

Intl Airport Road

ORCHIRD'S NIRVANA at IVC ROAD- Devanahalli, East facing plot, 2080 sqft, ready to build. Near Stone Hill International School. Contact:- 9449080669.

SALE 30X40 Converted Sites @ 2,00,000/- (166/-sft) 90 Minutes journey from Yelahanka. 9343510635/ 9010559539

Jayanagar

JAYANAGAR-4TH BLOCK 45x90 West Facing BDA Site With old-House Near Jain Temple and Park Calm Location WhatsApp 7892272701

Yelahanka

DC CONVERSATION SITES AVAILABLE COMMERCIAL AND RESIDENTIAL READY TO CONSTRUCT CONTACT: 6366232222/ 6366242222

Anjananagar

ANJANAPURA SITE for Sale, 6th Block, Site No.925, 30x40 West Facing Good Location immediate Construction. Contact: 9845132011, 9663554448

RERA No.PRM/KA/RERA/1250/307/PR/240723/006089
Sri Thulasi Ranganatha Gardenia
BMRDA & RERA APPROVED
Residential **Sites**



BMRDA APPROVED
SPECIAL OFFER Price Rs. 1749 Per Sft
Near **Nelamangala** ನಿವೇಶನಗಳು
Close to Thyamagondlu Industrial area
Ready For Registration & Construction
Developed Layout, Bank Loan Available
Call: 8956 412 000

Kumaraswamy Layout

25X30 EAST Face BDA Site Sale Kumaraswamy Layout Near Police Station Beautiful Location. Cleartitles: 9343722162

Kempegowda Layout

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

Malleshwaram

MALLESHWARAM LINK Road BBMP A" Khata 1380Sft, East/South Corner Site For Sale :9148736555

Mysore

MUDA SITE CORNER NE 240 SQFT VIJAYANAGAR 17.00 LAKHS SUITABLE FOR BUILDING OFFICE, CLINICS, SHOPS, STUDIO ROOMS OWNER: 9606866368

Mahalakshmi Layout

60X40 BDA Site for sale at Shankar Nagar, Near Ashoka Heights. Facing Play Ground with compound, Clear Title . Contact: 9844252259

Vishweshwariah Layout

"VISHVESHWARAIAH LAYOUT Wanted/ Available 20x30,30x40, 40x60,50x80 for-Immediate Settlement Genuine Transaction. "Anugraha Constructions"- 9886294610"

AVAILABLE VISHVESHWARAIAH Layout 4th Block 30x40 East Facing Good Location Price 6000/- Contact: 8553908699

AVAILABLE BDA Site 30X40 West Face 6th Block Vishveshwariah Layout 7500/-Psft Contact Buyers: 9844603127

30X40 BDA North Facing Site Sale 'VISHVESWARAIAH LAYOUT' 2nd Block, Near 100 feet-Road, ₹.8250/-.9886634578

"28X40 CORNER Prime Residential BDA Site Sale Kanakashree Layout, [Attached 1st Block Vishweshwraiah Layout]. 7338328879"

BDA SITE for Sale, Residential and Commercial Nagarbhavi, Vijaynagara, Basaveshwarnagar, Sir M Vishveshwaraiah Layout, Kempegowda Layout- BDA Mysore road 30x40, 40x60, 50x80, 80% bank loan, 9916592400

MALLATHAHALLI NGEF Layout 30X40 SITE Sale, South Face, BDA Khatha, Opposite BDA Park. Call:Raju 9986869996.

AVAILABLE 20X30 BDA Site Vishveshwariah Layout 2nd Block, Builder Location 45 Lacks Contact Buyers: 9844603127

***40X60 BDA** N/F* SITE SALE 'VISHVESWARAIAH LAYOUT' 2nd Block, Near 100-feet Road, Prime Location. 9742681666

40X60 VISHVESHWARAIAH Layout 5th BlockNear Vidya School Direct Owner, 30X40 Site Sale 7th Block East OnlyGenuine Buyer: 8550003509

SALE 30X40 Vishveswaraiah Layout 4th Block South Facing 84 Lakh Negotiable owner Site 9945373839, 9620041313

SMV5BL 30X40 NEAR UDUPI HOTEL SMVL4BL 2 SITES NEAR KEB CIRCLE AVAILABLE ALL BLOCKS: 9900224071

BDA SITE for Sale at Viveshwaraiah Layout 7th Block S/F Near RTO Office. Mob: 8123081522

Nagarabhavi

AVAILABLE NAGARABHAVI Site D Group 30×40 West Facing BDA Katha Genuine Buyers Contact: 9743381719

J P Nagar

J.P.NAGAR 1ST Phase 30x40 BDA Site Prime- location North facing near to Astra Hospital 3,50,00,000/- -9845000299

Kanakapura Road

KANAKAPURA ROAD Kaggalipura, BMRDA APPROVED' E' Khatha 30x40, 30x50, East Facing 3,600/- Negotiable 9916817739/ 9740150364

Agricultural Land

Out-Station

YEDIYUR HOBLI Kunigal Taluk Thattekere Grama 35 Gunta, Borewell, 45 Coconut Trees, Full Drip Water Total Land Fencing Rate 55,00,000/- Lakhs 3km From Highway Road Contact Owner: 9844603127

SALE 3rd -10th Feb 2024 FLAT 25% OFF
VESTS-BRIEF-BRA-PANTY-SLIPS TOWELS - WALLETS-CLUTCHES & LADIES FANCY BAGS
JOHNSON The entire world of lingerie.. ANAND
MARKWOOD WHOLESALE WINTER WEAR
OSWAL | SWEATERS | THERMALS JACKETS | KURTA SET | BLANKET'S SCOLES & WINTER ACCESSORIES
Shop Online @ www.brightways.in
BRIGHTWAYS WHOLESALERS आपके अंदर का विश्वास
AVENUE ROAD, BENGALURU-560 002
97422-02223 OPEN ON SUNDAY

SALE PRIME PROPERTIES
1) AUSTIN TOWN : E/S Prime Corner Property. 1862 Sft. Opp Dr Ambedkar statue.
2) J C ROAD : North facing Prime Commercial Property 83' width x 31' depth
3) J P NAGAR 1st Phase : 4.5 BHK Flat, 3710 Sft, 2 car parks. all amenities.
All 'A' Khata. Clear titles.
G N Properties : 9845044179

Ramanagar

AGRICULTURAL LANDS Available on Mysore Road, In and Around Bidadi, Ramanagar, Channapatna.Clear Title.Contact-9900115519

Industrial & Factory

General

WANTED 2-3 ACRES
Industrial Converted or Convertable land
to Anekal to Thally Road or Hosur to Krishna Giri Road before Ashok Leyland Unit II
Interested parties may call
+91 98860 20888

Residential/ Commercial

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

Farm House/ Land/ Resorts

Hosur Road

120X100 (12000 Sqft) Near Hosa Road Metro Station (Silk Board) Converted. A Katha Suitable for Apartments. Rs. 5000/- Psqft: 9008930130

Commercial Land

Multiple Locations

"COMMERCIAL SITES J.P.Nagar Ring-Road 2400sft ₹8.16crore, Jayanagar 2400sft ₹8.64crore, Basavanagudi 4200sft ₹13.86crore, RMV.2nd-Stage (Sanjaynagar) 2400sft ₹7.68crore, Ganganagar Semi- commercial 3850sft ₹6.16crore, Genuine buyers Call: 9845286505"

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Flat

Shivajinagar

FLATS FOR Sale, Infantry Road, 2 & 3 BHK, 2000/ 2600 Sft, 3.5Cr/ 4.5Cr. 9686113614/ 9980565991.

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Rajajinagar

DNR HIGHLINE @ Okalipuram near LULU Mall Rajajinagar 3 & 4 BHK FLATS with 7 Star Luxurious Amenities. Only Few Flats available for Sale. for details Contact: Owner 9844027560.

PURVA BLUEBELLE Adjacent to Magadi Road Metro Station (Purple lane) Rajajinagar 3 Bedroom Jodi units 5 Bedroom + Servant room with all Luxurious Amenities. Direct metro from here to ITPL (Whitefield)/ KR Puram/ Byyappanahalli. Very good Convenience those who are working above Areas. Only Few units left for Sale. Contact: Owner 9844027560

Uttarahalli

3/4 BHK New Luxurious Flats Sale, Italian Vitrified, Cauvery, Security, Car Parking, Near Vasanthaswamy Temple.70L/90L. 6360501159 9844394444

Kumaraswamy Layout

FLATS SALE 2250Sft Fully Teak Wood, Italian Marbles, 2 CarPark 1.6Cr Kumaraswamy Layout 15F Bustand: 9611144096

Domlur

FOR SALE 2 BHK Flat 1450 Sqft East Facing Covered Parking In Domlur. Brokers Excuse. Contact- 9449008834

House

Banashankari

SALE 20X30,30X40 Thriplex & Rented House's BSK 6th Stage Anjanapura Fully furnished Granite Flooring With Lift Call:8722777999 9449812176.

20X40 BUILDING for SALE, 8 years old, South facing G+4 Floors, Shastrinagar, CALL: 9900990613, 9844128988

Frazer Town

HOUSE FOR SALE- 5 Bedroom Independent Duplex house, 1650 sft site, Near Coles Park & St. German Academy, Frazer Town. Call: 8748077009/ 8884357009.

Hanumanthnagar

EAST FACING, Rental yielding House with 3 floors 4000 SFT built up. Plot 1350 sft at Maruthi Circle, Hanumanthnagar 50 Feet Road. 9964362531

General

5.75 CENTS residential plot with 5BHK, 2438 sqft, RCC house for sale. Mallikatte, Bendore Road, Mangaluru. Price Rs.10,500 per sqft, Contact: Chetan's Consultancy, 7795615015, 8073709592 Brokers Excuse.

J P Nagar

J.P.NAGAR 6TH Phase Sale B.D.A site E/F, 4 Bedroom 2000 sq.ft well furnished Separate Car shed Contact:- 9880402575.

Koramangala

KORAMANGALA SALE 30X40 3Floor House, 30x50 Corner Bangalow North 3Floor House 40x60 Beautiful Bangalow 3Floor House. 98451042229 945118192.

Magadi Road

KAMAKSHIPALYA 15X50 SQFT E/F 'A'KHATA NEW BUILDING 8 HOUSES + 1SHOP GETTING 49,000/- RENT Rs. 1.2Cr CALL: 9845288310

Rajajinagar

SALE: 1600 SQFT, A'KHATHA, CLEAR TITLES, READY FOR REGISTRATION, 1CRORE 90 LAKHS, 9019394110/ 9035883017

Nagarabhavi

"30X40 HOUSE G+2, A-khatha very good location mallathahalli Balaji Layuot Rs.2.45Cr. 9611727949"

Villas/Bunglows

Mysore

4BHK VILLA for Sale Brand new 4BHK villa ready for immediate registration, Vastu Compliant available for sale behind University Layout, Srirampura 2nd stage, Mysore. Price expected: 1.85 cr (negotiable) For more details Call: +91-9606907153

Commercial Building

Malleshwaram

FULLY FURNISHED 16,000Sft.A/C Showroom For Rent/Sale On Prime Busy Commercial Area,8th Cross, Malleshwaram. Contact: 9663001940/ 9845358544

REAL ESTATE BUYING

General

North

FOR PURCHASE WANTED 20x30, 30x40 BDA/ A&E Katha Sites/ Old Buildings Only Bangalore North/ East From Direct Owners 9845053662

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement, genuine Sellers Contact: 9902038118, 9449060605

WANTED BDA SITE 20x30, 30x40, 40x60, 50x80 Anjanapura, JP Nagar 8th/ 9th Phase, Banashankari 6th Stage, CONTACT: 9880300791

Banashankari

BDA SITE'S Wanted Arkavathy, Anjanapura Banashankari 6th Stage Vishweshwaraiah Kempegowda Any BDA Layout. Contact: 9845062822, 8660751654

Kanakapura Road

WANTED BANASHANKARI 6th Stage Anjanapura JP Nagar, Kanakapura Road Any Measurement Immediate Settlement: 9964627255

South

WANTED BDA Sites in BSK 6th Stage, Anjanapura, Vishveshwaraya Layout, Vakhil Garden, Judicial Layout any measurement. Krishna -9845059328

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

House

KANAKAPURA ROAD 3BHK For Rent, Aishwarya Layout At Doddakallasandra Near Metro, Lift CarParking: 7090466137

Commercial

OFFICE CUM Storage space of 6,000 sqft available for Rent in Ejipura, Bangalore. Contact: 9880524100

Flats

AVAILABLE 3BHK Eighth Floor East Facing Flat Mysore Road For LEASE Rs. TWENTYTHREE LAKHS: 9738223432

JOB OPPORTUNITIES

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Multiple Vacancy

WANTED EXPERIENCED 1)Advocate with strong knowledge in civil conveyance with legal Opinion,Minimum 3years of Experience 2)Sales Executives Fresher/Experience Candidates Equinox Global Shelters Office @ Jakkur. Attractive salary 8217482988, egsadm159@gmail.com

BUSINESS

Business to Business

Business

BEST-INVESTMENT FOR Returns`Invest 5`to`50Lacs For`Petrol Bank`and Restaurant. 1.33%`to`1.5% Per Month With TDS 100% Genuine Along With PDC Call:9845558882

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1Lakhs WE PURCHASE GOLD Contact: 8892501007/ 9606701007

PUBLIC NOTICE

PUBLIC NOTICE

My client intends to purchase the property mentioned and described in the Schedule hereunder from its owner **Sri. D.V. Krishnappa,** son of Sri. D. Vyramudiyappa. The Owner represents and warrant that he is the absolute owner of the Schedule Property and that he has neither conveyed nor has entered into any agreement of sale/ memorandum of understanding nor has entered into any sort of arrangement with any person/s for sale/transfer of the Schedule Property nor has encumbered/ mortgaged/created any charge or lien in any manner and apart from him, there are no other person/s firms or companies that have any sort of right, title or claim over the Schedule Property. Any person/s having objection/s or claims, shall with documentary evidence lodge their objection/ claims **within Fifteen (15) days** from the date of this notice with the Undersigned, failing which, my client shall proceed with the above-mentioned transaction.

SCHEDULE PROPERTY

All that piece and parcel of agricultural lands bearing (i) Survey No. 48/6, measuring 21 guntas, (ii) Survey No. 48/8, measuring 1 acre 21 guntas and (iii) Survey No. 48/10, measuring 18 guntas, in total measuring 2 acres 20 guntas, all situated at Devarakaggalahalli Village, Harohalli Hobli, Kanakapura Taluk, Ramanagara District and is bounded on the:

East by : Property bearing Survey No. 65
West by : Road
North by : Property bearing Survey Nos. 48/1, 48/2 &48/3
South by : Property bearing Survey Nos. 48/7, 48/9 &48/11.

Jayanth M Pattanshetti
Advocate,
Jayanth Pattanshetti Associates LLP
102, Ground Floor,
"Rams Infantry Manor",
No. 70, Infantry Road,
Bengaluru-560 001.
Ph: 080 25593195/41238516
Bengaluru
Date : 03-02-2024

PUBLIC NOTICE
To Place your Classified Ads Contact
9731810277

WEEKEND CORNER

WANTED

INDRAJAL COMICS
(English)
Contact :
8855 811 086
indrajalcomics1964@gmail.com

PERSONAL

Change of Name

AFFIDAVIT

I, **SNEHA .M,** D/o. S.P. Mahantesh, aged about 19 years, resident at No.40/14, 1st Cross, 2nd Main Road, Vittal Nagar, Chamarajpet, Bengaluru-560018, do hereby declare that my name as **SNEHA .M** as per official records except Aadhar Card and myself also called as **Deepika .M** by the family members, My original name is **SNEHA .M,** D/o. S.P. Mahantesh, **Deepika .M** is called by the family members as per their convenience. I hereby confirm and declare that my name is **SNEHA .M,** vide affidavit dated 01.02.2024, sworn to before R.S. Vijay, Notary Public, Govt. of India, Bengaluru.

I, SURESH SHAMARAO GHATGE, residing at Bengaluru-35, have changed my name as SURESH GHATGE vide affidavit dated 2/2/2024 before Notary K.S.Bammappanavar Bengaluru

I NAGARATHNA CHANDRASHEKAR SANKAL. #127, 5th cross Telecom Layout 2nd stage Bogadi Mysuru-26 have changed my name to NAGARATNA .S.D.

I, AMRUTHA Poovappa, residing at No 310,3rd Floor, Sashank Aavas Apartments, Amba Bhavani Temple Road, Near Sambhram College, Chikkabettahalli, Bangalore-560097, I have changed my Daughter name from Saloni S Gowda to Saloni Poovappa vide affidavit Dt: 27/101/2024 Sworn before notary C.N Chandrashekar, Bangalore.

I, LOKESH KULAL have changed my minor Daughter name from AADHYA KULAL to ADYA L vide affidavit dated: 1/2/2024 Before Notary Shreeshail B.Gobbani Bangalore.

CHANGE OF NAME

I, **CHANDRIKA MENON** W/o Govindan Kutty Menon R/o #143, Embassy Meadows Apartments, 7th Cross, 1st A Main Road, 4th Block, Koramangala, Bangalore-560034 have changed my Name from **CHANDRIKA KARUMATHIL MENON** to **CHANDRIKA MENON** for all my future purpose. Vide affidavit dated 1.2.2024 sworn before Notary B.M. Chandrashekar, Bangalore.

CHANGE OF NAME

I, **TANUJA GURURAJ PATIL** Residing at #302, A -Block, SLV Orchid Apartment, Attur, Yelahanka 5th Phase, Bangalore - 560064 have changed my name to **MAITHILI R KULKARNI** vide affidavit dated 27- Jan 2024 before notary Vrishali P Kulkarni Bangalore. Henceforth I shall be called **MAITHILI R KULKARNI** only.

I, MARIA ALPONSA J & MARIYA ALPHONSA D/o Late James Isreal Paul S, declare that both names belongs to me only, henceforth I shall be known as MARIA ALPONSA J for all purposes, affidavit dated 29-01-2024, sworn before Notary G.RAJENDRA, Bangalore.

I, SUNIL Kumar, residing at 25/01, Shapur Galli, VTC : Basavakalyana, PO: Basavakalyan, Dist. Bidar, Pin: 585327 have changed my name to SUNILKUMAR UMAKANT AMBALGE vide affidavit dt. 2/2/24, before Notary D Saralakumari, Bengaluru

I, SUDEER NAGARAJ HUCHAPPA residing at Bengaluru-8 have changed my name as SUDHEER NAGARAJ HUCHAPPA, vide affidavit dated 2/2/2024 before Notary K.S. Bammappanavar Bengaluru

I, VANDANA HARJI LAGDHIR D/o Laghdir Harji Virji have changed my name to VANDANA LAGDHIR vide affidavit dated: 1/2/2024 Before Notary Shreeshail B.Gobbani Bangalore.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331